ಬೆ, ೧೯೭೯

ಕಸ್ತೂರಿ




Reach for
the real refresher
torino
torino
CONTENTS 200ml.
funtastic
orange
taste
or a
sparkling lem'n'lime tang!
Bangalore Soft Drinks (Private) Ltd.

ನಿಮಗೆ ನೀವೇ ಖಾತ್ರಿ ಮಾಡಿಕೊಳ್ಳಿ:

ಮಿಂಚಿನಂತಹ ಸೂಪರ್ ರಿನ್ ಬಿಳುಪು, ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ಗಿಂತ ಅಧಿಕ ಬಿಳುಪು.





ಸೂಪರ್ ರಿನ್ ನಿಯಮಿತವಾಗಿ ಉಪಯೋಗಿಸಿ ಮತ್ತು ನಿಮ್ಮ ಬಟ್ಟೆಗಳು ಎಷ್ಟು ಅಧಿಕ ಬಿಳುಪಾಗಿ ಕಾಣುತ್ತವೆಂದು ನೋಡಿರಿ; ನೀವು ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ನಿಂದ ಒಗೆದಾಗ ಆಗುವುದಕ್ಕಿಂತ ಅಧಿಕ ಬೆಳ್ಳಗೆ ಆಗುತ್ತವೆ. ಏಕೆಂದರೆ ಸೂಪರ್ ರಿನ್‌ನಲ್ಲಿ ಅಧಿಕ ಬಿಳುಪುಗೊಳಿಸುವ ಶಕ್ತಿ ಇದೆ. ನಿಮಗೆ ನೀವೇ ಖಾತ್ರಿ ಮಾಡಿಕೊಳ್ಳಿ.



ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ಗಿಂತ ಅಧಿಕ ಬಿಳುಪುಗೊಳಿಸುವ ಶಕ್ತಿ

ಹಿಂದುಸ್ಥಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ.


ಲಿಂಟಾಸ್.RIN.34-1710 KN (ಕ)


ಕರ್ನಾಟಕ ರಾಜ್ಯದಲ್ಲಿ ಪೌಷ್ಟಿಕ ಆಹಾರ ಕಾರ್ಯಕ್ರಮ
ಸುಮಾರು ೨೭ ಲಕ್ಷ ಮಕ್ಕಳಿಗೆ ಪ್ರಯೋಜನ


ಶಾಲಾ ಮಕ್ಕಳಿಗೆ ಉಪಯುಕ್ತವಾದ ಮಧ್ಯಾಹ್ನದ ಉಪಾಹಾರ ಮತ್ತು ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮದನ್ವಯ ೧೯೮೨-೮೩ರ ಹೊತ್ತಿಗೆ ೨೭.೦೭ ಲಕ್ಷ ಮಕ್ಕಳು ಪ್ರಯೋಜನ ಪಡೆಯಲಿದ್ದಾರೆ. ಪ್ರಸಕ್ತ ವರ್ಷದಲ್ಲಿ ಈ ಕಾರ್ಯಕ್ರಮದ ಪ್ರಯೋಜನವನ್ನು ೨೧.೬ ಲಕ್ಷ ಮಕ್ಕಳು ಪಡೆದಿದ್ದಾರೆ. ಈ ಉದ್ದೇಶಕ್ಕಾಗಿ ೧೯೭೮-೮೩ರ ಯೋಜನೆಯಲ್ಲಿ ೨.೩೦ ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಮಧ್ಯಾಹ್ನದ ಉಪಾಹಾರ ಕಾರ್ಯಕ್ರಮದನ್ವಯ ೬-೧೩ ವರ್ಷ ವಯಸ್ಸಿನ ೧.೬೦ ಲಕ್ಷ ಶಾಲಾ ಮಕ್ಕಳು ಮತ್ತು ವಿಶೇಷ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದ ಕೆಳಗೆ ೦-೬ ವರ್ಷ ವಯಸ್ಸಿನ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರನ್ನು ಒಳಗೊಂಡಂತೆ ೧೧.೪೭ ಲಕ್ಷ ಜನ ಪ್ರಯೋಜನ ಪಡೆಯುತ್ತಾರೆ. ಅವರಲ್ಲಿ ಹೆಚ್ಚಿನವರು ಹರಿಜನ-ಗಿರಿಜನರಾಗಿದ್ದಾರೆ.

ಕರ್ನಾಟಕ- ಬಡವರ ಏಳಿಗೆಗಾಗಿ
ನಿರಂತರ ಯತ್ನ ನಡೆಸುತ್ತಿರುವ ರಾಜ್ಯ

ಕರ್ನಾಟಕ ಸರಕಾರದ
ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ


ಈ 8 ಕಾರಣಗಳಿಂದ...
ಹೊರಗಿಂದ ಭದ್ರಪಡಿಸುವ ಮುಚ್ಚಳ. ಅಧಿಕ ಅಡಿಗೆಗೆ ಅವಕಾಶ.
ಸುಲಭ ಉಪಯೋಗ ಮತ್ತು ಸುರಕ್ಷತೆಗೆ ತಕ್ಕರೂಪ—ರಚನೆ.
ಸುರಕ್ಷತೆ ನೀಡುವ ಅಪೂರ್ವ ಸೇಫ್ಟಿವಾಲ್ವ್.
ದಪ್ಪ ತಳದಿಂದ ಅಧಿಕ ಧೃಢತೆ, ಹೆಚ್ಚಿನ ಬಾಳಿಕೆ.
Prestige
ಐ. ಎಸ್. ಐ. ಗುರುತು—ಗುಣಮಟ್ಟದ ಖಾತರಿ.
ಆಹಾರದ ರುಚಿ ಮತ್ತು ಪೌಷ್ಟಿಕಾಂಶಗಳ ಸುರಕ್ಷತೆ.
ದೇಶದಾದ್ಯಂತ ಸೇವಾ ಕೇಂದ್ರಗಳು.
4 ರಿಂದ 12 ಲೀಟರ್‌ವರೆಗೆ ಅನೇಕ ಸೈಜುಗಳು.
ಭಾರತದ ಮೊತ್ತಮೊದಲಿನದೂ ಪ್ರೆಷರ್ ಕುಕರ್,
ಇಂದಿಗೂ ಅತ್ಯಂತ ಹೆಚ್ಚು ಬಳಸಲ್ಪಡುತ್ತಿರುವ
ಪ್ರೆಷರ್ ಕುಕರ್ ಆಗಿದೆ
Prestige
ಪ್ರೆಸ್ಟೀಜ್
ಟಿ.ಟಿ. (ಪ್ರೈ) ಲಿ.,
ಬೆಂಗಳೂರು-560016.


ಕೋರೈಸುವ ಬಿಳಿಪು ಯಾರೇ
ನೋಡಲಿ, ಒಂದೇ ಮಾತು...
ಇದು ಖಂಡಿತ
ಡೆಟ್
ಡಿಟರ್ಜೆಂಟ್
ಬಿಲ್ಲೆಯ ಒಗೆತ
Supreme
det
detergent washing cake


ಸೂಪರ್ 777
ಕೊಳೆಗೆ ಆಪತ್ತು, ಬಿಳಿಪಿನ ತಾಕತ್ತು
SUPER 777
ಭಾರತದ ಲಕ್ಷಾಂತರ ಗೃಹಿಣಿಯರ ಮೆಚ್ಚಿನ
ಸೂಪರ್ 777 ಡಿಟರ್ಜೆಂಟ್ ಒಗೆಯುವ ಬಾರ್.
ಹಣ ಉಳಿಸಿರಿ, ಬಿಳುಪು ಹೆಚ್ಚಿಸಿರಿ

ಕಸ್ತೂರಿ

☼

ವ್ಯವಸ್ಥಾಪಕ ಸಂಪಾದಕ

ಎಚ್. ಆರ್. ಬಸವರಾಜ್

☼

ಸಂಪಾದಕ :

ಪ. ಸು. ಭಟ್ಟ

☼

ಕಲೆ :

ಕೆ. ಬಿ. ಕುಲಕರ್ಣಿ

ಮುಖಪುಟ

ಗರುಡ

☼

ಚಂದಾದರ

೧ ವರ್ಷಕ್ಕೆ (ಅಂಚೆ ಸೇರಿ)		ರೂ. ೧೫-೦೦
೨ ವರ್ಷ	,,	ರೂ. ೨೫-೦೦
೩ ವರ್ಷ	,,	ರೂ. ೩೪-೦೦
ಅರ್ಧವರ್ಷ	,,	ರೂ. ೭-೫೦

KASTURI May 1979

ಬೆಳಕಿಂಡಿ

ಹಿಂದೆ ಜನಿಸಿದ ಹಾಗೂ ; ಈಗ ಜೀವಿಸುತ್ತಿರುವ ಅಸಂಖ್ಯ ಜನರ ಶ್ರಮದ ಫಲವಾಗಿಯೆ ನನ್ನ ಆಂತರಿಕ ಹಾಗೂ ಬಾಹ್ಯ ಜೀವನ ಇಷ್ಟು ಸಮೃದ್ಧವಾಗಿದೆ. ಆದ್ದರಿಂದ ಆ ಸಹಾಯದ ಋಣವನ್ನು ತೀರಿಸುವುವುದಕ್ಕಾಗಿ ತ್ರಿಕರ್ಣಪೂರ್ವಕವಾಗಿ ಶ್ರಮಿಸುವುದು ನನ್ನ ಕರ್ತವ್ಯವೇ ಆಗಿದೆಯೆಂಬುದನ್ನು ನಾನು ದಿನದಲ್ಲಿ ನೂರು ಬಾರಿಯಾದರೂ ನೆನೆಸಿಕೊಳ್ಳುತ್ತೇನೆ. — ಅಲ್ಬರ್ಟ್ ಐನ್‌ಸ್ಟೈನ್

●

ಬಿತ್ತಿದ್ದಾಗೇನೇ ಹೊಸರ್ಬು ಬೆಳೆ... ಬಯಸಿದ್ದಾಗಲ್ಲ.

— ಕೈಲಾಸಂ

(ಗಂಡಸ್ಕತ್ರಿ)

●

ಯಾರಾದರೂ ಉನ್ನತಿಯ ಮಾರ್ಗದಲ್ಲಿ ಹೊರಟರೆ, ಅಂಥವರ ಹೆಸರಿನ ಕೂಡ ನೂರಾರು ಅಪವಾದಗಳು ಸಹಜವಾಗಿಯೇ ಕೂಡಿಕೊಳ್ಳುತ್ತವೆ.

— ಮೋಹನ ರಾಕೇಶ್

('ಆಷಾಢದ ಒಂದು ದಿನ'ದಲ್ಲಿ)

☼

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕ ದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಮಾಲೋಚನ

ಪರಿಚಿತರ ನಾಡಿನಲೊಬ್ಬ ಅಪರಿಚಿತ

'ಕಸ್ತೂರಿ' ಎಪ್ರಿಲ್ ೧೯೭೬ ಪುಟ ೧೯ "ಈ ಮಧ್ಯೆ ಮೈಸೂರಿಗು......ಮರಳಿ ಕಳಿಸಿಕೊಟ್ಟರು." ಇಲ್ಲಿ ಉಲ್ಲೇಖವಾಗಿರುವ ಮಿತ್ರ ನಾನು; ಗಣಿತ ಶಾಸ್ತ್ರ ಬಲ್ಲ ನನ್ನ ಮಿತ್ರರು ಸ್ಥಳೀಯ ಜೆ. ಎಸ್. ಎಸ್. ಕಾಲೇಜಿನ ಗಣಿತ ಪ್ರಾಧ್ಯಾಪಕ ಶ್ರೀ ಎಸ್. ಆರ್. ಮಾಧುರಾವ್. ನಡೆದ ಸಂಗತಿ ಇಷ್ಟು. ಬಿಹಾರದ Mathematics Education ಸಂಶೋಧನ (?) ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಸಿ. ಸಿ. ಯಲವಿಗಿಯವರ ಫರ್ಮಾನ ಅಂತಿಮ ಪ್ರಮೇಯದ 'ಸಾಧನೆ'ಯನ್ನು ನಾನು ಇವರಿಂದಲೇ ಪಡೆದು ಶ್ರೀ ಮಾಧುರಾಯರಿಗೆ ಕೊಟ್ಟೆ. ಇವರು ಅದರಲ್ಲಿ ಹುದುಗಿದ್ದ ದೋಷವನ್ನು ತೋರಿಸಿ 'ಸಾಧನೆ ತಪ್ಪು' ಎಂಬುದಾಗಿ ಬರೆದರು. ಈ ಟಿಪ್ಪಣಿಯ ನಕಲುಗಳನ್ನು ನಾನು ಶ್ರೀ ಯಲವಿಗಿ ಯವರಿಗೂ Mathematics Education ಪತ್ರಿಕೆಗೂ ಕಳಿಸಿದೆ. ಈ ತನಕ ಶ್ರೀ ಯಲವಿಗಿಯವರಿಂದ ಮಾರೋಲೆ ಬಂದಿಲ್ಲ. ಏಕೆಂದರೆ ಪುಟ ೧೮ರಲ್ಲಿ ಲೇಖಕರು ಸೂಚಿಸಿರುವಂತೆ "ಫರ್ಮಾನ ಕೊನೆಯ ಸಿದ್ಧಾಂತಕ್ಕೆ ತಾವು ಸೂಚಿಸಿದ ಪರಿಹಾರ ಸರಿಯೆಂದು ಯಲವಿಗಿಯವರಿಗೆ ವಿಶ್ವಾಸವಿದೆ." ಇತ್ತ ಆ ಸಂಶೋಧನ (?) ಪತ್ರಿಕೆಯೂ ಈ ಟಿಪ್ಪಣಿಯನ್ನು ಪ್ರಕಟಿಸಿರುವುದು ತಿಳಿದಿಲ್ಲ. ಏಕೆಂದರೆ ಅದಕ್ಕೆ ಅಂತಾರಾಷ್ಟ್ರೀಯವಂತಿರಲಿ ರಾಷ್ಟ್ರೀಯ ಖ್ಯಾತಿ ಕೂಡ ಇಲ್ಲ. ಆದ್ದರಿಂದ ವರ್ತಮಾನ (೧೯೭೬) ಸ್ಥಿತಿ ಏನು ? ಡಿಸೆಂಬರ್ ೧೯೭೮ 'ಕಸ್ತೂರಿ' ಪುಟ ೧೧೭ರಲ್ಲಿ ಬರೆದಿರುವಂತೆ "ಪ್ರತ್ಯುತ್ಪನ್ನಮತಿಗಳಿಗೆ ಪಂಥಾಹ್ವಾನ ಎಸೆಯುತ್ತ ಮೂರು ಶತಮಾನಗಳಿಗೂ ಮಿಕ್ಕಿನಿಂತಿದೆ ಫರ್ಮಾನ ಅಂತಿಮ ಪ್ರಮೇಯ. ಈ ಮತ್ಸ್ಯಯಂತ್ರವನ್ನು ಭೇದಿಸಬಲ್ಲ ಅರ್ಜುನ ಎಲ್ಲಿರುವನೊ ! ಎಂದು ಬರುವನೊ !"

ಮೈಸೂರು — ಜಿ. ಟಿ. ನಾರಾಯಣರಾವ್

ಎಪ್ರಿಲ್ ತಿಂಗಳ ಕಸ್ತೂರಿಯಲ್ಲಿನ "ಪರಿಚಿತರ ನಾಡಿನಲ್ಲೊಬ್ಬ ಅಪರಿಚಿತ" ಲೇಖನ ಬಹಳ ಗಮನಾರ್ಹವಾದುದು. ಫರ್ಮಾನ ಕೊನೆಯ ಸಿದ್ಧಾಂತಕ್ಕೆ ಪರಿಹಾರ ಸೂಚಿಸಿದ ಚಂದ್ರಶೇಖರ ಚೆನ್ನಬಸಪ್ಪ ಯಲವಗಿಯವರ ಗಣಿತ ಪ್ರಜ್ಞೆ ಹಾಗೂ ತಾವು ಸೂಚಿಸಿದ ಪರಿಹಾರ ಸರಿ ಎನ್ನುವ ಆತ್ಮವಿಶ್ವಾಸ ನಿಜವಾಗಿಯೂ ಮೆಚ್ಚತಕ್ಕದ್ದು. ಆದರೆ ಯಾವೊಬ್ಬ ಭಾರತೀಯನೂ ಇವರ ಸಾಹಿತ್ಯವನ್ನು ಕೂಲಂಕಷವಾಗಿ ಪರಿಶೀಲಿಸಿ ವಿಮರ್ಶಿಸಿಲ್ಲ ಎನ್ನುವುದು ಅತ್ಯಂತ ಖೇದದ ಸಂಗತಿಯಾಗಿದೆ. ಏನೇ ಇರಲಿ, ಗಣಿತ ವಿಷಯದಲ್ಲಿ ಅತ್ಯಂತ ಆಳವಾದ ಅಧ್ಯಯನ, ಸಂಶೋಧನೆ ನಡೆಯಿಸಿದ ಒಬ್ಬ ಪ್ರತಿಭಾವಂತ ಗಣಿತಜ್ಞನನ್ನು ಪರಿಚಯ ಮಾಡಿಕೊಟ್ಟ ಲೇಖಕರಿಗೆ ನನ್ನ ಅನಂತ ಧನ್ಯವಾದಗಳು.

ಕಾರ್ಕಳ — ಕೆ. ತಾರಾನಾಥ ಹೊಳ್ಳ

ಪರಿಪೂರ್ಣವಾಗಬೇಕಿತ್ತು

ತಮ್ಮ ಎಪ್ರಿಲ್ ೧೯೭೬ ರ ಕಸ್ತೂರಿಯಲ್ಲಿ ಪ್ರಕಟವಾದ ಶ್ರೀಕಾಂತ ಮುಳಗಿಯವರ (ಆಧರಿತ) ಲೇಖನ ಓದಿದೆ. ಲೇಖನ ಸ್ವಾರಸ್ಯಕರವಾಗಿ, ಮನನೀಯವಾಗಿದೆ. (ಲೇಖನ: ಡಾರ್ವಿನ್ ವಾದ ಎಷ್ಟು ಸರಿ?) ಆದರೆ ಅದರಲ್ಲಿ ಮೂಲ ಲೇಖಕರು ಸರೀಸೃಪಗಳ ಸಮೂಹನಾಶದ ಬಗ್ಗೆ ಹಲವು ವಾದಗಳನ್ನು ಎತ್ತಿಕೊಂಡು ಅವುಗಳ ಸಾಧ್ಯತೆಗಳನ್ನು ತಳ್ಳಿಹಾಕಿದ್ದಾರೆ. ಆದರೆ, ಸರೀಸೃಪಗಳ ಸಮೂಹನಾಶದ ಬಗ್ಗೆ ಖಗೋಳಶಾಸ್ತ್ರಜ್ಞರು ಒಂದು ವಾದವನ್ನು ಮಂಡಿಸಿದ್ದಾರೆ. ಇದು ಸಂಪೂರ್ಣ ಒಪ್ಪತಕ್ಕಂತಹ ವಾದವಲ್ಲದಿರ ಬಹುದು. ಆದರೆ ಇದು ಹಲವು ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ. ಅದೆಂದರೆ, ಸೂಪರ್‌ನೋವಾ ಸ್ಫೋಟದಲ್ಲಿ ಒಂದು ನಕ್ಷತ್ರದ ಕಾಂತಿಯು ಲಕ್ಷಾಂತರ ಪಟ್ಟು ಹೆಚ್ಚಾಗುತ್ತದೆ. ಆಗ ಇದು ತನ್ನ ಸುತ್ತ ಅಗಾಧವಾದ ಕಿರಣಗಳನ್ನು ಪಸರಿಸುತ್ತದೆ. ಭೂಮಿಯಿಂದ ಒಂದು ೨೦೦–೩೦೦ ಜ್ಯೋತಿರ್ವರ್ಷ ದೂರದಲ್ಲಿ ಈ ಸ್ಫೋಟ ನಡೆಯಿತೆಂದು ಭಾವಿಸಿ–ಕೊಂಡರೂ ಅದರ ಕಿರಣಗಳು ಭೂಮಿಯನ್ನು ನಿರಂತರವಾಗಿ ಅಪ್ಪಳಿಸಬಹುದು. ಆದರೆ ಸಾಮಾನ್ಯ ಸಂದರ್ಭಗಳಲ್ಲಿ ಭೂಮಿಯ ಮೇಲ್ಭಾಗದಲ್ಲಿರುವ

ಕಾಂತಕ್ಷೇತ್ರ ಇವುಗಳಿಂದ ರಕ್ಷಣೆ ಕೊಡುತ್ತದೆ. ಆದರೆ ಕೆಲವೊಮ್ಮೆ ಹಲವು ಅಜ್ಞಾತ ಕಾರಣಗಳಿಂದಾಗಿ ಈ ಕಾಂತಕ್ಷೇತ್ರ ಸ್ಥಿತ್ಯಂತರವಾಗುತ್ತದೆ. ಹಾಗೂ ಕಾಂತಕ್ಷೇತ್ರ ದುರ್ಬಲವಾದಾಗ ಕೆಲವು ವಿಕಿರಣಗಳು ಭೂಮಿಯನ್ನು ಅಪ್ಪಳಿಸಿರಬೇಕು. ಇದು ಭೂಮಿಯ ಮೇಲೆ ಆ ಕಾಲದಲ್ಲಿದ್ದ ಬೃಹತ್ ಪ್ರಾಣಿಗಳ ನಾಶಕ್ಕೆ ಕಾರಣವಾಗಿರಬೇಕು. ಆದರೆ ಭೂಮಿಯ ಒಳಗೆ ಬಿಲದಲ್ಲಿ ವಾಸಿಸುವಂಥ ಪ್ರಾಣಿಗಳಿಗೆ ಈ ಅಪಾಯ ತಟ್ಟದೆ ಅವು ಸುರಕ್ಷಿತ ಉಳಿದಿರಬೇಕು ಎಂಬುದು ಈ ವಾದ ಮಂಡಿಸುವವರ ಊಹೆ.

ಈ ವಾದವನ್ನೂ ಎತ್ತಿಕೊಂಡು ಚರ್ಚಿಸಿದ್ದರೆ ಲೇಖನ ಇನ್ನಷ್ಟು ಪರಿಪೂರ್ಣವಾಗುತ್ತಿತ್ತೆಂದು ನನ್ನ ಭಾವನೆ.

ತುರುವೇಕೆರೆ —ಜಿ. ನಾರಾಯಣ

ಇದು ಸರಿ; ಆದರೆ...

ಎಪ್ರಿಲ್ ಕಸ್ತೂರಿಯಲ್ಲಿ ಪ್ರೊ. ಬಿ. ಜಿ. ಎಲ್. ಸ್ವಾಮಿಯವರ 'ಹಸಿರು ಹೊನ್ನು'ವಿನ ಕುರಿತ ಶ್ರೀ ಕೆ. ಆರ್. ಪ್ರಹ್ಲಾದರ ಲೇಖನ ಓದಿಸಿತು. ಆದರೆ, ತುತ್ತಿನಲ್ಲಿ ಸಿಕ್ಕ ಕಲ್ಲು ಹರಳುಗಳಂತೆ ಮಧ್ಯೆ ಮಧ್ಯೆ ಬಂದ ಇಂಗ್ಲಿಷ್ ಶಬ್ದಗಳು ಹಿಡಿಸಲಿಲ್ಲ.

ಯಾವ ನಗೆಯನ್ನೂ ಬರಿಸದ ಹಳಸಲು ಕಂಪನ್ನು ಬೀರುವ 'ನಗೆ ಮಲ್ಲಿಗೆ'ಯನ್ನೂ ಹಾಗೂ ವ್ಯಂಗ್ಯಚಿತ್ರಗಳನ್ನೂ ನಿಲ್ಲಿಸುವುದರಿಂದ ಯಾವ ನಷ್ಟವೂ ಇಲ್ಲ. ದಯವಿಟ್ಟು ಬೇಟೆಯ ಕಥೆಗಳನ್ನು ಪ್ರಕಟಿಸಬೇಡಿ.

ಮಡಿಕೇರಿ —ಬಿ. ಟಿ. ದಿವಾಕರರಾವ್

ಐನ್‌ಸ್ಟೈನ್

ಶ್ರೀ ಜಿ. ಟಿ. ನಾರಾಯಣರಾಯರ 'ಆಲ್ಬರ್ಟ್ ಐನ್‌ಸ್ಟೈನ್' ಎಂಬ ಗ್ರಂಥೋದ್ಧೃತ ಲೇಖನಗಳು (ಮಾರ್ಚ್ ಮತ್ತು ಏಪ್ರಿಲ್ ಸಂಚಿಕೆಗಳು) ಆಕರ್ಷಕವಾಗಿದ್ದವು. ಈ ಮಹಾವಿಜ್ಞಾನಿಯ ವಿಚಾರಗಳು (ವೈಜ್ಞಾನಿಕ ಹಾಗೂ ಮಾನವೀಯ), ಇನ್ನೂ ಹೆಚ್ಚು ಜನರನ್ನು ಮುಟ್ಟಲು ಆಕಾಶವಾಣಿಯ ಮೂಲಕ ಈ ವಿಜ್ಞಾನಿಯನ್ನು ಕುರಿತು ಕನ್ನಡದಲ್ಲಿ ಭಾಷಣ ಪ್ರಸಾರವಾಗಬೇಕೆಂದು ನನಗನಿಸುತ್ತದೆ.

ಬೆಂಗಳೂರು —ಮ. ಕೃ. ಸತ್ಯನಾರಾಯಣ

ಅರವಿಂದ ದರ್ಶನ

ಎಪ್ರಿಲ್ ಕಸ್ತೂರಿ ತನ್ನ ಕಂಪನ್ನು ಉಳಿಸಿಕೊಂಡು ಬಂದಿದೆ. ಅರವಿಂದರಿಗಾದ ದರ್ಶನ 'ಕೈಹಿಡಿದು ನಡೆಸುವನೆನ್ನ' ಅತ್ಯುತ್ತಮ ಲೇಖನ. ಈ ರೀತಿಯ ಅಲಭ್ಯ ಲೇಖನಗಳು ಹೆಚ್ಚು ಬರಲಿ. ಲೇಖಕ ಶ್ರೀ ವೊಕ್ಕಾಲಿಯವರಿಗೆ ಧನ್ಯವಾದಗಳು.

ರಾಮನಗರಂ ಕೆ. ಆಡವಿನರಸಿಂಹಯ್ಯ ರೆಡ್ಡಿ

ಮೆರುಗು

ಎಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಗಿರುವ 'ದೊಡ್ಡವರ ಸಣ್ಣ ಕತೆಗಳು' ಲೇಖನವನ್ನು ಓದಿದ ನಂತರ ಲೇಖನಕ್ಕಿಂತಲೂ ಸಂಪಾದಕರ ಟಿಪ್ಪಣಿಯೇ ಅದಕ್ಕೆ ಹೆಚ್ಚು ಮೆರುಗು ನೀಡಿದೆ ಎಂದೆನಿಸಿದೆ.

ಆನೆಕಲ್ —ಕೃ. ನಾರಾಯಣರಾವ್

ಬಗ್ಗೋಣ ಪಂಚಾಂಗ

ಎಪ್ರಿಲ್ ತಿಂಗಳ 'ಕಸ್ತೂರಿ'ಯಲ್ಲಿಯ ಬಗ್ಗೋಣ ಪಂಚಾಂಗದ ಬಗ್ಗೆ ಶ್ರೀ ಎಂ. ವಿ. ಶರ್ಮಾ ತದ್ದಲಸೆ ಇವರ ಲೇಖ ತುಂಬಾ ಚೆನ್ನಾಗಿದೆ. ಅವರಿಗೆ ಅನಂತ ಅಭಿನಂದನೆಗಳು.

ಈ ಸೂರ್ಯ ಸಿದ್ಧಾಂತ ಹಾಗೂ ದೃಕ್ ಸಿದ್ಧಾಂತಗಳೆಂಬ ಎರಡು ತರದ ಪಂಚಾಂಗಗಳ ಮೂಲಕ ಈ ವರ್ಷ ಬುಧ, ಗುರು ಇಬ್ಬರೂ ಸಂವತ್ಸರದ ರಾಜರಾಗಿದ್ದಾರೆ. ಆ ಇಬ್ಬರೂ ರಾಜರಿಗೆ 'ಶನಿ'ಯೊಬ್ಬನೇ ಮಂತ್ರಿಯಾಗಿದ್ದಾನೆ... ಅಲ್ಲದೆ ಮುಂದೆ ಮಕರ ಸಂಕ್ರಮಣವೂ ಎರಡು ದಿನವಾಗುವ ಸಂಭವವಿದೆ. ಸಾರ್ವಜನಿಕರಿಗೆ ಈ ಎರಡರಲ್ಲಿ ಯಾವುದು ಶಾಸ್ತ್ರೀಯವು, ಧರ್ಮಾಚರಣೆಗೆ ಯೋಗ್ಯವಾದ ಪಂಚಾಂಗವಾಗಿರುತ್ತದೆ ಎಂಬುದು ತಿಳಿಯದಂತಾಗಿದೆ, ಇಂಥ ಹೊತ್ತಿನಲ್ಲಿ ಸಮಯೋಚಿತವಾಗಿ ಶ್ರೀ ಶರ್ಮರ ಲೇಖನ ಬಂದದ್ದು ಯೋಗ್ಯವಾಗಿರುತ್ತದೆ. ಮುಂದೆಯೂ ಪ್ರತಿ ತಿಂಗಳೂ ನಿಮ್ಮ 'ಕಸ್ತೂರಿ'ಯಲ್ಲಿ ಜ್ಯೋತಿಷ್ಯ ವಿಷಯದ ಬಗ್ಗೆ ಲೇಖನ ಬರುವಂತಾಗಲೆಂದು ಹಾರೈಸುತ್ತೇನೆ.

ಘಟಪ್ರಭಾ —ಎಚ್. ಜಿ. ಕುಲಕರ್ಣಿ



ಚಿತ್ರ : ಕೆ. ಎಸ್. ಚಂದ್ರಶೇಖರ್

ಹೆಣ್ಣುಮುಡಿಗೆ ಸಿಕ್ಕುವ ಮುನ್ನ
ಬಣ್ಣಗೆಟ್ಟು ಬಿಸಿಲಿಗೆ
ಮಣ್ಣು ಮುಕ್ಕುವ ಮುನ್ನ
ಕಣ್ಣುಕಟ್ಟುಗೊಳಿಸಿ ಮುಂದೆ
ಹಣ್ಣು ಮಾಡುವ ಮುನ್ನ
ಅಣ್ಣ … ನೋಡಬಾರದೆ ಒಮ್ಮೆ
ನಗುನಗುತ ನನ್ನ …

— ಗೋವಾ

ಕಸ್ತೂರಿ

ಸಂಚಿಕೆ: ೯ ಕಸ್ತೂರಿ, ವಸಂತ ಸಂಚಿಕೆ, ಮೇ ೧೯೭೯ ವರ್ಷ: ೨೪

ಒಂದು ಕಥೆ, ಒಂದು ವ್ಯಥೆ

ನವಲಿ ಹನುಮಂತರಾವ್

ಇದು ಸೃಷ್ಟಿ ಆರಂಭವಾದ ಕೆಲವೇ ದಿನಗಳಲ್ಲಿ ನಡೆದ ಕಥೆ. ಭೂಮಿಯ ಮೇಲೆ ಮನುಷ್ಯನ ಜೀವನವು ಆರಂಭವಾದಾಗ. ಅವನಿಗೆ ತನ್ನ ಸುತ್ತ ಮುತ್ತಲಿನ ಪ್ರಪಂಚದ ಅರಿವಿತ್ತು. ವಿಶ್ವದ ನಿಗೂಢ ಶಕ್ತಿಗಳ ಬಗ್ಗೆ ಜಿಜ್ಞಾಸೆಯಿತ್ತು. ವಿಶ್ವಕರ್ತನ ಬಗ್ಗೆ ಅವನ ಹೃದಯದಲ್ಲಿ ಮೆಚ್ಚಿಗೆ ಇತ್ತು. ಅಂತೆಯೇ ದೇವರ ಬಗ್ಗೆ ಅವನ ಹೃದಯದಲ್ಲಿ ಪ್ರೀತಿ ಇತ್ತು. ಸ್ವರ್ಗ ನರಕಗಳ ಕಲ್ಪನೆ ಇತ್ತು. ಒಂದು ದಿನ ಮನುಷ್ಯ ದೀನನಾಗಿ. ಆರ್ತನಾಗಿ. ಆಕಾಶದೆಡೆಗೆ ಮುಖ ಮಾಡಿ. ಇಂತು ಪ್ರಾರ್ಥಿಸಿದ: "ಹೇ ಸ್ವರ್ಗವೇ! ನೀನು ದೇವತೆಗಳ ಆಗರವೇ ಆಗಿರುವಿ. ನನಗಾಗಿ. ನನ್ನಂತಹ ಮನುಷ್ಯರಿಗಾಗಿ. ಕೇವಲ. ಒಬ್ಬನೇ ಒಬ್ಬ ದೇವತೆಯನ್ನು ಈ ಸೃಷ್ಟಿಯ ಮೇಲೆ ಕಳುಹಿಸು. ಅವನು ನಮ್ಮಂತೇ ಮನುಷ್ಯದೇಹವನ್ನು ತಾಳಬೇಕು. ಸುಂದರ ಕಾಯನಾಗಿರಬೇಕು. ಸೌಮ್ಯ ಸ್ವಭಾವದವನಾಗಿರಬೇಕು. ಅತ ನಮ್ಮ ಹೃದಯದ ಭಾವನೆಗಳನ್ನು ಅರಿಯಬಲ್ಲವನಾಗಿರಬೇಕು. ನಮಗೆ ಮಾರ್ಗದರ್ಶನ ನೀಡಬಲ್ಲವನಾಗಿರಬೇಕು. ಇಂಥ ಒಬ್ಬ ದೇವತೆಯನ್ನು ನೀನು ಕಳುಹಿಸಿದರೆ. ನಾವು ಅವನನ್ನು ಜೋಕೆಯಾಗಿ ನೋಡಿಕೊಳ್ಳುತ್ತೇವೆ. ಪೂಜಿಸುತ್ತೇವೆ. ಆರಾಧಿಸುತ್ತೇವೆ." ಆದರೆ ಮೇಲಿನಿಂದ ಯಾವ ಉತ್ತರವೂ ಕೇಳಿ ಬರಲಿಲ್ಲ. ಮನುಷ್ಯ ಧೃತಿಗೆಡಲಿಲ್ಲ, ಅಧೀರನಾಗಲಿಲ್ಲ. ಹತಾಶನಾಗಲಿಲ್ಲ;

ಪುನಃ ಪ್ರಾರ್ಥಿಸಿದ. ಹೀಗೆಯೇ ಎಷ್ಟು ದಿನಗಳು ಕಳೆದವೊ ಗೊತ್ತಿಲ್ಲ.

ಒಂದು ದಿನ ಮನುಷ್ಯ ಪ್ರಾರ್ಥಿಸಿದಾಗ, ಮೇಲಿನಿಂದ ಆಕಾಶವಾಣಿಯಾಯಿತು: "ಗುಡಿ ಕಟ್ಟಿಸು. ಇನ್ನು ಆರು ತಿಂಗಳ ಮೇಲೆ ಅಂದರೆ, ಶರತ್‌ಪೂರ್ಣಿಮೆಯ ದಿನ ಸಾಯಂಕಾಲ ಸೂರ್ಯಾಸ್ತ ಸಮಯದಲ್ಲಿ, ದೇವತೆಯು ಗುಡಿಯಲ್ಲಿ ಗೋಚರವಾಗುವನು." ಮನುಷ್ಯನ ಆನಂದಕ್ಕೆ ಮೇರೆ ಉಳಿಯಲಿಲ್ಲ. ಎಲ್ಲರಿಗೂ ಹೇಳಿದ. ಎಲ್ಲರೂ ಸಂತೋಷ ಪಟ್ಟರು. ಕೇವಲ ಆರು ತಿಂಗಳು ಸಮಯವಿದ್ದುದರಿಂದ, ಎಲ್ಲರೂ ಗುಡಿ ಕಟ್ಟುವ ಕೆಲಸದಲ್ಲಿ ತೊಡಗಿದರು. ಊರ ಹೊರಗಿನ ಸುಂದರವಾದ ವಾತಾವರಣವುಳ್ಳ ಬಯಲಿನಲ್ಲಿ ಭವ್ಯವಾದ ಕಟ್ಟಡ ಕಟ್ಟಿದರು. ಹೊರಗಡೆ ವಿಶಾಲವಾದ ಅಂಕಣ, ಒಳಗಡೆ ಒಂದು ಗರ್ಭಗುಡಿ ಪ್ರತ್ಯೇಕ. ಗರ್ಭಗುಡಿಗೆ ಶ್ರೀಗಂಧದ ಕಟ್ಟಿಗೆಯ ಬಾಗಿಲು. ಮನುಷ್ಯ ತನ್ನ ಸಂಕಲ್ಪ ಶಕ್ತಿಯನ್ನೆಲ್ಲ ಬಳಿಸಿ, ಕಟ್ಟಿದ ದೇಗುಲ, ಅದು. ಎಲ್ಲರೂ ಶರತ್ ಪೂರ್ಣಿಮೆಯ ಆಗಮನವನ್ನೇ ನಿರೀಕ್ಷಿಸುತ್ತಿದ್ದರು.

ಕೊನೆಗೂ ಆ ದಿನ ಬಂದೇ ಬಂತು. ಜನರು ಮುಂಜಾನೆಯಿಂದಲೇ, ಗುಡಿಯಲ್ಲಿ ನೆರೆಯಲು ಪ್ರಾರಂಭಿಸಿದರು. 'ತಮ್ಮ ಪ್ರೀತಿಗೆ ಪಾತ್ರನಾದ ದೇವತೆಯನ್ನು ಕಾಣಲು ಎಲ್ಲರೂ ತವಕಿಸುತ್ತಿದ್ದರು. ಎಲ್ಲರೂ ಸೇರಿ, ದೇವತೆಯನ್ನು ಸ್ವಾಗತಿಸಲು ಒಂದು ಸಮಿತಿಯನ್ನು ರಚಿಸಿ ಒಬ್ಬ ನಾಯಕನನ್ನು ಆರಿಸಿದರು (ಪೂಜಾರಿ?). ನಾಯಕನು ಕೆಲವು ಗಂಟೆ ಮೊದಲೇ ಗರ್ಭಗುಡಿಯಲ್ಲಿ ಹೂವು ಹಣ್ಣು ಪರಿಮಳ ಸೂಸುವ ಜಲದೊಂದಿಗೆ ಕಾಯುತ್ತಿದ್ದ. ಗರ್ಭಗುಡಿಯನ್ನು ಮುಚ್ಚಲಾಯಿತು. ಸರಿಯಾದ ಸಮಯಕ್ಕೆ ದೇವತೆ, ಗರ್ಭಗುಡಿಯಲ್ಲಿ ಗೋಚರನಾದ. ಅವನ ಸೌಂದರ್ಯ ಅಸಾಧಾರಣವಾಗಿತ್ತು. ಅವನ ಕೋಮಲ ಕಂಗಳು ಶಾಂತಿಯೇ ಹೆಪ್ಪುಗಟ್ಟಿದಂತೆ ತೋರುತ್ತಿದ್ದುವು. ಅವನ ವ್ಯಕ್ತಿತ್ವ ಪ್ರೀತಿಯ ಪ್ರತೀಕವಾಗಿತ್ತು. ಇಂತಹ ದೇವತೆಯನ್ನು ಕಂಡು ನಾಯಕನು ಮಂತ್ರಮುಗ್ಧನಾದ, ಮೈಮರೆತ.

ಇತ್ತ ಹೊರಗಡೆ, ಜನರಾಶಿ, ಅಶಾಂತಿ, ಆತುರದಿಂದ ತಪ್ತವಾಗಿತ್ತು. ಮುಂದಿನ ಕೆಲವು ಜನರು ಕಿಟಕಿಯಲ್ಲಿ ದೇವತೆಯನ್ನು ಕಂಡರು. ಅವರ ಸಹನೆಯ ಕಟ್ಟೆ ಒಡೆಯಿತು. ಸಾವಿರಾರು ಕೈಗಳು ಗಂಧದ ಬಾಗಿಲನ್ನು ತಳ್ಳಿದವು. ಬಾಗಿಲು ಮುರಿದುಹೋಯಿತು. ಮುಂದಿನ ಜನ ದೇವತೆಯ ಮೇಲೆ, ಪುಷ್ಪ ವೃಷ್ಟಿ ಗೈದರು. ಹಿಂದಿನಿಂದ ನೂಕು ನುಗ್ಗಲು ಸುರುವಾಯಿತು. ಗರ್ಭಗುಡಿಯೊಳಗೆ ಮಾನವ ಮಹಾಪೂರ ಪ್ರವೇಶಿಸಿತು. ಎಲ್ಲರೂ ಪುನಃ ಪುಷ್ಪವೃಷ್ಟಿ ಗರೆದರು. ಜನರು ದೇವತೆಗಾಗಿ ಹುಡುಕಿದಾಗ, ಅನಂತವಾದ ಹೂವಿನ ರಾಶಿಯಲ್ಲಿ ದೇವತೆಯ ಶವವು ಪವಡಿಸಿದ್ದು ಗೋಚರಿಸಿತು.

ಈಗ ಮನುಷ್ಯ ನಾಚಿಕೆಯಿಂದ ಮುದುಡಿ ಹೋಗಿದ್ದ, ದುಃಖದಿಂದ ಇಳಿದುಹೋಗಿದ್ದ. ಅವನು ಪುನಃ ಸ್ವರ್ಗವನ್ನು ಕುರಿತು ಪ್ರಾರ್ಥಿಸಿದ. "ಸ್ವರ್ಗವೇ ನನ್ನ ತಪ್ಪು ನನಗೆ ಅರಿವಾಗಿದೆ. ನನಗೆ ಪಶ್ಚಾತ್ತಾಪವಾಗಿದೆ. ಇನ್ನೊಂದು ಸಲ ದೇವತೆಯನ್ನು ಕಳಿಸು; ನಾನು ಎಲ್ಲ ಎಚ್ಚರಿಕೆಯನ್ನು ವಹಿಸಿ ಕಾಪಾಡುತ್ತೇನೆ." ಮೇಲಿನಿಂದ ಏನೂ ಕೇಳಿಬರಲಿಲ್ಲ. ಮನುಷ್ಯ ಪುನಃ ಪುನಃ ಪ್ರಾರ್ಥಿಸಿದ. ಏನೂ ಕೇಳಿ ಬರಲಿಲ್ಲ, ಕೊನೆಗೊಮ್ಮೆ ಗಡಗಡ, ಶಬ್ದ ಮಾಡುತ್ತ ಮೇಲಿನಿಂದ ಕಲ್ಲುಗಳು ಬಿದ್ದವು. ಮನುಷ್ಯನಿಗೆ ಅಚ್ಚರಿಯಾಯಿತು. "ಹೇ ಸ್ವರ್ಗವೇ, ನಾನು ಕೇಳಿದ್ದೇನು? ನೀನು ಕೊಟ್ಟದ್ದೇನು? ಬರಿ ಪಾಷಾಣಗಳು!"ಎಂದು ಅರಲಿದ ಮನುಷ್ಯ! ಈಗ ಮೇಲಿನಿಂದ ಧ್ವನಿ ಕೇಳಿತು: "ಹೇ ಮನುಷ್ಯ, ನಿನ್ನ ಪೂಜೆಯನ್ನು ಸಹಿಸುವ ಶಕ್ತಿ ಕೇವಲ ಈ ಪಾಷಾಣಗಳಿಗಿದೆ."

ಬಹುಶಃ ಅಂದಿನಿಂದಲೇ ಮನುಷ್ಯ ಕಲ್ಲು ದೇವರ ಪೂಜೆ ಪ್ರಾರಂಭಿಸಿದ.

✡

ಸ್ಮೃತಿಗಾಳಿನ ಲೋಕದಿಂದ 'ಕನ್ನಡ ರತ್ನ'

ಶ್ರೀದೇವದತ್ತ

ನೆನ್ನೆ ಮಂಗಳವಾರ ೧೩–೩–೭೯ರ ದಿನ, ಬೆಳಗಿನ ಗಾಡಿಯಿಂದ ಕುಂದಗೋಳಕ್ಕೆ ಹೋಗಿದ್ದೆವು, ನಾನೂ ನನ್ನ ಪತ್ನಿಯೂ ಜತೆಗೂಡಿ. ಅಂದು ಅಲ್ಲಿ ಆಕೆಯ ಅತ್ತಿಗೆಯ ಪ್ರಥಮ ವರ್ಷಾಂತಿಕ: ಆಕೆ ಕಳೆದ ವರ್ಷ ಹೋಳಿ ಹುಣ್ಣಿಮೆಯ ದಿನವೇ ತೀರಿಕೊಂಡಿದ್ದರು. ಆ ದಿನವೂ ಚಂದ್ರಗ್ರಹಣ, ಇಂದೂ, (೧೩–೩–೭೯) ಚಂದ್ರಗ್ರಹಣವಿತ್ತು. ಇದು ಎಂಥ ಯೋಗಾಯೋಗ; 'ದೇವರೇ ಎಲ್ಲವೂ ಒಳ್ಳೆಯದೇ ಆಗಲಿ. ಎಲ್ಲಿಯೂ ಕೆಡುಕು ಆಗದಿರಲಿ', ಎಂದು ಮನಸಿನಲ್ಲೇ ಕನವರಿಸಿಕೊಳ್ಳುತ್ತಲಿದ್ದೆ. ಆದರೇನು? ಬಪ್ಪದು ತಪ್ಪದಂತೆ.

ಅದೇ ಸಂಜೆ ಬಾನುಲಿ ಸುದ್ದಿಯಲ್ಲಿ ಕೇಳಿದೆ, ಗೆಳೆಯ 'ರಾಜರತ್ನಂ' ಇನ್ನಿಲ್ಲ; ಹೃದಯಾಘಾತದಿಂದ ಮಧ್ಯಾಹ್ನ ಎರಡರ ಹೊತ್ತಿಗೆ ತೀರಿಕೊಂಡರು ಎಂದು. ನನ್ನ ಹೃದಯಕ್ಕೂ ಆಘಾತವಾದಂತಾಯಿತು. ಕ್ಷಣ ಹೊತ್ತು ದಿಗ್ಮೂಢನಾದೆ. ಎಂಥ ನಶ್ವರ ಈ ಬದುಕು! ಎಂದುಕೊಂಡೆ. ಮನಸ್ಸು ನಾಲ್ಕು ದಶಕಗಳಷ್ಟು ಹಿಂದೋಡಿತು. ನೆನಪು ಭದ್ರವಿರುವಷ್ಟು ಕಾಲ ಅದಕ್ಕಿಲ್ಲಿಯ ನಿಬಂಧ!

ನಾನು ಮೊಟ್ಟ ಮೊದಲು ಜಿ. ಪಿ. ರಾಜರತ್ನಂ ಅವರನ್ನು ಕಂಡುದು ಈ ಕುಂದಗೋಳದಲ್ಲಿಯೇ. ಅದು ಸುಮಾರು ೧೯೩೬–೩೭ರ ಕಾಲವಿರಬೇಕು. ಕುಂದಗೋಳದಲ್ಲಿಯ ನಾವೆಲ್ಲ ಕನ್ನಡ ಗೆಳೆಯರು ಕೂಡಿ, ಅಲ್ಲಿಯ ಆಗಿನ ಮರಾಠಿ ಆಕ್ರಮಣದ 'ರ್ಝಾಲಾಚ ಪಾಹಿಜೆ'ಯನ್ನು ಎದುರಿಸಲು, 'ತಾರೆಯ ಬಳಗ' ಎಂಬ ಕನ್ನಡ ಸಂಘವನ್ನು ಕಟ್ಟಿಕೊಂಡಿದ್ದೆವು. ಅಲ್ಲಿಯ ಡೈಮಂಡ್ ಜ್ಯುಬಿಲಿ ಲೈಬ್ರರಿಯಲ್ಲಿ ಕನ್ನಡ ಪುಸ್ತಕಗಳೇ ಇರಲಿಲ್ಲ. ಅಲ್ಲಿ ಕನ್ನಡಿಗರನ್ನು ಸದಸ್ಯರನ್ನಾಗಿ ಮಾಡಿ, ಅವರ ಸಂಖ್ಯೆ ಹೆಚ್ಚಿಸಿ, ಅಲ್ಲಿ ಕನ್ನಡ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ತರಿಸುವಂತೆ ನೋಡಿಕೊಳ್ಳುತ್ತಿದ್ದೆವು. ಆಲೂರ ವೆಂಕಟರಾಯರು, ಅಂಬಿಕಾತನಯದತ್ತರು, ಬೆಟಗೇರಿ ಕೃಷ್ಣಶರ್ಮರು, ಬಿ. ಎಂ. ಶ್ರೀಕಂಠಯ್ಯನವರು ಮೊದಲಾದವರನ್ನು ಆಗಾಗ ಕರೆಯಿಸಿಕೊಂಡು, ಕನ್ನಡ ವಾತಾವರಣವನ್ನು ನಿರ್ಮಿ

ಸಲು ಪ್ರಯತ್ನಿಸುತ್ತಿದ್ದುದಲ್ಲದೆ, ಜಮಖಂಡಿ ಸಂಸ್ಥಾನದ ಒಂದು ತಾಲೂಕು ಸ್ಥಳವಾದ, ಹಾಗೂ ಮರಾಠಿಯ ಪ್ರಾಬಲ್ಯವಿದ್ದ ಕುಂದಗೋಳದಲ್ಲಿ ನಾವು ತಾರೆಯ ಬಳಗದ ಸದಸ್ಯರೆಲ್ಲ ಪ್ರತಿ ವಾರ ಸಭೆಗೂಡಿ; ಅಲ್ಲಿಯ ಜನರಿಗೆ ಕನ್ನಡದ ಇಂಪು ಕಂಪುಗಳನ್ನು ಸಾಹಿತ್ಯದ ಮುಖಾಂತರ ಬೀರಿ, ಅವರ ಒಲವನ್ನು ಕನ್ನಡದ ಕಡೆಗೆ ಸೆಳೆಯುತ್ತಿದ್ದೆವು.

ಇಂಥ ೧೯೩೭–೩೮ರ ತರುಣದಲ್ಲಿಯೇ, ಅಲ್ಲಿ ರಾಜರತ್ನಂ ಅವರನ್ನು ಕರೆಯಿಸಿ, ಭಾಷಣ, ಕಾವ್ಯವಾಚನ ಕಾರ್ಯಕ್ರಮವನ್ನು ನಡೆಯಿಸಿದೆವು. ಅಲ್ಲೇ ನಾನು ಮೊಟ್ಟ ಮೊದಲು ನಮ್ಮ ಕನ್ನಡ 'ರತ್ನ'ನನ್ನು ನೋಡಿದ್ದು, ಅವರ ಜತೆ ಎರಡು ಹಗಲು ಎರಡು ರಾತ್ರಿ ಕಳೆದದ್ದು. ಗಜ್ಜರಿಗೆಂಪಿನ ತುಂಬಿಕೊಂಡ ತರುಣ ಮೈ, ಉಟ್ಟಿದ್ದೊಂದು ಶುಭ್ರಖಾದಿ ಲುಂಗಿ, ಒಂದು ಬಿಳಿ ಒಳ ಅಂಗಿ, ಮೇಲೊಂದು ಹೊದೆದುಕೊಂಡ, ಖಾದಿ ಧೋತರ, ಬೌದ್ಧ ಸಂನ್ಯಾಸಿಯಂತೆ, ಬೋಳು (ಉಗುರುಗಳೆತ್ತರ ಕೂದಲಿದ್ದವು) ತಲೆ, ಅದರೆ, ತೇಜಸ್ವಿ ಮುಖ, ಮಿಂಚಿನಂತೆ ಚಕಮಕಿಸುತ್ತಿರುವ ಕಂಗಳು. ಕಂಚಿನ ಕಂಠದಿಂದೊಗೆವ ಧೀರ ಗಂಭೀರನಾದ ಧ್ವನಿ. ಈ ಮನುಷ್ಯನೊಂದಿಗೆ ಸ್ವಲ್ಪ ಸಂಪರ್ಕ ಬಂದರೂ ಸಾಕು ಈತ ನಿಜಕ್ಕೂ ಕನ್ನಡದ ರತ್ನನೆಂಬಲ್ಲಿ ಯಾವ ಸಂದೇಹವೂ ಉಳಿಯುತ್ತಿರಲಿಲ್ಲ.

ಆ ಎರಡು ದಿನದ ಒಡನಾಟದಲ್ಲಿ ನಾವಿಬ್ಬರೂ ಬಹಳ ಹತ್ತಿರಕ್ಕೆ ಬಂದೆವು. ಕನ್ನಡದ ಆಗುಹೋಗುಗಳ ಬಗೆಗೆ ತುಂಬಾ ಮಾತನಾಡಿಕೊಂಡೆವು: ಕನ್ನಡ ಕುಲದೈವತದ ಪೂಜಾರಿಗಳಾದೆವು. ಬಹುಶಃ ಆಗಲೇ ಅದು ಅವರು ತಮ್ಮ 'ಗಂಡುಗೊಡಲಿ'ಯನ್ನು ಮಸೆಯುತ್ತಿರುವ ಕಾಲವೆಂದು ತೋರುತ್ತದೆ. ಸತ್ಯ–ಅಹಿಂಸೆಗಳ ಬಗ್ಗೆ ಆಗ ನಾವು ಮಾತನಾಡಿಕೊಳ್ಳುತ್ತ, ಆವು ಹೇಡಿಯ ಸತ್ಯ–ಅಹಿಂಸೆಗಳಾಗಬಾರದೆಂಬ ಮತದವರಾಗಿದ್ದೆವು. ಆಗ ಜಿ. ಪಿ. ಅವರಾಡಿದ "ದೇವೋ ದುರ್ಬಲ ಘಾತಕಃ" ಎಂಬ ನುಡಿ ನನಗಿನ್ನೂ ನೆನಪಿದೆ.

ಬಡತನ–ಸಿರಿತನಗಳ ಬಗೆಗೆ ಗೆಳೆಯ ರಾಜರತ್ನಂ ಅವರ ಮಾತು–ಹೋಳಿಗೆ ತುಪ್ಪ ತಿಂದರೂ, ಹೊಟ್ಟೆ ತುಂಬುತ್ತೆ; ರೊಟ್ಟಿ–ಚಟ್ನಿ ತಿಂದರೂ ಹೊಟ್ಟೆ ತುಂಬುತ್ತೆ–ಇದರಲ್ಲಿ ಹೆಚ್ಚು ಕಡಿಮೆ ಏನು ಬಾತು? ಎಂಬುದನ್ನು ನೆನೆಸಿಕೊಂಡಷ್ಟು ಆ ಮನುಷ್ಯನ ಅಳದ ಬಗ್ಗೆ ಆಶ್ಚರ್ಯವೇ ಆಗುತ್ತದೆ. ಅವರ ಕರ್ತವ್ಯಪ್ರಜ್ಞೆಯಂತೂ ಅತ್ಯಂತ ಉಜ್ವಲ, ಜಾಜ್ವಲ್ಯ. ರಾಜರತ್ನರೊಳಗಿನ ಎಂಡಕುಡುಕ ರತ್ನ ಕೂಡಾ "ಕೈಲೆ ಕಿಸೀದೇ ಕರ್ಮಾಂತ ಕಿರ್ಲೋ ಕವ್‌ಜೋರ್ ಅದ್ಮಿ ಬಕ್ರಾ; ಕೈಲಾಗೋರ್ನೂ ಹಿಂದ್‌ಕೆಳೆಯೋನು ನೀನೆಲ್ಲಿ ಹುಟ್ಟಿದ್ಯೋ ವಕ್ರಾ" ಎಂದು ಗುಡುಗುಡಿಸಿದ್ದ! ಹೊಸ ಕವಿಗಳು ಬಹುಶಃ ಶಬ್ದದಾರಿದ್ರ್ಯದ ಕಾರಣವಾಗಿಯೋ ಏನೋ, ಅನ್ಯಭಾಷಾ ಪ್ರಯೋಗವನ್ನು ಅಸಡ್ಡಾಳವಾಗಿ ಮಾಡುತ್ತಿದ್ದಾರೆಂದು ರತ್ನರ ಅಭಿಪ್ರಾಯವಾಗಿತ್ತು. ಹಿಂದೊಮ್ಮೆ ಬೆಂಗಳೂರಿನಲ್ಲಿ ಕರ್ನಾಟಕವೋ ಕರ್ಣಾಟಕವೋ? ಯಾವುದು ಶುದ್ಧವೆಂದು ವಾದವೆದ್ದಾಗ, ಈ ರಾಜರತ್ನಂ ಅವರ ಎಂಡಕುಡುಕ ರತ್ನನ ಒಳಗಿನ ಅಪ್ರತಿಮ ಪ್ರತಿಭಾಯುಕ್ತ ಪ್ರಚಂಡ ಕವಿ 'ಮಹಾಕವಿ ಪುರುಷಸರಸ್ವತಿ' ಅವತಾರ ತಾಳಿ ಯಕ್ಷಗಾನ ಗಂಧರ್ವಗಾನಗಳೆರಡನ್ನೂ ಅಳವಡಿಸಿಕೊಂಡು ಮಹಾ ತಾಂಡವಲಾಸ್ಯ ನರ್ತನವನ್ನು ಗೈದುದು ಸರ್ವವಿದಿತವಾಗಿದೆ. ಸಂಸ್ಕೃತದವರು "ಣ," ಕನ್ನಡದವರು "ನ", ಈ "ನ–ಣ" ವಾದ ರೋಮ್ಯಾಂಟಿಕ್ ಎಂದು ಬಗೆದು ಈ ಮಹಾಕವಿ, ಈಗೆರಡು ಮೂರು ದಶಕಗಳಷ್ಟು ಹಿಂದೆಯೇ ಮಹಾ ನವ್ಯಕಾವ್ಯವೊಂದನ್ನು ರಚಿಸಿ ಬಿಟ್ಟ. ಕನ್ನಡದಲ್ಲಿ ಸಂಸ್ಕೃತ ಮಿಶ್ರವಾಗಿರುವಂತೆ ಇಂಗ್ಲೀಷೂ ಏಕೆ ಮಿಶ್ರಿತವಾಗಬಾರದೆಂದು ನವ್ಯ ಪಂಥ ಹಿಡಿದ. ಆದರೆ, ಈಗಿನವರಂತೆ, ರಾಗ ತಾಳ ಲಯ ಒಂದೂ ಇಲ್ಲದ 'ಛಂದೋಬಂಧ ರಹಿತ ಕವಿತೆ' ಎಂದು ಉದ್ದ–ಮೊಟಕು ಸಾಲುಗಳ ಕಾವ್ಯ ಬರೆಯದೆ, ಹಿಂದಿನ ನೆಲೆಗಟ್ಟು ಹಿಡಿದೇ ತನ್ನ ನವ್ಯಕಾವ್ಯ–'ಮಹಾಕವಿ ಪುರುಷಸರಸ್ವತಿ'ಯನ್ನು ರಚಿಸಿದ; ಭಾಮಿನಿ ಷಟ್ಪದಿಯಲ್ಲೇ ರಚಿಸಿದ ಈ ಕಾವ್ಯದೊಳಗಿನ ನಿಜವಾದ ನವ್ಯತೆಯ ಸೊಬಗನ್ನು ನೋಡಿರಿ.


KBK

ಕಟ್ಟು ಕಾವ್ಯದ ಮಸಿಯು ಕುಡಿಕೆಯ
ಟಿಳ್ಟು ಮಾಡುವ ಮೊದಲೆ ಹಾವಿನ
ಬೆಲ್ಟು ಹಾಕಿದ ಗಣಪನನು ಹಾಡುವುದು
ಕಲ್ಟು…

–ಎಂದು ಗಣಪತಿಯನ್ನು ಸ್ತುತಿ ಮಾಡಿ, ಸರಸ್ವತಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಾನೆ.

ಸ್ಯಾಲುಟೇಶನ್ಸ್ ವಾಣಿ ನಿನ್ನಯ
ವ್ಯಾಲುಬಲ್ ಕೋ ಆಪ್ ನೆಚ್ಚಿಯೇ
ವ್ಯಾಲುಬಲ್ ನಾನಪ್ಪನೇಂಬೀಯಾಂ
ಬಿಶನ್ನೆನಗೆ,

ಸ್ಟಿಲ್ಲ್ಯುಮೇನಾಟ್ ಕೇರ್ ಟು ಏಡ್ ಮಿ
ಸಿಲ್ಲಿ ಫಿಯರ್‌ರಿದು ಅಲ್ಲವರದೇ
ವಿಲ್ಲ್ಯು ಹೆಲ್ಪ್ ಮಿ ಐ ವಿಲ್ ಥ್ಯಾಂಕ್ಯೂ
ಫಾರ್ದಿ ಎಶುರನ್ಸು…

ಹೇಗಿದೆ ಈ ರಾಜರತ್ನಂ ಅವರ ರಾಜನವ್ಯಕಾವ್ಯ! ಇಂಥ 'ಬಾರ್ ಬಾರ್ ನೊರೆ ಸುರಿಯೋವಂಥ ಹುಳಿ ಹೆಂಡ ಬಿಟ್ಟು ಗುಂಡು ಹಾಕೊ ವಿಸ್ಕಿ ಎಂಬೋ ನವೀನರನ್ನು ಕಂಡರೆ ಅರೇ ಇಸ್ಕಿ' ಎನ್ನಬಹುದಿತ್ತಲ್ಲವೇ ನಮ್ಮ ಈ ಗುಂಡ್ಲು ಪಂಡಿತ ರಾಜರತ್ನ!

ಈಗ್ಗೆ ಹತ್ತು ಹನ್ನೆರಡು ವರ್ಷಗಳ ಹಿಂದೆ, ಕನ್ನಡ ರಾಜ್ಯ ಸರಕಾರವು ಮೈಸೂರಲ್ಲಿ ದಸರಾ ಮಹೋತ್ಸವದಲ್ಲಿ ಏರ್ಪಡಿಸಿದ್ದ ಒಂದು ಸರಕಾರೀ ಕವಿ ಸಮ್ಮೇಲನಕ್ಕೆ ಗೇ ರಾಜರತ್ನಂ ಅವರು ಅಧ್ಯಕ್ಷರಾಗಿದ್ದಾಗ, ಆ ಸಮ್ಮೇಲನದಿಂದ ಆಮಂತ್ರಿತನಾಗಿ ಹೋಗುವ ಭಾಗ್ಯ ನನಗೂ ದೊರೆತಿತ್ತು. ಅಲ್ಲಿ ವೇದಿಕೆಯ ಮೇಲೆ ನಾವೆಲ್ಲಾ ಕವಿಗಳು ಆಸೀನರಾದಾಗ ಅಲ್ಲಿಯ ಮುಖ್ಯ ಕಾರ್ಯಕರ್ತರು, ಪದ್ಯಗಳನ್ನು ಬರೆದ ಕಾಗದ ಹಿಡಿದುಕೊಂಡು ಪಠಿಸದೆ, ಕಂಠಪಾಠ ಅನ್ನ ಬೇಕು; ಕಾಗದ ಪುಸ್ತಕ ನೋಡಬಾರದು ಎಂದಾಗ, ಅಧ್ಯಕ್ಷ ರಾಜರತ್ನಂ ಅವರು, "ಏನ್ರೀ ಇದು, ಕವಿಗಳೆಂದರೆ ಶಾಲಾ ಮಕ್ಕಳೆಂದು ಭಾವಿಸಿದಿರಾ? ಇದೇನು ಅವರ ಬಾಯಿಪಾಠ ಪರೀಕ್ಷೆಯೇ?" ಎಂದು ಕಂಚಿನ ಕಂಠದಿಂದ ಅಬ್ಬರಿಸಿದಾಗ ಆ ಜರೀ ರುಮಾಲ ಕಾರ್ಯ ಕರ್ತರು ತೆಪ್ಪಗಾಗಿ, "ನಿಮಗೆ ಹೇಗೆ ಯೋಗ್ಯ ತೋರುವುದೋ ಹಾಗೆ ಮಾಡಿ" ಎಂದು ಮೆತ್ತಗೆ ನುಡಿದರು; ಕವಿ ಸಮ್ಮೇಲನ ಸಾಂಗವಾಗಿ ನೆರವೇರಿತು.

ಇನ್ನೊಂದು ಹುಬಳ್ಳಿಯಲ್ಲಿಯದೇ ಪ್ರಸಂಗ. ಇಲ್ಲಿಯ ರೋಟರಿ ಕ್ಲಬ್ಬಿನವರು ತಮ್ಮ ಸಂಸ್ಥೆಯ ವಾರ್ಷಿಕೋತ್ಸವಕ್ಕೆಂದು ಶ್ರೀ ಜಿ.ಪಿ. ರಾಜರತ್ನಂ ಅವರನ್ನು ಕರೆಸಿದ್ದರು. ಆಗ ಆಮಂತ್ರಿತನಾಗಿ ನಾನೂ ಆ ಸಭೆಗೆ ಹೋಗಿದ್ದೆ. ಲಯನ್ಸ್ ಕಾರ್ಯಕರ್ತರು ಜಿ.ಪಿ. ಅವರಿಗೆ, "ಬಹುಶಃ ನಿಮಗೆ ಇಲ್ಲಿ ಪರಿಚಯದವರು ಇರಲಿಕ್ಕಿಲ್ಲ. ನೀವಿಲ್ಲಿ ಬಂದುದು ಬಹಳ ಕಡಿಮೆ. ಆದರೆ ಇಲ್ಲಿ ಎಲ್ಲರೂ ನಿಮ್ಮ ಪರಿಚಯ ಉಳ್ಳವರು" ಎಂದು ಹೇಳಿದಾಗ ರಾಜರತ್ನಂ ಅವರು ನನ್ನ ಕಡೆಗೆ ಬಂದು ಬೆರಳು ಮಾಡಿ ತೋರಿಸುತ್ತ, "ನನಗೆ ಪರಿಚಯವಿರುವ ಮುಖವೆಂದರೆ ಈ ದತ್ತಮೂರ್ತಿ ಅವರದೊಂದೇ ಮಾತ್ರ." ಎಂದು ನಗುನಗುತ್ತ ಹೇಳಿ ನನ್ನತ್ತ ಬಂದು ಕೈ ಕುಲುಕಿದರು. ಇಂಥ ಈ ಅಂತಃಕರಣದ 'ರತ್ನ' ಇನ್ನೆಲ್ಲಿ?

ಶ್ರೀ ರಾಜರತ್ನಂ, ಗ್ರ್ಯಾಜುಯೇಟ್ ಆಗಿ, ಕನ್ನಡ ಪ್ರಾಥಮಿಕ ಶಾಲೆಯೊಂದರಲ್ಲಿ ತಾತ್ಪೂರ್ತಿಕ ಮಾಸ್ತರ ಆದಾಗ, ಅಲ್ಲಿ ನಡೆದ ಇನಸ್ಪೆಕ್ಷನ್‌ದಲ್ಲಿ ಶಾಲಾ ಇನ್‌ಸ್ಪೆಕ್ಟರರು "ಏನ್ರೀ ನೀವು ಗ್ರ್ಯಾಜುಏಟ್ ಆಗಿಯೂ, ಇಷ್ಟು ಕಡಿಮೆ ಸಂಬಳದ ನೌಕರರಿಗೆ ಬರಲಿಕ್ಕೆ ಸಂಕೋಚವೆನ್ನಿಸಲಿಲ್ಲವೇ?" ಎಂದು ಕೇಳಿದಾಗ, ರತ್ನ ಸಿಡಿದೆದ್ದು, "ಗ್ರ್ಯಾಜುಯೇಟ್ ಆದವರಿಗೂ ಇಷ್ಟು ಕಡಿಮೆ ಸಂಬಳ ಕೊಡಲು ಸರಕಾರಕ್ಕೇ ಸಂಕೋಚವೆನಿಸದಿದ್ದಾಗ, ಉಪಜೀವನಕ್ಕಾಗಿ ದುಡಿಯುವ ನನಗೆ ಏಕ್ರೀ ಸಂಕೋಚ?" ಎಂದು ಪ್ರಶ್ನೆಯಲ್ಲಿಯೇ ಉತ್ತರಿಸಿದರಂತೆ.

ಮೈಸೂರು ಕನ್ನಡ, ಧಾರವಾಡ ಕನ್ನಡ ಎಂದೆನ್ನದೆ ಎರಡೂ ಕನ್ನಡವನ್ನು ಮೀರಿ ನಿಂತ

ಕೆಚ್ಚು ಕನ್ನಡ ಶ್ರೀ ಜಿ. ಪಿ. ಅವರದು. ಅವರ "ಗದು ಗದು ಕಳ್ಳೀಪುರಿ" ಯುಷ್ಟೇ ಕುರ್‌ಕುರ್ ಎಂದು ಕಾವೇರಿಸುವುದು. ಅವರ ಎಂಡ್ ಕುಡುಕ ರತ್ನನ ಕನ್ನಡ. ಕುಡುಕ ರತ್ನ ಕಂಡ ಅವನ ಪುಟ್ನಂಜಿ ರೂಪ. ಅವನ ಆಟ್ರಿಯು ನಂದಾ ದೀಪ. ಕನ್ನಡ ಪದಗೋಳಂತೂ. ರತ್ನಂಗೆ ಪ್ರಾಣ. ಬುಂಡೇನೆತ್ತಿ ಕುಡದ್ಬಿಟ್ಟಾಂದ್ರೆ ತಕ್ಕೊ ಪದ ಗೋಳ್ ಜಾಣ. ಎಂಡ, ಎಡ್ತಿ. ಕನ್ನಡ ಪದ ಗೋಳ್ ಅಂದ್ರೆ ರತ್ನಂಗೆ ಪ್ರಾಣ. ಇಂಥ ಕನ್ನಡ ಕೆಚ್ಚು. ಅಥವಾ ಕೆಚ್ಚುಗನ್ನಡವನ್ನು ಗದಾ ಯುದ್ಧದ ರತ್ನನ ಸಂತರ ತೋರಿಸಿದವರೆಂದರೆ ಬಹುಶಃ ಇದೇ ರತ್ನ ಎಂದು ತೋರುತ್ತದೆ.

ರತ್ನಪರೀಕ್ಷಕನಾ ಮಣಿ
ರತ್ನಪರೀಕ್ಷಕನೆಂಬ ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಳ್ ಪರೀಕ್ಷಿಪಂಗೆ-
ಟೆರ್ದೆಯೋ !

ಎಂದೂ ಈ ರತ್ನನೂ ಕೇಳುವ ಕೆಚ್ಚಿನವನೇ: ಅಂತೇ "ಕಮಲದ ಹೂವಿನ ಕುರ್ಚಿಯ ಮೇಲೆ ಜೋಕಾಗ್ ಕುಂತ್ಕೋ ನೀನು: ನಾಲ್ಕು ಬಾಯ್ಗೂ ನಾಲ್ಕು ಬುಂಡೆ ಹೆಂಡಾ ತತ್ತೀನ್ ನಾನು" ಎಂದು ಬ್ರಹ್ಮನಿಗೇ ಹೆಂಡ ಕುಡಿಸಬಂದ ಈ ಕನ್ನಡ ಕುಡುಕ. ತನ್ನ ಪುಟ್ನಂಜೀನ್ನ ನೆನಸಿ ಕೊಂಡ, "ಸರಸೋತಮ್ಮಂಗ್ಯೋಳಾಕಿಲ್ಲ. ನೀನೇನ್ನ ದಿಕೊರ್ಡೀಬೇಡಾ" ಎಂದು ಹೇಳುವುದು ಅತ್ಯಂತ ಮಾರ್ಮಿಕವೂ ಅರಿವುಳ್ಳದ್ದೂ ಆಗಿಲ್ಲವೇ ? ಇಂಥ ನೂರಾರು ನುಡಿರತ್ನಗಳಿಂದ ಕನ್ನಡ ತಾಯಿಯ ಕಿರೀಟವನ್ನು ಕೆಚ್ಚಿದವನು ಈ ರಾಜರತ್ನ.

ಧಾರವಾಡದ ಅಚ್ಚಗನ್ನಡ ಪ್ರೇಮಿ ಮಹಾಕವಿಯಾದ ದಿ. ಸಾಲಿ ರಾಮಚಂದ್ರರಾಯರು ಕನ್ನಡವನ್ನು ಕುರಿತು ತಮ್ಮ ನಯವಿನಯ ಸುಸಂಸ್ಕೃತ ರೀತಿಯಲ್ಲಿ, "ಕನ್ನಡದ · ನೆಲದ ಮಣ್ಣಿನಗೆ ಪಾವನ ತುಳಸಿ। ಕನ್ನಡದ ನೆಲದ ನಿರ್ಜಾನಲಿನಗೆ ದೇವನದಿ। ಕನ್ನಡದ ನೆಲದ ಕಲ್ಲಿನಗೆ ಸಾಲಿಗ್ರಾಮ ಶಿಲೆ ಕನ್ನಡಂ ದೈವಮ್ಮೈ॥ ಕನ್ನಡದ

ಶಬ್ದ ಮೇನಗೋಂಕಾರಮೀಯೆನ್ನ। ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ। ಮಿನ್ನಾವುದೈ ಪೆರತು ಕನ್ನಡನ ಸೇವೆಯಿಂದಧಿಕಮೀಜಗದೊಳೆ ನಗೇ॥ ಎಂದು ಹಾಡಿಕೊಂಡು ಕನ್ನಡದ ಬಾವುಟವನ್ನು ಎತ್ತಿ ಹಿಡಿದಿದ್ದರೆ, 'ಕನ್ನಡದ ಹೆಂಡ' ಕುಡಿದು ಸುಸಂಸ್ಕೃತ ಮತ್ತೇರಿದ್ದ ಈ ಎಡ್ಕುಂಡುಕ ರತ್ನನು ಮೊದಲಿಗೆ "ಯೆಂಡ, ಎಡ್ತಿ, ಕನ್ನಡ ಪದಗೋಳ್ ಅಂದ್ರೆ ರತ್ನಂಗ್ ಪ್ರಾಣ! ಬುಂಡೇನೆತ್ತಿ ಕುಡುದ್ಬಿಟ್ಟಾಂದ್ರೆ ತೆಕ್ಕೋ ಪದ.ಗೋಳ್ ಬಾಣ" ಎಂದು ಪದಶರವರ್ಷವನ್ನೇ ಸುರಿಸಿದ ಈ ಹೆಂಡದ ಗಾಂಡೀವಿ, "ಭಗವಂತೇನಾರ ಭೊಮಿಗಿಳಿದು ನನ್‌ತಾಕ್ ಬಂದಾಂತ್ ಅನ್ನು; ಪರ್ರಿಗ್ರೀಕ್ಷೆ ಮಾಡ್ತಾನವನು ಭಕ್ತರ ಮೇಲವನ ಕಣ್ಣು" ಎನ್ನುವ ಈ ನಾರಾಯಣ ಸಖ ನರನು, "ಯೆಂಡ ಕುಡಿಯೋದ್ ಬಿಟ್ಬಿಡು ರತ್ನಾ" ಎಂದು ದೇವರೆಂದರೆ, ಹೇಳ್ತಾನೆ–"ಮೂಗು ಮೂರು ಚೂರಾಗ್ ಮುರಸ್ಕೋತೇನೆ, ದೇವರ ಮಾತಿಗಡ್ಬಂದ್ರೆ" ಎಂದ; "ಎಂಡ್ತೀನ್ನೂ ಬಿಟ್ಬು ಬಿಡು" ಅಂತ ದೇವರಂದ್ರೆ ಇವ, "ಕಳಿದೊಯ್ತಂತೆ ಕುಣ್ದಾಡ್ತೇನಿ ದೊಡ್ ಒಂದ್ ಕಾಟಾ ತೊಂದ್ರೆ" ಎಂದು ಹೇಳೇಬಿಟ್ಟಾಗ, ಆ ದೇವರು "ಕನ್ನಡ ಪದಗೋಳ್ನಾಡೋದೆಲ್ಲ ನಿಲ್ಲಿಸಿ ಬಿಡಬೇಕು ರತ್ನ" ಎಂದರೆ, ಈ ಗಂಡುಗೊಡಲಿಯ ಹೆಂಡ ಕುಡುಕ ಹೇಳ್ತಾನೆ "ದೇವ್ರಾದ್ರೇನು ಮಾಡ್ತೇನವಗೆ ಖತ್ನ!" ಈ ಹೆಂಡದ ದೇವರ ಭಕ್ತ ಹೀಗೆ ಹೇಳಿ ತನ್ನ ಮನದ ಮಾತನ್ನು "ಯೆಂಡಾ ಹೋಗ್ಲಿ, ಎಡ್ತಿ ಹೋಗ್ಲಿ, ಎಲ್ಲಾ ಕೊಚಗೊಂಡೋಗ್ಲಿ; ಪರಪಂಚ ಇರೋತನಕಾ ಮುಂದೆ ಕನ್ನಡ ಪದಗೋಳ್ ನುಗ್ಲಿ" ಎಂದು ಉಗ್ಗಡಿಸುತ್ತಾನೆ.

ಇಂಥ ರತ್ನ ಇನ್ನಿಲ್ಲ. ಮೈಯಿಂದ ಮಾತ್ರವಷ್ಟೆ ಇನ್ನಿಲ್ಲ; ಆದರೆ ಮಾತಿನಿಂದ, ಪದಗಳಿಂದ, ವಿಚಾರ ಧಾರೆಯಿಂದ, ಈ ರತ್ನ ಇನ್ನೂ ಇದ್ದೇ ಇದ್ದಾನೆ ಇಷ್ಟೇ ಅಲ್ಲ, ಅವನು ಎಂದೆಂದಿಗೂ ಇರುವವನೇ. ರತ್ನನೇ ಹೇಳಿದ "ಪರಪಂಚ ಇರೋತನಕ ಮುಂದೆ ಕನ್ನಡ ಪದಗೋಳ್ ನುಗ್ಲಿ" ಎಂಬ ಮಾತಿನಂತೆ; ಪ್ರಪಂಚವು ಇರುವವರೆಗೂ. ಈ ಕನ್ನಡ ರಾಜರತ್ನವೂ, ಕನ್ನಡಾಂಬೆಯ ಕಿರೀಟದಲ್ಲಿ ಎಂದೆಂದಿಗೂ ಬೆಳಗುತ್ತಲೇ ಇರಲಿ!

ಸಂಸ್ಕೃತದ ಕಾಲಿದಾಸನನ್ನು ಕುರಿತು ಬೇಂದ್ರೆಯವರು "ಹಿಂದಾಗಲಿಲ್ಲ ಮುಂದಾಗಲಾರ ಕವಿ ಕಾಳಿದಾಸ ನೀನು। ಶೃಂಗಾರದಿಂದ ನವಭಕ್ತಿ ರಸದ ಹೊಮ್ಮಿಸುವ ದಿವ್ಯ ಭಾಗ್ಯ। ರಸವತಿಯು ನಿನ್ನ ಸರತಿಯು ತುಟಿಗೆ ಸವಿ ಮುದ್ದು ಹಾಲು ಜೇನು। ಕನ್ನಡದೊಳಿಂದು ಕನ್ನಡಿಸಿದಂತೆ ಮೂಡಿರುವೆಳಿಲ್ಲಿ ತಾನು॥ ಎಂದು, ಹಾಡಿಕೊಂಡಂತೆ, ನಾನೂ ಈ ಕನ್ನಡ ರಾಜರತ್ನನನ್ನು ಕುರಿತು. "ಹಿಂದಾಗಲಿಲ್ಲ ಮುಂದಾಗಲಾರ ಕವಿ ರಾಜರತ್ನ ನೀವು। ಕನ್ನಡದ ರಸವ ನವ ಭಕ್ತಿಯಿಂದ ಹೊಮ್ಮಿಸಿದ ದಿವ್ಯ ಭಾಗ್ಯ॥ ಗಂಡುಗೊಡಲಿಯೂ ಬುಷ್ಟಗೊಮ್ಮಟನೂ ಅಲ್ಲ ಯೆಂಡ್ಕುಡುಕ ತಾನು। ಮಧುಮತ್ತ ಭ್ರಮರನೋ ಸುಧಾ ಸಾಗರನು ಕನ್ನಡಕೆ ಕಾಮಧೇನು" ಎಂದು ಹಾಡಿಕೊಂಡು, ಗೆಳೆಯ, ಆತ್ಮೀಯ. ಶ್ರೀ ಜಿ. ಪಿ. ರಾಜರತ್ನಂ ಅವರ ಈ ಸ್ಮೃತಿ–ರತ್ನಪುಷ್ಪಾಂಜಲಿಯನ್ನು, ಕನ್ನಡ ಕುಲಕೋಟಿಯ ಎದುರು ನಿವೇದಿಸಬಯಸುತ್ತೇನೆ.

✡

ಕಾರಣ ಕೊಡಿರಿ

ಪರೀಕ್ಷೆಯಲ್ಲಿ ಒಂದು ಪ್ರಶ್ನೆ ಕೇಳಲಾಯಿತು. ನೀರಿನಲ್ಲಿ ಒಂದು ಸೂಜಿ ಬಿದ್ದರೂ ಮುಳುಗುತ್ತದೆ ಆದರೆ ಭಾರಿ ಪ್ರಮಾಣದ ಹಡಗು ಮುಳುಗದೆ ತೇಲುತ್ತದೆ. ಕಾರಣವೇನು?

ಒಬ್ಬ ವಿದ್ಯಾರ್ಥಿ ಬರೆದ ಉತ್ತರ– ಹಡಗು ನಡೆಸಲು ಚಾಲಕನಿರುತ್ತಾನೆ; ಆದರೆ ಸೂಜಿಯನ್ನು ನಡೆಸಲು ಚಾಲಕನಿರುವದಿಲ್ಲ ಆದ್ದರಿಂದ ಅದು ಮುಳುಗುತ್ತದೆ.

–ಪಿ. ಹೆಚ್. [illegible]

ಕಂಪೆನಿ ಷೇರುಗಳಲ್ಲಿ ನೀವು ಸಣ್ಣ ಪ್ರಮಾಣದಲ್ಲಿ ಹಣ ತೊಡಗಿಸಿದ್ದೀರಾ?

ಹಾಗಿದ್ದರೆ, ನೀವು ನಿಮ್ಮ

ಡಿವಿಡೆಂಡ್ ಅನ್ನು ಯಾವುದೇ ತೆರಿಗೆ ಮುರಿದುಕೊಳ್ಳದೇ ಪಡೆಯಬಹುದು

ನೀವು ಒಂದು ಕಂಪನಿಯಾಗಿಲ್ಲದಿದ್ದಲ್ಲಿ ಮತ್ತು ಡಿವಿಡೆಂಟ್ ಸೇರಿದಂತೆ ನಿಮ್ಮ ಒಟ್ಟು ವರಮಾನ, ವರಮಾನ ತೆರಿಗೆ ಒಳಗಾಗಬಹುದಾದ ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆ ಇರುವ ಸಂಭವವಿದ್ದಲ್ಲಿ (ಅಂದರೆ, ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬಗಳು, ಸಂಸ್ಥೆಗಳು, ವ್ಯಕ್ತಿಗಳ ಸಂಘ, ವ್ಯಕ್ತಿಗಳ ಗುಂಪು ಮತ್ತು ಆರ್ಟಿಫಿಷಿಯಲ್ ಜ್ಯುರಿಡಿಕಲ್ ವ್ಯಕ್ತಿಗಳಿಗೆ ಸದ್ಯಕ್ಕೆ ರೂ. ೧೦,೦೦೦) ಕಂಪನಿ ಘೋಷಿಸಿದ ಪೂರ್ಣ ಡಿವಿಡೆಂಟ್ ಅನ್ನು ಮೂಲದಲ್ಲಿ ಯಾವುದೇ ತೆರಿಗೆಯನ್ನು ಹಿಡಿದು ಕೊಳ್ಳದೆ, ನೀವು ಪಡೆಯಬಹುದು.

ಹೇಗೆ ?

ನೀವು ಯಾವ ಕಂಪನಿಯ ಷೇರುಗಳನ್ನು ಹೊಂದಿದ್ದೀರೋ ಆ ಕಂಪನಿಗೆ ತೆರಿಗೆ ಮುರಿದುಕೊಳ್ಳದೆ ಅಂತಹ ಡಿವಿಡೆಂಡ್‌ಗಳನ್ನು ನಿಮಗೆ ಕೊಡುವಂತೆ, ಕಂಪನಿಗೆ ಅಧಿಕಾರ ನೀಡುವ ಸರ್ಟಿಫಿಕೇಟ್ ಕೊಡುವಂತೆ ನಿಮ್ಮ ವರಮಾನ ತೆರಿಗೆ ಅಧಿಕಾರಿಗೆ ಫಾರಂ ಸಂಖ್ಯೆ ೧೪ರಲ್ಲಿ ಅರ್ಜಿ ಸಲ್ಲಿಸಿ.

ಅಥವಾ

ಯಾವುದೇ ಕಂಪನಿಯಿಂದ ಬರಬೇಕಾದ ಡಿವಿಡೆಂಡ್ ರೂ. ೨೫೦ಕ್ಕೂ ಕಡಿಮೆ ಇದ್ದಲ್ಲಿ, ಅಂತಹ ಪ್ರತಿ ಕಂಪನಿಗೂ ಫಾರಂ ಸಂಖ್ಯೆ ೧೪ ಜಿ ಯಲ್ಲಿ ಘೋಷಣಾ ಪತ್ರವನ್ನು (ದ್ವಿಪ್ರತಿಗಳಲ್ಲಿ) ಕಳಿಸಿ.

ಈ ಸೌಲಭ್ಯವನ್ನು ಪಡೆದು ವರಮಾನ ತೆರಿಗೆ ಕಚೇರಿಯಿಂದ ಹಣ ವಾಪಸು ಮಾಡುವಂತೆ ಕೇಳುವುದನ್ನು ತಪ್ಪಿಸಿ

ಇವರಿಂದ ಪ್ರಕಟಿತ:

ದಿ ಡೈರೆಕ್ಟರ್ ಆಫ್ ಇನ್‌ಸ್ಪೆಕ್ಷನ್
(ರಿಸರ್ಚ್, ಸ್ಟೆಟಿಸ್ಟಿಕ್ಸ್ ಆ್ಯಂಡ್ ಪಬ್ಲಿಕೇಶನ್)
ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್,
ನ್ಯೂ ಡೆಲ್ಲಿ-೧೧೦ ೦೦೧.

davp 78/600

ಆಕೆ = ಅಮ್ಮ, ಅಪ್ಪ

ನನಗೂ ಕಮ್ಮಿ ಏನಲ್ಲ
ವಯಸ್ಸು.
ದೇಶ ಕಾಯುವಷ್ಟಾದರೂ
ಕಾಲೇಜಿಗೆ ಬರುವಾಗ
ಅಮ್ಮ ಹೇಳುತ್ತಾಳೆ:
'ಜಾಗ್ರತೆ ಮಗೂ, ಆಚೆಈಚೆ ನೋಡಿ ಹೋಗು.'
ಆಚೆ ಈಚೆ ನೋಡುತ್ತಾ ಹೋಗುತ್ತೇನೆ,

ಕೋಮಲೆಯ–
ರಸ್ತೆ
ಎದೆ ತಟ್ಟುತ್ತಾ

ಪರ್ಸ್ ಬಿಚ್ಚುವಾಗೆಲ್ಲ
ಅಪ್ಪ ಹೇಳುತ್ತಾರೆ.
ದೊಡ್ಡವರ ಕಷ್ಟ ಏನು ಗೊತ್ತು.
ಮೀಸೆ ಸವರಿಕೊಳ್ಳುತ್ತೇನೆ.
—ಮೊನ್ನೆ ಆಕೆ —ಮೀಸೆ–
ಚುಚ್ಚುತ್ತದೆ
ಎಂದು ತಂಟೆ ಮಾಡಿದ್ದಳು.
ಆಕೆಯು 'ಎದೆ'ಗಾರಿಕೆಗೂ
ಮೀಸೆಗೂ
ಗುಣಾಕರಿಸಿದಾಗಷ್ಟೆ ಒಪ್ಪಿದ್ದಳು.

ಅಪ್ಪ, ಅಮ್ಮನೊಡನೆ
ಪಿಕ್ಚರಿಗೆ ಹೋದಾಗ
ಆಕೆ–
ಸ್ಕ್ರೀನಿಗೆ ಬೆನ್ನು ಕೊಟ್ಟು
ಮಾತನಾಡಿದ್ದು ಕಂಡು
ಅಮ್ಮ ಅಂದಿದ್ದಳು—
' ಹುಡುಗಿ ಹುಷಾರು '
ನನ್ನ ಹುಷಾರಿತನ ಮುಚ್ಚಿ
ಹೂಂಗುಟ್ಟಿದ್ದೆ.

ಇವೆಲ್ಲ ಗೊತ್ತೇ ಇರಲಿಲ್ಲ
ಎಂದರು ಅಪ್ಪ
ಈಗಲಾದರೂ ಏನು ಗೊತ್ತಿದೆ
ಎಂದುಕೊಂಡಿದ್ದೆ.

ಅಪ್ಪಾ ದಿಡ್ಡಿ ಓಡಿಯಾಡಬೇಡ
ಮಗೂ
ಎಂದ ನಮ್ಮಜ್ಜ
ಚರಂಡಿಯಲ್ಲಿ
ಬಿದ್ದು
ಸತ್ತಿದ್ದ.

ಪಾಪ.
ಅಜ್ಜನಾಗುವ ಮೊದಲೇ.

ರಘುನಾಥ ಎಸ್. ಶೆಣೈ

ಯುಗಾಂಡಾದಲ್ಲಿ..

ಡಾ. ಪ್ರಕಾಶ ಎಸ್. ಕೊಣ್ಣೂರ

ಪೂರ್ವ ಆಫ್ರಿಕದಲ್ಲಿ ಕೋಲಾಹಲವನ್ನೇ ಎಬ್ಬಿಸಿದ್ದ ಇದಿ ಅಮೀನರ ಸರ್ವಾಧಿಕಾರಿ ಸರಕಾರ ಉರುಳಿ ಯುಗಾಂಡಾದಲ್ಲೀಗ ಹೊಸ ವ್ಯವಸ್ಥೆ ತಲೆದೋರುತ್ತಿದೆ. ಲೇಖಕರಿಲ್ಲಿ ಅಲ್ಲಿನ ಜನಜೀವನದಲ್ಲಿಯ ಮೌಲ್ಯಗಳ ಭಿನ್ನತೆಯನ್ನು ಎತ್ತಿ ತೋರಿಸುತ್ತಾರೆ.

ಡಾ. [illegible] ಬುಕಾಸಾ ಕಂಪಾಲಾದ ಒಂದು ಆಸ್ಪತ್ರೆಯಲ್ಲಿ ನನ್ನ ಸಹೋದ್ಯೋಗಿ. ಅವರು ಯುಗಾಂಡದವರೇ. ಯುಗಾಂಡಾದ ವಾಯುವ್ಯ ಭಾಗದಲ್ಲಿರುವ ನೈಲ್ ಪ್ರಾಂತದ ನಿವಾಸಿ. ತಮ್ಮ ಪ್ರಾಂತವನ್ನು, ತಮ್ಮ ಜನಗಳನ್ನು ತಮ್ಮ ಸಂಸ್ಕೃತಿಯನ್ನು ಬಹಳ ಪ್ರೀತಿಸುತ್ತಾರೆ. ಅವರಿಗೆ ಕಂಪಾಲಾದಲ್ಲಿ ಮತ್ತು ಸುತ್ತಮುತ್ತಲಿನ ಬಗಾಂಡಾ ಪ್ರಾಂತದ ಜನಗಳ ಮೇಲೆ ಒಂದು ರೀತಿಯ ಸಿಟ್ಟು, ಬಗಾಂಡಾದ ಲುಗಾಂಡಾ ಭಾಷೆಯನ್ನಾಡುವ ಈ ಮುಗಾಂಡರು (ಅಲ್ಲಿಯ ಜನ) ತಾವು ಬಹಳ ಮುಂದುವರಿದವರು ಎಂದು ತಿಳಿದುಕೊಂಡಿದ್ದಾರೆ; ಇತರ ಯುಗಾಂಡನ್ನರು ಇವರ ದೃಷ್ಟಿಯಲ್ಲಿ ಕೀಳು: ನಮ್ಮ ನೈಲ್ ಪ್ರಾಂತದವರನ್ನು ಕಾಡು ಜನರು ಎಂದು ಕರೆಯುತ್ತಾರೆ ಎಂಬುದು ಬಗಾಂಡಾದ ನಿವಾಸಿಗಳ ಬಗ್ಗೆ ಅವರ ತಕರಾರು.

ಹಾಗೆ ಬಗಾಂಡಾದವರ ಮಾತಿನಲ್ಲೂ ತಥ್ಯವಿದೆ. ನೂರು ವರುಷಗಳ ಹಿಂದೆ ಬ್ರಿಟಿಶರು ಯುಗಾಂಡಾವನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ ಬಗಾಂಡರಿಗೆ ಒಬ್ಬ ಅರಸನಿದ್ದ, ಆಡಳಿತವಿತ್ತು. ಅವನ ಸೈನ್ಯವೂ ಇತ್ತು. ಮೇಲಾಗಿ ನೈಲ್ ನದಿಯ ಬದಿಯಲ್ಲಿರುವ ಕೆಲವು ನಿವಾಸಿಗಳಂತೆ ಮೈ ಮೇಲೆ ಬಟ್ಟೆಗಳನ್ನು ಹಾಕಿಕೊಂಡು ಅಡ್ಡಾಡುವುದು ಅಸಭ್ಯತೆ ಎಂದು ಬಗಾಂಡರು ತಿಳಿದುಕೊಂಡಿರಲಿಲ್ಲ. ಅಲ್ಲದೆ ಬಗಾಂಡರ ಹೆಂಗಸರು ಪೂರ್ವ ಆಫ್ರಿಕದಲ್ಲಿಯೇ ಅತಿ ಸುಂದರಿಯರು. ಬಗಾಂಡರೊಡನೆ ವಾದ ಹಾಕುತ್ತ ಜಗಳ ಕಾಯುವದು ಡಾ. ಬುಕಾಸಾರ ಪ್ರೀತಿಯ ಪಾಸ್‌ಟೈಮ್.

ಡಾ. ಬುಕಾಸಾ ಆಸ್ಪತ್ರೆಯಲ್ಲಿ ನನ್ನ ಸಹೋದ್ಯೋಗಿಯಾಗಿರುವಂತೆಯೇ ನಾನಿರುವ ಹೋಟೆಲಿನಲ್ಲಿ ನನ್ನ ನೆರೆಯವರು ಸಹ. ನಾವಿಬ್ಬರೂ ಸಿಲ್ವರ್‌ಸ್ಪ್ರಿಂಗ್ ಹೋಟೆಲಿನಲ್ಲಿ ನೆರೆ ಹೊರೆಯ ಕಾಟೇಜುಗಳಲ್ಲಿಯೇ ಇರುತ್ತೇವೆ– ಕಳೆದ ಒಂದು ವರ್ಷದಿಂದ. ಕಂಪಾಲಾದಲ್ಲಿ ಮನೆಗಳ ತುಟಾಗ್ರತೆ ತೀವ್ರವಾಗಿದೆ. ನಮಗೆ ಇರಲು ಮನೆಗಳನ್ನು ಕೊಡುವ 'ಹೊಣೆ' ಹೊತ್ತುಕೊಂಡಿರುವ ಸರಕಾರಕ್ಕೆ ಒಂದು ವರ್ಷವಾದರೂ ನಮಗೆ ಕೊಡಲು ಮನೆ ಸಿಕ್ಕಿಲ್ಲ. ದಿನಕ್ಕೆ ಹೆಚ್ಚು ಕಡಿಮೆ ಎಂಟು ನೂರು ರೂ. ಬಿಲ್ಲು ಬರುವ ಈ ಹೋಟೆಲಿನ ಕಾಟೇಜುಗಳಲ್ಲಿಯೇ ನಾವು ಇರುತ್ತೇವೆ, ಸರಕಾರದ ಔದಾರ್ಯದಿಂದ.

ಕಂಪಾಲಾದಲ್ಲಿ ಮನೆಗಳೇ ಇಲ್ಲವೆಂದಲ್ಲ. ಸಾವಿರ-



ದೊಂಬೈನೂರ ಎಪ್ಪತ್ತೆರಡರಲ್ಲಿ ಏಶಿಯನ್ನರು ಬಿಟ್ಟು ಹೋದ ಸಾವಿರಾರು ಮನೆಗಳಿವೆ. ಆದರೆ ಯುಗಾಂಡಾದ ಆಳುವ ಪ್ರಭುಗಳಾದ ಅಧಿಕಾರಿಗಳಿಗೆ ಮತ್ತು ಅವರ ಪ್ರಭಾವಶಾಲೀ ಮಿತ್ರರಿಗೆ ಬಹುಪತ್ನಿತ್ವದ ಗೀಳು ಇರುವದರಿಂದ ಆರೇಳು ಹೆಂಗಸರನ್ನು ಮದುವೆ ಮಾಡಿಕೊಂಡು ಒಬ್ಬೊಬ್ಬಳನ್ನು ಒಂದೊಂದು ಬಂಗಲೆಯಲ್ಲಿಡುವದು ಒಂದು ಪ್ರಿಯವಾದ ಹವ್ಯಾಸವಾಗಿದೆ. ಈ ಹವ್ಯಾಸದ ಫಲವಾಗಿ ಕಂಪಾಲಾದ ಎಲ್ಲ ದೊಡ್ಡ ದೊಡ್ಡ ಹೋಟೆಲುಗಳೂ ಪರದೇಶಗಳಿಂದ ಬಂದ ನೌಕರರ ವಠಾರಗಳಾಗಿ ಮಾರ್ಪಟ್ಟಿವೆ.

ನನ್ನ ಮಿತ್ರ ಡಾ. ಬುಕಾಸಾರಿಗೂ ಬಹುಪತ್ನಿತ್ವದ ಗೀಳು ಇದೆ. ಆದರೆ ಅವರು ಯಾವ ಚರ್ಚಿಗೂ ಹೋಗಿ ವಿಧಿವತ್ತಾಗಿ ಮದುವೆಯಾಗುವ ಮೂರ್ಖತನವನ್ನು ಮಾಡಿಲ್ಲ. ಅವರಿಗೆ ನಾಲ್ಕೈದು ಜನ 'ಪತ್ನಿ'ಯರಿದ್ದಾರೆ. ಅವರೆಲ್ಲರೂ ಕಂಪಾಲಾದ ಸುತ್ತು ಮುತ್ತಲಿನ ಊರುಗಳಲ್ಲಿಯ ಆಸ್ಪತ್ರೆಗಳಲ್ಲಿ ನರ್ಸುಗಳಾಗಿ ಕೆಲಸ ಮಾಡುತ್ತಾರೆ. ಸರತಿಯಂತೆ ಒಬ್ಬೊಬ್ಬಳು ಎರಡೆರಡು ತಿಂಗಳು ಬಂದು ಇದ್ದು ಹೋಗುವ ಮುಂಚೆ ಗರ್ಭವತಿಯಾಗಿ ಹೋಗುತ್ತಾಳೆ. ಇಪ್ಪತ್ತೆಂಟು ವರ್ಷ ವಯಸ್ಸಿನ ನನ್ನ ಈ ಮಿತ್ರರಿಗೆ ಕಳೆದ ಮೂರು ವರ್ಷಗಳಲ್ಲಿ ನಾಲ್ಕು ಹೆಂಗಸರಿಗೆ ಆರು ಮಕ್ಕಳಾಗಿವೆ.

ನಮ್ಮಲ್ಲಿ 'ವರದಕ್ಷಿಣೆ'ಯಿರುವಂತೆ ಯುಗಾಂಡಾದಲ್ಲಿ 'ಕನ್ಯಾಶುಲ್ಕ'ದ ಪದ್ಧತಿಯಿದೆ. ಮದುವೆಯಾಗುವ ವರನು ವಧುವಿನ ತಂದೆಗೆ ಆಕಳುಗಳ ಅಥವಾ ಹಣದ ರೂಪದಲ್ಲಿ ಶುಲ್ಕ ತೆರಬೇಕಾಗುತ್ತದೆ. ಹುಡುಗಿಯ ತಂದೆಯ ಸಾಮಾಜಿಕ ಸ್ಥಾನಮಾನ ಮತ್ತು ಹುಡುಗಿಯ ಸೌಂದರ್ಯದ ಮೇಲಿಂದ ಇದರ ನಿರ್ಧಾರವಾಗುತ್ತದೆ. ನನ್ನ ಮಿತ್ರ ಡಾ. ಬುಕಾಸಾ ತಮ್ಮ ಪ್ರಸಕ್ತ 'ಪತ್ನಿ'ಯರಲ್ಲಿ ಒಬ್ಬಳನ್ನಾದರೂ ಧಾರ್ಮಿಕವಾಗಿ ಮದುವೆಯಾಗುವ ದೊಡ್ಡ ಮನಸ್ಸು ಮಾಡಿ 'ವಧು'ವಿನ ತಂದೆ ('ವಧು'ವಿಗೆ ಅವರಿಂದ ಈಗಾಗಲೇ ಎರಡು ಮಕ್ಕಳಾಗಿವೆ)ಯನ್ನು ಕೇಳಿದಾಗ ಅವನು ನಲವತ್ತು ಆಕಳುಗಳಿಗೆ ಕಡಿಮೆ 'ಕನ್ಯಾಶುಲ್ಕ'ವನ್ನು ತೆಗೆದುಕೊಳ್ಳುವದಿಲ್ಲ ಎಂದನಂತೆ. ಅದನ್ನು ಕೊಡಲಾಗದೆ ಹತಾಶರಾದ ಡಾಕ್ಟರರಿಗೆ ಅವರ 'ವಧು' ಮೂರನೆಯ ಮಗುವಿನ 'ಕಾಣಿಕೆ'ಯನ್ನು ಸಾಂತ್ವನರೂಪದಲ್ಲಿ ಶೀಘ್ರದಲ್ಲಿಯೇ ಕೊಡುವ ತಯಾರಿಯಲ್ಲಿದ್ದಾಳೆ.

ನಮ್ಮಲ್ಲಿಯಂತೆ ಮದುವೆಯಾಗದೆ ಮಕ್ಕಳನ್ನು ಹೆರುವದು ಯುಗಾಂಡಾದಲ್ಲಿ ಯಾರ ಹುಬ್ಬುಗಳನ್ನೂ ಏರಿಸುವದಿಲ್ಲ. ಮದುವೆಯಾಗದೆ ತಾಯಿಯಾಗುವುದು ಇಲ್ಲಿ ಬಹು ಸಾಮಾನ್ಯ. ನನ್ನ ಜೊತೆಗೆ ಕೆಲಸ ಮಾಡುವ ನರ್ಸ್ ಒಬ್ಬಳು ತನ್ನ ಮಕ್ಕಳ ಬಗ್ಗೆ ಮಾತನಾಡುತ್ತಿದ್ದಾಗ ನಾನು ಅವಳಿಗೆ "ನಿನ್ನ ಗಂಡ ಏನು ಮಾಡುತ್ತಾನೆ ?" ಎಂದು ಕೇಳಿದೆ. ಅವಳು "ಡಾಕ್ಟರ್, ನಾನು ನನ್ನ ಅಪ್ಪ ಹೆಸರನ್ನು ಹಚ್ಚುವದಿಲ್ಲ" ಎಂದು ನಿಸ್ಸ್ಪೃಹವಾಗಿ ಉತ್ತರಿಸಿದಳು.

ನಾನು ನನ್ನ ಪುರುಷ ರೋಗಿಗಳನ್ನು 'ಮದುವೆಯಾಗಿದೆಯೋ' ಎಂದು ಕೇಳಿ ಅವರು 'ಇಲ್ಲ' ಎಂದರೆ ಮುಂದೆ 'ಮಕ್ಕಳೆಷ್ಟು' ಮತ್ತು 'ಎಷ್ಟು ಹೆಂಗಸರಿಂದ' ಎಂಬ ಎರಡು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ನಮ್ಮಲ್ಲಿ 'ಊಟವಾಯಿತೇ' ಎಂದು ಕೇಳಿದರೆ ಬರುವ ಉತ್ತರದಷ್ಟು ಸಹಜ

ವಾಗಿಯೇ ಈ ಪ್ರಶ್ನೆಗಳ ಉತ್ತರಗಳು ಬರುತ್ತವೆ.

ಇಲ್ಲಿಯ ಗಂಡಸರೂ ಹೆಂಗಸರೂ ರಸಿಕ ಪ್ರಕೃತಿಯವರು. ಸಂಗೀತ ಮತ್ತು ನೃತ್ಯ ಅವರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ನಮ್ಮ ಹೋಟೆಲಿನ ನೈಟ್ ಕ್ಲಬ್ಬಿನ ಬ್ಯಾಂಡು ಊದುತ್ತಿರುವಂತೆಯೇ ಬೇರೆ ಬೇರೆ ಕಡೆಗೆ ಕೆಲಸದಲ್ಲಿರುವ ಹೋಟೆಲಿನ ಕಸ ಹೊಡೆಯುವವರನ್ನೊಳಗೊಂಡು ಎಲ್ಲರೂ ನೃತ್ಯದ ಹೆಜ್ಜೆಗಳನ್ನು ಹಾಕತೊಡಗುತ್ತಾರೆ. ನಾಚಿಕೆ, ಮುಜುಗರ ಮುಂತಾದ ಯಾವುದೂ ಇಲ್ಲ.

ಯುಗಾಂಡಾದಲ್ಲಿ ಸಿಗರೇಟು ಸೇದುವದು [illegible] ತುಟ್ಟಿಯ ಹವ್ಯಾಸ. ಕನಿಷ್ಟ ಬೆಲೆಯ ಇಪ್ಪತ್ತು ಸಿಗರೇಟುಗಳ ಪಾಕೀಟಿಗೆ ಇಪ್ಪತ್ತೆರಡು ರೂಪಾಯಿ.

ಯುಗಾಂಡಾದಲ್ಲಿ ಶ್ರೀಮಂತ ವರ್ಗದವರನ್ನು 'ಮಾಫುಟಾ ಮಿಂಗಿ'ಗಳೆಂದು ಕರೆಯುತ್ತಾರೆ. ಹತ್ತು ಬಂಗಲೆಗಳು ಮತ್ತು ಹತ್ತು ಮರ್ಸಿಡಿಸ್ ಬೆಂಜ್‌ನಂತಹ ಕಾರುಗಳು ಇವರಿಗೆ ಸಾಮಾನ್ಯ. ಒಬ್ಬ ಸಾಮಾನ್ಯ ಶ್ರೀಮಂತನೂ ಮೂರು ನಾಲ್ಕು ಕಾರುಗಳ ಮಾಲಿಕನಾಗಿರುತ್ತಾನೆ. ನಮ್ಮ ಆಸ್ಪತ್ರೆಯ ನರ್ಸುಗಳಲ್ಲಿ ಕೆಲವರು ತಮ್ಮ ಸ್ವಂತ ಕಾರುಗಳಲ್ಲಿ ಬರುತ್ತಾರೆ.

'ಮಾಫುಟಾ ಮಿಂಗಿ'ಗಳೆಂದು ಕರೆಯಲ್ಪಡುವ ಶ್ರೀಮಂತರಲ್ಲಿ ಕೆಲವರು ಒಂದೇ ಜಾಗದಲ್ಲಿರುವದಿಲ್ಲ. ಕಳ್ಳತನ ಮತ್ತು ದರೋಡೆಗಳು ಇಲ್ಲಿ ಸಾಮಾನ್ಯವಾಗಿರುವದರಿಂದ ಕಳ್ಳರಿಗೆ ತಮ್ಮ [illegible]ವು ಹತ್ತದಂತೆ ಎಚ್ಚರವಹಿಸುತ್ತಾರೆ. ಬೇರೆ ಬೇರೆ ಊರುಗಳಲ್ಲಿಯ ಹೋಟೆಲುಗಳ ಕೋಣೆಗಳನ್ನು ಮೊದಲೇ ಹಣ ಕೊಟ್ಟು ಕಾಯ್ದಿಡುತ್ತಾರೆ. ಇಂದು ಇಲ್ಲಿದ್ದರೆ ನಾಳೆ ಅಲ್ಲಿರುತ್ತಾರೆ. ಯುಗಾಂಡಾದ ಕಳ್ಳರು ಕಾರು ಕದಿಯುವದರಲ್ಲಿ ಅಸಾಧಾರಣ ಪರಿಣತಿಯನ್ನು ಹೊಂದಿದ್ದಾರೆ. ದಿನಾಲು ಕನಿಷ್ಟ ಎರಡು ಮೂರು ಕಾರುಗಳು ಕಳವಾದ ಸುದ್ದಿಯನ್ನು ಇಲ್ಲಿಯ ರೇಡಿಯೋ ಪ್ರಸಾರಮಾಡುತ್ತದೆ. ಕೆಲವು ಟ್ರಕ್ಕುಗಳೂ ಕಳವಾಗುತ್ತವೆ. (ಯುಗಾಂಡಾದಲ್ಲಿ ಸುಮಾರು [illegible] ನೂರು ಟಾಟಾ ಟ್ರಕ್ಕುಗಳು ಓಡಾಡುತ್ತವೆ.)

ಕುಟುಂಬದಲ್ಲಿಯ ಯಾರಾದರೂ ತೀರಿಕೊಂಡ ಸುದ್ದಿಯನ್ನು ರೇಡಿಯೋದ ಮೂಲಕ ಸಂಬಂಧಿಕರಿಗೆ ತಿಳಿಸುತ್ತಾರೆ. ಕಿಂಡರ್‌ಗಾರ್ಟನ್ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಸ್ಥಳ ಕಾಯ್ದಿರಿಸುವದಕ್ಕಾಗಿ ಜಾಹೀರಾತುಗಳು ರೇಡಿಯೋದ ಮೂಲಕ ಪ್ರಸಾರವಾಗುತ್ತವೆ.

ಇಡೀ ದೇಶದಲ್ಲಿ ಒಂದೇ ಒಂದು ದಿನ-ಪತ್ರಿಕೆಯಿದೆ. ಅದು ಸರಕಾರೀ ಒಡೆತನದ್ದು.


ಧರ್ಮನಿಷ್ಠವಾಗಿರುವ ಯುಗಾಂಡಾ ಸರಕಾರವು ಮುಸ್ಲಿಮರಿಗೆ ಶುಕ್ರವಾರ ಮತ್ತು ಕ್ರಿಶ್ಚಿಯನ್ನರಿಗೆ ರವಿವಾರ ಪವಿತ್ರ ದಿನಗಳೆಂದು ಘೋಷಿಸಿದೆ. ಈ ಎರಡೂ ದಿನ ಸಾರ್ವತ್ರಿಕ ರಜೆಯಿರುತ್ತದೆ. ಶನಿವಾರ ಅರ್ಧ ಕೆಲಸದ ದಿನ. ಹೀಗೆ ವಾರದಲ್ಲಿ ನಾಲ್ಕೂವರೆ ಕೆಲಸದ ದಿನಗಳು.

ಯುಗಾಂಡಾದ ನಾಗರಿಕತೆಯನ್ನು ಸ್ವೀಕರಿಸಿರುವ ಸುಮಾರು ಒಂದು ನೂರು ಜನ ಭಾರತೀಯರು ಕಂಪಾಲಾದಲ್ಲಿ ಉಳಿದಿದ್ದಾರೆ. ಉಳಿದ ಸುಮಾರು ಎರಡು ನೂರು ಜನ ಭಾರತೀಯರು ಮುಖ್ಯವಾಗಿ ಮಕರೇರೆ ವಿಶ್ವವಿದ್ಯಾಲಯ ಮತ್ತು ವಿಶ್ವಸಂಸ್ಥೆಗಳಲ್ಲಿ ಕೆಲಸಮಾಡುತ್ತಾರೆ. ೧೯೭೨ರಲ್ಲಿ ಕಂಪಾಲಾದಲ್ಲಿ ಸುಮಾರು ಮೂವತ್ತು ಸಾವಿರ ಭಾರತೀಯರಿದ್ದಾಗ ಕಟ್ಟಲ್ಪಟ್ಟ ಹಿಂದೂ ದೇವಾಲಯವು ಭವ್ಯವಾಗಿದ್ದು ಸುಂದರವಾಗಿದೆ. ಸಂಪೂರ್ಣವಾಗಿ ಅಮೃತಶಿಲೆಯಿಂದ ಕಟ್ಟಿದ್ದಾರೆ. ಈ ಗುಡಿಯ [illegible] ವರ್ಗಕ್ಕೆ ಸೇರಿದ ಒಬ್ಬರು ಗುಡಿಯ ನೆಲಮನೆಯಲ್ಲಿ ಸಿಗರೇಟಿನ ಗುದಾಮನ್ನು ಇಟ್ಟುಕೊಂಡಿದ್ದರು. ಈ ವಿಷಯದಲ್ಲಿ ವ್ಯವಸ್ಥಾ[illegible]ದಲ್ಲಿ ಬಣಗಳಾಗಿ ಕೈಗೆ ಕೈ ಹತ್ತಿ ಜಗಳವಾಯಿತು.

ಸೀಖರ ಎರಡು ಗುರುದ್ವಾರಗಳಿದ್ದು [illegible] ಸುಮಾರು ನೂರು ಜನ ಸೀಖರಲ್ಲಿ ಎರಡು ಬಣಗಳಾಗಿದ್ದವು. ಭಾರತೀಯ ಹಾಯ್ ಕಮಿಶನರರು ಛೀಮಾರಿ ಹಾಕಿದ ನಂತರ ಈಗ ಮತ್ತೆ ಒಂದುಗೂಡಿ ಗುರುವಿನ 'ಲಂಗರ್' ಮಾಡುತ್ತಾರೆ.

ಇಲ್ಲಿಯ ಸರಕಾರದಲ್ಲಿ ಪಾಕಿಸ್ತಾನಿಗಳು ಒಳ್ಳೆಯ ಸ್ಥಾನದಲ್ಲಿದ್ದಾರೆ. ಯುಗಾಂಡಾದ ಮುಖ್ಯ ನ್ಯಾಯಾಧೀಶರು ಪಾಕಿಸ್ತಾನದವರು. ಅಧ್ಯಕ್ಷ ಇದಿ ಅಮೀನರ ಮುಖ್ಯ ಸಲಹೆಗಾರರು ಪಾಕಿಸ್ತಾನದವರೇ. ಎಪ್ಪತ್ತೇಳು ವಿವಿಧ ದೇಶಗಳ ಜನರನ್ನು ಕೆಲಸಕ್ಕಾಗಿ ಕರೆಸಿದ್ದಾರೆ. ಇವರಲ್ಲಿ ಕನ್ನಡಿಗರು ಆರು ಜನ.

ಮದ್ಯಪಾನ ಮತ್ತು ಶೃಂಗಾರ ಈ ದೇಶದ ಮುಖ್ಯ ಅಭಿರುಚಿಗಳು. ಜನ ಸಾಮಾನ್ಯವಾಗಿ ಬಹಳ ಒಳ್ಳೆಯವರು, ಮತ್ತು ಮೈತ್ರಿಯುತ ಸ್ವಭಾವದವರು. ✡



ಲಾಜಿಂಗ್ ಒಂದರಲ್ಲಿ ದಿನಕ್ಕೊಂದರಂತೆ ಚಮಚೆಗಳು ಮಾಯವಾಗತೊಡಗಿದುವು. ಅಲ್ಲಿರುವ ಊಟಕ್ಕೆಂದು ಬರುವವರ ಮೇಲೆಲ್ಲಾ ಕಣ್ಣಿಟ್ಟು ಕಾಯುವಂತೆ ವ್ಯವಸ್ಥೆ ಮಾಡಿದ ಲಾಜಿನ ಮಾಲಕ. ವೃದ್ಧನೊಬ್ಬ ದಿನವೂ ಊಟಕ್ಕೆ ಬರುತ್ತಿದ್ದ. ಒಮ್ಮೆ ಊಟ ಮುಗಿಸಿ ಹೋಗುವಾಗ ಎರಡು ಚಮಚೆಗಳನ್ನು ಜೇಬಿಗೆ ಸೇರಿಸಿದ. ಕೂಡಲೇ ಆತನನ್ನು ಹಿಡಿದು ಮಾಲಕನ ಬಳಿಗೊಯ್ಯಲಾಯಿತು.

"ನಿಮ್ಮನ್ನು ನೋಡಿದ್ರೆ ಗೌರವ ಹುಟ್ಟಬೇಕು, ಹಾಗಿದೀರಿ. ಆದ್ರೆ ಹೀಗೆ ಕಳ್ಳತನ ಮಾಡುವುದು ನಿಮಗೆ ಶೋಭಿಸೋದಿಲ್ಲ," ಮಾಲಕ ಹೇಳಿದ.

ಕೂಡಲೇ ವೃದ್ಧ ಜೇಬಿನಿಂದ ಕಾಗದವೊಂದನ್ನು ತೆಗೆದು ಮಾಲಕನ ಕೈಗಿತ್ತ. "ಪ್ರತಿದಿನ ಊಟವಾದ ವೇಳೆ ಎರಡು ಚಮಚೆ ತೆಗೆದುಕೊಳ್ಳಿ" ಎಂದು ಬರೆದು

ಬಿಲ್ಡಿಂಗುಗಳು ಮತ್ತು ಏಕಾಕಿ ನಾನು

ಈ ಭೀಕರ ಬಿಲ್ಡಿಂಗುಗಳ
ನಡುವೆ
ಏಕಾಂಗಿ ನಾನು
ನನಗಿಲ್ಲಿ ಮನೆಯಿಲ್ಲ; ಮಠವಿಲ್ಲ

ಈ ದೇಶದ ಅಸಂಖ್ಯ ಊರುಗಳಲ್ಲಿ
ನನ್ನದೆನ್ನುವ ಊರೇ
ಇಲ್ಲ ನನಗೆ ನನ್ನದೆನ್ನುವ
ಹೊಲವೂ ಇಲ್ಲ

ಬರೀ ಹೊಟ್ಟೆ ನನ್ನದು
ಹಸಿವು ಮಾತ್ರ ನನ್ನದು

ಅಕ್ಕ ಪಕ್ಕ ತೊಡೆ ಚಾಚಿ
ಬಿದ್ದಿರುವ
ಬಿಲ್ಡಿಂಗಂಗಳ ಮಧ್ಯೆ
ಹೊರಟಾಗ
ಹೆದರಿಕೆಯು ಕನಸು ನನಗೆ

ಬಿಲ್ಡಿಂಗುಗಳಲ್ಲಿ ಬಂಧಿತರಾಗಿರುವ
ಹೆಂಗಸರೆಲ್ಲಿ ಕೆಳ ಬೀಳುವರೋ
ಬಿಲ್ಡಿಂಗುಗಳಲ್ಲಿ ಕುಸಿದು ಬೀಳುವೆನೋ
ಎಂಬ ಭೀತಿ ಸದಾ ನನ್ನ ಜೊತೆಗೆ

ನನ್ನದೆನ್ನುವ ಹಸಿವು
ಜೋರಾಗಿ ಪೀಡಿಸಹತ್ತಿದರೆ
ಯಾವ ಬಿಲ್ಡಿಂಗೂ ನೆನಪಿನಲ್ಲಿ
ಉಳಿಯುವದಿಲ್ಲ ನನಗೆ

ಬಿಲ್ಡಿಂಗ್ ನೋಡುತ್ತ ನಡೆದರೆ
ಹೊಟ್ಟೆ ತುಂಬಲಾರದು
ಬರೀ ಬಿಲ್ಡಿಂಗು ಕಟ್ಟುತ್ತ ಹೋದರೆ
ಮನೆ ಸಿಗಲಾರದು ಇರಲು

ಈ ರಸ್ತೆಯಂಲಿ ನನ್ನದೆನ್ನುವ
ವಸ್ತು ಇದೆ; ಅದೊಂದೇ ನನ್ನದು
ಬರೀ ಹೊಟ್ಟೆ ನನ್ನದು
ಅದರ ಹಸಿವು ಮಾತ್ರ ನನ್ನದು

—ಸರಜೂ ಕಾಟಕರ

ನಾನಾ ನಮೂನೆಯ ನಾಯಿಗಳು

ನಂಬಿಕೆ, ನಿಷ್ಕೃಷ್ಟತೆ, ಆಲಿಪಾಟ, ಕೂಗಾಟ, ಅಪಾಯ, ರಕ್ಷಣೆ ಮುಂತಾದವುಗಳಿಗೊಂದು ಶ್ರೇಷ್ಠ ಉದಾಹರಣೆ ನಾಯಿ. ಮನುಷ್ಯನ ಅತಿ ನಂಬಿಕೆಯ–ಅತಿ ಕೃತಜ್ಞತೆಯ ಗೆಳೆಯನಾಗಿ, ರಕ್ಷಕನಾಗಿ ಸಾವಿರಾರು ವರ್ಷಗಳಿಂದ ನಿಂತಿರುವ ಈ ಪ್ರಾಣಿ ಭಾರತೀಯರಿಗೆ ದೇವ–ದಾನವ ಎರಡೂ ಶಕ್ತಿಗಳ ಸಂಕೇತ. ಆದರೆ ಪಾಶ್ಚಾತ್ಯರಿಗೆ ಮಾತ್ರ ಸೈತಾನರೂಪ.

'ಬಾಲ ಅಲ್ಲಾಡಿಸುವುದು' ಎಂಬುದೊಂದು ನಾಣ್ಣುಡಿ. ನಾಯಿ ಬಾಲ ಅಲ್ಲಾಡಿಸಿ ತನ್ನ ಕೆಲಸ ಸಾಧಿಸಿಕೊಳ್ಳುವಂತೆಯೇ ಸ್ವಾರ್ಥಿಗಳು ವ್ಯವಹರಿಸುತ್ತಾರೆ. ಕೀಳು ದೃಷ್ಟಿಯಿಂದ ನೋಡಿ ಬಯ್ಯುವಾತನ ಬಾಯಲ್ಲಿ 'ಲೇ ನಾಯಿ(ಯಂಥ [illegible]) ಎಂಬ ಮಾತು ಬರುವುದುಂಟು. ಒಂದೆಡೆಗೆ ನಿಲ್ಲದೆಯೇ ಸದಾ ತಿರುಗಾಡುತ್ತಿರುವವನನ್ನು 'ನಾಯಿ ಗೆರೆಯುಳ್ಳವ' ಎನ್ನುವದುಂಟು. ಯಾವಾಗಲೂ ಒದರಾಡುತ್ತಿರುವವನಿಗೆ ನಮ್ಮ ಜನ 'ನಾಯಿಯಂತೆ ಬೊಗಳುತ್ತಾನೆ' ಅನ್ನುತ್ತಾರೆ. ಒಮ್ಮೆಲೇ, ಯಾವ ಸದ್ದೂ ಇಲ್ಲದೇ ಅಪಾಯ ಉಂಟುಮಾಡುವಾತನಿಗೆ 'ಬೊಗಳದೇ ಕಚ್ಚುವ ನಾಯಿಯಂಥವ' ಎಂಬ ಹೆಸರು ಕೊಡುತ್ತಾರೆ. 'ನಾಯಿ ನನ್ಮಗ,' ಅಥವಾ 'ನಾಯಿ ಜಾತಿಯವ' ಎಂದು ಬಯ್ಯುವ ರೂಢಿ ನಮ್ಮಲ್ಲಿ ಬೆಳೆದು ಬಂದಿದೆ.

ನಾಯಿ ಸಂಬಿಕೆಗೆ ಮತ್ತೊಂದು ಹೆಸರು. ಕೃತಜ್ಞತೆಯೇ ಅದರ ಉಸಿರು. ಅನ್ನವಿಟ್ಟವನನ್ನು ಎಂಥ ಕಷ್ಟದಿಂದ ಕೂಡ ಪ್ರಾಣದ ಪರಿವೆ ತೊರೆದು ಹೋರಾಡಿ ಪಾರು ಮಾಡಿದ, ಮಾಡುವ ಉದಾಹರಣೆಗಳು ನಮಗೆ ಹಿಂದಿನ ಕಥೆಗಳಲ್ಲಿ, ಇತಿಹಾಸದಲ್ಲಿ ಮತ್ತು ಇಂದಿನ ಪತ್ರಿಕೆಗಳಲ್ಲಿ ಕಾಣ ಸಿಕ್ಕುವುದುಂಟು. ಧರ್ಮರಾಜನೊಂದಿಗೆ ನಾಯಿಯೂ ಸ್ವರ್ಗಕ್ಕೆ ಹೋದ ಕಥೆ ಯಾರಿಗೆ ಗೊತ್ತಿಲ್ಲ?

ಮನುಷ್ಯನೊಂದಿಗೆ ನಾಯಿಗಳ ಸಂಬಂಧ ಎಷ್ಟು ಹಳೆಯದು? ಗೊತ್ತಿಲ್ಲ. ಆದರೆ ಸ್ವಿಜರ್‌ಲಂಡಿನ ಗುಹೆಗಳಲ್ಲಿನ ಭಿತ್ತಿಶಿಲ್ಪಚಿತ್ರಗಳಲ್ಲಿ ಕಂಡುಬರುವ ನಾಯಿ ಹಾಗೂ ಮನುಷ್ಯರನ್ನು ನೋಡಿದಾಗ ಇತಿಹಾಸತಜ್ಞರು ಆ ಚಿತ್ರಗಳು ಸುಮಾರು ೫೦ ಸಾವಿರ ವರ್ಷಗಳ ಹಿಂದಿನವೆಂದು ಅಭಿಪ್ರಾಯ ಪಡುತ್ತಾರೆ. ಆಗ ಅವುಗಳನ್ನು ಕೆನಿನ್ (Canine) ಎಂದು ಕರೆಯಲಾಗುತ್ತಿತ್ತು. ಇದು ನಮ್ಮ ಸಂಸ್ಕೃತ ಶ್ವಾನಕ್ಕೆ ಸರಿಯಾದ ಶಬ್ದ. ಈ ಕೆನಿನ್‌ಗಳು ತೋಳದ ಜಾತಿಗೆ ಸೇರಿದವುಗಳು. ಈಗಿನ ನಾಯಿಗಳು ಆ ಜಾತಿಯಿಂದ ಅಭಿವೃದ್ಧಿಗೊಂಡ ತಳಿಗಳು. ಕೆಲವು ಚಾಲ್ಡಿಯನ್ ಮತ್ತು ಇಜಿಪ್ಶಿಯನ್ ಸ್ಮಾರಕಗಳಲ್ಲಿ, ಉಲ್ಲೇಖಗಳಲ್ಲಿ ನಾಲ್ಕೈದು ಸಾವಿರ ವರ್ಷಗಳಲ್ಲಿ ಎಷ್ಟೋ ತಳಿಯ ನಾಯಿಗಳನ್ನು ಬೆಳೆಸಿದ ಬಗ್ಗೆ ಹೇಳಲ್ಪಟ್ಟಿದೆ.

ಪ್ರಾಚೀನ ಗ್ರೀಕ್ ಮತ್ತು ರೋಮನ್‌ರು ನಾಯಿಗಳ ಬಗ್ಗೆ ಸಾಕಷ್ಟು ಪ್ರೇಮವುಳ್ಳವರಾಗಿದ್ದರೆಂಬುದು ಅವರ ಸಾಹಿತ್ಯದಲ್ಲಿ ಎದ್ದು ಕಾಣುವ ಅಂಶ. ಅವರಲ್ಲಿ ಎರಡು ಜಾತಿಯ

ನಾಯಿಗಳಿದ್ದವು; ಕೇನ್ಸ್ ವಿಲ್ಯಾಟಿಯರ್ (ಮನೆ ನಾಯಿ) ಮತ್ತು ಕೇನ್ಸ್ ಪ್ಯಾಸ್ಟ್ಯೋರೇಲ್ಸ್ (ಕುರುಬರ ನಾಯಿ). ಎರಡನೆ ಜಾತಿ ಈಗ ನಾವು ಕಾಣುವ ಬೇಟೆ ನಾಯಿ ಮತ್ತು ಪೋಲೀ-ಸು ನಾಯಿಗಳನ್ನು ಹೋಲುವಂಥವು.

ನಾಯಿ ಯಾವುದೇ ಜಾತಿಯದಿರಲಿ ಅವುಗಳಲ್ಲಿರುವ ಒಂದು ಸಾಮಾನ್ಯ ಗುಣ ಎಂದರೆ ಮನುಷ್ಯನಿಗಿಂತ ಜಾಗರೂಕನಾಗಿರುವುದು. ಅವುಗಳಿಗಿರುವ ಶ್ರವಣಶಕ್ತಿ ಮನುಷ್ಯನ ಹದಿನೈದು ಪಟ್ಟು ಹೆಚ್ಚಿನದು ಎಂದು ಜರ್ಮನಿಯ ವಿಜ್ಞಾನಿಗಳಲ್ಲೊಬ್ಬರಾದ ಡಬ್ಲ್ಯು. ಎ. ಏಂಜೆಲ್‌ಮಾನ್ ಎಂಬುವರು ನಡೆಸಿದ ಪರೀಕ್ಷೆಯಿಂದ ತಿಳಿದಿದೆ. ಒಬ್ಬ ಕುರುಬನನ್ನು ೨೫ ಯಾರ್ಡ್ ಅಂತರದ ಮೇಲೆ ನಿಲ್ಲಿಸಿ ಕೂಗಲು ಹೇಳಿದರು. ಆ ಕುರುಬನಿಂದ ೫ ಅಡಿ ದೂರದ ಮೇಲೆ ನಿಂತಿದ್ದ ಮನುಷ್ಯನಿಗೆ ಅದು ಕೇಳಿಸಲಿಲ್ಲ. ಆದರೆ ೨೫ ಯಾರ್ಡ್ ದೂರದಲ್ಲಿ ನಿಂತಿದ್ದ ಆತನ ನಾಯಿಗಳು ಮಾತ್ರ ಕುರುಬನ ಧ್ವನಿ ಗ್ರಹಿಸಿ ಅತ್ತ ಓಡಿದುವು. ನಾಯಿಗಳು ೭೫ ಯಾರ್ಡುಗಳಷ್ಟು ದೂರದ ಧ್ವನಿಯನ್ನು ಕೇಳಬಲ್ಲವು ಎಂದು ಮತ್ತೆ ಕೆಲವು ಪ್ರಯೋಗಗಳಿಂದ ಸಿದ್ಧ ಮಾಡಿಕೊಟ್ಟರು. ಇದಕ್ಕೆ ಕಾರಣವೆಂದರೆ ಮನುಶ್ಯನ ಶಬ್ದಗ್ರಾಹಕ ಪರಿಧಿ ಚಿಕ್ಕದಾಗಿರುವುದು.

ಈ ಪ್ರಾಣಿಯ ಘ್ರಾಣೇಂದ್ರಿಯವೂ ಬಲು ಚುರುಕು ಮತ್ತು ಸೂಕ್ಷ್ಮ. ಹೀಗಾಗಿ ಅವು ವಾಸನೆಯಿಂದಲೇ ಅಪರಾಧಿಗಳನ್ನು ಪತ್ತೆ ಹಚ್ಚುತ್ತವೆ.

ಆದರೆ ನಾಯಿಯ ದೃಷ್ಟಿಶಕ್ತಿ ಮಾತ್ರ ಮನುಷ್ಯನಿಗಿಂತ ಕಡಿಮೆ. ಕೇವಲ ವಾಸನೆ ಶಬ್ದಗಳ ಮೇಲಿಂದ ಅದು ಗುರುತು ಹಿಡಿಯುತ್ತದೆ. ಮತ್ತೊಂದು ವಿಶೇಷವೆಂದರೆ ನಾಯಿಗೆ ವರ್ಣಾಂಧತೆ ಇರುವುದು. ಅದರ ಕಣ್ಣಿಗೆ ಕೇವಲ ಕರಿ ಮತ್ತು ಬಿಳಿ ಬಣ್ಣಗಳು ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತವೆ. ಬೇರೆ ಯಾವುದೇ ಬಣ್ಣವಿದ್ದರೂ ಅದು ಬೂದು ಬಣ್ಣದ್ದಾಗಿ ಕಾಣಿಸುತ್ತದೆ.

ನಾಯಿಗಳಲ್ಲಿ ಐದು ಮುಖ್ಯ ವರ್ಗಗಳನ್ನು ಮಾಡಲಾಗಿದೆ. ಆರನೆಯದೊಂದು ಸಾಮಾನ್ಯ ವರ್ಗವಿದೆ. ಅವುಗಳ ಉಪಯೋಗದ ಮೇಲೆ ಈ ವರ್ಗೀಕರಣ. ಬೇಟೆ ನಾಯಿಗಳಲ್ಲಿ (Sporting Dogs) ಕೂಡ ಮೂರು ಭಾಗಗಳನ್ನು ಮಾಡಲಾಗಿದೆ. ಕೇವಲ ವಾಸನೆ ಹಿಡಿದು ಹಾರಾಡಿ ಪಕ್ಷಿಗಳನ್ನು ಬೇಟೆಮಾಡುವಂಥವು; ನೆಲದ ಮೇಲೆ ನಾಗಾಲೋಟದಿಂದ ಓಡಿ ಬೇಟೆಯಾಡುವ ಹೌಂಡ್ಸ್‌ಗಳು; ಮತ್ತು ಮೂರನೆಯದಾಗಿ ಅಡಗಿ ಕುಳಿತು ಬೇಟೆಯಾಡುವಂಥವುಗಳು. ಇನ್ನು ನಮ್ಮ ನಿತ್ಯ ಜೀವನದಲ್ಲಿ ಉಪಯುಕ್ತವಾಗುವ ನಾಯಿಗಳು (Working Dogs). ಇವು ಮನೆ ಕಾಯುತ್ತವೆ, ಮಾರ್ಗದರ್ಶಕಗಳಾಗಿ ಕೆಲಸ ಮಾಡುತ್ತವೆ, ಮತ್ತು ದನದ-ಕುರಿಗಳ ಮಂದೆಗಳನ್ನು ಕಾಪಾಡಿಕೊಂಡು ಹೋಗುವಂಥವು. ಇನ್ನು ಕೆಲ ನಾಯಿಗಳು ಮನೆಯಲ್ಲಿ ಅಂದಕ್ಕೆ ಮಾತ್ರ. ಕೆಲವಂತೂ ಭಯ ಹುಟ್ಟಿಸಲು ತೋಳಗಳ ಹಾಗೆ ಬೆಳೆದಂಥವುಗಳು. ಇನ್ನು ಸಾಮಾನ್ಯ ಎನಿಸುವ (Non-sporting Dogs) ನಾಯಿಗಳು ಏನೋ ಇತರ ಉಪಯೋಗಕ್ಕೆ ಬರುತ್ತವೆ. ಅಮೇರಿಕದಲ್ಲಿ ಈ ನಾಯಿಗಳ ತಳಿಗಳ ಸುಧಾರಣೆಯ ಕಾರ್ಯಗಳಿಗರಲ್ಲಿ ಭರದಿಂದ ಸಾಗಿ ಈ ಆರು ಜಾತಿಗಳಲ್ಲಿ ೧೧೩ ತಳಿಗಳನ್ನು ಬೆಳೆಸಿದರು.

ಕುರುಡನ ಕಣ್ಣು

ಕುರುಡರಿಗೆ ನಾಯಿ ಕಣ್ಣಾಗಿ ಕೆಲಸ ಮಾಡುವುದೆಂಬ ವಿಷಯ ಎಲ್ಲರಿಗೂ ಗೊತ್ತು. ಈ ರೀತಿ ಮೊಟ್ಟ ಮೊದಲು ನಾಯಿಯನ್ನು ಉಪಯೋಗಿಸಲಾರಂಭಿಸಿದವರು ಜರ್ಮನ್ನರು. ಮೊದಲ ಮಹಾಯುದ್ಧದಲ್ಲಿ ಕುರುಡರಾಗಿ ಮರಳಿದ ತಮ್ಮ ಸೈನಿಕರಿಗಾಗಿ ನಾಯಿಗಳಿಗೆ ತರಬೇತು ನೀಡಿ ಕುರುಡರಿಗೆ ಆಸರೆ ನೀಡಿದರು. ಇದನ್ನರಿತು ಯುದ್ಧದಲ್ಲಿ ಪಾಲ್ಗೊಂಡ ಇತರ ದೇಶಗಳವರೂ ನಾಯಿಗಳ ತರಬೇತು ಶುರು ಮಾಡಿದರು. ಅಮೇರಿಕದ ಮಾರಿಸ್ ಟೌನಿನ ಸೀಯಿಂಗ್ ಐ ಫೌಂಡೇಶನ್ ಈ ದಿಶೆಯಲ್ಲಿ ಹೊಸ ಪ್ರಯೋಗಗಳನ್ನು ಮಾಡಿತು. ಜರ್ಮನ್ ಶೆಫರ್ಡ್ ಜಾತಿಯ ನಾಯಿಗಳು ಈ ಕೆಲಸಕ್ಕೆ ಬಲು ಉಪಯುಕ್ತವಾದುವುಗಳು. ಅಮೇರಿಕದಲ್ಲಿ

(೪೦ ನೆಯ ಪುಟಕ್ಕೆ)






E.



(೩೫ನೆಯ ಪುಟದಿಂದ)
ಈಗ ಈ ಉದ್ದೇಶಕ್ಕಾಗಿ ಬಳಸಲ್ಪಡುತ್ತಿರುವ ನಾಯಿಗಳಲ್ಲಿ ಶೇ. ೯೦ ರಷ್ಟು ಈ ತಳಿಯವು.

ರಸ್ತೆ ಸಂಚಾರ ಭರದಿಂದ ಸಾಗಿರುವಾಗ ನೀಡಲ್ಪಡುವ ಕೆಂಪು- ಹಸಿರು ಮತ್ತು ಹಳದಿ ಬಣ್ಣದ ದೀಪಗಳನ್ನು ನಾಯಿಗಳು ಹೇಗೆ ಅನುಸರಿಸುತ್ತಿವೆಯೆಂಬುದರ ಬಗ್ಗೆ ಒಂದು ಸಂಶಯವಿದೆ. ಯಾಕೆಂದರೆ ಅವುಗಳಿಗೆ ವರ್ಣಾಂಧತೆ ಇದೆ. ಆದರೆ ತರಬೇತಾದ ನಾಯಿಗಳು ಈ ದೀಪಗಳನ್ನು ಲಕ್ಷಿಸುವುದಿಲ್ಲ. ಅವು ಸಂಚಾರದ ಹೆಚ್ಚು ಕಡಿಮೆಯಾಗುವಿಕೆಯನ್ನು ಅವಲಂಬಿಸುತ್ತವೆ. ಸುರಕ್ಷಿತ ಎನಿಸಿದಾಗ ತಮ್ಮ ಒಡೆಯನನ್ನು ಕರೆದುಕೊಂಡು ಸಾಗುತ್ತವೆ.

ದ್ವಿತೀಯ ಮಹಾಯುದ್ಧದ ಹೊತ್ತಿಗಾಗಲೆ ನಾಯಿಗಳ ಉಪಯೋಗ ರಕ್ಷಣಾ ದಳಕ್ಕೆ ಹತ್ತು ಹಲವು ವಿಧದಲ್ಲಿ ತಿಳಿದಾಗಿತ್ತು. ಯುದ್ಧಾರಂಭಕ್ಕೆ ಜರ್ಮನಿ ಇಂಥ ೪೦-೫೦ ಸಾವಿರ ನಾಯಿಗಳನ್ನು ಉಪಯೋಗಕ್ಕೆ ಇಟ್ಟುಕೊಂಡಿತ್ತೆಂದೂ ನಂತರ ಈ ಪೈಕಿ ೧೦ ಸಾವಿರ ನಾಯಿಗಳನ್ನು ಜಪಾನಿಗೆ ಕೊಟ್ಟಿತೆಂದೂ ತಿಳಿದು ಬರುತ್ತದೆ. ರಶಿಯ ಮತ್ತು ಇಂಗ್ಲಂಡುಗಳೂ ಯುದ್ಧದ ಉದ್ದೇಶಕ್ಕಾಗಿ ನಾಯಿಗಳನ್ನು ಬಳಸಿಕೊಂಡವು.

೧ ಮತ್ತು ೫: ಅಮೇರಿನ್ ಕಾಕರ್ ಸ್ಪ್ಯಾನಿಯಲ್
೨: ಸ್ಕಾಯಿ ಟೆರಿಯರ್
೩: ಬೋಸ್ಟನ್ ಟೆರಿಯರ್
೪: ಸ್ಕ್ನೌಜರ್
೬: ಅಫ್ಘಾನ್ ಹೌಂಡ್
೭: ಪೂಡಲ್ ಟಾಯ್
೮: ಗಂಟುಮುಖದ ಪಗ್
೯: ಪೆಟಿಟ್ ಬ್ರೆಬಂಕಾನ್
೧೦: ಸ್ಕಾಟಿಶ್ ಟೆರಿಯರ್.

ತೂಕದ ವ್ಯಕ್ತಿ

ಬ್ರಿಟನ್ನಿನ ಅತಿ ಲಠ್ಠ ವ್ಯಕ್ತಿ ಎಂದು ಗುರುತಿಸಲ್ಪಡುವ ವ್ಯಕ್ತಿಯ ಹೆಸರು ಜಾರ್ಜ್ ಮ್ಯಾಕರಿ ಎಂದಿದೆ. ಅವನ ಲಗ್ನದ ಸಮಯದಲ್ಲಿ ಅಂದರೆ ೧೯೪೨ ರಲ್ಲಿ ಅವನ ತೂಕವು ಕೇವಲ ೧೪೨ ಪೌಂಡ್ ಇತ್ತು. ಆದರೆ ಇಂದು ಅವನ ತೂಕ ೫೧೮ ಪೌಂಡ್ ಆಗಿದೆ. ೧೯೪೫ ರಿಂದ ಅವನ ತೂಕವು ಹೆಚ್ಚುತ್ತ ನಡೆಯಿತು. ಅದನ್ನು ನೋಡಿದ ಡಾಕ್ಟರರೊಬ್ಬರು "ನೀನು ತಿನ್ನುವುದನ್ನು ಕಡಿಮೆ ಮಾಡದಿದ್ದರೆ ಐದು ವರ್ಷಗಳಲ್ಲಿ ಸಾಯುವಿ" ಎಂದು ಬೆದರಿಸಿದ್ದರಂತೆ. ಅದಕ್ಕೆಂದೇ ಡಾಕ್ಟರರೆಂದರೆ ಅವನು ಕೆಂಡ ಕಾರುತ್ತಾನೆ.

ತನ್ನ ಆಜಾನುಬಾಹು ಶರೀರದ ಬಗ್ಗೆ ಅವನಿಗೆ ಅಭಿಮಾನವೆನಿಸುತ್ತದೆ. ಟೆಲಿವಿಜನ್ನಿನ ಕಾರ್ಯಕ್ರಮಗಳಲ್ಲಿ ಅನೇಕ ಸಲ ಕಾಣಿಸಿಕೊಂಡಿದ್ದಾನೆ. ಚಿತ್ರಪಟಗಳಲ್ಲಿಯೂ ನಟಿಸಿದ್ದಾನೆ. ಅವನಿಗಾಗಿ ವಿಶೇಷ ಸ್ನಾನದ ಟಬ್ಬು, ಮಲಗಲು ಪಲಂಗು ತಯಾರಿಸಬೇಕಾಯಿತು. ಸಾರ್ವಜನಿಕ ಟೆಲಿಫೋನ್ ಬೂತ್‌ನಲ್ಲಿ ಪ್ರವೇಶಿಸುವುದು ಅವನಿಗೆ ಅಸಾಧ್ಯದ ಮಾತು. ಅವನ ಬಟ್ಟೆ ಹೊಲಿಯಲು ಸಿಂಪಿಗನು ಅತಿ ಹೆಚ್ಚು ಹಣ ಕೇಳುವುದರಿಂದ ತನ್ನ ಬಟ್ಟೆಗಳನ್ನು ತಾನೇ ಹೊಲಿದುಕೊಳ್ಳುವನು. ಇಷ್ಟಾದರೂ ಡಾಯೆಟಿಂಗ್ ಮಾಡಿ ತೂಕ ಕಡಿಮೆಮಾಡಿಕೊಳ್ಳಲು ಅವನು ಇಷ್ಟಪಡುವದಿಲ್ಲ ಎಂಬುದೇ ಅಚ್ಚರಿಯ ಮಾತು.

ಸಂಗ್ರಹ: ಸಂಜೀವ





8	Sri R. Parandhaman	4-A, Katpadi Road, Gudiyatham, North Arcot Dist. Madras State	Fleet Owner and Industrialist
9	Sri J. Mohan Rangaraj	Mahatma Gandhi Rd. Vengal Post, Karur Tq. Trichy Dt. Madras State	Landlord
10	Sri R. V. Raghavan	35, Strotten Muthia Mudali St. Madras-600 001	Business
11	Shri S. Premachand (Managing Director)	15, Sylvan Lodge Colony, Kilpauk Madras-600 010	Small Scale Industrialist & Financier.

(g) Profits of the Company before and after making provision for tax, for the three financial years immediately preceeding the date of advertisement. — First financial Year (1-6-77 to 30-6-[illegible]) Profit Rs. 4,[illegible]

(h) Summerised financial position of the company as appearing in the two latest audited Balance Sheets.

Financial Position of the Company as on 30-6-78
(1-6-77 to 30-6-78)

(Rupees in lakhs)

LIABILITIES	Rs.	ASSETS	Rs.
Share Capital	6.69	Fixed Assets	0.27
Reserve & Surplus		Current assets loans	
Profit and Loss account	0.04	and advances	9.[illegible]
Unsecured Loans	2.44	Miscellaneous expenditure	[illegible]
Current Liabilities	1.57	Deferred Revenue expenditure	[illegible]
TOTAL	10.74	TOTAL	10.74

Contingent Liabilities – Nil

(i) (a) The amount which the company can raise by way of Deposits under the Directions — Rs 55.5 lakhs

(b) The aggregate of deposits held on 30-6-78 — Rs. 2.44 lakhs

(j) The Company has no overdue deposits or unclaimed deposits.

(k) (i) The Company has complied with applicable provision of the Directions.

(ii) The compliance with the Directions does not imply that repayment of deposits is guaranteed by the Reserve Bank of India, and

(iii) The deposits accepted by the Company are unsecured and rank paripasu with other unsecured liabilities.

The above text of the advertisement has been approved by the Board of Directors on 5-10-78 and the above advertisement is issued on the authority and in the name of the Board of Directors of the Company.

P. G. SARANYAN
CHAIRMAN
Madras,
25-10-1978

(By Order of the Board)
For LAKSHMI TRADE CREDITS LTD.
S PREMACHAND
MANAGING DIRECTOR

A copy of the text of this advertisement signed by a majority of the Directors constituting the Board of Directors which approved the advertisement has been delivered to the Regional Office of the Department of non-banking companies of the Reserve Bank of India and also to the Registrar of Companies, Tamil Nadu.

The investment opportunity of the year



ಹದಿನೆಂಟರ ಹೊಸಿಲಲ್ಲಿ

ಈ ಎಳೆಗಳ ವಯಸ್ಸಿನಲ್ಲಿ ಆರು ವೈರಿಗಳೂ ಉರಿಯಾಡುತ್ತಾರಲ್ಲ– ಯಾಕೆ ?
ಗೆಳೆಯನಾಗಿ, ತಂದೆಯಾಗಿ, ಪ್ರೇಯಸಿಯಾಗಿ, ಕಾಮಿನಿಯಾಗಿ...

ಡಿ. ಆರ್. ಬಾಲು

ಬೆಳಿಗ್ಗೆ ಹಾಲಿನವನ ಸೈಕಲ್ ಬೆಲ್ಲಿನ ಸದ್ದಾಗಲು ಚಂದ್ರು ಎಚ್ಚರಗೊಂಡು ಹಾಸಿಗೆಯಲ್ಲಿ ಎದ್ದು ಕುಳಿತ. ಆಕಳಿಸಿ ಮೈ ಮುರಿದು ವಾಚು ನೋಡಿದ. ಏಳು ಘಂಟೆ ಐದು ನಿಮಿಷ. ಬಹಳ ದಿನಗಳ ಹಿಂದೆ ತನ್ನ ಮನಸ್ಸಿನಲ್ಲಿ ಮೂಡಿದ್ದ ಸಂಕಲ್ಪ ಒಂದನ್ನು ಪ್ರತಿದಿನದಂತೆ ಇಂದೂ ನೆನಪಿಗೆ ತಂದುಕೊಂಡ. ವ್ಯಾಯಾಮ ಮಾಡಬೇಕು. ತನ್ನ ಪರ್ಸನಾಲಿಟಿಯನ್ನು ಸುಧಾರಿಸಿಕೊಳ್ಳಬೇಕು.... ಉಬ್ಬಿದ ಎದೆ ತೋಳುಗಳನ್ನು ಪಡೆಯಬೇಕು. ತನ್ನ ಸಹಪಾಠಿ ಗೋಪಿಯ ತರಹ. ಆಸೆಯೇನೋ ತೀವ್ರವಾಗಿದೆ. ಆದರೆ ಕೃತಿಗಿಳಿಸುವ ದೃಢತೆ ಇಲ್ಲ. ಬೆಳಿಗ್ಗೆ ಎಚ್ಚರವಾದೊಡನೆ ಹಾಸಿಗೆ ಬಿಟ್ಟೇಳಲು ಆಲಸ್ಯ, ಉದಾಸೀನ. ಅದೆಂಥದೋ ಮಂಕು. ಮೈ ಕೈ ಬಗ್ಗಿಸಿ ಕಷ್ಟ ಪಡುವುದಕ್ಕಿಂತ ಇನ್ನು ಸ್ವಲ್ಪ ಹೊತ್ತು ಹಾಗೇ ಮಲಗಿ ಕಣ್ಣುಮುಚ್ಚಿ ಮಲಗಿರುವುದರೊಡನೆ ಕಲ್ಪನಾಲೋಕದಲ್ಲಿ ವಿಹರಿಸುವುದೇ ಹಿತವೆನಿಸುತ್ತದೆ.

ಕುಳಿತಲ್ಲಿಂದಲೇ ಕೈ ಚಾಚಿ ಮಂಚದ ಬಳಿಯ ಟೇಬಲ್ಲಿನ ಮೇಲಿದ್ದ ಟ್ರಾನ್ಸಿಸ್ಟರನ್ನು ರೇಡಿಯೋ ಸಿಲೋನಿಗೆ ಟ್ಯೂನ್ ಮಾಡಿ. ರಗ್ಗನ್ನು ಮೈ ಮೇಲೆಳೆದುಕೊಂಡು ಮತ್ತೆ ಮಗ್ಗುಲಾಗಿ ಮಲಗಿ ತೊಡೆಗಳ ಮಧ್ಯೆ ಕೈಯಿಟ್ಟು ಕಣ್ಣುಚ್ಚಿದ. ಚಳಿಗೆ ಹಿತವಾಗಿತ್ತು. ಸಿಲೋನಿನಿಂದ 'ತೇರೆ ಮೇರೆ ಸಪನೆ' ಹಾಡು ಕೇಳಿಬರುತ್ತಿತ್ತು. ಹಾಡನ್ನು ಆಲಿಸುತ್ತಿದ್ದಂತೆ ಚಂದ್ರುವಿನ ಕಲ್ಪನೆ ಕೆರಳಿತು. ತನ ಕಾಲೇಜು ವಿದ್ಯಾರ್ಥಿನಿಯರಾದ ನಳಿನಿ, ಗೀತಾ, ಶಾರದರ ಜತೆ ಮನೋರಾಜ್ಯದಲ್ಲಿ ಚಕ್ಕಂದವಾಡಿದ. ದಿನಾಲೂ ಹೀಗೇ. ಮನೆಗೆಲಸದವಳು ನಿಂಗಿ ಬಂದು ಬಾಗಿಲು ತಟ್ಟಿ "ಸ್ವಾಮಿಯೋರೆ ಬಾಗಿಲು ತೆಗೀರಿ. ಕಸ ಗುಡಿಸಬೇಕು." ಎಂದು ಕೂಗಿದಾಗಲೇ ಅವನು ಹಾಸಿಗೆ ಬಿಟ್ಟೇಳುವುದು.

ದಿನಾ ಬೆಳಿಗ್ಗೆ ಕಾಫಿಯಾದ ನಂತರ ಚಂದ್ರು ಅಂದಿನ ವೃತ್ತಪತ್ರಿಕೆಯನ್ನು ಹತ್ತು ಹದಿನೈದು ನಿಮಿಷ ತಿರುವಿಹಾಕುವ ರೂಢಿ ಇಟ್ಟುಕೊಂಡಿದ್ದಾನೆ. ಅವನು ಪೇಪರ್ ಓದುವುದು ತನ್ನ general knowledge ಬೆಳೆಸಿಕೊಳ್ಳುವ ಉದ್ದೇಶದಿಂದಲ್ಲ. ರಾಜಕೀಯ ವಿಷಯಗಳಲ್ಲಿ ಅಥವಾ ನಮ್ಮ ದೇಶವನ್ನು ಕಾಡುತ್ತಿರುವ ಬಡತನ. ನಿರುದ್ಯೋಗ. ಬೆಲೆ ಏರಿಕೆ ಮುಂತಾದ ಸಮಸ್ಯೆಗಳ ಬಗ್ಗೆ ಅವನ ಇಂಟರೆಸ್ಟ್ ಅಷ್ಟಕ್ಕಷ್ಟೆ. ಅವುಗಳ ಬಗ್ಗೆ ಅವನು ತಲೆ ಕೆಡಿಸಿಕೊಂಡಿಲ್ಲ. ಪೇಪರಲ್ಲಿ ಚಂದ್ರು ಮೊಟ್ಟಮೊದಲನೆಯದಾಗಿ ಓದುವುದು ಸಿನಿಮಾ ಜಾಹೀರಾತುಗಳು. ಅದರಲ್ಲೂ ಶುಕ್ರವಾರದ ಪತ್ರಿಕೆಯೆಂದರೆ ಅವನಿಗೆ ಒಂದು ತರಹ ಸಂಭ್ರಮ. ಎರಡು ಹಾಳೆ ಭರ್ತಿ ಸಿನಿಮಾಗಳ ಸಚಿತ್ರ ಜಾಹೀರಾತುಗಳೇ ಜಾಹೀರಾತುಗಳು. ಕಣ್ತುಂಬ ನೋಡಬಹುದು. ಬೆಂಗಳೂರಿನ ಯಾವ ಥಿಯೇಟರಿನಲ್ಲಿ ಯಾವ ಸಿನಿಮಾ ಎಷ್ಟನೇ ವಾರ ನಡೆಯುತ್ತಿದೆ ಎಂಬುದನ್ನು ನೀವು ತಿಳಿಯಬೇಕಾ? ಚಂದ್ರುವನ್ನು ಕೇಳಿರಿ. ಪಟಪಟನೆ ಹೇಳುತ್ತಾನೆ. ಸಿನಿಮಾ ನಂತರ sports page ಒಂದು ಐದು ನಿಮಿಷ. ಕೊನೆಯದಾಗಿ ಮೊದಲ ಪೇಜಿನ ತಲೆ ಬರಹಗಳನ್ನು ಓದಿ ಬಾಕಿ ಹಾಳೆಗಳ ಮೇಲೆ ಕಣ್ಣಾಡಿಸಿದನೆಂದರೆ ಅಲ್ಲಿಗೆ ಮುಗಿಯಿತು ಚಂದ್ರುವಿನ ಪೇಪರ್ ವಾಚನ.

ಕ್ರೀಡೆಗಳಲ್ಲಿ ಚಂದ್ರುವಿಗೆ ತುಂಬಾ ಇಷ್ಟವಾದದ್ದು ಕ್ರಿಕೆಟ್. ಅವನು ಕ್ರಿಕೆಟನ್ನು ಇಷ್ಟಪಡುತ್ತಾನೆ ಎನ್ನುವುದಕ್ಕಿಂತ ಅದರ ಬಗ್ಗೆ ಕ್ರೇಜಿಯಾಗಿದ್ದಾನೆ ಎನ್ನುವುದೇ ಸರಿ. ಸಿನಿಮಾ ಥರ ಇದೂ ಒಂದು ಹುಚ್ಚು. ಆದರೆ ಅಷ್ಟು ಸ್ಥಿರವಾದ ಹುಚ್ಚಲ್ಲ. ಬರೀ ಸೀಸನ್ ತರಹ ಹುಚ್ಚು ಅಷ್ಟೆ. ಕ್ರಿಕೆಟ್ ಸೀಸನ್ ಶುರುವಾದಾಗ ಇದ್ದಕ್ಕಿದ್ದಂತೆ

ಅವನನ್ನು ಹಿಡಿಯುತ್ತದೆ; ಸೀಸನ್ ಮುಗಿದ ಕೂಡಲೇ ಬಂದ ಹಾಗೆ ಬಿಟ್ಟು ಹೋಗುತ್ತದೆ. ಈ ಅವಧಿಯಲ್ಲಿ ಚಂದ್ರುವಿಗೆ ಕ್ರಿಕೆಟ್ ಬಿಟ್ಟು ಬೇರೆ ಏನೂ ಬೇಕಿಲ್ಲ. ಸಿನಿಮಾ, ಹುಡುಗಿಯರು, ಕಾದಂಬರಿಗಳು, ವ್ಯಾಸಂಗ, ವೈಯಕ್ತಿಕ ಸಮಸ್ಯೆಗಳು ಅವೆಲ್ಲಾ ಕ್ರಿಕೆಟ್ ಮುಂದೆ ಗೌಣ. ಬಾಯಲ್ಲಿ ಕ್ರಿಕೆಟ್ ಬಿಟ್ಟರೆ ಬೇರೆ ಮಾತಿಲ್ಲ; ತಲೆಯಲ್ಲಿ ಕ್ರಿಕೆಟ್ ಬಿಟ್ಟರೆ ಬೇರೆ ಯೋಚನೆಯೇ ಇಲ್ಲ. ಇನ್ನು ಕ್ರಿಕೆಟ್ ಸೀಸನ್‌ನಲ್ಲಿ ಚಂದ್ರುವಿನ ಹಗಲು ಗನಸುಗಳೆಲ್ಲಾ ಕ್ರಿಕೆಟ್‌ನಿಂದ ತುಂಬಿರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ತನ್ನ ಹಗಲು ಗನಸುಗಳಲ್ಲಿ ಚಂದ್ರು ಯಾವಾಗಲೂ man of the crisis. ಭಾರತ ಟೀಮಿನ ಮಹಾನ್ ಎನಿಸಿಕೊಂಡ ಬ್ಯಾಟ್ಸ್‌ಮನ್‌ಗಳೆಲ್ಲಾ ವಿರುದ್ಧ ತಂಡದವರ ಬೌಲರ್‌ಗಳೊಡನೆ ಸೆಣಸಾಡಿ ಔಟ್ ಆಗಿ ಒಬ್ಬರಾದ ಮೇಲೆ ಒಬ್ಬರಂತೆ ಪೆವಿಲಿಯನ್ನಿಗೆ ಹಿಂದಿರುಗಿದಾಗ, ಟೀಮಿನ ನಾಯಕ ಜೋಲುಮೋರೆ ಹಾಕಿಕೊಂಡು ಇನ್ನೇನು ಗತಿ ಎಂಬಂತೆ ತಲೆಯ ಮೇಲೆ ಕೈ ಇಟ್ಟು ಚಿಂತಾಕ್ರಾಂತನಾಗಿ ಕುಳಿತಿರುವಾಗ, ಕ್ರೀಡಾರಂಗದ ಸುತ್ತು ನೆರೆದಿರುವ ಸಾವಿರಾರು ಪ್ರೇಕ್ಷಕರು 'ಇನ್ನು ನಾವು ಸೋತಂತೆಯೇ ಸರಿ' ಎಂಬ ತೀರ್ಮಾನಕ್ಕೆ ಬಂದು ನಿರಾಶೆಯಲ್ಲಿ, ಕೋಪದಲ್ಲಿ ತಮ್ಮ ಕಳಪೆ ಆಟದಿಂದ ನಮ್ಮ ದೇಶದ ಕೀರ್ತಿಯನ್ನು ಮಣ್ಣು ಪಾಲು ಮಾಡಿದ ಭಾರತ ತಂಡದ ಆಟಗಾರರನ್ನು ಅವಾಚ್ಯ ಶಬ್ದಗಳಿಂದ ಶಪಿಸುತ್ತಿರುವಾಗ–ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ–ಚಂದ್ರು 'ಛೆ, ನಾನು ಇನ್ನೂ ಇರುವಾಗ ಇವರೆಲ್ಲಾ ಏಕೆ ಹೀಗೆ ಹತಾಶರಾಗಿ ಕುಳಿತಿದ್ದಾರೆ? ನನ್ನನ್ನು ಲೆಕ್ಕಕ್ಕೆ ಇಟ್ಟಿಲ್ಲವೇನೋ ಇವರು. ತೋರಿಸುತ್ತೇನೆ ಈ ಬುದ್ಧಿವಂತರಿಗೆ ನಾನು ಎಂತಹ ಒಳ್ಳೆಯ ಆಟಗಾರ 'ಅಂತ' ಅಂದುಕೊಂಡು, ಬ್ಯಾಟನ್ನು ಹಿಡಿದು ಪರಮ ಆತ್ಮವಿಶ್ವಾಸದಿಂದ ರಣರಂಗಕ್ಕಿಳಿಯುತ್ತಾನೆ. ಆರಂಭದಿಂದಲೇ ದಾಳಿಯ ಆಟ ಆಡುತ್ತಾ, ಸಿಕ್ಸರ್‌ಗಳ ಮೇಲೆ ಸಿಕ್ಸರ್‌ಗಳನ್ನು ಬಾರಿಸಿ, ಸೆಂಚುರಿಗಳನ್ನು ಹೊಡೆದು, ವಿರುದ್ಧ ಪಕ್ಷದ ಬೌಲಿಂಗ್ ಅನ್ನು ಚಿಂದಿ ಮಾಡಿ ಪಂದ್ಯದ ಕತೆಯನ್ನೇ ಬದಲಾಯಿಸಿ, ತನ್ನ ಈ ಅದ್ಭುತ ಆಟದಿಂದ ಎಲ್ಲರನ್ನೂ ಬೆರಗುಗೊಳಿಸಿ ಮೂಕರನ್ನಾಗಿ ಮಾಡಿಬಿಡುತ್ತಾನೆ. ಚಂದ್ರು ಇದುವರೆಗೆ ತನ್ನ ಜೀವನದಲ್ಲಿ ಒಮ್ಮೆಯೂ ಒಂದು ನಿಜವಾದ ಬ್ಯಾಟನ್ನಾಗಲಿ ಚೆಂಡನ್ನಾಗಲಿ ಕೈಯಲ್ಲಿ ಹಿಡಿದಿದ್ದಿಲ್ಲ, ನಿಜ. ಆದರೆ ಅದು ಬೇರೆ ಮಾತು.

*

ಹನ್ನೊಂದುವರೆ ಗಂಟೆ ಸಮಯ. ಈಗ ಚಂದ್ರು ಸೆಂಟ್ರಲ್ ಕಾಲೇಜಿನಲ್ಲಿ ಹಿಂದಿ ತರಗತಿಯಲ್ಲಿ ಗೋಪಿಯ ಪಕ್ಕ ಕುಳಿತಿದ್ದ. ಚಂದ್ರು ಫಿಸಿಕ್ಸ್ ವಿದ್ಯಾರ್ಥಿ. ಗೋಪಿ ಕೆಮಿಸ್ಟ್ರಿ ವಿದ್ಯಾರ್ಥಿ. ಈ ಎರಡು ವಿಷಯಗಳ ವಿದ್ಯಾರ್ಥಿಗಳಿಗೆ common ಆದ ಇಂಗ್ಲಿಷ್ ಮತ್ತು ಹಿಂದಿ ಕ್ಲಾಸುಗಳಲ್ಲಿ ಮಾತ್ರ ಇಬ್ಬರೂ ಸೇರುತ್ತಾರೆ, ಒಟ್ಟಿಗೆ ಕೂಡುತ್ತಾರೆ. ಚಂದ್ರು ವಿಜ್ಞಾನದ ವಿದ್ಯಾರ್ಥಿಯಾದರೂ ಅವನಿಗೆ ಅನೇಕ ವೇಳೆ ಫಿಸಿಕ್ಸ್ ಕ್ಲಾಸುಗಳಿಗಿಂತ ಹಿಂದಿ ಇಂಗ್ಲಿಷ್ ಕ್ಲಾಸುಗಳೇ ಸ್ವಾರಸ್ಯವೆನಿಸುತ್ತವೆ. ಇದಕ್ಕೆ ಕಾರಣ, ಅವನಿಗೆ ಸಾಹಿತ್ಯದಲ್ಲಿರುವ ಆಸಕ್ತಿ ಒಂದೇ ಅಲ್ಲದೇ ಬೇರೆ ಕೆಲವು ಕಾರಣಗಳೂ ಉಂಟು. ಫಿಸಿಕ್ಸ್ ಕ್ಲಾಸುಗಳಲ್ಲಿಯ ವಾತಾವರಣ ಸಾಮಾನ್ಯವಾಗಿ ಬಿಗಿಯಾಗಿರುತ್ತದೆ. ಅಧ್ಯಾಪಕರು ಕ್ಲಾಸಿನಲ್ಲಿ ಯಾವಾಗಲೂ ಸೀರಿಯಸ್ಸಾಗಿ ಇರುತ್ತಾರೆ. ಒಂದು ಜೋಕಿಲ್ಲ, ತಮಾಷೆ ಇಲ್ಲ. ಪಾಠದ ಬಗ್ಗೆ ಬಿಟ್ಟು ಬೇರೆ ಮಾತಿಲ್ಲ. ಒಮ್ಮೊಮ್ಮೆ ಅಂತೂ (ಒಮ್ಮೊಮ್ಮೆ ಏನು ಎಷ್ಟೋ ದಿನ) ಪಾಠ ಅರ್ಥವಾಗದಿದ್ದಲ್ಲಿ ಸಿಕ್ಕಾಪಟ್ಟೆ ಬೋರಾಗಿ ನಿದ್ದೆ ಬಂದುಬಿಡುತ್ತದೆ. ಆದರೆ ಭಾಷಾ ತರಗತಿಗಳು ಹಾಗಲ್ಲ. ಇಲ್ಲಿನ ವಾತಾವರಣವೇ ಬೇರೆ. ಇಲ್ಲಿ ಅಧ್ಯಾಪಕರು ಪಾಠ ಕುರಿತೇ ಅಲ್ಲದೆ ಬೇರೆ ಎಷ್ಟೋ ವಿಷಯಗಳ ಬಗ್ಗೆ ಸಾಮಾನ್ಯವಾಗಿ ಪ್ರಸಂಗಿಸುತ್ತಾ, ಸ್ವಾರಸ್ಯವಾಗಿ ಪ್ರಸಂಗಿಸುತ್ತಾ, ಜೋಕು ಹೊಡೆಯುತ್ತಾ ವಿದ್ಯಾರ್ಥಿಗಳನ್ನು ಖುಷಿ ಮಾತಿನಲ್ಲಿ ಇಡುತ್ತಾರೆ. ಪದ್ಯದಲ್ಲೂ ಗದ್ಯದಲ್ಲೂ ಕುತೂಹಲಕರವಾದ ಭಾಗಗಳೋ, ರಸವತ್ತಾದ ಪ್ರೇಮ ಪ್ರಸಂಗಗಳೋ ಅಥವಾ ಸ್ತ್ರೀವರ್ಣನೆಗಳೋ ಬಂದಲ್ಲಿ ಪಾಠಗಳೂ ಸಹ ಇಂಟರೆಸ್ಟಿಂಗ್ ಆಗಿ ಇರುತ್ತವೆ. ಮತ್ತು ಈ ಕ್ಲಾಸುಗಳು ಇನ್ನೂ

ಆನರ್ಸ್ ವಿದ್ಯಾರ್ಥಿಗಳಿಗೆ ಕಾಮನ್ ಆಗಿದ್ದು ಇಲ್ಲಿಗೆ ಬೇರೆ ಬೇರೆ ವಿಭಾಗಗಳ ಹುಡುಗಿಯರೂ ಬರುತ್ತಾರೆ. ಅವರ ಉಪಸ್ಥಿತಿಯಿಂದ ಈ ಕ್ಲಾಸುಗಳಿಗೆ ಒಂದು ಬಗೆಯ ವಿಶಿಷ್ಟ ಕಳೆ ಇರುತ್ತದೆ. ಒಂದು ವೇಳೆ ಪಾಠಗಳು ಬೇಸರವಾದಲ್ಲಿ ಈ ಹುಡುಗಿಯರನ್ನು ಕುಡಿನೋಟದಿಂದ ನೋಡುತ್ತಾ, ಅವರ ಬಗ್ಗೆ ಹಗಲುಗನಸುಗಳನ್ನು ನೇಯುತ್ತಾ ಸುಲಭವಾಗಿ ಕಾಲ ತಳ್ಳಬಹುದು. ಅದಕ್ಕೂ ಮೂಡ್ ಇಲ್ಲದಿದ್ದರೆ ಪಕ್ಕದಲ್ಲಿ ಗೋಪಿ ಇದ್ದೇ ಇದ್ದಾನೆ. ಪೋಲಿ ಜೋಕುಗಳನ್ನು ಪಿಸುದನಿಯಲ್ಲಿ ಕಿವಿಯಲ್ಲಿ ಉಸುರಿ ಮನಸ್ಸನ್ನು ತಣಿಸಲು. ಇದೇ ಅಲ್ಲದೇ ಪ್ರತ್ಯೇಕವಾಗಿ ಹಿಂದಿ ಕ್ಲಾಸಿನ ವಿದ್ಯಾರ್ಥಿಗಳಿಗೆ ತಮ್ಮ ಹಿಂದಿ ಪಂಡಿತರಾದ ಚಂದ್ರಕಾಂತ ಮೊದಲಿಯಾರರಿಂದಲೂ (ಅವರ ಇಂಗ್ಲಿಷಿನಿಂದ!) ಆಗಾಗ್ಗೆ ಸಾಕಷ್ಟು ಮನೋರಂಜನ ದೊರೆಯುವುದುಂಟು. ಈ ಹಿಂದಿ ಪಂಡಿತರು ತಮ್ಮ ಹಿಂದಿಗಿಂತ ಇಂಗ್ಲಿಷ್‌ನಿಂದಲೇ ವಿದ್ಯಾರ್ಥಿಗಳಲ್ಲಿ ಪಾಪ್ಯುಲರ್ ಆಗಿದ್ದಾರೆ.

ಇಂದಿನ ಕ್ಲಾಸಿನಲ್ಲಿ ಮೊದಲಿಯಾರರು ರವೀಂದ್ರರ ಕಥಾಸಂಕಲನದಿಂದ 'ಗೃಹಾಗಮನ' ಎಂಬ ಕತೆಯನ್ನು ಆಯ್ದು ಪಾಠ ಶುರು ಮಾಡಿದರು. ಹನ್ನೆರಡು ವಯಸ್ಸಿನ ಫಟಿಕ್ ಚಕ್ರವರ್ತಿ ಎಂಬ ತುಂಟ ಹುಡುಗನೊಬ್ಬನ ಕತೆ ಅದು. ಕತೆ ಸ್ವಾರಸ್ಯವಾಗಿರುವಂತಿದ್ದು ಚಂದ್ರು ಆಸಕ್ತಿಯಿಂದ ಪಾಠವನ್ನು ಆಲಿಸತೊಡಗಿದ. ಹತ್ತು ನಿಮಿಷ ಕಳೆಯಲಿಲ್ಲ. ಅಷ್ಟರಲ್ಲಿ ಮೊದಲನೆ ಬೆಂಚಿನಲ್ಲಿ ಕುಳಿತಿದ್ದ ಹುಡುಗಿಯೊಬ್ಬಳು ಕತ್ತು ತಿರುಗಿಸಿ ಹುಡುಗರ ಕಡೆಗೊಮ್ಮೆ ದೃಷ್ಟಿ ಬೀರಿ ಮತ್ತೆ ಪಂಡಿತರ ಕಡೆ ಮುಖ ಮಾಡಿದಳು. ಅಷ್ಟೇ. ಚಂದ್ರುವಿನ ಗಮನ ಲಟಕ್ಕನೆ ಪಾಠದಿಂದ ಆ ಹುಡುಗಿಯತ್ತ ಹರಿಯಿತು. ಮತ್ತೆ ಮನಸ್ಸನ್ನು ಪಾಠದ ಕಡೆಗೆ ತಿರುಗಿಸಲು ಪ್ರಯತ್ನಿಸಿ ಸೋತ. 'ಥೂ ಇವಳೊಬ್ಬಳು. ಇದೊಂದು ಆಟ ಆಗಿಬಿಟ್ಟಿದೆಯಲ್ಲಾ ಇವಳದು!' ಅನ್ನಿಸಿತು ಚಂದ್ರುವಿಗೆ. '೫–೧೦ ನಿಮಿಷಕ್ಕೆ ಒಂದು ಸಾರಿ ಹಿಂತಿರುಗಿ ನೋಡಿ ಸುಮ್ಮನೇ disturb ಮಾಡುತ್ತಾಳೆ. ಇವಳು ಯಾಕಾದರೂ ಹೀಗೆ ನೋಡುತ್ತಾಳೋ, ಯಾರನ್ನು ನೋಡ್ತಾಳೋ! ಉದ್ದೇಶಪೂರ್ವಕವಾಗಿ ಒಬ್ಬರನ್ನೇ ನೋಡ್ತಾಳೋ ಅಥವಾ ಕಾರಣವಿಲ್ಲದೇ ಪಾಠ ಬೋರಾಗಿ ಸುಮ್ಮನೆ ನಮ್ಮ ಕಡೆ ಕತ್ತು ತಿರುಗಿಸುತ್ತಾಳೋ. ಸುಮಾರು ಆರು ತಿಂಗಳಿಂದಲೂ ಬಿಡಿಸಲಾಗದ ಒಗಟಾಗಿದೆ. ಕ್ಲಾಸಿನ ಹುಡುಗಿಯರಿಗೆ ಅವಳು ಹಾಗೆ ತನ್ನ ಕಟಾಕ್ಷವನ್ನು ತಮ್ಮ ಕಡೆ ಬೀರಿದಾಗಲೆಲ್ಲಾ ನೋಡಬೇಕು, ಈ ನನ್ಮಕ್ಕಳ ಅವಸ್ಥೆ. ಇವರ ಹೃದಯದ ಬಡಿತವೇ ಒಂದು ಕ್ಷಣ ನಿಂತು ಹೋಗುತ್ತೆ. ಯಾರನ್ನು ನೋಡಿದ್ಲು, ಯಾರನ್ನು ನೋಡಿದ್ಲು ಎಂಬ ಕುತೂಹಲಭಾವದಿಂದ ಹುಬ್ಬೇರಿಸಿ ಒಬ್ಬರ ಮುಖ ಒಬ್ಬರು ನೋಡಿಕೊಳ್ತಾರೆ ಒಬ್ಬೊಬ್ಬನಿಗೂ ಒಳಗೊಳಗೇ ತನ್ನನ್ನೇ ನೋಡಿರಬೇಕೆಂಬ ಭ್ರಮೆಯಿಂದ ಖುಷಿ ಬೇರೆ (ನಾನು ಈ ಭ್ರಮೆಯಲ್ಲಿ ಒಂದಷ್ಟು ದಿನ ತಲೆ ಕೆಡಿಸಿಕೊಂಡು ಹಗಲುಗನಸು ನೇಯುತ್ತಿದ್ದನಲ್ಲವೇ ಎಂಬುದನ್ನು ನೆನೆಸಿ ಚಂದ್ರುವಿಗೆ ಒಂದು ಕ್ಷಣ ನಾಚಿಕೆಯಾಯಿತು.) ಅಲ್ಲ ಆದ್ಯಾಕೆ ಹೀಗೆ ಸಾಯುತ್ತಾರೋ ಇವರು ಈ ನಳಿನಿ ಮೇಡನ್ನಿಗೋಸ್ಕರ್. ಬೇರೆ ಹುಡುಗಿಯರೇ ಇಲ್ಲವೆ ಈ ಕಾಲೇಜಿನಲ್ಲಿ? ಕಾಲೇಜಿನ ಯಾವ ಮೂಲೆಯಲ್ಲಿ ನೋಡಲಿ ಇವಳ ಹೆಸರೇ. ಡೆಸ್ಕುಗಳ ಮೇಲೆ ಕಕ್ಕಸಿನ ಗೋಡೆಗಳ ಮೇಲೆ ಇವಳ ಆಕಾರ ಗೀಚಿ ಅದರೊಡನೆ ಬರೆದಿರುವ ಆ ಹೊಲಸು ಪದಗಳನ್ನೂ, 'ಕವನ'ಗಳನ್ನೂ ಓದಿದರೆ…ಥೂ ಥೂ ತನಗಂತೂ ವಾಕರಿಕೆ ಬರುತ್ತದೆ. ಹುಡುಗರು ಇವಳ ಬಗ್ಗೆ ಇಷ್ಟು ಕ್ರೇಜಿಯಾಗಿರುವುದಕ್ಕೆ ಕಾರಣ? ಬಯಕೆ ಕೆರಳಿಸುವಂತಹ ಅವಳ ರೂಪವೋ ಅಥವಾ ಅವಳ ಚೆಲ್ಲು ನಡತೆಯೋ? ದಿಟ. ಗೋಪಿ ಹೇಳೊ ಈ 'ಮಲಿಯಾಳಿ' ಬೆಳ್ಳಗೆ ದುಂಡಗೆ, ಎಲ್ಲಿ ಮುಟ್ಟಿದರೂ ಕೈ ತುಂಬಾ ಸಿಗೋತರ ಇದ್ದಾಳೆ. ಸಿನಿಮಾನಟಿ ಮಮ್ತಾಜ್ ತರಹ. ಆದರೂ ಒಂದು ಹೆಣ್ಣು ಹಾಗಿದ್ದುಬಿಟ್ಟರೆ ಸಾಕೆ? ಮುಖದಲ್ಲಿ ಸ್ವಲ್ಪ ಪ್ರಸನ್ನತೆ, ಸೌಮ್ಯತೆ, ನಡೆನುಡಿಯಲ್ಲಿ ಲಜ್ಜೆ, ವಿನಯ, ಮತ್ತು ಗಾಂಭೀರ್ಯ ಇರಬೇಡವೇ? ಹೆಣ್ಣೆಂದರೆ ಗಂಡಿನ ಮನಸ್ಸಿನಲ್ಲಿ ಬಯಕೆ ಕೆರಳಿಸುವುದರ ಜೊತೆ ಗೌರವ, ಆದರಗಳನ್ನೂ ಮೂಡಿಸಬೇಕು. ಆದರೆ ನಳಿನಿಯನ್ನು ನೋಡಿದರೆ ಕಾಮ ಉಕ್ಕುತ್ತದೆಯೇ

ಮೂರನು ಮಾಡುವಷ್ಟು ಪ್ರೀತಿ. ಅವನ ಒಂದೂ ಮಾತಿಲ್ಲ. ಇನ್ನು ಅವಳ ಪಕ್ಕದಲ್ಲೇ ಕುಳಿತ ಹಾಗೆಲ್ಲ ಒ ಆಶ್ಚರ್ಯ ಮಾಡಿಗಿ ಶಾಂತ. ಅವನು ನಿಂ. ರಾಜನ ನೆನಪಾಯಿತು, ರೂಪವಾಯಿಗೆ ಇಷ್ಟವಿದ್ದಂತೆ ಅವನ ಬಣ್ಣ ಪ್ರಕಾರ ನಿಜವಾದ ರೂಪವೇ. ಹಾಗೆ ಆದ್ದರಿಂದ ಕೊಡದೋಕೂ ಬೇಡ ಇದ್ದಾನೆ. ಗುಣವೂ ಅಷ್ಟೇ- ಅವನಂಥವನಂತ ಮನು. ಪ್ರೀತಿ ಮಾಡುವುದಾಗಲು ideal ವ ಹಾಗಿ ಇರುವನು. ರಾಜನನ್ನು ಯಾಗಾವರೂ ಮಾತನಾಡಿಸಬೇಕು. ಅವಳ ಸ್ನೇಹ ಬೆಳೆಸಬೇಕು ಎಂಬ ಹಂಬಲ ನನಗೆ ಬಹಳ ದಿನಗಳಿಂದಲೂ ಇದೆ. ಆದರೆ ಈ ಹುಡುಗಿ ಬಲು ಬಿಗಿ, ಮಿತ ಭಾಷಿ. ಯಾರಾಗಿಯೇ ಯಾವ ಹುಡುಗನನ್ನೂ ಮಾತನಾಡಿಸುವ ಗೋಜಿಗೆ ಹೋಗಲ್ಲ. ಹುಡುಗರೇ ಮಾತನಾಡಲು ಹೋದರೆ ಎಷ್ಟು ಬೇಕೋ ಅಷ್ಟು ಮಾತು. (ಹುಡುಗರಾದರೋ ಕಂಡಕಂಡವರಿಗೆಲ್ಲಾ ಹಲ್ಲು ಕಿರಿಯುತ್ತಾ, ಅವರೊಡನೆ ನಾಚಿಕೆ ಬಿಟ್ಟು ಹಾಯ್, ಹಲೋ, ಅಹಾಹಾ ಎಂಬ ಉದ್ಗಾರಗಳೊಡನೆ ಧೈರ್ಯದಿಂದ ಬಿಸ್ಕತ್ತಾ, ನಗುತ್ತಾ ಹಲ್ಲು ದೋರುವಾಗ, ಜಾಣ.) ರಾಜನೆ ಸ್ನೇಹ ಹೇಗೆ ಪಡೆಯಲಿ? ಕ್ಲಾಸು ರೂಮಿನ ಹೊರಗಡೆ ಇವಳು ಒಂಟಿಯಾಗಿ ಸಿಗುವುದೇ ಅಪರೂಪ. ಇನ್ನು ಕ್ಲಾಸಿನಲ್ಲಿ ಎಲ್ಲರೆದುರಿಗೆ ಮಾತನಾಡಿಸುವ ತಾಕತ್ತು ತನಗಿಲ್ಲ. ತೀರಾ ಸಂಕೋಚ ಸ್ವಭಾವದ ಪ್ರಾಣಿ ತಾನು. ಯಾಗಾದರೂ ಒಂದು ವೇಳೆ ತಾನು ಧೈರ್ಯಮಾಡಿ ಅವಳನ್ನು ಮಾತನಾಡಿಸ ಬಿಟ್ಟರೂ, ಆಮೇಲೆ ಈ ಹುಡುಗೀರಿ ಸನ್ನೆಕ್ಕಳು ತನ್ನನ್ನು ಸುಮ್ಮನೆ ಬಿಡುತ್ತಾರೆಯೇ? ಜೀವ ಹಿಂಡಿ ಪ್ರಾಣ ತೆಗೆದು ಬಿಡುತ್ತಾರೆ. ಬಡ್ಡಿ ಮಕ್ಕಳು.

"ಲೋ ಇದ್ದೀಯೋ ಒಂದು ತಮಾಷೆ," ಗೋಪಿ ಹಿಂದ್ರುಗಿನ ಕೈ ಹಿಡಿದು ಜಗ್ಗಲು ಅವನ

(ಪುಟ ೧೩೭ಕ್ಕೆ)

ಕವಿಸಮಯ ವಿಲಾಸ


* ಪಾ. ವೆಂ. ಆಚಾರ್ಯ

ಕವಿಯಿಂದೀಂಟಿಸುವರ್ ಸಮಸ್ತ ರಸಮಂ, ತೋರ್ಪರ್ ಸರೋಜಾತಮಂ
ಯುವತೀ ಪಾದಫಲತಾಗ್ರದೊಳ್, ಕುಮುದಮೊಂದೊಂದಲ್ಲಿಯಾ ಬಾಲಪ-
ಲ್ಲವಮಂ ಪುಟ್ಟಿಪರಾರ್ಯರ್ ಮೋಹನಮುಮಂ ಮಾಳ್ಪೀ ಚಮತ್ಕಾರಮಂ
ಕವಿಗಳ್ ಬಲ್ಲವೊಲನ್ಯರೆತ್ತರಿವರಂತಾ ಬ್ರಹ್ಮನುಂ ಬಲ್ಲನೇ ?

— ನೇಮಿಚಂದ್ರ

ಮೇಲಿನ ಪದ್ಯದಲ್ಲಿ ಕನ್ನಡ ಕವಿ ನೇಮಿಚಂದ್ರ ಕವಿಗಳ ಅದ್ಭುತವಾದ ನೂತನ ಸೃಷ್ಟಿ ಶಕ್ತಿಯನ್ನು ಹೊಗಳುತ್ತಾ ಬ್ರಹ್ಮನಿಗೂ ನಿಲುಕದ ಸಾಮರ್ಥ್ಯದಿಂದ ಕವಿಗಳು ರಸಗಳನ್ನು ಕಿವಿಯಿಂದ ಕುಡಿಸುತ್ತಾರೆ. ಹೆಣ್ಣಿನ ಬಳ್ಳಿಯ ತುದಿಯಲ್ಲಿ ತಾವರೆಯನ್ನೋ ನೈದಿಲೆಯನ್ನೋ ಮೂಡಿಸುತ್ತಾರೆ. ಈ ಕಮಲ ಅಥವಾ ಕುಮುದದ ಬಳ್ಳಿಗಳಲ್ಲಿ ಚಿಗುರುಗಳನ್ನು ಒಡಮೂಡಿಸುತ್ತಾರೆ. ಎಂದು ಹೇಳುತ್ತಾನೆ. ಈ ಚಮತ್ಕಾರವಾದ ಮಾತುಗಳಲ್ಲಿ ನೇಮಿಚಂದ್ರ ಹೇಳುತ್ತಿರುವುದು ಕವಿಸಮಯದ ವಿಷಯ. ಕವಿಸಮಯ ಅಂದರೆ ಕವಿಗಳದೇ ಶಾಸ್ತ್ರ. ಅದರಲ್ಲಿ ಹೆಣ್ಣಿನ ಮುಖ ತಾವರೆಯಾಗುತ್ತದೆ. ಅಥವಾ ಚಂದ್ರನಾಗುತ್ತದೆ. ಅವಳ ಮೈ ಬಳ್ಳಿಯಾಗುತ್ತದೆ. ಬೆರಳುಗಳು ಚಿಗುರುಗಳಾಗುತ್ತವೆ. ಬ್ರಹ್ಮನ ಸೃಷ್ಟಿಯಲ್ಲಿ ತಾವರೆ ಬಳ್ಳಿಯ ತುದಿಯಲ್ಲಿ ಹೂವಾಗಬಹುದು. ಆದರೆ ಅದು ಒಣಗಿ ಸ್ತಂಭವಾದ್ದರಿಂದ ಅದಕ್ಕೆ ಟಿಸಿಲೊಡೆದು ಪಲ್ಲವವಾಗಲಾರದು.

ಆದರೆ ಇಲ್ಲಿ ನೇಮಿಚಂದ್ರ ಹೇಳುತ್ತಿರುವುದು ಭಾರತೀಯ ಕವಿಸಮಯದ ಒಂದು ಚಿಕ್ಕ ಅಂಶವನ್ನು ಮಾತ್ರ. ಅವರು ಸೃಷ್ಟಿಸಿದ ಈ ಪ್ರಪಂಚದಲ್ಲಿ ಮುಖಗಳು ಮಾತ್ರವಲ್ಲ ಇನ್ನೂ ಅನೇಕ ಅವಯವಗಳು ತಾವರೆಯೋ ನೈದಿಲೆಯೋ ಆಗುತ್ತವೆ. ಈ ತಾವರೆ ಸೂರ್ಯ ಕಾಂತಿ ಕಂಡಾಗಷ್ಟೇ ಅರಳುತ್ತದೆ, ನೈದಿಲೆ ಚಂದ್ರನನ್ನು ನೋಡಿಯೇ ಬಾಯಿ ತೆರೆಯುತ್ತದೆ. ಕೋಗಿಲೆ





ವಸಂತಕಾಲದಲ್ಲಿ ಮಾತ್ರ ಕೂಗುತ್ತದೆ. ಹಂಸ ಪಕ್ಷಿಯು ಕೈಲಿ ನೀರು ಬೆರೆತ ಹಾಲು ಕೊಟ್ಟರೆ ಹಾಲು ನೀರು ಬೇರೆ ಬೇರೆ ಮಾಡಿಕೊಡುತ್ತದೆ. ಮಲಯ ಪರ್ವತದಲ್ಲಿ ಮಾತ್ರ ಶ್ರೀಗಂಧದ ಮರ ಬೆಳೆಯುತ್ತದೆ. ಸರ್ಪನ ಹೆಡೆಯಲ್ಲಿ ರತ್ನ ಇರುತ್ತದೆ ಮತ್ತು ಅದರ ಬೆಳಕಿನಲ್ಲಿ ಅದು ರಾತ್ರಿ ತಿರುಗುತ್ತದೆ.

ಕವಿಸಮಯ ಅಥವಾ ಇಂಗ್ಲಿಷಿನಲ್ಲಿ ಹೇಳುವಂತೆ poetic conventions ಎಲ್ಲ ದೇಶಗಳಲ್ಲಿ ಇರುತ್ತವೆ. ಬಹುಶಃ ಜಾನಪದ ನಂಬಿಕೆ ಅಥವಾ ಕಲ್ಪನೆಗಳಲ್ಲಿ (ಉದಾ–ಸರ್ಪನ ನೆತ್ತಿಯಲ್ಲಿ ರತ್ನ ಇರುವದು) ಅವು ಉಗಮಿಸಿ ಮುಂದೆ ಕವಿಗಳ ಬತ್ತಳಿಕೆಯಲ್ಲಿ ಸೇರಿಸಿಕೊಂಡವುಗಳು. ಕವಿಗಳು ಅವುಗಳನ್ನು ಮಸೆದು ಚೂಪು ಮಾಡಿಕೊಂಡು ನಮ್ಮನ್ನು ಸೋಜಿಗಪಡಿಸುತ್ತಾರೆ. ಆದರೆ ಕವಿಸಮಯದ ಕಲ್ಪನೆಗಳ ಸಂಖ್ಯೆಯಲ್ಲಿಯೂ ವೈವಿಧ್ಯದಲ್ಲಿಯೂ ವಿಸ್ತಾರದಲ್ಲಿಯೂ ಭಾರತೀಯ ಕವಿಗಳನ್ನು ಮೀರಿಸುವವರು, ಯಾಕೆ ಸಮೀಪಿಸುವವರು ಕೂಡ, ಬೇರೆಡೆ ಸಿಗಲಿಕ್ಕಿಲ್ಲ. ಅವುಗಳ ಸಹಾಯದಿಂದ ಅವರು ಸೃಷ್ಟಿಸುವ ಸೌಂದರ್ಯಕ್ಕೂ ಚಮತ್ಕಾರಕ್ಕೂ ಎಣೆಯಿಲ್ಲ.

ಕವಿಸಮಯದೊಡನೆ ಮೊದಲು ನಮ್ಮ ಮನಸ್ಸಿಗೆ ಬರುವುದು ಕಮಲ ಮತ್ತು ಕುಮುದ. ಜಗತ್ತಿನಲ್ಲಿ ಎಲ್ಲೆಡೆಗಳಲ್ಲಿಯೂ ಕವಿಗಳು ಹೂಗಳನ್ನು ಪ್ರೀತಿಸಿದ್ದಾರೆ. ಹೆಣ್ಣನ್ನು ಹೂವೆನ್ನುವುದು ಎಲ್ಲ ದೇಶಗಳಲ್ಲಿ ಉಂಟು. ಅದರಲ್ಲಿಯೂ ಕಮಲ–Lotus–ಪಾಶ್ಚಾತ್ಯ ದೇಶಗಳಲ್ಲಿಯೂ ಕವಿಗಳಲ್ಲಿ ಪ್ರಚಾರವಾದದ್ದೇ. ಅದರ ಹೂವಿಗೆ ಗೌರವವಿದೆ. ಮೇಲೆ ಅದನ್ನು ತಿಂದವರು ಒಂದು ತರಹದ ಆನಂದಮಯ ಆಲಸ್ಯವನ್ನು ಅನುಭವಿಸುತ್ತಾರೆಂದು ನಮ್ಮಲ್ಲಿ ಇಲ್ಲದ ಕವಿಸಮಯ ಅಲ್ಲಿನ ಕಮಲಕ್ಕೆ ಅಂಟಿಕೊಂಡಿದೆ. ಆದ್ದರಿಂದ ದಿವ್ಯ ಆಲಸಿಗಳಿಗೆ ಕಮಲಭಕ್ಷಕರು–Lotus-eaters–ಎಂದು ಹೆಸರು ಬಿದ್ದಿದೆ. ಆದರೆ ನಮ್ಮ ದೇಶದಲ್ಲಿ ಕಮಲಕ್ಕಿರುವ ಸ್ಥಾನ ಬೇರೆಲ್ಲಿಯೂ ಇಲ್ಲ. ಬ್ರಹ್ಮ ಅದರಲ್ಲಿ ಹುಟ್ಟಿದ್ದಾನೆ. ವಿಷ್ಣು ಕಮಲನೇತ್ರನಾಗಿದ್ದಾನೆ. ಯೋಗ ಸಾಧನೆಯಲ್ಲಿ ಕೊನೆಯ ಹಂತ ತಲೆಯಲ್ಲಿರುವ ಸಹಸ್ರಾರ ಪದ್ಮ ಎಂಬ ಸ್ಥಾನದಲ್ಲಿ ಆರೂಢನಾಗುವುದು.

ನಮ್ಮ ಕವಿಗಳು ಬಹುಶಃ ಮೊದಲು ಅದನ್ನು ಎತ್ತಿಕೊಂಡಿದ್ದು ಉಪಮೆಯಾಗಿ, ಮುಖಕ್ಕೆ ಹೋಲಿಕೆಯಾಗಿ. ಈ ಉದ್ದೇಶಕ್ಕಾಗಿ ಆ ಹೂ ತುಂಬಾ ಯೋಗ್ಯವಾಗಿದೆ. ಅದು ದೊಡ್ಡ ಹೂ. ಅದು ಅರಳಿದಾಗ ನಕ್ಕಂತೆ ಕಲ್ಪಿಸಬಹುದು. ಆದರೆ ಕವಿಗಳು ಅಲ್ಲಿಗೇ ಬಿಡದೆ ಅದನ್ನು ಕೈಗಳಿಗೂ ಹೃದ

ಯಕ್ಕೂ ಪಾದಗಳಿಗೂ ಉಪಮಿಸಿದರು. ಪಶ್ಚಿಮದಿಂದ ಸ್ಫೂರ್ತಿ ಪಡೆದ ಆಧುನಿಕ ಕವಿಗಳು ಕಮಲವನ್ನು ಕೆಳಗಿಳಿಸಿ ಗುಲಾಬಿಯನ್ನು ಮೇಲೇರಿಸಿದ್ದರೂ ಅದನ್ನು ತಾವರೆಯ ಗೌರವ ಪಾವಿತ್ರ್ಯಗಳಿಗೇರಿಸಲು ಸಮರ್ಥರಾಗಿಲ್ಲ. ಆದ್ದರಿಂದ ಬಂಗಾಲಿ ಶೆಲ್ಲಿ ಎಂಬ ಬಿರುದು ಪೊತ್ತ ರವೀಂದ್ರರಿಗೆ ಕೂಡ ಪಾವಿತ್ರ್ಯ ಗಾಂಭೀರ್ಯಗಳ ಅಗತ್ಯ ಬಿದ್ದಾಗ ಕಮಲವನ್ನು ಬಿಟ್ಟು ಕಳೆಯಲಿಲ್ಲ. ಗೀತಾಂಜಲಿಯ ಮೊದಲನೇ ಪದ್ಯದಲ್ಲಿಯೇ ಅವರು

ಜಾಂಚಿ ಹೇ ತೋಮಾರ್ ಪರಮ ಕಾಂತಿ
ಪರಾಣೇ ತೋಮಾರ್ ಚರಮ ಶಾಂತಿ
ಅಮಾಕೇ ಆಡಾಲ್ ಕ'ರೇ ದಾಂಡಾವ್
ಹೃದಯ ಪದ್ಮದಲೇ ।
(ಬೇಡುವೆ ನಿನ್ನ ಪರಮ ಕಾಂತಿ
ಜೀವದಿ ನಿನ್ನ ಚರಮ ಶಾಂತಿ
ನನ್ನ ಕಾಪಾಡಿ ನಿಲ್ಲು ನನ್ನ
ಹೃದಯ ಪದ್ಮದಲದಲಿ)

ಎಂದು ಪ್ರಾರ್ಥಿಸುತ್ತಾರೆ.

ಆದರೆ ಭಕ್ತಿಯ ಪರವಶತೆಯಲ್ಲಿ ಒಬ್ಬ ಸಂಸ್ಕೃತ ಭಕ್ತ ತಾವರೆಯನ್ನು ಬಳಸಿಕೊಂಡ ರೀತಿ ನೋಡಿ:

ಅಡಿಯ ತಾವರೆಯನ್ನು
ಕೈಯ ತಾವರೆಯಿಂದ
ಬಾಯ ತಾವರೆಯಲ್ಲಿ
ಹೊಗಿಸಿದವನ
ಬಾಲಮುಕುಂದನ್ನ
ನೆನೆನೆನೆವೆ ಮನದಲ್ಲಿ
ಆಲದೆಲೆಯ ಮೇಲೆ
ಪವಡಿಸಿದವನ.

ಇದು ಚಮತ್ಕಾರವಲ್ಲ, ವಾಗ್ವಿಲಾಸವಲ್ಲ; ಇದು ಶುದ್ಧ ದರ್ಶನ. ಸಾವಿರ ಸಲ ತಾವರೆಯ ಪ್ರಯೋಗವನ್ನು ನೋಡಿ ನೋಡಿ ಜಿಡ್ಡುಕಟ್ಟಿದ ಚಿತ್ತ ಕೂಡ ಕರಾರವಿಂದದಿಂದ ಪದಾರವಿಂದವನ್ನು ಮುಖಾರವಿಂದದಲ್ಲಿ ತುರುಕುವ ಈ ಅನಾದಿ ಶಿಶುವಿನ ಕಲ್ಪನೆ ಒಂದು ಉಪಶಾಂತವಾದ ಅನುಭೂತಿಯನ್ನು ಪಡೆಯದಿರದು. ಇದಕ್ಕಿಂತ ತುಸುವೆ ಕೆಳ ಮಟ್ಟದ್ದು ಈ ಕೆಳಗಿನದು:

ಅನ್ನುಕವ ಜಟ್ಟು ಮುನಿವರರೆಷ್ಟೋ
ತನ್ನಡಿ ಸುಮರಸ ಬಯಸುವ ಗುಟ್ಟು
ಅರಿಯುವೆನೆಂದಾ ಬಾಲಮುಕುಂದ
ಬಾಯಿಗೆ ತಂದ ಪದಾರವಿಂದ

ತುಸು ಕೆಳಗಿನ ಮಟ್ಟದ್ದು ಯಾಕೆಂದರೆ ಮನಸಿನ ಕಾಣ್ಕೆಯೊಡನೆ ಇಲ್ಲಿ ಒಂದು ಸೋಜಿಗವೂ ಕೆಲಸ ಮಾಡುತ್ತದೆ. ಮುಂದಿನದರಲ್ಲಿ ದರ್ಶನಕ್ಕಿಂತ ಚಮತ್ಕಾರ ಬಲವಾಗುತ್ತದೆ:

ಜಗಕೆಲ್ಲ ನಂಟನೆನಿಸುವ
ಚಂದ್ರಮನಿಗೆ
ಕಮಲವೊಂದರ ಮೇಲೆ
ಏತಕಿಷ್ಟು ಹಗೆ ?
ಎಂದು ಪದಕಮಲವನು
ಮುಖಚಂದ್ರನೆಡೆಗೆ
ತಂದ ಮಾಯಾಶಿಶುವಿ-
ಗೆರಗುವೆನು ಹರಿಗೆ

ಈ ಪದ್ಯದಲ್ಲಿ ಕವಿಸಮಯ ಪ್ರಧಾನವಾಗಿ ಕೆಲಸ ಮಾಡುತ್ತದೆ. ಇಲ್ಲಿ ಹರಿಯ ಪಾದ ಕಮಲವಾಗಿ ಮುಖ ಚಂದ್ರನಾಗಿದೆ. ಆದರೆ ಕವಿಸಮಯದ ಪ್ರಕಾರ ಚಂದ್ರ ತಾವರೆಗೆ ಶತ್ರು. ಆದ್ದರಿಂದ ಚಂದ್ರೋದಯವಾದೊಡನೆ ತಾವರೆ ಮುಖ ಮುಚ್ಚಿಕೊಳ್ಳುತ್ತದೆ. ಬಾಲಮುಕುಂದನಿಗೆ ಇದೇನು ಹುಚ್ಚು ಅನಿಸುತ್ತದೆ. ಜಗತ್ತಿಗೆಲ್ಲ ಬಂಧುವೆನಿಸಿಯೂ ತಾವರೆಯ ಮೇಲೆ ಹಗೆ ಸಾಧಿಸುವುದೆ? ತನ್ನ ಮೈಯಲ್ಲೆ ಒಂದು ತುದಿಯಲ್ಲಿರುವ ಚಂದ್ರನಿಗೂ ಇನ್ನೊಂದರಲ್ಲಿರುವ ತಾವರೆಗೂ ರಾಜಿ ಮಾಡಿಸುವುದಕ್ಕೆ ಅವನು ಎರಡನ್ನೂ ಹತ್ತಿರ ತರುತ್ತಾನೆ.

ಚಂದ್ರನಿಗೂ ತಾವರೆಗೂ ಅಥವಾ ಸೂರ್ಯನಿಗೂ ನೈದಿಲೆಗೂ ಇರುವ ಶತ್ರುತ್ವಕ್ಕೆ ಯಾವ

ಸಸ್ಯಶಾಸ್ತ್ರಜ್ಞರ ಬೆಂಬಲವಿದೆಯೆಂದು ಗೊತ್ತಿಲ್ಲ. ಬಹುಶಃ ಇಲ್ಲ. ಆದರೆ ಕವಿಗಳು ಸಸ್ಯವಿಜ್ಞಾನಿಗಳನ್ನು ಮನ್ನಿಸುವವರಲ್ಲ. ಅವರು ತಮ್ಮದೇ ಸೃಷ್ಟಿಯ ಪ್ರಪಂಚಕ್ಕೆ ಮಾತ್ರ ನಿಷ್ಠರು. ಅವರು ಸಸ್ಯಶಾಸ್ತ್ರದ ದಿವ್ಯ ನಿರ್ಲಕ್ಷ್ಯದಿಂದ ಬಗೆಬಗೆಯ ವಾಗ್ವಿಲಾಸಗಳನ್ನು ಸೃಷ್ಟಿಸುತ್ತ ಹೋಗುತ್ತಾರೆ. ಇಲ್ಲೊಬ್ಬ ಸುಭಾಷಿತಕಾರ ನಿರ್ಮಿಸಿದ ಪ್ರಶ್ನೋತ್ತರವನ್ನು ನೋಡಿ:

" ತಂಗದಿರನ ಮೊಗವನ್ನೇ ಕಾಣದ
ತಾವರೆ ಜನ್ಮ ಬರೇ ವ್ಯರ್ಥ"

ಎಂದೊಂದು ಪೂರ್ವಪಕ್ಷ ಬರುತ್ತದೆ. ಅಲ್ಲವೇ ಮತ್ತೆ? ಹುಣ್ಣಿಮೆಯ ಚಂದ್ರೋದಯವೆಂಬುದೊಂದು ಲೋಕೋತ್ತರ ದೃಶ್ಯ. ಅದನ್ನು ನೋಡದ ಕಮಲದ ಬದುಕು ನಿರರ್ಥಕವಲ್ಲದೆ ಇನ್ನೇನು? ಆದರೆ ತಾವರೆಯ ಪಕ್ಷಪಾತಿಗಳು ಬಿಟ್ಟುಕೊಡುತ್ತಾರೆಯೆ?

" ತಾವರೆ ಕಂಗಳ ನಿದ್ದೆಯ ಕೆಡಿಸದ
ಚಂದ್ರನ ಜನ್ಮಕೆ ಏನರ್ಥ ?"

ಎಂದು ಅವರು ಪ್ರತಿಯಾಗಿ ಪ್ರಶ್ನಿಸುತ್ತಾರೆ. ಬರಬರುತ್ತಾ ಸವಕಲಾದ ಒಂದು ಕವಿಸಮಯವನ್ನು ಉಪಯೋಗಿಸಿದರೂ ಇಲ್ಲಿ ಸೂಚ್ಯವಾಗಿ ಬಂದ ಅರ್ಥ ಮನೋಹರವಾಗಿಯೇ ಇದೆ. ಹೆಣ್ಣಿನ ನಿದ್ದೆ ಕೆಡಿಸಲಾರದ ಗಂಡಿನ ಸೌಂದರ್ಯವೋ ಗುಣವೋ ಸಾರ್ಥಕವಾಗಲಾರದು.

ತಾವರೆಯ ಮೇಲೆ ಎಲ್ಲಾ ಕಲ್ಪನೆಯನ್ನು ಸಮರ್ಪಿಸಿ ಅದಕ್ಕೊಂದು ಶತ್ರು ಬೇಕೆಂಬುದಕ್ಕಾಗಿ ಕವಿಗಳೇ ನೈದಿಲೆಯನ್ನು ಸೃಷ್ಟಿಸಿ ಅದಕ್ಕೂ ಚಂದ್ರನಿಗೂ ಗಂಟುಹಾಕಿದರೇನೋ ಅನಿಸುತ್ತದೆ. ಈ ನೈದಿಲೆಯನ್ನು ಚಂದ್ರ ಮೋಹಿಸಿದರೂ ಎಂದೂ ಅದು ತನಗೆ ಸಮವೆಂದು ಕಮಲ ಒಪ್ಪುವದಿಲ್ಲವಂತೆ. ಆದ್ದರಿಂದ ಕವಿ ಹೇಳುತ್ತಾನೆ:

ತನಗೆ ಸಾಟಿಯುಲ್ಲದವರ
ಸಾಟಿತನವನೊಲ್ಲದೆ,
ಕುಮುದ ಅರಳುವಾಗ ಕಮಲ
ಮುಖವ ಮುಚ್ಚಿಕೊಂಬುದು.

ಈ ಎರಡು ಹೂಗಳ ವಿಷಯದ ಕವಿಸಮಯವನ್ನು ಆಧರಿಸಿದ ಎಷ್ಟು ಕವಿಚಮತ್ಕಾರಗಳನ್ನು ಕೊಡಬಹುದು. ಆದರೆ ನಮ್ಮ ಕವಿಗಳು ಇತರ ಹೂಗಳನ್ನು ದುರ್ಲಕ್ಷಿಸಿಲ್ಲವೆಂದು ನಾವು ಮರೆಯಬಾರದು. ಉದಾಹರಣೆಗೆ ಸಂಪಿಗೆ. ತುಂಬಿಗಳು ತಮ್ಮ ಲಂಪಟತನದಿಂದ ಬೇರೆಲ್ಲ ಹೂಗಳನ್ನು ಗೆದ್ದು ಅವುಗಳ ಶೀಲಭಂಗಮಾಡುತ್ತವೆ. ಆದರೆ ಸಂಪಿಗೆಯನ್ನು ಸಮೀಪಿಸುವ ಧೈರ್ಯ ಅವುಗಳಿಗಿಲ್ಲ. ಸಂಪಿಗೆ ಹೂಗಳ ಸೊಗಡು ಭ್ರಮರಗಳನ್ನು ಮೂರ್ಛೆಗೊಳಿಸುತ್ತವೆ. ತದ್ವಿರುದ್ಧವಾಗಿ ಕೇದಗೆಯ ಮೈಯೆಲ್ಲ ಮುಳ್ಳಾದರೂ ಭೃಂಗಗಳು ಅದನ್ನು ಹುಡುಕಿಕೊಂಡು ಹೋಗುತ್ತವೆ. ಒಬ್ಬ ಕವಿ ಹೇಳುತ್ತಾನೆ:

ಎಸಳು ನೂರಾರು ಮುಳ್ಳಿನ ಬೇಲಿ,
ರಸವೆಂಬ
ಹೆಸರ ಕಾಣೆನು, ಒಳಗೆ ಧೂಳಿ
ಕಣ್ಗೆ ಹಗೆ;
ಎಲೆಲೆ ಕೇದಗೆ, ನಿನ್ನ ದೋಷ-
ವಿನಿಸೆಣಿಸದಲೆ
ಕಂಪುಮರುಳನು ಭೃಂಗ ಎರಗು-
ವನು ನಿನಗೆ.

ಇದನ್ನು ಬೇಕಾದರೆ ಕವಿಸಮಯವಲ್ಲ, ಬರೆ ಅನ್ಯೋಕ್ತಿ ಎನ್ನಿ. ಆದರೆ ಅಶೋಕ, ಸಹಕಾರ (ಮಾವು)ಗಳನ್ನು ಕುರಿತ ಕವಿ ಸಮಯ ಖಂಡಿತವಾಗಿ ಸಮಯವೇ. ಅಶೋಕವೃಕ್ಷ ವಯಸ್ಸಿಗೆ ಬಂದರೂ ಹೂ ಬಿಡಲಿಲ್ಲವೇ? ಚಿಂತಿಸಬೇಡಿ. ಒಳ್ಳೆ ಚಲುವೆ ತರುಣಿಯನ್ನು ಕರೆದು ಚನ್ನಾಗಿ ಒದೆಸಿ, ಅಶೋಕ ಹೂ ಬಿಟ್ಟೇ ಬಿಡುವುದು. ಸಸ್ಯಶಾಸ್ತ್ರಜ್ಞರು ಗಮನಿಸಿ. ಸಂಸ್ಕೃತ ನಾಟಕಗಳನ್ನು ನಂಬಬಹುದಾದರೆ ಅರೆಮನಸಿನ - ಅಶೋಕಗಳನ್ನು ದಾರಿಗೆ ತರುವದಕ್ಕಾಗಿ ಅವುಗಳಿಗೆ ಈ ಶಾಸ್ತಿ ಮಾಡುವುದಕ್ಕೆ ಸಮಾರಂಭಗಳೇ ನಡೆಯುತ್ತಿದ್ದವು. ಪ್ರಿಯೆಯ ಕೋಪಕ್ಕೆ ಪಾತ್ರನಾದ ವಿರಹಿಯೊಬ್ಬ ಹಲುಬುವುದನ್ನು ಕೇಳಿ:

ಕಾಂತೆಯೊದ್ದರೆ ಕಾಲಲೆನಗು ಸೊಗ
ನಿನ್ನಂತೆ ಎಲೆ ಅಶೋಕ
ನೀ-ನಾನು ಸರಿಕರೆಲ್ಲದರಲ್ಲಿ, ಅದರೂ
ನಾ ಸಶೋಕ.

ಇನ್ನು ಮಾವಿನ ಮರ. ಅದಕ್ಕೆ ಜೊತೆ, ಸಹಕಾರ ಮೊದಲಾದ ಚಂದ ಚಂದ ಹೆಸರುಗಳೆಷ್ಟೋ. ಯಾವ ಮರವೂ ಭಾರತೀಯ ಕವಿಗಳನ್ನು ಮಾವಿನಂತೆ ಮತ್ತೇರಿಸಿದ್ದು ಇಲ್ಲ. ಕಣ್ಣಿಗೆ ಕಾಣದಷ್ಟು ಚಿಕ್ಕ ಹೂಗಳನ್ನು ಬಿಡುವ ಈ ಮರಕ್ಕೆ ಕವಿಗಳು ಯಾಕೆ ಒಲಿದರೋ ನಾನರಿಯೆ. ತುಂಬಿಗಳು ತಾವರೆಯನ್ನು ಬಿಟ್ಟು ಇವುಗಳಿಗೆ ಮುತ್ತುತ್ತವಂತೆ. ಕೋಗಿಲೆಗಳು ಇದು ಚಿಗುರಿ ಹೂ ಬಿಟ್ಟಾಗಲೆ ತಮ್ಮ ಪಂಚಮ ಸ್ವರದ ಹಾಡನ್ನು ಪ್ರಾರಂಭಿಸುವುವಂತೆ. ಮಾವು ಹೂಕಾಯಿ ಬಿಡುವ ವಸಂತಕಾಲ ಬಂದ ಮೇಲೆ ಆ ಮರಗಳ ತರುಗಳಿಡೆ ತಮ್ಮ ಕಪ್ಪು ಮೈಯನ್ನು ಮರೆಸಿಕೊಂಡೇ ಅವು ಹಾಡಬಲ್ಲವು. ಬೇರೆ ಋತುಗಳಲ್ಲಿ ಕೋಗಿಲೆಗಳಿಗೆ ಕಾಷ್ಠಮೌನ. ಆಗ ಕಾಗೆಗೂ ಕೋಗಿಲೆಗೂ ಭೇದವೇ ತಿಳಿಯದು. "ಕಾಕ ಕಪ್ಪು ಪಿಕವೂ ಕಪ್ಪು; ಏನು ಭೇದ ಅದಕಿವಕೆ;" ವಸಂತಕಾಲ ಬಂದಾಗ; ಕಾಗೆ ಕಾಗೆ




ಪಿಕ ಪಿಕವೇ. ವಸಂತ ಬಂದಾಗ ಹೂ ಮಿಡಿ ಬಿಟ್ಟು ಮಾವಿನ ಮರದಲ್ಲಿ ಕಾಗೆ ಬಂದು ಕೂತು ಕೂಗಿದರೂ ಕೋಗಿಲೆಯ ದನಿಯಂತೆ ಕೇಳಿಸುತ್ತದೆ ಎಂದು ಮಾತ್ರ ಯಾವ ಕವಿಯೂ ಹೇಳಿಲ್ಲ ಪುಣ್ಯಕ್ಕೆ. ವಸಂತ, ಮಾವಿನ ಮರ ಇವುಗಳಿಗೂ ಕೋಗಿಲೆಯ ಹಾಡಿಗೂ ಇರುವ ಈ ಬಿರಿಯ ಲಾರದ ವಿರಕಕ್ಕೆ ಏನಾದರೂ ಆಧಾರವುಂಟೇ ಎಂದು ನಾನು ಪಕ್ಷಿಶಾಸ್ತ್ರ ಪುಸ್ತಕಗಳನ್ನು ಮಗುಚಿ ಹಾಕಿದೆ. ನನಗೆ ನಿರಾಶೆ ಕಾದಿತ್ತು. ಕೋಗಿಲೆ ಚಳಿಗಾಲ ಬಿಟ್ಟು ಎಲ್ಲಾ ಋತುಗಳಲ್ಲಿ ಹಾಡುತ್ತದೆ; ಯಾವ ಮರದ ಮೇಲೆ ಕೂತರೂ ಅದಕ್ಕೆ ಹಾಡು ಬರುತ್ತದೆ ಎಂದು ತಿಳಿಯಿತು. ಆದ್ದರಿಂದ ಕವಿಗಳು ಸುಂದರವಾದೊಂದು ಸುಳ್ಳನ್ನು ಸೃಷ್ಟಿಸಿ ಕೀಟ್ಸನ Truth is Beauty, Beauty Truth ಎನ್ನುವುದನ್ನು ಸುಳ್ಳುಗಳೆದಿದ್ದಾರೆಂದೇ ತೀರ್ಮಾನಿಸಬೇಕು.

ಇಲ್ಲಿಗೆ ಸಸ್ಯಶಾಸ್ತ್ರ ಬಿಟ್ಟು ಪಕ್ಷಿಶಾಸ್ತ್ರದತ್ತ ತಿರುಗುವಾ. ಭಾರತೀಯ ಕವಿಗಳು ಸಸ್ಯಗಳನ್ನೆಷ್ಟು ಪ್ರೀತಿಸಿದ್ದರೊ ಅಷ್ಟೇ ಪಕ್ಷಿಗಳನ್ನೂ ಮೆಚ್ಚಿದ್ದರು. ಕವಿಸಮಯದ ಬಳ್ಳಿ ಅವುಗಳ ಗೂಡುಗಳನ್ನು ಬಳಸಿದೆ. ಪ್ರತಿಯೊಂದು ಹಕ್ಕಿಗೂ ಕೋಗಿಲೆಯಂತೆ ತಂತನ್ನ ಮೋಹ ಇದ್ದೆ ಇದೆಯಂತೆ. ಚಾತಕ ಪಕ್ಷಿಗೆ ಮಳೆಯ ಹನಿಗಳೇ ಬೇಕು. ನದೀ ಸರೋವರಗಳ ನೀರು ಎಷ್ಟೇ ಸ್ಫಟಿಕಶುಭ್ರವಾಗಿದ್ದರೂ ಚಾತಕ ಕಣ್ಣೆತ್ತಿ ನೋಡದು. ಮಳೆ ಹನಿ ಬೀಳುವವರೆಗೆ ನೀರಡಿಸಿಕೊಂಡು ಹಾಗೆಯೆ ಆಕಾಶವನ್ನು ದಿಟ್ಟಿಸುತ್ತಿರುತ್ತದೆ. ಮಳೆ ಹನಿಯತೊಡಗಿದರೆ ಆಕಾಶದಲ್ಲೇ ಅವುಗಳನ್ನು ಕೊಕ್ಕು ತೆರೆದು ಗುಟುಕುತ್ತದೆ. ಕೆಲವು ಕವಿಗಳ ಪ್ರಕಾರ ಮಳೆ ಹನಿಗಳಲ್ಲಿಯೂ ಸ್ವಾತೀ ನಕ್ಷತ್ರದ ಮಳೆ ಹನಿಗಳೇ ಚಾತಕ ಪಕ್ಷಿಗಳಿಗೆ ಬೇಕಂತೆ. ಭರ್ತೃಹರಿ ಹೇಳುತ್ತಾನೆ:

ಬನದ ಹಕ್ಕಿಗಳಲ್ಲಿ ಚಾತಕ-
ವೊಂದೆ ಅಭಿಮಾನಿ
ಇಂದ್ರನನೆ ಬೇಡುವುದು, ಇಲ್ಲವೆ
ಸಾವುದೆದೆಯೊಣಗಿ

ಬಂಗಾಲಿ ಕವಿಗಳ ಪ್ರಕಾರ ಅದು "ಫಟಿಕ ಜಲ ಫಟಿಕ ಜಲ" (ಸ್ಫಟಿಕ ಜಲ) ಎಂದೇ ಕೂಗುತ್ತದೆ.

ಇಂಥ [illegible] ತೆಗಳುವ ಹಕ್ಕಿಗಳುಂಟಂತೆ. ಅದರಲ್ಲಿ ನವಿಲು ಒಂದು. ಮಳೆಗಾಲದ ಮೋಡಗಳು ಏರುತ್ತಿರುವಾಗ ಕೇಕೆ ಹಾಕಿ ಕೂಗುವ ನವಿಲು ಹೀಗೆ ಜಂಬ ಕೊಚ್ಚಿಕೊಳ್ಳುತ್ತದೆ:



ಎಲೆ ನೋಡ, ನಾ ನೀಲಕಂಠ,
ಕುಣಿವೆನು ಮೆಚ್ಚಿ ನಿನ್ನ ಗುಡುಗ,
ಚಾತಕನ ಹಾಗೆ ನಾ ನಿನ್ನಿಂದ
ಬೇಡುವೆನೇ ಜೀವನದ ಗುಟುಕ ?

ಚಾತಕ ಮತ್ತು ಮಯೂರ ಇವುಗಳನ್ನು ಕುರಿತ ಕವಿಸಮಯದಲ್ಲಿರುವುದು ಒಂದೇ ವೈಜ್ಞಾನಿಕ ತಥ್ಯ. ಮಳೆಗಾಲದ ಹೊತ್ತಿಗೆ ಅವುಗಳ ಜೀವನೋತ್ಸಾಹ ಉಕ್ಕುತ್ತದೆ. ಆದರೆ ಶುದ್ಧ ಮಿಥ್ಯೆಯ ಪ್ರಪಂಚದಲ್ಲಿ ಹಂಸಪಕ್ಷಿ ವಿಹರಿಸುತ್ತದೆ. ಕವಿಗಳು ಅದಕ್ಕೆ ಕ್ಷೀರ ನೀರು ವಿವೇಕವನ್ನು ಕೊಟ್ಟಿದ್ದಾರೆ. ಹಾಲು ನೀರು ಬೆರೆಸಿದರೆ ಅವೆರಡನ್ನು ಬೇರ್ಪಡಿಸಿ ಅದು ಹಾಲನ್ನು ಮಾತ್ರ ಸ್ವೀಕರಿಸುತ್ತದೆ. ಅದ್ದರಿಂದ "ಹಂಸಕ್ಷೀರ ನ್ಯಾಯ" ಹುಟ್ಟಿಕೊಂಡಿದೆ. ಹಂಸದ ಬೇರೆ ಅಭಿರುಚಿ ಮಾತ್ರ ಅಷ್ಟು ಪ್ರಶಂಸಾರ್ಹವಲ್ಲ. ಅದು ಸಾಮಾನ್ಯವಾಗಿ ಕಮಲ ಅಥವಾ ಕುಮುದವನದಲ್ಲಿ ವಾಸಿಸಿ ಅವುಗಳ ಮೃದುವಾದ ದೇಟನ್ನು ತಿಂದು ತೇಗುತ್ತದೆ. ಆದರೆ ಒಮ್ಮೊಮ್ಮೆ ಕಳ್ಳಾಟಿಕೆಯಲ್ಲಿ ಎಂದು ತೋರುತ್ತದೆ, ಅದು ಹಾವಸೆಯನ್ನು ರುಚಿನೋಡುತ್ತದೆ. ಆದ್ದರಿಂದ,

ಕೇಸರಧೂಸರ ಅಳಿವೃಂದ
ಕುಡಿವುದು ತಾವರೆ ಮಕರಂದ,
ಹಾವಸೆಯನು ಮೆಲುವುದು ಹಂಸ,
ವಿಧಿಯು ತುಂಟತನ ಸುಡಲೆಂದ!

ಎಂದೊಬ್ಬ ಕವಿ ವಿಲಾಪಿಸಿದ್ದಾನೆ.

ಅಭಿರುಚಿಯಲ್ಲಿ ಚಕೋರ ಪಕ್ಷಿಯ ಮುಂದೆ ಚಾತಕವನ್ನು ಸಿವಾಳಿಸಿ ಚೆಲ್ಲಬೇಕು. ಯಾಕೆಂದರೆ ಅದು ಬೆಳುದಿಂಗಳನ್ನೇ ಕುಡಿದು ತೃಪ್ತಿ ಪಡುತ್ತದೆ. ಹಸಿದರೆ ಅದು ಕೆಂಡವನ್ನೂ ನುಂಗುತ್ತದಂತೆ. ಆದ್ದರಿಂದ ಹಿಂದೀ ಕವಿ ಹೇಳುತ್ತಾನೆ:

ಯಾರಾರ ರುಚಿಗಳಿಗೆ ಏನು
ಹೇಳಲಿ ನಾನು,
ರುಚಿಗಳಲ್ಲುಂಟು ಎಷ್ಟೋ ಬಗೆ,
ವಿಧು ಸುಧೆಯು ಕುಡಿದು ಮದಿಸುವ
ಚಕೋರಿಯೆ ಕಡಗಿ
ಮೆಲ್ಲುವುದು ಕೆಂಡ ನಿಗಿನಿಗಿ

ಆದರೆ ಕೆಂಡ ನುಂಗುವುದು ಕವಿ ಕಲ್ಪನೆಯಲ್ಲ, ಅದು ನಿಜಕ್ಕೂ ಹಾಗೆ ಮಾಡುವದನ್ನು ಪ್ರತ್ಯಕ್ಷ ಕಂಡಿದ್ದೇನೆಂದು ಒಬ್ಬ ಹೆಸರಾಂತ ನಿಸರ್ಗಜ್ಞ ಬರೆದಿದ್ದಾನೆ. ಅಂದ ಮೇಲೆ ಅಗ್ನಿಭಕ್ಷಕರು ರಾಜಕಾರಣಿಗಳಲ್ಲಿ ಮಾತ್ರ ಗೋಚರಿಸುವುದಲ್ಲ.

ಚಕ್ರವಾಕಗಳು ಶೃಂಗಾರ ಕವಿಗಳ ದೃಷ್ಟಿಯಲ್ಲಿ



ಅತ್ಯಂತ ದುರ್ದೈವಿ ಪಕ್ಷಿಗಳು. ಗಂಡು ಹೆಣ್ಣು ಹಗಲು ಗೆಣೆಯಾಗಿಯೇ ಇರುತ್ತವೆ. ಆದರೆ ಸಂಜೆಯಾಗುತ್ತಲೇ ಯಾವುದೋ ದೈವೀ ಶಾಪದಿಂದ ಅವು ಅಗಲಿ ರಾತ್ರಿಯಲ್ಲಿ ತಮ್ಮ ಸಂಗಾತಿಗಳಿಗಾಗಿ ಕರುಣ ಕ್ರಂದನ ಮಾಡುತ್ತ ಹಾರಾಡುತ್ತವೆ. ಕವಿಗಳು ಅಗಲಿದ ಪ್ರಣಯಿನಿ

ಯರ ಪ್ರತಿನಿಧಿಗಳಾಗಿ ಚಕ್ರವಾಕ—ಕನ್ನಡದಲ್ಲಿ ಎಣೆವಕ್ಕಿ—ಗಳನ್ನು ಬಳಸಿಕೊಳ್ಳುತ್ತಾರೆ. ಇದೂ ಕವಿಗಳ ಕಲ್ಪನೆ, ನಿರಾಧಾರ ಎಂದು ಬಹುಕಾಲ ಭಾವಿಸಿದ್ದರು. ಆದರೆ ಕವಿಗಳು ಸತ್ಯವನ್ನೆ ಹೇಳುತ್ತಿದ್ದಾರೆಂದು ಸಿದ್ಧವಾಗಿದೆ. ಅವು ಗೆಣೆವಕ್ಕಿಗಳಾಗಿರುವದೂ ನಿಜ, ಕತ್ತಲಾಗುತ್ತಲೇ ಅಗಲುವುದೂ ಸತ್ಯ, ಮತ್ತು ವಿರಹದಿಂದ ಚೀತ್ಕರಿಸುವುದೂ ಸತ್ಯ. ಪಾಪ! ಜೋಡಿ ಬೇಕಾದ ಹೊತ್ತಿಗೇ ಅಗಲಬೇಕಾದ ದುರದೃಷ್ಟ ಅವುಗಳದು.

ಕವಿಸಮಯ ಸಜೀವ ಪ್ರಪಂಚವನ್ನಷ್ಟೇ ವ್ಯಾಪಿಸದೆ ಜಡಪ್ರಪಂಚವನ್ನೂ ಆಳಿದೆ. ಚಂದ್ರನ ಕಪ್ಪು ಕಲೆಗಳಿವೆಯಲ್ಲ, ಅವು ಮೊಲ ಅಥವಾ ಚಿಗರೆಯೆಂದು ಕವಿಗಳು ನಿರ್ಧರಿಸಿದ್ದಾರೆ. ಚಿಗರೆ ಚಂದ್ರಲೋಕಕ್ಕೆ ಹೋದದ್ದು ಯಾಕೆಪ್ಪಾ ಎಂದರೆ ಒಬ್ಬ ಕವಿಯ ವಿವರಣೆ ಇದು:

ಇಲ್ಲಿ ಬೇಡನ ಬಾಣ ಬೀಳದು,
ಕಾಡುರಿಯ ಭಯ ಬಾರದು,
ತಗ್ಗು ದಿನ್ನೆಯ ಕುತ್ತು ಕಾಣದು,
ಇಲ್ಲ ಬಲೆಗಳ ಮೋಸವೂ-
ಇಂತು ಪರಿಪರಿ ಚಿಂತಿಸಿಯೆ ಮಿಕ
ಚಂದ್ರನಾಸರೆ ಸೇರಿತು

ಭಲೇ! 'ಕರ್ತವ್ಯೋ ಮಹದಾಶ್ರಯ' ಎನ್ನುವ ನೀತಿಯನ್ನು ಚಿಗರೆ ಅನುಸರಿಸಿತು. ಆದರೆ ಏನು?

ಪಾಪ, ಅದಕರಿವಿಲ್ಲ ರಾಹುವ
ತೆರೆದ ಬಾಯ ವಿಲಾಸವು

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲಿಲ್ಲ.

ಭೂಗರ್ಭಶಾಸ್ತ್ರದ ವಿದ್ಯಾರ್ಥಿಗಳಿಗೆ ಇದು ಗೊತ್ತಿರಲಿಕ್ಕಿಲ್ಲ: ಆದರೆ ಚಂದ್ರಕಾಂತ ಎಂಬೊಂದು ಶಿಲೆ ಇದೆ. ಚಂದ್ರೋದಯವಾಗುತ್ತಲೇ ಅದರಲ್ಲಿ ನೀರು ಜಿನುಗತೊಡಗುತ್ತದೆ. ಚಂದ್ರನಿಗೊಂದು ಶಿಲೆ ಇದ್ದ ಬಳಿಕ ಸೂರ್ಯನಿಗೂ ಇರಬೇಕಲ್ಲ. ಆದ್ದರಿಂದ ಸೂರ್ಯಕಾಂತವೂ ಒಂದಿದೆ, ಕವಿಗಳ ವಿಶ್ವಾಮಿತ್ರ ಸೃಷ್ಟಿಯಲ್ಲಿ. ಅವು ಸೂರ್ಯನನ್ನು ಕಂಡು ಒಸರತೊಡಗುತ್ತವೆ. ತಾವರೆ ನೈದಿಲೆಗಳ ಜಡಲೋಕಾವತಾರಗಳು ಇವು.

ನೀವು ಕಗ್ಗತ್ತಲು ನೋಡಿದ್ದೀರಿ. ಆದರೆ ಸೂಚೀಭೇದ್ಯ ಅಂಧಕಾರವನ್ನು ನೋಡಿದ್ದಿರಾ? ಕವಿಗಳು ನೋಡಿದ್ದಾರೆ. ಅಂಧಕಾರವನ್ನು "ನೋಡಲು" ಸಾಧ್ಯವಿದ್ದರೆ—ಸೂಜಿ ತೆಗೆದುಕೊಂಡು ಚುಕ್ಕಿ ಭೇದಿಸಬೇಕಾದಷ್ಟು ದಟ್ಟ ಕತ್ತಲೆ ಅದು.

ನಗೆಯ ಬಣ್ಣವೇನು? ತುಟಿಯಲ್ಲೇ ನಗುವುದಾದರೆ ಕೆಂಪು, ತುಟಿ ಬಿಚ್ಚಿದರೆ, ಹಲ್ಲು ಕೊಳಕಾಗಿರದಿದ್ದರೆ, ಬಿಳಿದು ಎಂದು ನೀವು ಹೇಳುತ್ತೀರಿ. ಆದರೆ ಗಹಗಹಿಸಿದ ನಗುವಿಗೊಂದು ಬಣ್ಣವುಂಟೇ? ಉಂಟು, ಅದೂ ಬಿಳಿದು. ಆದು ಬರೇ ಅಮೂರ್ತ ಶಬ್ದವೆಂದು ನಿವೇದಿಸಿದ್ದರೆ ತಪ್ಪು. ನೀವು ನಿಜಕ್ಕೂ ಚೆನ್ನಾಗಿ ನಗಬಲ್ಲವರಾದರೆ ನಿಮ್ಮ ನಗೆರಾಶಿ ಬೀಳಬಲ್ಲದು. ಕವಿಗಳ ದೃಷ್ಟಿಯಲ್ಲಿ ಜಗತ್ತಿನ ಅತಿ ದೊಡ್ಡ ನಗೆಪಂಡಿತ ಶಿವ. ಅವನು ಒಮ್ಮೆ ನಗಲಾರಂಭಿಸಿದ. ಅದು ಯುಗಯುಗಗಳ ಕಾಲ ನಡೆಯಿತು. ನಗೆ ರಾಶಿರಾಶಿಯಾಗಿ ಒಟ್ಟಿತು. ಅದೇ ಹಿಮಾಲಯದ ಹಿಮರಾಶಿ. ಈ "ತ್ರ್ಯಂಬಕ ಸ್ವಾಟ್ಟಹಾಸ"ದ ಕಲ್ಪನೆ ನನ್ನ ಮೈಯಲ್ಲಿ ಚಳಿ ಹುಟ್ಟಿಸುತ್ತದೆ. ಅದು ಪ್ರಳಯದ ನಿರ್ದಯ ನಗೆ-ಆದ್ದರಿಂದ ಅಷ್ಟು ಶೀತಲ.

ಇನ್ನೊಂದು ಬಿಳಿ ಪದಾರ್ಥ ಕವಿಗಳ ಹತ್ತಿರ ಇದೆ. ಅದೆಂದರೆ ಕೀರ್ತಿ. ಒಬ್ಬ ಕವಿ ಭೋಜರಾಜನನ್ನು ಹೊಗಳುತ್ತಾ ಹೀಗೆಂದು ಪದ್ಯ ಹೆಣೆದಿದ್ದಾನೆ:

ಭೋಜರಾಜನ ಕೀರ್ತಿ
ಹರಡುತ್ತ ಹರಡುತ್ತ
ಮೂಜಗವನೇ ಮಾಡಿ
ಬಿಡುವುದೋ ಬಿಳಿದು
ನೋಡುತ್ತ ನೋಡುತ್ತ
ನನ್ನೆದೆ ಬೆದರುತಿದೆ
ನನ್ನ ನಲ್ಲೆಯ ಕುರುಳ
ಗತಿಯು ನೆನೆದು!




ಮೆರಿಟ್*

ಹೊಲಿಗೆ ಮಶೀನು

ಜೀವನವಿಡೀ ಬಾಳಿಕೆ ಬರುವ ಉಡುಗೊರೆ

...ಕಾರಣ, ಸಿಂಗರ್‌ನವರು ತಮ್ಮ ಪ್ರತಿಯೊಂದು ಮಶೀನಿನಲ್ಲಿರುವ 307 ಭಾಗಗಳಲ್ಲಿ ಪ್ರತಿಯೊಂದನ್ನೂ ಪರೀಕ್ಷಿಸುತ್ತಾರೆ.



ಅನೇಕ ತಲೆಮಾರುಗಳಿಂದ ಸಿಂಗರ್‌ನವರ ಹೊಲಿಗೆ ಮಶೀನು ಮದುವೆಗಳಲ್ಲಿಯೂ, ವಾರ್ಷಿಕೋತ್ಸವಗಳಲ್ಲಿಯೂ ಉಡುಗೊರೆಯಾಗಿ ಕೊಡಲು ಅತ್ಯುತ್ತಮವಾದದ್ದು ಎಂದು ಪರಿಗಣಿಸಲ್ಪಡುತ್ತಿದೆ. ಅಧಿಕಾಧಿಕ ಜನರು ಸಿಂಗರ್‌ನ್ನೇ ಏಕೆ ಆಯ್ದುಕೊಳ್ಳುತ್ತಾರೆ ಎಂಬುದಕ್ಕೆ ಇವೀಗ ಕೆಲವು ಕಾರಣಗಳು:

ಅನುಭವ

S ಜಗತ್ತಿನಲ್ಲಿ ಪ್ರಪ್ರಥಮ ವ್ಯಾವಹಾರಿಕ ಹೊಲಿಗೆ ಮಶೀನನ್ನು ಸಾದರಪಡಿಸಿದವರು ಸಿಂಗರ್‌ನವರೆ. ಅದರರ್ಥವೆಂದರೆ 125 ಕ್ಕಿಂತಲೂ ಹೆಚ್ಚು ವರ್ಷಗಳ ಅನುಭವ ಅವರಿಗಿದೆ. ಇಂದು ಭಾರತದಲ್ಲಿ ಎಲ್ಲಕ್ಕಿಂತ ಹಳೆಯ ಹೊಲಿಗೆ ಮಶೀನುಗಳು ಸಿಂಗರ್‌ನವರದ್ದೆ. ಅವುಗಳಲ್ಲಿ ಕೆಲವನ್ನಾದರೂ ನೀವು ಕಂಡಿರಬಹುದು.


ಶ್ರೇಣಿ

ವಿವಿಧ ಹೊಲಿಗೆ ಮಶೀನುಗಳ ಶ್ರೇಣಿಯಿಂದ ನಿಮಗೆ ಬೇಕಾದದ್ದನ್ನು ನೀವು ಆಯ್ದುಕೊಳ್ಳಬಹುದು. ಅವುಗಳಲ್ಲಿ ಪ್ರತಿಯೊಂದು ಆವಶ್ಯಕತೆಗೂ ಸೂಕ್ತವಾಗುವ ಮಾಡೆಲ್ ಇದ್ದೇ ಇದೆ. ಬೆಲೆ ಕೂಡ ಎಲ್ಲರಿಗೂ ಅನುಕೂಲವಾಗುವಂತಹದೇ.

ಯೋಜನೆಗಳು

ಸಿಂಗರ್‌ನವರು ಅನುಕೂಲವಾದ. ಕಂತುಗಳಲ್ಲಿ ಕೊಳ್ಳುವ ಯೋಜನೆಗಳನ್ನು ಸಹ ಏರ್ಪಡಿಸಿದ್ದಾರೆ. ಆದ್ದರಿಂದ ಪೂರ್ತಿ ಹಣವನ್ನು ಒಂದೇ ಸಲ ಕೊಡುವುದು ನಿಮಗೆ ಸಾಧ್ಯವಿಲ್ಲದಿದ್ದರೆ ನೀವು ಸುಲಭ ಕಂತುಗಳಲ್ಲಿ ಸಲ್ಲಿಸಬಹುದು.

ಉಳಿತಾಯ



ದರ್ಜಿಗಳಿಗೆಲ್ಲ ನೀವೇ ಬಟ್ಟೆ ಹೊಲಿಯುವುದಾದರೆ ನಿಮಗೆ ಎಷ್ಟು ಉಳಿತಾಯವಾಗುತ್ತದೆ ನೋಡಿ. ಇಂದಿನ ದಿನಗಳಲ್ಲಿ ದರ್ಜಿಗಳ ಮಜೂರಿ ಬಹಳ ಹೆಚ್ಚು ಇರುವಾಗ, ನೀವು ಮಶೀನಿಗೆ ಕೊಟ್ಟ ಹಣ ನಿಮಗೆ 2 ವರ್ಷಕ್ಕಿಂತಲೂ ಕಡಿಮೆ ಸಮಯದಲ್ಲಿ ಹಿಂದೆ ಬರುತ್ತದೆ ಎಂದು ನಿಮಗೆ ಗೊತ್ತಾಗುವುದು.

ಅಂಗಡಿಗಳು

ಸಿಂಗರ್‌ಗೆ ದೇಶದಾದ್ಯಂತ ಹರಡಿರುವ ವ್ಯಾಪಾರಿಗಳಿದ್ದಾರೆ. ನಿಮ್ಮ ಮನೆಯ ಹತ್ತಿರ ಸಿಂಗರ್ ಅಂಗಡಿಯಾಗಲೀ, ಅಥವಾ ವ್ಯಾಪಾರಿಯಾಗಲೀ ಇರುವುದು ಖಂಡಿತ.

ಸೇವೆ

ಸಿಂಗರ್‌ನವರ ಹೊಲಿಗೆ ಮಶೀನು ದೀರ್ಘಕಾಲ ಬಾಳಿಕೆ ಬರುವಂತೆ ರಚಿಸಲ್ಪಡುತ್ತದೆ. ಮತ್ತು, ನಿಮ್ಮ ಮಶೀನು ಯಾವಾಗಲೂ ಸಮರ್ಪಕವಾಗಿ ಕೆಲಸ ಮಾಡುವ ಸ್ಥಿತಿಯಲ್ಲಿರುವಂತೆ ಮಾಡಲು ವ್ಯಾಪಕವಾಗಿ ಹರಡಿರುವ ಸಿಂಗರ್ ಅಂಗಡಿಗಳಲ್ಲಿ ಮತ್ತು ವ್ಯಾಪಾರಿಗಳಲ್ಲಿ ಮಾರಾಟಾನಂತರದ ದಕ್ಷ ಸೇವೆ ಖಾತ್ರಿಯಾಗಿ ದೊರೆಯುತ್ತದೆ. ಹೀಗಾಗಿ, ನಿಮಗೆ ನಿಮ್ಮ ಮಶೀನಿನಿಂದ ಜೀವನಪರ್ಯಂತ ಸೇವೆ ದೊರೆಯುತ್ತದೆ.

ಒಂದು ನಿಮಿಷಕ್ಕೆ 1000 ಹೊಲಿಗೆಗಳು [illegible]

ಒಂದು ಹೊಲಿಗೆಯೂ ತಪ್ಪುವುದಿಲ್ಲ

ಮೆರಿಟ್ 4000 ನಿರಂತರ [illegible] ಕಾಲ, ಒಂದು ಹೊಲಿಗೆ [illegible] ತಪ್ಪಿಸದೆ ಕೆಲಸ ಮಾಡುತ್ತ [illegible] ಸಿಂಗರ್‌ನವರಿಗೆ ನಿರೀಕ್ಷೆ ಇದೆ [illegible] ಉತ್ಕೃಷ್ಟತೆಯ ಬಗ್ಗೆ ಇದ್ದ [illegible] ಜಾಗರೂಕತೆಯನ್ನು ಪ[illegible] ವುದರಿಂದಲೇ ಸಿಂಗರ್ [illegible] ಪ್ರಖ್ಯಾತಿಯನ್ನು [illegible]

ಸಿಂಗರ್ ಅವರ

ಮೆರಿಟ್ ಹೊಲಿಗೆ ಮಶೀನು

ಅನೇಕ ವರ್ಷ ನಿಮ್ಮೊಡನೆ ಸಮರ್ಪಕ ಒಡನಾಟ

* ಸಿಂಗರ್ ಕಂಪೆನಿಯ ಟ್ರೇಡ್ ಮಾರ್ಕ್

CHAITRA-SM-273 KAN



ಜವಹರಲಾಲ್ ನೆಹರೂರವರು ರಾಜಕೀಯ ಕೈದಿಯಾಗಿದ್ದಾಗ

ಎಂ. ಎಸ್. ಲಕ್ಷ್ಮಣಾಚಾರ್

ಬರೇಲಿ ಸೆಂಟ್ರಲ್ ಜೈಲಿನ ಜೈಲರರಾಗಿದ್ದ ಶ್ರೀ ಭೀಮಶಂಕರ ವರ್ಮರವರ ಜವಾಬ್ದಾರಿಯಲ್ಲಿ ಇತರ ಅನೇಕ ಕೈದಿಗಳೊಂದಿಗೆ ರಾಜಕೀಯ ಕೈದಿಗಳೂ ಇದ್ದರು. ಒಂದು ದಿನ ಇದ್ದಕ್ಕಿದ್ದಂತೆ ಜೈಲಿನಲ್ಲೊಂದು ಸುದ್ದಿ ಹಬ್ಬಿತು. "ಯಾರೋ ಮಹಾ ವ್ಯಕ್ತಿಗಳು ಕೈದಿಗಳಾಗಿ ಬರಲಿದ್ದಾರೆ." ಸರಿ ಊಹಾಪೋಹಗಳು ಪ್ರಾರಂಭವಾದವು. ಆ ಮಹಾಪುರುಷರು ಯಾರಿರಬಹುದೆಂಬುದು ವರ್ಮರಿಗೂ ಖಚಿತವಾಗಿ ತಿಳಿದಿರಲಿಲ್ಲವಾದ್ದರಿಂದ ಅವರು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲಿಲ್ಲ.

ಆಗ ಯುದ್ಧಕಾಲವಾದ್ದರಿಂದ ರೇಷನ್‌ನಲ್ಲಿ ಬೆರಕೆಯಿಲ್ಲದೆ ಗೋದಿ ಸಿಗುತ್ತಿರಲಿಲ್ಲ. ಹಿಟ್ಟೂ ಅಷ್ಟೆ. ಬರಲಿರುವ ಮೂವರು ಮಹಾವ್ಯಕ್ತಿಗಳಿಗೆ ತಲಾ ಅರ್ಧಸೇರು ಒಳ್ಳೆಯ ಗೋದಿ ಹಿಟ್ಟು ತರಿಸಿ ರೊಟ್ಟಿ ಮಾಡಿಸಲಾಗಿತ್ತು. ಅಂದು ಅವ ರ್ಯಾರೂ ಬರಲಿಲ್ಲವಾದ್ದರಿಂದ ಮಾರನೆಯ ದಿನ ಅದನ್ನು ಮೂರನೆಯ ದರ್ಜೆಯ ಕೈದಿಗಳಿಗೆ ಹಂಚಲಾಯಿತು. ಒಳ್ಳೆಯ ತುಪ್ಪ ಸವರಿದ, ಒಳ್ಳೆಯ ಗೋದಿ ಹಿಟ್ಟಿನಿಂದ ಮಾಡಿದ ರೊಟ್ಟಿ, ರುಚಿಯಾದ ತರಕಾರಿ ಪಲ್ಯ ಇತ್ಯಾದಿಗಳನ್ನೊಳಗೊಂಡ ಇಂಥ ಊಟ ಆ ಕೈದಿಗಳಿಗೆ ಕನಸಿನಲ್ಲೂ ಸಿಗಲಸಾಧ್ಯವಾದ್ದರಿಂದ ಅವರು ಸಂತೋಷದಿಂದ ತಿಂದು ಆ ಬರಲಿದ್ದ (ಬರದಿದ್ದ) ಕೈದಿಗಳನ್ನೆ ಮನಃಪೂರ್ವಕವಾಗಿ ಆಶೀರ್ವದಿಸಿದರು. ಮಾರನೆಯ ದಿನವೂ ಹಾಗೆಯೇ ಅಡಿಗೆ ಸಿದ್ಧವಾಗಿತ್ತು. ಮಧ್ಯಾಹ್ನದವರೆಗೂ ಯಾರೂ ಬರಲಿಲ್ಲ. ಆಗ ಇದ್ದಕ್ಕಿದ್ದಂತೆ ಜೈಲಿನ ಹೆಬ್ಬಾಗಿಲ ಬಳಿ ಗಲಭೆಯಾರಂಭವಾಯಿತು. ವಾಹನಗಳನ್ನು ನಿಯಂತ್ರಿಸಲಾಯಿತು. ಕೈದಿಗಳೆಲ್ಲಾ ಅವರವರ ಸೆಲ್‌ಗಳಲ್ಲಿ ಹೋಗಿ ನಿಶ್ಶಬ್ದವಾಗಿರಬೇಕೆಂದು ಸೂಚನೆಬಂದಿತು. ಜೈಲ್ ಸೂಪರಿಂಟೆಂಡೆಂಟ್ ಗಫಾರ್ ಬಹದ್ದೂರ್ ಸಾಹೇಬರು ಪ್ರಮುಖ ರಾಜಕೀಯ ಕೈದಿಗಳನ್ನಿಡುತ್ತಿದ್ದ ಸ್ಪೆಶಲ್ ಬ್ಯಾರಕ್‌ಗಳ ಮೇಲ್ವಿಚಾರಕರಾಗಿದ್ದ ವರ್ಮರನ್ನು ಕರೆದು, ಬ್ಯಾರಕ್‌ಗಳನ್ನು ತೆರೆದು ಅಲ್ಲೇ ನಿಂತಿರಬೇಕೆಂದು ಆಜ್ಞಾಪಿಸಿದರು. ಈ ಬ್ಯಾರಕ್‌ಗಳು ವಿಶಾಲವಾಗಿದ್ದು ಕುಳಿತುಕೊಳ್ಳಲು ವರಾಂಡ, ಒಂದು ದೊಡ್ಡ ಹಾಲು, ಅದಕ್ಕೆ ಸೇರಿದಂತೆ ಅಡಿಗೆ ಮನೆ, ಬಚ್ಚಲು ಮನೆ

ಇತ್ಯಾದಿಗಳಿದ್ದವು. ಇದುವರೆಗೂ ಬರಲಿರುವ 'ಮಹಾ' ಕೈದಿಗಳಾರೆಂದು ಯಾರಿಗೂ ಪತ್ತೆ ಹತ್ತಿರಲಿಲ್ಲವಾದ್ದರಿಂದ, ಆ ಮೂವರು ಕೈದಿಗಳು ಯಾರೋ ಮಹಾಪುರುಷರೇ ಆಗಿರಬೇಕೆಂದು ವರ್ಮರ ಊಹೆಯಾಗಿತ್ತು.

ಜೈಲ್ ಸೂಪೆರಿಂಟೆಂಡೆಟ್‌ರು ಖದ್ದರ್‌ಧಾರಿಗಳಾದ ಯಾರೋ ಇಬ್ಬರೊಂದಿಗೆ ಬರುತ್ತಿರುವುದನ್ನು ಬ್ಯಾರಕ್‌ಗಳ ಬಳಿ ನಿಂತಿದ್ದ ವರ್ಮರು ಗಮನವಿಟ್ಟು ನೋಡಿದಾಗ ಕೈದಿಗಳನ್ನು ಗುರುತಿಸಿ ಆಶ್ಚರ್ಯಚಕಿತರಾದರು. ಅವರು ಮತ್ಯಾರೂ ಆಗಿರದೇ ಪಂಡಿತ್ ಜವಾಹರಲಾಲ್ ನೆಹರೂ ಮತ್ತು ಆಚಾರ್ಯ ನರೇಂದ್ರ ದೇವ್ ಆಗಿದ್ದರು. ಮತ್ತೊಬ್ಬ ಕೈದಿ ಗೋವಿಂದ ವಲ್ಲಭ ಪಂತರು ಆರೋಗ್ಯ ಹದಗೆಟ್ಟಿದ್ದರ ಕಾರಣ ಬಿಡುಗಡೆಯಾಗಿ ಇಲ್ಲಿಗೇ ಬರದೇನೇ ಹೊರಟು ಹೋಗಿದ್ದರು. ಪಂಡಿತ್‌ಜೀಯ ಪರಿಚಯ ವರ್ಮರಿಗಿತ್ತು. ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಅವರಿಬ್ಬರೂ ಸಹಪಾಠಿಗಳು.

ಆದರೆ ಪಂಡಿತ್‌ಜೀಯ ಮೃದು ಸ್ವಭಾವ, ಶಿಸ್ತು, ಸಂಯಮ ಅಸಾಧಾರಣ ಮಾನವ ಪ್ರೇಮ ಇತ್ಯಾದಿಯನ್ನು ವರ್ಮರಿಗೆ ಅರಿಯಲು ಸಾಧ್ಯವಾಗಿದ್ದು ಈ ಸಂದರ್ಭದಲ್ಲಿಯೇ.

ಜೈಲಿನಲ್ಲಿದ್ದಾಗ ಪಂಡಿತ್‌ಜೀ ತಮ್ಮ ಕೆಲಸವನ್ನು ತಾವೇ ನಿರ್ವಹಿಸಿಕೊಳ್ಳುತ್ತಿದ್ದರು. ಅವರೊಂದಿಗೆ ಆಚಾರ್ಯರೂ ಸಹಕರಿಸುತ್ತಿದ್ದರು. ತಮಗೋಸ್ಕರ ಸಿದ್ಧಪಡಿಸುತ್ತಿದ್ದ ಆಹಾರಗಳನ್ನು ಪಂಡಿತ್‌ಜೀ ತಾವೇ ಖುದ್ದಾಗಿ ಪರಿಶೀಲಿಸುತ್ತಿದ್ದರು. ಸರಿಯಾಗಿ ಆಹಾರ ಬೇಯಿಸುತ್ತಿದ್ದಾರೆಯೇ, ಬೇಯಿಸಲು ಶುಭ್ರವಾದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದಾರೆಯೇ, ಇತ್ಯಾದಿ ವಿಷಯಗಳನ್ನು ತಾವೇ ಬ್ಯಾರಕ್‌ನಲ್ಲಿನ ಅಡಿಗೆ ಮನೆಗೆ ಹೋಗಿ ಗಮನಿಸಿ, ಅಗತ್ಯ ಬಿದ್ದರೆ ಸರಿಯಾದ ಸೂಚನೆಗಳನ್ನು ಕೊಟ್ಟು ಬರುತ್ತಿದ್ದರು. ಊಟ ತಿಂಡಿಗಳ ನಂತರ ತಮ್ಮ ತಟ್ಟೆ ಲೋಟಗಳನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ವಾಸ್ತವವಾಗಿ ಇದಕ್ಕಾಗಿ ಮೂರನೆಯ ದರ್ಜೆಯ ಕೈದಿಯೊಬ್ಬನನ್ನು ನಿಯಮಿಸಲಾಗುತ್ತಾದರೂ ಪಂಡಿತ್‌ಜೀ ಅದನ್ನು ಸಹಿಸಲಿಲ್ಲ.

ನೆಹರೂಜಿ ಮುಂಗೋಪಿಗಳೆಂಬ ವಿಷಯವನ್ನು ವರ್ಮರು ಕೇಳಿದ್ದರಾದರೂ ಅವರ ರೌದ್ರರೂಪವನ್ನು ಸ್ವತಃ ಕಂಡಿರಲಿಲ್ಲ. ಅಂತಹ ಸಂದರ್ಭವೂ ಅವರಿಗೆ ಒದಗಿ ಬಂದಿರಲಿಲ್ಲ.

ಜೈಲಿನ ಕಾನೂನು ಪ್ರಕಾರ ಕೈದಿಗಳಿಗೆ ಚಹ ಕೊಡಲಾಗುತ್ತಿತ್ತಷ್ಟೆ. ಆದರೆ ಪಂಡಿತ್‌ಜೀಗೆ ಚಹ ಸೇರುತ್ತಿರಲಿಲ್ಲ. ಜೈಲಿಗೆ ಬರುವಾಗ ಅವರು ಅವರು ಸ್ವಲ್ಪ ಕಾಫಿಪುಡಿಯನ್ನು ತಂದುಕೊಂಡು ಕೆಲವು ದಿನ ಕಾಫಿ ಮಾಡಿಸಿಕೊಂಡು ಕುಡಿದರು. ಅನಂತರ ಒಂದುದಿನ ಅವರು ವರ್ಮರನ್ನು ಕರೆದು ಹೇಳಿದರು. "ನೋಡಿ ವರ್ಮ, ನನಗೆ ಚಹ ಸೇರುವುದಿಲ್ಲ. ಕಾಫಿಯೇ ಬೇಕೆಂದು ನಿಮ್ಮ ಸೂಪೆರಿಂಟೆಂಡೆಂಟ್‌ಗೆ ಹೇಳಿ."

ವರ್ಮರು ಸೂಪರಿಂಟೆಂಡೆಂಟರಿಗೆ ಹೇಳಿದಾಗ,



ಜೈಲಿನ ಕೈದಿಗಳಿಗೆ ಸಂಬಂಧಿಸಿದ ಕಾನೂನೆಲ್ಲಾ ತಿರುವಿ ಹಾಕಿದರು. ಕಾನೂನು ನೆಹರೂರಿಗೆ ಅನುಕೂಲವಾಗಿರಲಿಲ್ಲ. ಡೆಪ್ಯೂಟಿ ಸೂಪರಿಂ–ಟೆಂಡೆಂಟ್ ಲತೀಫ್ ಸಾಹೇಬರನ್ನು ಈ ವಿಷಯ ಕೇಳಲಾಯಿತು. ಅವರೂ ತಲೆಯಾಡಿಸಿಬಿಟ್ಟರು. ಕಾನೂನು ಮೀರುವಂತಿಲ್ಲ. ಪಂಡಿತಜೀಗೆ ಕೋಪ ಬರಿಸಲೂ ಅವರಿಗಿಷ್ಟವಿರಲಿಲ್ಲ. ವರ್ಮರಿಗೆ ಈ ಕೆಲಸ ಒಪ್ಪಿಸಿ, ಪಂಡಿತ್‌ಜೀ ಕೋಪಗೊಳ್ಳದಂತೆ ನೋಡಿಕೊಳ್ಳಬೇಕೆಂದು ವಿನಂತಿಸಿ ಸೂಪರಿಂಟೆಂಡೆಂಟರು ಮೆಲ್ಲನೆ ಜಾರಿಕೊಂಡರು. ಫಿರಂಗಿ ಬಾಯಲ್ಲಿ ಬೀಳಲು ಅವರಿಗೆ ಇಷ್ಟವಿರಲಿಲ್ಲ. ಅಂದು ಕಾಫಿಯ ಸಮಯ ಮೀರಿತ್ತಾದ್ದರಿಂದ ವರ್ಮರೂ ಸುಮ್ಮನಿದ್ದುಬಿಟ್ಟರು. ಮಾರನೆಯ ದಿನ ಬೆಳಿಗ್ಗೆ


ವರ್ಮರು ಎಂದಿನಂತೆ ಸ್ಪೆಶಲ್ ಬ್ಯಾರಕ್‌ಗೆ ಹೋದಾಗ ಆಚಾರ್ಯರು ಕಾಫಿ ಕುಡಿಯುತ್ತಿದ್ದರು. ಪಂಡಿತ್‌ಜೀಯವರು ಅಲಮಾರಿನಲ್ಲಿ ಕಾಫಿ ಪುಡಿ ಇನ್ನೇನಾದರೂ ಉಳಿದಿದೆಯೋ ಎಂದು ಹುಡುಕಾಡುತ್ತಿದ್ದರು. ಆಗ ವರ್ಮಾ ಅಲ್ಲಿಗೆ ಬಂದರು.

"ನಿಮ್ಮೊಂದಿಗೆ ಕಾಫಿ ವಿಷಯ ಹೇಳಿದ್ದೆನಲ್ಲವೇ?" ನೆಹರೂ ಸ್ವಾಭಾವಿಕವಾಗಿ ಕೇಳಿದರು.

"ಹೇಳಿದಿರಿ. ಆದರೆ......"

"ಏನು ಆದರೆ?" ನೆಹರೂರ ಹಣೆಯಲ್ಲಿ ಸುಕ್ಕು, ಕಣ್ಣುಗಳಲ್ಲಿ ಕೆಂಪು ಛಾಯೆ ಕಾಣಿಸಿಕೊಂಡಿತು.

"ಜೈಲ ಮ್ಯಾನುಯಲ್‌ನ ಪ್ರಕಾರ, ಕೈದಿಗಳಿಗೆ ಸಂಬಂಧಿಸಿದ ಕಾನೂನಿನ ಪ್ರಕಾರ ಕಾಫಿ ಕೊಡಲು ಅವಕಾಶ ಇಲ್ಲ."



ಪಂಡಿತ್‌ಜೀಗೆ ಕೋಪ ಉಕ್ಕೇರಿತು. ಆಪಾದ ಮಸ್ತಕ ನಡುಗುತ್ತಿದ್ದ ಅವರು ಚಹದ ಪೊಟ್ಟಣಗಳನ್ನೆಲ್ಲಾ ಆಯ್ದು ತಂದು ಮೇಜಿನ ಮೇಲೆ ಬಿಸಿದು "ನಿಮ್ಮ ಪಾಕೆಟುಗಳನ್ನೆಲ್ಲಾ ತೆಗೆದುಕೊಂಡು ಹೋಗಿ. ನಾನದನ್ನು ಕುಡಿಯುವುದಿಲ್ಲ. ನೀವು ನಿಮ್ಮ ಸೂಪರಿಂಟೆಂಡೆಂಟರ ಬಳಿ ಹೋಗಿ. ಜೈಲ್ ಮ್ಯಾನುಯಲ್ ಆತನಿಗೂ ಆತನ ಸರ್ಕಾರಕ್ಕೂ ಸಂಬಂಧಿಸಿದ್ದು, ಆ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೇ ನಾನಿಲ್ಲಿ ಬಂದಿದ್ದು' ಅಂತ ಹೇಳಿ" ಎಂದು ಹೇಳಿದರು.

ವರ್ಮಾ ಮರು ಮಾತನಾಡದೆ ಅಲ್ಲಿಂದ ಹೊರಟೇಬಿಟ್ಟರು. ಎದುರಿಗೆ ಡೆಪ್ಯುಟಿ ಸೂಪರಿಂಟೆಂಡೆಂಟರು ನೆಹರೂರವರನ್ನು ಕಾಣಲೆಂದು ಬರುತ್ತಿರುವುದನ್ನು ಕಂಡು ಅವರು ಈ ವಿಷಯ ತಿಳಿಸಿದರು.

ಎರಡು ಘಂಟೆಗಳು ಕಳೆಯುವಷ್ಟರಲ್ಲಿ ಸೂಪರಿಂಟೆಂಡೆಂಟರು ಆಫೀಸಿನಿಂದ ಕರೆ ಬಂತು. ವರ್ಮರು ಅವರ ಆಫೀಸಿಗೆ ಹೋದಾಗ ಸಾಹೇಬರು ಅವರ ಕೈಗೆ ಎರಡು ಕಾಫಿ ಪುಡಿ ಡಬ್ಬಗಳನ್ನಿತ್ತರು. ಅದನ್ನು ತೆಗೆದುಕೊಂಡು ವರ್ಮಾರು ನೆಹರೂರವರ ಬಳಿ ಹೋದರು. ವರ್ಮರು ಕಾಫಿ ಟಿನ್‌ಗಳೊಂದಿಗೆ ಬಂದದ್ದನ್ನು ಕಂಡಾಗ ಪಂಡಿತ್‌ಜಿ ತಮ್ಮ ವಿಶಿಷ್ಟ ಹುಸಿನಗುವಿನೊಂದಿಗೆ ಅವರನ್ನು ಬರ ಮಾಡಿಕೊಂಡರು. ತಮ್ಮ ವಿಜಯಕ್ಕಾಗಿ ಅವರು ಗರ್ವಪಟ್ಟಿದ್ದರೆಂದು ಅವರ ಕಣ್ಣುಗಳು ಹೇಳುತ್ತಿದ್ದವು. ವರ್ಮರೂ ನಕ್ಕು ಬಿಟ್ಟರು.

ಒಮ್ಮೆ ವರ್ಮರ ನಾಲ್ಕನೆಯ ಮಗ ಒಂದೂವರೇ ವರ್ಷದ ಮುನೀಶನಿಗೆ ನಿಮೋನಿಯಾ ಆಗಿತ್ತು; ಡಾಕ್ಟರರು ಮೊದಲೇ ಏಕೆ ಬರಲಿಲ್ಲವೆಂದು ಬಯ್ದು ಔಷಧಿಗಳನ್ನು ಬರೆದುಕೊಟ್ಟರು. ಜೊತೆಗೆ ಸುಸ್ತನ್ನು ಹೋಗಲಾಡಿಸಲು ಪ್ರತಿದಿನ ಮೊಟ್ಟೆಯಲ್ಲಿನ ಹಳದಿಯನ್ನು ಕಿತ್ತಳೆ ರಸದಲ್ಲಿ ಸೇರಿಸಿ ದಿನಕ್ಕೆ ಹಲವಾರು ಬಾರಿ ಒಂದೊಂದು ಚಮಚಮದಷ್ಟು ಕೊಡಬೇಕೆಂದರು. ಯುದ್ಧ ಕಾಲವಾದ್ದರಿಂದ ಮೊಟ್ಟೆ ಸಿಗುವುದೇ ಕಷ್ಟವಾಗಿತ್ತು. ಕಿತ್ತಳೆ ಹಣ್ಣೂ ಅಷ್ಟೇ.

ವರ್ಮರು ಅಂದು ಡ್ಯೂಟಿಗೆ ಬಂದಾಗ ಆಚಾರ್ಯರು ಅವರ ಮುಖದ ಮ್ಲಾನತೆಯನ್ನು ಗಮನಿಸಿ ವಿಷಯವೇನೆಂದು ಕೇಳಿ ತಿಳಿದುಕೊಂಡರು. ಅತ್ಯವಶ್ಯಕ ಕೆಲಸಗಳನ್ನು ಮುಗಿಸಿ ವರ್ಮರು ಕೈದಿಗಳ ಕಾಗದಗಳನ್ನು ಸೆನ್ಸಾರ್ ಮಾಡಲೆಂದು ಕುಳಿತಾಗ ಪಂಡಿತ್‌ಜಿಯಿಂದ ಕರೆ ಬಂತು. ಏತಬಮುದೆಂದು ಯೋಚಿಸುತ್ತಾ ವರ್ಮರು ಎದ್ದು ಬಂದರು. ಏನೋ ಬರೆಯುತ್ತಿದ್ದ ಪಂಡಿತ್‌ಜೀ, "ನಿಮ್ಮ ಮಗುವಿಗೆ ಹುಷಾರಿಲ್ಲವಂತಲ್ಲ' ಪಥ್ಯಕ್ಕೆ ಮೊಟ್ಟೆ ಕಿತ್ತಳೆ ಹಣ್ಣು ಬೇಕಂತಲ್ಲ, ಎಂದು ಕೇಳಿದರು. ವರ್ಮರಿಗೆ ಮುಜುಗುರವಾಯಿತು. ಪಂಡಿತ್‌ಜೀಗೋಸ್ಕರ ವಿಶೇಷವಾಗಿ ಮೊಟ್ಟೆ, ಕಿತ್ತಳೆ ಹಣ್ಣು ಸರಬರಾಜಾಗುತ್ತಿತ್ತು. ತಾವು ತಮ್ಮ ಮಗನ ವಿಷಯ ಆಚಾರ್ಯರ

ಹತ್ತಿರ ಹೇಳಬಾರದಿತ್ತು ಎಂದೆನಿಸಿತು. ಆದರೆ ಸಮಯ ಮೀರಿತ್ತು. ಪಂಡಿತ್‌ಜೀ ತಮ್ಮ ಅಲಮಾರಿನಿಂದ ಒಂದು ಖಾಲಿ ಮುಸಿಕುಡಿಕೆಯನ್ನು ತೆಗೆದುಕೊಂಡು ಅದನ್ನು ಬ್ರಶ್ ಮಾಡಿ ಬಿಸಿ ನೀರಿನಿಂದ ತೊಳೆದು, ಒರೆಸಿ, ಡಾಕ್ಟರರು ಹೇಳಿದಂತೆ ಮೊಟ್ಟೆಯ ಹಳದಿ ಮತ್ತು ಕಿತ್ತಳೆ ಹಣ್ಣಿನ ರಸದ ಮಿಶ್ರಣವನ್ನು ತಾವೇ ಸ್ವತಃ ತಯಾರು ಮಾಡಿ ಕುಲುಕಿ ಆ ಕುಡಿಕೆಯಲ್ಲಿ ಸುರಿದು ಅದನ್ನು ಒಂದು ಕಾಗದದಲ್ಲಿ ಸುತ್ತಿ ವರ್ಮರಿಗಿತ್ತರು. ವರ್ಮರು ಮರುಮಾತನಾಡದೆ ಅದನ್ನು ಒಯ್ದು ಮಗುವಿಗೆ ಕುಡಿಸತೊಡಗಿದರು. ಪಂಡಿತ್‌ಜೀಯ ಮಮತೆಯ ಕೊಡುಗೆಯಿಂದ ಮಗುವಿಗೆ ಗುಣವಾಗತೊಡಗಿತು. ಪೂರ್ಣಗುಣವಾಗುವವರೆಗೂ ಪಂಡಿತ್‌ಜೀ ನಿತ್ಯ ಮೊಟ್ಟೆ ಹಳದಿ–ಕಿತ್ತಳೆರಸ ಮಿಶ್ರಣ ತಯಾರಿಸಿಕೊಡುತ್ತಿದ್ದರು.

ಬರೇಲಿ ಸೆಂಟ್ರಲ್ ಜೈಲಿನಲ್ಲಿ ಕೈದಿಗಳ ಜವಾಬ್ದಾರಿಯಲ್ಲಿ ಒಂದು ಮಿಲ್ಕ್‌ಡೈರಿ ಕೆಲಸಮಾಡುತ್ತಿತ್ತು. ಸಾಹಿವಾಲ್ ಜಾತಿಗೆ ಸೇರಿದ ಅನೇಕ ಹಸುಗಳನ್ನು ಅಲ್ಲಿ ಕಟ್ಟಲಾಗಿತ್ತು. ಅವು ಹೆಚ್ಚು ಹೆಚ್ಚು ಹಾಲು ಕೊಡುವ ತಳಿಗಳಾಗಿದ್ದವು. ಕರೆದ ಹಾಲೆಲ್ಲವೂ ಆಸ್ಪತ್ರೆಗೆ ಸರಬರಾಜಾಗುತ್ತಿತ್ತೇ ವಿನಾ, ಸಾಧಾರಣ ಕೈದಿಗಳಿಗೆ ಹಾಲು ದೊರಕುತ್ತಿರಲಿಲ್ಲ. ನಿಶ್ಯಕ್ತರೂ ರೋಗಿಗಳೂ ಆದ ಕೈದಿಗಳಿಗೆ ಡಾಕ್ಟರ್ ಸರ್ಟಿಫಿಕೇಟ್ ಇದ್ದರೆ ಮಾತ್ರ ಹಾಲು ಕೊಡಲಾಗುತ್ತಿತ್ತು. ರಾಜಕೀಯ ಕೈದಿಗಳಿಗೆ ಮಾತ್ರ ಒಂದೊಂದು ಸೇರು ಹಾಲು ಕೊಡಲಾಗುತ್ತಿದ್ದ ಕಾರಣ ಪಂಡಿತ್‌ಜೀಗೂ ಆಚಾರ್ಯರಿಗೂ ಹಾಲು ಸಿಗುತ್ತಿತ್ತು. ಈ ಹಾಲಿನ ಮೇಲ್ವಿಚಾರಣೆ ವಾರ್ಡರ್ ಒಬ್ಬರು ನಡೆಸುತ್ತಿದ್ದರು. ಆಗ ಒಳ್ಳೆಯ ಹಾಲು ಸಿಗುತ್ತಿದ್ದುದೇ ಕಷ್ಟವಾದ್ದರಿಂದ ನೀರುಹಾಲಾದರೂ ಯಾರೂ ಚಕಾರವೆತ್ತುತ್ತಿರಲಿಲ್ಲ.

ಒಮ್ಮೆ ಆಚಾರ್ಯರೊಂದಿಗೆ ವರ್ಮರು ಮಾತನಾಡುತ್ತಿದ್ದಾಗ ತಮ್ಮ ಡೈರಿಯಲ್ಲಿನ ಸಾಹಿವಾಲ್ ಹಸುಗಳು ಕೊಡುವ ಗಟ್ಟಿಹಾಲಿನ ಬಗ್ಗೆ ಬಹಳ ಹೊಗಳಿ ಮಾತಾಡಿದರು. ಆಚಾರ್ಯರು "ನಮಗೆ ಕೊಡುವ ಹಾಲು ಈ ಹಸುಗಳದ್ದೋ ಅಥವಾ ಬೇರೆ ಕಡೆಯಿಂದ ಬರುತ್ತೋ?" ಎಂದು ಕೇಳಿದರು.

"ನಮ್ಮ ಡೈರಿಯದೇ. ನಮ್ಮ ಜಮೇದಾರನೆದುರಿಗೇ ಕರೆದದ್ದು."

"ಆದರೆ ಹಾಲು ಬರೀ ನೀರಾಗಿರುತ್ತಲ್ಲ?"

"ಹೌದೇ, ಹಾಗಾಗಲು ಸಾಧ್ಯವಿಲ್ಲವಲ್ಲಾ?"

ವರ್ಮರು ಅನಂತರ ಜಮೇದಾರನನ್ನೇ ಕರೆಸಿ ಕೇಳಿದರು. ಅವನು ತನ್ನ ಕಣ್ಣೆದುರಿಗೇ ಕರೆದದ್ದೆಂದು, ನೀರು ಬೆರೆಸಿಲ್ಲವೆಂದೂ ಆಣೆ ಮಾಡಿದನು. ವರ್ಮ ಅಂದು ಸುಮ್ಮನಿದ್ದು ಮಾರನೆಯ ದಿನ ಹಾಲು ಕರೆಯುವ ಸ್ಥಳಕ್ಕೆ ಹೋಗಿ ಹಾಲೆಲ್ಲಾ ಕರೆದು, ಎಲ್ಲರಿಗೂ (ಪಂಡಿತ್‌ಜೀಗೂ) ಅವರವರ ಪಾಲಿನ ಹಾಲು ಕಳಿಸಿದ್ದನ್ನು ಕಣ್ಣಾರೆ ಕಂಡು ತಮ್ಮ ಕೆಲಸಕ್ಕೆ ಹೋದರು. ಎಂಟು ಗಂಟೆ



ಯ ವೇಳೆಗೆ ಸ್ಪೆಶಲ್ ಬ್ಯಾರಕ್‌ಗೆ ಬಂದರು. ಪಂಡಿತ್‌ಜೀಯೊಂದಿಗೆ ಕುಶಲ ಪ್ರಶ್ನೆ ನಡೆಸಿ ಅಡಿಗೆ ಮನೆಗೆ ನುಗ್ಗಿದರು. ಅಡಿಗೆಯವನನ್ನು (ಅವನು ಒಬ್ಬ ಕೈದಿಯೇ) "ಹಾಲು ಬಂತೆ?" ಎಂದು ಕೇಳಿದರು.

"ಬಂತು."

"ಎಷ್ಟು?"

"ಒಂದು ಸೇರು."

"ಎಷ್ಟು ಹಾಲು ಬಳಸಿದ್ದೀ?"

"ಒಂದು ಪಾತ್ರ ಕಾಫಿಗೆ, ಒಂದು ಪಾತ್ರ ಓವಲ್‌ಟಿನ್‌ಗೆ."

"ಮಿಕ್ಕ ಹಾಲು ಇಲ್ಲಿ ತಾ."

ಅಡಿಗೆಯವನು ಗಡಗಡ ನಡುಗುತ್ತ ನಿಂತು

ಬಿಟ್ಟನು.

ವರ್ಮಾರೇ ಬಿಸಿನೀರ್ಗ್ಗಿ ಹಾಲು ತಂದು ನೋಡಿದರು. ಸಿಕ್ಕಹಾಲು ಅರ್ಧಸೇರಿಗೂ ಜಾಸ್ತಿ ಇದ್ದಂತೆ ತೋರಿತು. ಪಾತ್ರೆ ತಂದು ಅಳೆಯಿಸಿ ನೋಡಿದರು. ಒಂದೂಕಾಲು ಸೇರು ಹಾಲಿತ್ತು. ಅಂದರೆ ಅವನು ಒಂದು ಸೇರುಹಾಲಿಗೆ ಮುಕ್ಕಾಲು ಸೇರು ನೀರು ಬೆರೆಸಿರಬೇಕು. ವರ್ಮಾ ಕೆಂಡಾಮಂಡಲವಾದರು. ಕಣ್ಣ್ಮಿ ಇಕ್ಕುವುದರೊಳಗೆ ಅಡಿಗೆಯವನು ಸಾಷ್ಟಾಂಗ ಬಿದ್ದು ಅವರ ಕಾಲು ಹಿಡಿದಿದ್ದನು.

ಈ ವಿಷಯ ಆಚಾರ್ಯರೊಂದಿಗೆ ಪಂಡಿತರೊಂದಿಗೆ ಹೇಳಿದಾಗ ಅವರು ಜೋರಾಗಿ ನಕ್ಕರು. ಆದರೆ ಆ ಕೃತಘ್ನನ ವಿಷಯವಾಗಿ ಅವರು ಮನಸ್ಸಿಗೆ ಹಚ್ಚಿಕೊಳ್ಳದೆ "ಜೈಲರ್ ಸಾಬ್, ಈ ವಿಷಯ ಹಾಗೆ ಮರೆತುಬಿಡಿ. ಸೂಪರಿಂಟೆಂಡೆಂಟರಿಗೆ ತಿಳಿಸಲು ಹೋಗಬೇಡಿ" ಎಂದು ಅವರು ಶಿಫಾರಸು ಮಾಡಿದರು.

ಸೂಪರಿಂಟೆಂಡೆಂಟರು ಕಟ್ಟುನಿಟ್ಟಿನ ಆಸಾಮಿಯೆಂದು ಆ ಕೈದಿ (ಅಡಿಗೆಯವನ)ಗೆ ಗೊತ್ತಿರಬೇಕು. ಆದ್ದರಿಂದ ಅವನು ಪಂಡಿತ್‌ಜೀಯವರ ಕಾಲಿಗೆ ಬಿದ್ದು ಕ್ಷಮಾಪಣೆ ಕೇಳಿರಬೇಕೆಂದು ವರ್ಮಾರಿಗನ್ನಿಸಿತು.

ಪಂಡಿತ್ ಜವಾಹರಲಾಲ್ ನೆಹರೊಪರನ್ನೆ ಅಲ್ಲಿಂದ ವರ್ಗಾಯಿಸುವ ದಿನ ಹತ್ತಿರ ಬಂದಾಗ ಬಹುಜನ ಮನೋವೇದನೆಯನ್ನನುಭವಿಸಿದರು. ಅವರು ಅಲ್ಲಿಯ ಕೈದಿಗಳೊಂದಿಗೆ, ಜೈಲಿನ ಉದ್ಯೋಗಗಳೊಂದಿಗೆ ಅಷ್ಟರ ಮಟ್ಟಿಗೆ ನಿಕಟವರ್ತಿಗಳಾಗಿದ್ದರು. ವರ್ಮಾರ ಸ್ಥಿತಿಯಂತೂ ವರ್ಣಿಸಲಸದಳವಾಗಿತ್ತು. ನೆಹರೂ ಅಲ್ಲಿದ್ದ ಆ ಅಲ್ಪಾವಧಿಯಲ್ಲಿಯೇ ಅವರಿಬ್ಬರ ನಡುವೆ ಅತಿ ಹತ್ತಿರದ ಬಾಂಧವ್ಯವೇರ್ಪಟ್ಟಿತ್ತು. ಅಂತಹ ಮಹಾವ್ಯಕ್ತಿಯೊಂದಿಗೆ ಕೇವಲ ಸ್ವಲ್ಪ ದಿನಗಳಲ್ಲೇ ಅನಿತೂ ನಿಕಟ ಸಂಪರ್ಕ ಹೊಂದಿರುವುದು ಯಾರಿಗೂ ಸಾಧ್ಯವಾಗಿದ್ದ ಮೇಲೆ ಅವರನ್ನು ಬಿಟ್ಟು ಕೊಡುವುದೂ ಅಷ್ಟೇ ವೇದನಾಪೂರ್ಣವಾಗಿರುತ್ತಲ್ಲವೆ? ✡

ಸೊಣಕಲ ವ್ಯಕ್ತಿಯೊಬ್ಬ ಬಸ್‌ನಲ್ಲಿ ಎರಡು ಜನ ಕೂಡುವ ಸೀಟಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದ. ಅವನ ಪಕ್ಕದ ಸೀಟಿನಲ್ಲಿ ಸ್ಥೂಲಕಾಯದ ಧಡೂತಿ ಆಸಾಮಿ ಕುಳಿತಿದ್ದ. ಅವನ ದೇಹದ ಬೊಜ್ಜು ಎಲ್ಲ ದಿಕ್ಕುಗಳಿಗೂ ಹರಡಿತ್ತು; ಅಥವಾ ಹರಿದಿತ್ತು ಅನ್ನಿ. ಅವನು ಕುಳಿತು ಆರಾಮವಾಗಿ ಉಸಿರಾಡುತ್ತಿದ್ದಾರೆ, ಸೊಣಕಲನ ದೇಹದ ಮೇಲೆ ಕಿದಿಯೊತ್ತಿದ ಪರಿಣಾಮ ಆಗುತ್ತಿತ್ತು. ಇನ್ನು ತಿರುವುಮುರುವುಗಳಲ್ಲಿ ಬಸ್ ಹೊರಳುವಾಗ ಆಗುವ ಪರಿಣಾಮ ಕೇಳಬೇಕೇ?... ಆ ದೇವರಿಗೇ ಪ್ರೀತಿ. ಎಂತಲೇ ಸಿಟ್ಟಸಿಂದ ಆ ಕಡ್ಡಿ ಪೈಲ್ವಾನ್ ಹಪಹಪಿಸುತ್ತಿದ್ದ. ಎಷ್ಟು ಹೊತ್ತು ತಾನೇ ಆತ ಈ ಹೊರ ಹೊತ್ತಾನು ?!

ಗರ್ಭಿಣಿ ಸ್ತ್ರೀ ಎಂಟೂ ಚಿಲ್ಲರೆ ತಿಂಗಳ ಮಗು ಹೊತ್ತಂತೆ ಭಾಸವಾಗುತ್ತಿತ್ತು.

"ಮೊದಲು ಪ್ಯಾಸೆಂಜರ್‌ನ ತೂಕಮಾಡಿ ಅವನಿಗೆ ತೂಕದ ಪ್ರಕಾರ – ಲಗ್ಗೇಜ್‌ಗೆ ಚಾರ್ಜ್ ವಿಧಿಸುವಂತೆ – ಚಾರ್ಜ್ ಹಾಕಬೇಕಪ್ಪಾ .. ಆಗ ಸರಿಹೋಗುತ್ತೆ..." ಎಂದು ಅಸ್ಪಷ್ಟವಾಗಿ ಗೊಣಗಾಡಿಕೊಂಡ.

ಇದನ್ನು ಕೇಳಿಸಿಕೊಂಡ ಆ ಸ್ಥೂಲಶರೀರಿ, "ಹಾಗೊಂದು ಪಕ್ಷ ಮಾಡೋದೇ ಆದ್ರೆ, ನಿನ್ನನ್ನು ಯಾವ ದರಿದ್ರದವನಯ್ಯ ಬಸ್ಸಿನಲ್ಲಿ ಕೂಡಿಸಿಕೊಂಡು ಹೋಗ್ತಾನೆ?.. ನೀನು ನಡಕೊಂತಾನೆ ಹೋಗ್ತಿರಬೇಕಾಗುತ್ತೆ !" ಎಂದು ಮೂಗುಹೊರಳೆ ಉಬ್ಬರಿಸಿ ಅಬ್ಬರಿಸಿದ.

– ಎಸ್. ವಿಶ್ವನಾಥ

ನಗೆಮಲ್ಲಿಗೆ

"ನಾನು ನೋಡ್ಲಿಕ್ಕೆ ಅಷ್ಟೇನ ಛಂದಿಲ್ಲ. ಮತ್ತ ನಿನ್ನಷ್ಟು ಕಲ್ತಿಲ್ಲ ಮತ್ತ ದೊಡ್ಡ ನೌಕರೀನೂ ಇಲ್ಲ. ಆದ್ರೂ ನನ್ನ ಮದಿವ್ಯಾಗೋ ಹಟಾ ಹಿಡದು—ಸಾಧಿಸಿಕೊಂಡೆಲ್ಲಾ, ಯಾಕ? ಇದಕ್ಕ ಯಾರ ಪ್ರೇರಣಾ?"

"ನಮ್ಮಪ್ಪ."

"ನಿಮ್ಮಪ್ಪ? ಹೆಂಗ?"

"ಹೆಂಗಂದ್ರ, ನಿಮ್ಮ ಅಕೌಂಟು ಯಾವ ಬ್ಯಾಂಕಿನ್ಯಾಗದನೋ ಅಲ್ಲೆ ಅವರು ಮ್ಯಾನೇಜರು."

*

ಅಪ್ಪ ಆಡುತ್ತಿದ್ದ ಮಗನನ್ನು ಊಟಕ್ಕೆ ಕರೆದ.

"ಈಗ ಬಂದೆ." ಮಗ ಹೇಳಿದ.

"ಈಗ ಅಂದರೆ?"

"ಈ ಗಿಡದಿಂದ ಇಳಿದ ಕೂಡ್ಲೆ."

"ಯಾವಾಗಿಳೀತಿ?"

"ಈಗಿನ್ನೂ ಹತ್ತೋದ್ಲೆಂಗ ಅಂತ ವಿಚಾರಾ ಮಾಡ್ಲಿಕ್ಹತ್ತೀನಿ."

*

ಆಗ ತಾನೇ ಫಾರಿನ್ನಿನಿಂದ ಬಂದ ಆ ಡಾಕ್ಟರ್ ಹೆಂಡತಿಯೊಂದಿಗೆ ಕೈಯಲ್ಲಿ ಕೈ ಹಾಕಿಕೊಂಡು ಬೆಂಗಳೂರಿನ ಪೇಟೆಯಲ್ಲಿ ಮಾರ್ಕೆಟಿಂಗಿಗೆ ಹೊರಟ. "ವಾಂಗೋ ಸಾರ್, ಉಳ್ಳೆ ವಾಂಗೋ ಸಾರ್-ವಾಂಗೋ ಅಮ್ಮ" ಸ್ವಾಗತಿಸಿದ ಅಂಗಡಿಯ ಸ್ವಾಗತಕಾರ.

ಗಂಡ ಹೆಂಡತಿ ಒಳಹೊಕ್ಕರು. ಎಂಥ ಸಾಮಾನಾದರೂ ಸಿಗುವಂಥ ಮಿನಿ ಮಾರ್ಕೆಟ್ ಅದು. ಗಂಡ ಹೆಂಡಿರಿಗೆ-ಬೇಕಾದದ್ದು ಒಂದು ಜೇಬಿ ಕ್ಯಾರೇಜು. ಒಂದನ್ನು ಆರಿಸಿ ಪರೀಕ್ಷಿಸತೊಡಗಿದರು.

ಸೇಲ್ಸ್ ಗರ್ಲ್ ಬಂದವಳೇ "ಇದೇ ಬೇಕಾ ಸಾರ್, ಮಗೂಗೆಷ್ಟು ವಯಸ್ಸು?" ಕೇಳಿದಳು.

"ಇನ್ನೂ ಗೊತ್ತಿಲ್ಲ-ಪ್ರಯತ್ನಿಸ್ತಿದೀವಿ" ಅಂದ ಡಾಕ್ಟರ್.

*

ಇಬ್ಬರು ಒಮ್ಮೆಲೇ ಒಂದೇ ಟ್ಯಾಕ್ಸಿಗಾಗಿ ಕೂಗಿದರು. ಟ್ಯಾಕ್ಸಿ ನಿಂತಾಗ ಇಬ್ಬರಲ್ಲೂ ಸ್ವಲ್ಪ ವಾದವಿವಾದವಾಯಿತು. ಒಬ್ಬ ಸ್ವಲ್ಪ ಬಾಯಿಬಲದವ—ಟ್ಯಾಕ್ಸಿ ಹತ್ತಿ ಕುಳಿತು, "ಹೂಂ-ಹೊರಡು" ಎಂದು ಚಾಲಕನಿಗೆ ಆಜ್ಞಾಪಿಸಿದ. ಟ್ಯಾಕ್ಸಿ ಹೊರಟು ಹೋಯಿತು. ಮತ್ತೊಬ್ಬ ದೂರದಲ್ಲಿ ನಿಂತಿದ್ದ-ತನ್ನ ಪತ್ನಿಯ ಕಡೆಗೆ ಜೋಲು ಮೋರೆ ಹಾಕಿಕೊಂಡು ಬಂದ.

"ಅವ್ನಿಗ್ಯಾಕೆ ಕೂತ್ಕೊಳ್ಳೋಕೆ ಬಿಟ್ರಿ?" ಹೆಂಡತಿ ಮೂದಲಿಸಿದಳು.

"ಯಾಕಂದ್ರೇನು? ಅವನಿಗಿಂತಾ ಮೊದ್ಲು ಅವನ್ಹೆಂಡ್ತಿ ಟ್ಯಾಕ್ಸೀಲಿ ಮುಂದ್ಹೋದ್ಲಂತೆ ಮನೆಗೆ—ಅವಳಿಗಿಂತ ಮುಂಚೆ ಮನೆ ಮುಟ್ಲೇಬೇಕು, ಇಲ್ದಿದ್ರೆ ಅರೆದು ಚಟ್ನಿ ಮಾಡಿ ಬಿಡ್ತಾಳೆ ಅಂದ. ನಂಗೂ ಪಾಪ ಅನಿಸ್ತು-ಹಾಗೇ-ಮೊನ್ನೆ ನಿನ್ನಿಂದಾದ ಪೂಜೆ..."

*

ರಾಮೇನಹಳ್ಳಿ ಲಕ್ಕೇಗೌಡರು ಪಾರ್ಟಿ ಮೀಟಿಂಗಿಗೆಂದು ಬೆಂಗಳೂರಿಗೆ ಹೋದರು. ದೊಡ್ಡ ಹೋಟೆಲಲ್ಲಿಳಿದರು. ಸ್ನಾನ ತಿಂಡಿ ತೀರಿಸಿಕೊಂಡು ಪಾರ್ಟಿ ಆಫೀಸಿಗೆ ಹೊರಡಲನುವಾದರು. ಬೀಗ ಹಾಕಿ ರೂಮಿನ ನಂಬರನ್ನು ನಾಲ್ಕು ನಾಲ್ಕು ಸಲ ನೋಡಿ ಬಾಯಿಪಾಠ ಮಾಡುತ್ತ, ಬೀದಿಗಿಳಿದರು.

ಸಾಯಂಕಾಲ ಪಾರ್ಟಿ ಮೀಟಿಂಗು-ಊಟಂಗು ಇತ್ಯಾದಿ ಇಂಗುಗಳನ್ನೆಲ್ಲ ಮುಗಿಸಿಕೊಂಡು ವಾಪಸ್ಸಾದರು. ರೂಮಿನ ನಂಬರು ಸರಿಯಾಗಿ ನೆನಪಿನಲ್ಲಿತ್ತು. ೧೦ನೇ ನಂಬರ್ ರೂಮಿಗೆ ಹೋದರು ಖುಷಿಯಿಂದ. ಬೀಗ ಹಾಕಿಲ್ಲ-ಬಾಗಿಲು ಮಾತ್ರ ಹಾಕಿಕೊಂಡಿದೆ. ಒಳಗಡೆ ಭರ್ಜರಿ ಪಾಪ್ ಸಂಗೀತ ನಡೆದಿದೆ. ಪಾಪ ಗೌಡರು ದಂಗಾದರು. ಆದರೂ-ಧೈರ್ಯದಿಂದ ಬಾಗಿಲು ದೂಡಿದರು, ತೆರೆಯಿತು. ಒಳಗಡೆ ನವ ದಂಪತಿಗಳಿಬ್ಬರು ಗಾಬರಿಯಿಂದ ಎದ್ದು ಕುಳಿತರು. ಗೌಡರಿಗೂ ಗಾಬರಿ.



"ಮಗುವಿನ ಅಳು ಕೇಳ್ದಾಗ್ಲೇ ಇಲ್ಲಿ ರಾಯರು ಇಲ್ಲೆಂದು ಗೊತ್ತಾಯ್ತುಬಿಡಿ ತಾಯಿ"

"ಯಾರ್ನ ಕೇಳಿ ಒಳಗ್ಬಂದು ಮಕ್ಕೊಂಡ್ರಿ?" ಗಡುಸಾಗಿ ಗುಡುಗಿದರು ಗೌಡರು "ಇದು ನನ್ರೂಮು. ಅತ್ಲೇ ನಂಬ್ರದ್ದು."

"ಹುಷಾರಾಗಿ ಮಾತಾಡ್ರಿ ಯಜಮಾನ್ರೆ. ನಿನ್ನೆಯಿಂದ ನಾವಿಲ್ಲೇ ಇದೀವಿ. ಬೇಕಾದ್ರೆ ರಿಜಿಸ್ಟರಿನಲ್ಲಿ ನೋಡಿ" ಅಂದ ಆ ನವ ಪತಿ.

"ಈಗ್ಲೇ ಮೆನೇಜರ್ರಿಗೇಳಿ ಒರಗಾಗಕಿಸ್ತೀನಿ- ಅಂಗೆ ಬುಡ್ತೀನಾ?" ಅಂದವ್ರೇ ಗೌಡ್ರು ಕೌಂಟರಿಗೆ ಬಂದರು. ಅವ್ರಿಗೆ ಮೆನೇಜರ್ ಕೇಳಿದ್ರು,

"ನೀವಿಳದದ್ದು ಯಾವ್ಹೊಟ್ಲು? ಸತ್ಕಾರ್ ಅಥ್ವಾ ನ್ಯೂ ಸತ್ಕಾರ್?" ಪಾಪ, ಗೌಡ್ರು ಕಕ್ಕಾವಿಕ್ಕಿಯಾದ್ರು.

*

ರೋಗಿ ಡಾಕ್ಟರರೆದುರು ತನ್ನ ಅಸ್ವಾಸ್ಥ್ಯದ ಬಗ್ಗೆ ಹೇಳಬೇಕೆಂದು ಪ್ರಯತ್ನ ಮಾಡಿದಾಗೆಲ್ಲಾ ಫೋನು ಗಂಟೆ ಗುಣಗುಣಿಸಿ ಡಾಕ್ಟರ್ ಅದಕ್ಕೆ ಕಿವಿ ಬಾಯಿ ಕೊಡುವಂತಾಗುತ್ತಿತ್ತು. ಹತ್ತಾರು ಬಾರಿ ಈ ರೀತಿಯಾದ ಮೇಲೆ ರೋಗಿ ಎದ್ದು ಹೊರಟುಬಿಟ್ಟ.

"ಯಾಕೆ? ಹೊರಟೆಬಿಟ್ರಿ? ಕೂತ್ಕೊಳ್ಳಿ" ಅಂದ ಡಾಕ್ಟರು.

"ಇಲ್ಲಿ ಕೂತಾಗಲ್ಲ-ಅಲ್ಲೇ ಹೋಗ್ತೀನಿ ಟೆಲಿಫೋನ್ ಬೂತಿಗೆ—ಅಮೇಲ್ಹೇಳ್ತೀನಿ" ಎನ್ನುತ್ತ ರೋಗಿ ಹೊರಟೇಬಿಟ್ಟ.

*

ಮಾಸ್ತರರು ಶಿಷ್ಯನಿಗೆ ಸಿಟ್ಟಿನಿಂದ, "ನಿನಗ ಕಲಸಬೇಕಂದ್ರ ಮನಶ್ಯಾರ ಹತ್ರ ಸಾಧ್ಯಾನs ಇಲ್ಲ. ಕತ್ತೀನs ಆಗಬೇಕು" ಅಂದರು.

"ನಮ್ಮಪ್ಪ ಇದನ್ನ ಅನಕೋತನs ನನ್ನ ನಿಮ್ಮತ್ರ ತಂದ ಬಿಟ್ಟಾನ್ರಿ" ಶಾಂತನಾಗಿ ಹೇಳಿದ ಶಿಷ್ಯ.

ಮಹಾಭಾರತದಲ್ಲಿಯ 'ನಿದರ್ಶನ'ಗಳು

ಡಾ. ವರದರಾಜ ಹುಯಿಲಗೋಳ

ಮಹಾಭಾರತ'ದ ಸಭಾಪರ್ವದಲ್ಲಿ ಶಿಶುಪಾಲನು ಭೀಷ್ಮನನ್ನು ಮೂದಲಿಸುತ್ತ, "ಮಕ್ಕಳಿಲ್ಲದವನೂ ಮುದುಕನೂ ಆದ ನೀನು ಮಿಥ್ಯಾ ಧರ್ಮವನ್ನು ಬೋಧಿಸಿ, ಮುದಿ ಹಂಸದಂತೆ ಜ್ಞಾತಿಗಳಿಂದ ಕೊಲೆಗೆ ಗುರಿಯಾಗುತ್ತೀಯೆ," ಎಂದು ನುಡಿದಿರುವನು (I.೩೮. ೩೦–೭).

ಇಲ್ಲಿ ಮುದಿ ಹೆಂಸದ ಒಂದು ಹಳೆಯ ಕಥೆಯ ಸಂದರ್ಭ ಬಂದಿದೆ. ಮುದಿ ಹಂಸವು ಧರ್ಮವನ್ನು ಉಪದೇಶಿಸಿ ಅದರಂತೆ ನಡೆಯುತ್ತಿರಲಿಲ್ಲ. ಉಳಿದ ಪಕ್ಷಿಗಳು ತಮ್ಮ ತತ್ತಿಗಳನ್ನು ಆ ಹಂಸದ ರಕ್ಷಣೆಯಲ್ಲಿಟ್ಟು ಹೋಗುತ್ತಿದ್ದವು. ಮುದಿ ಹಂಸವು ಹಾಗೆಯೆ ತತ್ತಿಗಳನ್ನು ತಿನ್ನುತ್ತಿತ್ತು. ಕೊನೆಗೆ ಜಾಣ ಮಹಾಪ್ರಜ್ಞ ಪಕ್ಷಿಯು ಈ ಕ್ರೂರ ಕೃತ್ಯವನ್ನು ಉಳಿದ ಪಕ್ಷಿಗಳಿಗೆ ಹೇಳಿತು. ಆಗ ಎಲ್ಲ ಪಕ್ಷಿಗಳೂ ಕೂಡಿಕೊಂಡು ಆ ಮುದಿ ಹಂಸವನ್ನು ಕೊಂದು ಹಾಕಿದವು.

'ಮಹಾಭಾರತ'ದಲ್ಲಿ ಬಂದಿರುವ ಇಂಥ ಕತೆಗಳನ್ನು ನೋಡಿದಾಗ, ಪ್ರಾಣಿಕತೆ ಅರ್ಥಾತ್ ನೀತಿಕತೆ 'ಮಹಾಭಾರತ'ದಲ್ಲಿ ಕಂಡುಬರುತ್ತವೆ ಎಂದು ಹೇಳುವುದು ಸಹಜ. ಆದರೆ ನಿಜವಾಗಿಯೂ ಇವು ನೀತಿಕತೆಗಳಾಗಿರದೆ, ನಿದರ್ಶನಗಳಾಗಿವೆಯೆಂಬುದನ್ನು ಗಮನಿಸಬೇಕು. ಸಾಮಾನ್ಯವಾಗಿ ಪ್ರಾಚೀನ 'ಮಹಾಭಾರತ'ದಲ್ಲಿ ಎಲ್ಲವೂ ಇವೆ. ಅಲ್ಲಿಲ್ಲದ್ದು ಎಲ್ಲಿಯೂ ಇಲ್ಲವೆಂದು ಅಭಿಪ್ರಾಯ ಪಡುವುದು ಸಂಪ್ರದಾಯವಾಗಿದೆ. ಆದರೆ 'ಮಹಾಭಾರತ'ದಲ್ಲಿ ಬಂದಿರುವ ಅಸಂಖ್ಯಾತ ಕತೆಗಳಲ್ಲಿ ಅವು ಎಂಥವು ಎಂಬುದನ್ನು ನಿಷ್ಕರ್ಷೆ ಮಾಡುವುದು ಅವಶ್ಯವಿದೆ. ನಿದರ್ಶನ, ಆಖ್ಯಾನ, ಉಪಾಖ್ಯಾನ ಮೊದಲಾದವುಗಳಲ್ಲಿ ವಿವಿಧ ಕತೆಗಳು ಯಾವ ವಿಭಾಗಕ್ಕೆ ಸೇರುತ್ತವೆ ಎಂಬುದನ್ನು ಇನ್ನೂ ನಿರ್ಣಯಿಸಬೇಕಾಗಿದೆ.

ನಿದರ್ಶನವು ಸಾಹಿತ್ಯದಲ್ಲಿ ಒಂದು ಪ್ರಕಾರವಾಗಿದ್ದು, ಅದು ನೀತಿಕತೆಗಳ ಅತ್ಯಂತ ಪ್ರಾಚೀನ ರೂಪವನ್ನು ಪ್ರತಿನಿಧಿಸುತ್ತದೆ ಎಂದು ಹೇಳಬೇಕು 'ಮಹಾಭಾರತ'ದಲ್ಲಿ ಕಥೆಯನ್ನು ವಿವರಿಸುತ್ತಿರುವಾಗ, ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ಈ ನಿದರ್ಶನಗಳು ಬಂದಿವೆ. ಹೆಚ್ಚಾಗಿ ನೀತಿಯ ಮಾತನ್ನು ಎತ್ತಿತೋರಿಸುವ ಸಂದರ್ಭದಲ್ಲಿ ಈ ನಿದರ್ಶನಗಳು ಬಂದಿರುವುದರಿಂದ, ನಿದರ್ಶನಗಳಿಗೂ

ನೀತಿಕತೆಗಳಿಗೂ ವಿಶೇಷ ಸಂಬಂಧವಿದೆಯೆಂದು ಹೇಳಲೇಬೇಕಾಗುತ್ತದೆ.

ಈ ನೀತಿಕತೆ ಹೇಳುವಾಗ, ನಿದರ್ಶನ ಎಂಬ ಶಬ್ದವು ಸ್ಪಷ್ಟವಾಗಿ ಎಲ್ಲಿಡೆಗೂ ಬಂದಿಲ್ಲ. ಕೆಲವೆಡೆ ಸಂಭಾಷಣೆಯಲ್ಲಿ ಬರುವ ಸಂವಾದವೆಂದೂ, ಇನ್ನು ಹಲವೆಡೆ ಪುರಾಣ ಇತಿಹಾಸವೆಂದೂ ಬಂದಿದೆ. ಆದರೆ ಒಂದೇ ಒಂದು ಕಡೆಗೆ, 'ಹಂಸ ಮತ್ತು ಕಾಗೆ' ಈ ಕತೆಯನ್ನು ನಿರೂಪಿಸುವಾಗ, "ಅತಃ ತ್ವಂ ಶೃಣು ಕರ್ಣ ನಿದರ್ಶನಂ ಇದಂ ಮಮ" (VIII.೨೮.೮ಬ) ಎಂದು ನಿದರ್ಶನ ಶಬ್ದವು ಸ್ಪಷ್ಟವಾಗಿ ಕಂಡುಬರುತ್ತದೆ. ಈ ನಿದರ್ಶನಗಳಲ್ಲಿ ಬರುವ ನೀತಿ, ಸಮಾಜ ವಿಡಂಬನೆಯ ರೀತಿ ಇವುಗಳ ಕುತೂಹಲಕಾರಕ ಗತಿ ಹೇಗೆ ನೀತಿಕತೆಗಳಿಗೆ ಎಡೆ ಮಾಡಿಕೊಟ್ಟಿದೆಯೆಂಬುದನ್ನು ಸಮರ್ಥಿಸುವಂತಿದೆ.

ಬಿಡಾಲನ ಹೇಳಿದ ಮಹತ್ವದ ನಿದರ್ಶನವನ್ನೇ ನೋಡಬಹುದು. ಇಂದಿನ ದಿನಗಳಲ್ಲಿ ಡಾಂಭಿಕ ಧರ್ಮವನ್ನು ಟೀಕಿಸಲು ಎಂಥ ಧೈರ್ಯವೂ ಬೇಕಾಗಿಲ್ಲ; ಆದರೆ 'ಮಹಾಭಾರತ'ದ ಕಾಲದಲ್ಲಿ ಇಂಥ ವಿಡಂಬನೆಯ ನಿದರ್ಶನ ಕೊಡಲು ಅಪಾರ ಎದೆಗಾರಿಕೆಯು ಅವಶ್ಯವಿದ್ದಿತು. ಅಲ್ಲದೆಯೆ ಧರ್ಮದಲ್ಲಿಯ ಡಾಂಭಿಕತನದ ರೀತಿಯನ್ನು ಕಟುವಾಗಿ ಟೀಕಿಸುವ ಕತೆಗಳಲ್ಲಿ ಇದೇ ನಿದರ್ಶನ ಪ್ರಪ್ರಥಮವಾಗಿದೆಯೆಂಬುದನ್ನು ಗಮನಿಸಬೇಕು.

ಕಾಶ್ಮೀರ ದೇಶದಲ್ಲಿಯ 'ಪಂಚತಂತ್ರ'ವಾದ 'ತಂತ್ರಾಖ್ಯಾಯಿಕ'ದಲ್ಲಿ ಬಿಡಾಲ ವ್ರತಿಯನ್ನು, ಅದರಲ್ಲಿ ಬರುವ ಕಥೆ ಇದೇ ರೀತಿಯದಾಗಿದೆ. ಆ ಕತೆ ಹೀಗಿದೆ:

ಕಾಗೆ ಒಂದು ಕೈ ಮುಗಿದು ತಿರುಗಿತು. ಪ್ರಾರ್ಥನೆ ಮಾಡುವಂತೆ ನಟಿಸುತ್ತಿತ್ತು. ಆಲದ ಮರದಲ್ಲಿದ್ದ ಹಂಸಗಳು ಆ ಕಾಗೆಯನ್ನು ನಂಬಿದವು. ಹಂಸಗಳು ಇಲ್ಲದಾಗ ಆ ಕಾಗೆಯು ಯಾರಿಗೂ ಗೊತ್ತಿಲ್ಲದಂತೆ ತತ್ತಿಗಳನ್ನು ತಿನ್ನಲು ಪ್ರಾರಂಭಿಸಿತು. ಇದನ್ನು ತಿಳಿದುಕೊಂಡ ಹಂಸಗಳು ಆ ಕಾಗೆಯನ್ನು ಅಲ್ಲಿಂದ ಓಡಿಸಿದವು.

ಉಳಿದ 'ಪಂಚತಂತ್ರ'ಗಳಲ್ಲಿ ಬರುವ ಧಾರ್ಮಿಕ ಬಕವು ಮೀನುಗಳನ್ನು ತಿನ್ನುವುದು ಇದೇ ತೆರನಾದ ಕಥೆಯಾಗಿದೆ.

'ಮಹಾಭಾರತ'ದಲ್ಲಿ [illegible]

ನಿಗೆ ಹೇಳಿದ ಇನ್ನೊಂದು ನಿದರ್ಶನ 'ಜಗಳವಾಡಿದ ಪಕ್ಷಿಗಳು' (V.೬೨; ೬–೧೬) ಎಂಬುದೂ ಮಹತ್ವದ್ದಾಗಿದೆ. ಬಂಧು ಬಳಗದವರು ತಮ್ಮ ತಮ್ಮಲ್ಲಿಯೇ ಜಗಳವಾಡಿದರೆ ವಿನಾಶಹೊಂದುವುದು ಖಂಡಿತ ಎಂಬ ನೀತಿಯನ್ನು ವಿವರಿಸುವಾಗ ವಿದುರನು ಪಕ್ಷಿಗಳ ಕತೆಯನ್ನು ಹೇಳಿರುವನು.

ಬಲೆಯಲ್ಲಿ ಬಿದ್ದ ಎರಡು ಪಕ್ಷಿಗಳು ಮೇಲೆ ಹಾರಿ ಹೋಗುತ್ತವೆ; ಅವನ್ನು ಕಂಡ ಬೇಟೆಗಾರನು ಆ ಪಕ್ಷಿಗಳು ತಮ್ಮ ತಮ್ಮಲ್ಲಿ ಜಗಳಾಡುವುದು ನಿಶ್ಚಿತವೆಂದೂ, ಅನಂತರ ಅವು ಕೆಳಗೆ ಬೀಳುವುವೆಂದೂ ನಂಬಿಕೊಳ್ಳುತ್ತಾನೆ. ಅವು ಕೆಳಗೆ ಬಿದ್ದ-ಕೂಡಲೇ ಅವುಗಳನ್ನು ಹಿಡಿಯಬೇಕೆಂದೂ ನಿರ್ಧರಿಸುತ್ತಾನೆ.

ವಿದುರನು ತಾನು ಸ್ವತಃ ಈ ಕತೆಯನ್ನು ಅಧಿಕಾರವಾಣಿಯಿಂದ ನುಡಿದ ಹಿರಿಯರಿಂದ ಆ ಮೊದಲೇ ಕೇಳಿರುವುದಾಗಿ ಹೇಳಿದ್ದರಿಂದ ಈ ನಿದರ್ಶನಕ್ಕೆ ಮಹತ್ವವಿದೆ. ಅಂದರೆ 'ಮಹಾಭಾರತ'ದ ಹಿಂದಿನ ಕಾಲದಿಂದಲೂ ಈ ನಿದರ್ಶನಗಳು ಇದ್ದುವು ಎಂಬುದು ತಿಳಿದುಬರುತ್ತದೆ.

ಪ್ರಪಂಚದ ನೀತಿಕತೆಗಳ ತುಲನಾತ್ಮಕ ಅಭ್ಯಾಸವನ್ನು ಮೊಟ್ಟಮೊದಲು ಮಾಡಿದ ಬೆನ್‌ಫೇಯು ಈ ನಿದರ್ಶನದ ಮೌಲ್ಯವನ್ನು ಬಹಳ ಬೇಗ ಅರಿತುಕೊಂಡು, ನಿದರ್ಶನಕ್ಕೂ ನೀತಿಕತೆಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಿರುವನು. ಈ ನಿದರ್ಶನವು 'ಪಂಚತಂತ್ರ'ದಲ್ಲಿ ಎರಡನೆಯ ತಂತ್ರದ ಮುಖ್ಯ ಕಥೆಯೊಂದಾಗಿ ಬಹು ವಿವರವಾಗಿ ಬಂದಿರುವುದು ಗಮನಾರ್ಹವಾಗಿದೆ. ಈ ವರೆಗೆ ತಿಳಿದ ಮಟ್ಟಿಗೆ, ಉದ್ಯೋಗಪರ್ವದಲ್ಲಿರುವ ಈ ನಿದರ್ಶನವು ಅತ್ಯಂತ ಪ್ರಾಚೀನವಾಗಿದ್ದು, ಸಾಹಿತ್ಯ ರೂಪವನ್ನು ಪಡೆದುದರಲ್ಲಿ ಪ್ರಪ್ರಥಮವಾಗಿದೆಯೆಂದೂ ಹೇಳಬೇಕು.


ಉದ್ಯೋಗಪರ್ವದಲ್ಲಿ ವಿದುರನು ಹೇಳಿದ ಇನ್ನೊಂದು ನಿದರ್ಶನವೂ ಮಹತ್ವದ್ದಾಗಿದೆ. ಅದು ಪರ್ವತದಲ್ಲಿ ಕಂಡ ಜೇನುತುಪ್ಪದ ಬಗ್ಗೆ ಇದೆ (V. ೬೨; ೨೧.೬). ಎರಡು ನಿದರ್ಶನಗಳನ್ನು ಕೊಟ್ಟ ಮೇಲೆ ವಿದುರನು ಧೃತರಾಷ್ಟ್ರನಿಗೆ ತಾನು ಕಂಡುದನ್ನೇ ಹೇಳುತ್ತಿರುವುದಾಗಿ ಹೇಳಿ ಈ ಕತೆಯನ್ನು ವಿವರಿಸಿರುವನು.

ಹಾಗೂ ಹಲವು ಬೇಟೆಗಾರರ ಜೊತೆಗೆ ಒಂದು ಪರ್ವತಕ್ಕೆ ಹೋಗಿದ್ದನು. ಅವರೆಲ್ಲರೂ ಕೂಡಿ ಹೊರಟಾಗ, ಒಂದೆಡೆಗೆ ಜೇನುತುಪ್ಪವನ್ನೂ ಹಾಗೂ ಅಮರತ್ವವನ್ನು ತಂದುಕೊಡುವ ಆ ಜೇನುತುಪ್ಪವನ್ನು ವಿಷಪೂರಿತ ಸರ್ಪಗಳು ಕಾಯುತ್ತಿರುವುದನ್ನು ಅವರು ಕಂಡರು. ಬೇಟೆಗಾರರಿಗೆ ಆ ಜೇನುತುಪ್ಪವನ್ನು ಪಡೆಯಬೇಕೆಂಬ ಮಹದಾಸೆಯುಂಟಾಯಿತು. ತಮಗೆ ಬರಬಹುದಾದ ದುರ್ಘಟನೆಯ ಬಗ್ಗೆ ಚಿಂತಿಸದೆ ಅವರು ಆ ಜೇನುತುಪ್ಪಕ್ಕೆ ಕೈ ಹಾಕಿದಾಗ, ಅವರೆಲ್ಲರೂ ಸರ್ಪಗಳಿಂದ ಕೊಲ್ಲಲ್ಪಟ್ಟರು.

ಧೃತರಾಷ್ಟ್ರ ಮತ್ತು ದುರ್ಯೋಧನರೂ ತಮ್ಮ ಕೃತಿಗಳಿಂದ ಇದೇ ರೀತಿಯ ದುರ್ಮರಣಕ್ಕೆ ಈಡಾಗುವುದಾಗಿ ತಿಳಿಸಲು ವಿದುರನು ಈ ನಿದರ್ಶನವನ್ನು ಕೊಟ್ಟಿರುವನು.

ಎರಡು ಕಾರಣಗಳಿಗಾಗಿ ಈ ನಿದರ್ಶನ ಅತ್ಯಂತ ಮಹತ್ವದ ಸ್ಥಾನ ಪಡೆದಿರುವುದು: (೧) ಈ ಮೊದಲು ವಿದುರನು ಹೇಳಿದ ನಿದರ್ಶನಗಳೆರಡೂ ಸ್ವಂತ ಅನುಭವದ ಅಭಿವ್ಯಕ್ತಿಗಳಾಗಿರದೆ, ಎರಡನೆಯವರಿಂದ ಕೇಳಿ ತಿಳಿಕೊಂಡವುಗಳಾಗಿವೆ. ಈ ನಿದರ್ಶನವು ಮಾತ್ರ ವಿದುರನ ಅನುಭವವೇ ಆಗಿದೆಯೆಂಬುದು ವಿಶೇಷ ಸಂಗತಿಯಾಗಿದೆ. ನಿದರ್ಶನಗಳಿಗೂ ಜೀವನದಲ್ಲಿಯ ಅನುಭವಗಳಿಗೂ ಸಾಮೀಪ್ಯವಿದೆಯೆಂದೂ ಸ್ವಾನುಭವದಿಂದಲೇ ನಿದರ್ಶನಗಳು ಹೇಳಲ್ಪಟ್ಟಿವೆಯೆಂಬುದೂ ಇದರಿಂದ ಸೂಚಿತವಾಗುವುದು. ಸಾಹಿತ್ಯ ಜೀವನದ ಸ್ವಾನುಭವದ ಅಭಿವ್ಯಕ್ತಿಯಾಗಿರುವುದರಿಂದ ನಿದರ್ಶನವು ಸಾಹಿತ್ಯದ ಒಂದು ರೂಪ ಪಡೆದುಕೊಂಡಿದೆ.

(೨) 'ಬಾವಿಯಲ್ಲಿ ಬಿದ್ದ ಮನುಷ್ಯ' ಎಂಬ ನಿದರ್ಶನವು ಸ್ತ್ರೀಪರ್ವದಲ್ಲಿ ಬರುತ್ತದೆ (XI-೫; ೨.೨೨). ಈ ನಿದರ್ಶನಕ್ಕೆ ಮೂಲ ವಸ್ತು ವಿದುರನು ಹೇಳಿದ ಸ್ವಾನುಭವದ ನಿದರ್ಶನವೇ ಆಗಿದೆಯೆಂದು ಕಂಡುಬರುತ್ತದೆ, 'ಬಾವಿಯಲ್ಲಿ ಬಿದ್ದ ಮನುಷ್ಯ' ಸುಪ್ರಸಿದ್ಧ; ಅಲ್ಲದೆಯೆ ಈ ನಿದರ್ಶನಕ್ಕೆ ಸಾಕಷ್ಟು ಪರಂಪರೆಯೂ ಇದೆ. ಇದರಿಂದ ವಿವಿಧ ನೀತಿಕತೆಗಳೂ ನಿರ್ಮಿತವಾಗಿವೆ. ಸಂಸಾರದಲ್ಲಿ ಅನಂತ ಸುಖವನ್ನು ಪಡೆಯಬೇಕಾದರೆ ಒಂದು ಹನಿ ಜೇನು ಅವಶ್ಯ; ಆ ಜೇನನ್ನು ದೊರಕಿಸಬೇಕಾದರೆ



ಬಹು ಕಷ್ಟ; ಇದರ ರೂಪಕವನ್ನು ಕೊಡಲು, ಜೀವನದ ಅಮೂಲ್ಯ ತತ್ವವನ್ನು ವ್ಯಕ್ತಮಾಡಲು ಈ ನಿದರ್ಶನವನ್ನು ಅನೇಕ ದಾರ್ಶನಿಕರು, ಸಾಹಿತಿಗಳು ಉಪಯೋಗಿಸಿದ್ದಾರೆ. ಸಂಸಾರಚಕ್ರದ ಒಂದು ರೂಪಕದ ಚಿತ್ರವು ಈ ನಿದರ್ಶನದಿಂದಲೇ ಬಂದಿದೆ. ಹೀಗಾಗಿ ಈ ನಿದರ್ಶನಕ್ಕೆ ವಿಶ್ವಸಾಹಿತ್ಯದಲ್ಲಿಯೇ ಮಾನ್ಯತೆಯುದೆಯೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಮಾಡಿದ್ದಾರೆ.

ಇವಲ್ಲದೆ ಇನ್ನೂ ಹಲವಾರು ನಿದರ್ಶನಗಳು 'ಮಹಾಭಾರತ'ದಲ್ಲಿ ಇರುವವು. ಸಭಾಪರ್ವದಲ್ಲಿಯೇ ವಿದುರನು ಹೇಳಿದ ಎರಡು ನಿದರ್ಶನಗಳು ಹಾಗೂ ಶಿಶುಪಾಲನು ಹೇಳಿದ ಎರಡು ನಿದರ್ಶನಗಳು ಉಂಟು. ಈ ಕೆಲವು ನಿದರ್ಶನಗಳ ವಿಷಯ ಹೀಗೆ ಇದೆ:

ಶಿಶುಪಾಲನು ಭುಲಿಂಗ ಪಕ್ಷಿಯ ಬಗ್ಗೆ ಹೇಳಿರುವನು. ಭುಲಿಂಗ ಪಕ್ಷಿಯು ಸಿಂಹದ ಹಲ್ಲುಗಳ ಹತ್ತಿರವಿದ್ದ ಆಹಾರವನ್ನು ಪಡೆಯುತ್ತಿತ್ತು; ಉಳಿದ ಪಕ್ಷಿಗಳಿಗೆ ದುಡುಕಬಾರದೆಂದು ಉಪದೇಶಿಸುತ್ತಿತ್ತು. ಒಮ್ಮೆ ತಾನೇ ದುಡುಕಿ ನಾಶವಾಯಿತು. ಭೀಷ್ಮನ ಗತಿಯೂ ಭುಲಿಂಗ ಪಕ್ಷಿಯಂತೆ ಆಗುವುದು ಎಂದು ಶಿಶುಪಾಲ ವಿವರಿಸಿರುವನು. (೨.೩೮; ೧೭ಬ). ವಸುಭಾಗನ 'ಪಂಚತಂತ್ರ'ವಾದ 'ತಂತ್ರೋಪಾಖ್ಯಾನ'ದಲ್ಲಿಯ 'ಹುಲಿಯೂ ಪಕ್ಷಿಯೂ' ಎಂಬ ಕತೆ ಇದೇ ರೀತಿಯದಾಗಿದೆ.

ಕೌರವರಿಗೂ ಪಾಂಡವರಿಗೂ ಜೂಜಿನಾಟ ನಡೆದಾಗ ದ್ರವ್ಯದಾಶೆ ಮಾಡಬಾರದೆಂದು ವಿದುರನು ಬಂಗಾರದ ಮೊಟ್ಟೆಯಿಡುವ ಪಕ್ಷಿಯ ಬಗ್ಗೆ ಒಂದು ನಿದರ್ಶನವನ್ನು ಕೊಟ್ಟಿರುವನು. ವಸುಭಾಗಭಟ್ಟನ 'ಪಂಚತಂತ್ರ'ವಾದ 'ತಂತ್ರೋಪಾಖ್ಯಾನ'ದಲ್ಲಿಯೂ ಬರುವ ಜೀವಂಜೀವಕ ಪಕ್ಷಿಯ ಕತೆ ಇದೇ ತೆರನಾಗಿ ನಿರೂಪಿತವಾಗಿದೆ.

ಕರ್ಣಪರ್ವದಲ್ಲಿ ಶಲ್ಯನು ಕರ್ಣನಿಗೆ ಗರ್ವಪಡಬೇಡವೆಂದು ಸೂಚಿಸುವಾಗ 'ಹಂಸವೂ ಕಾಗೆಯೂ' ಎಂಬ ನಿದರ್ಶನವನ್ನು ಹೇಳಿರುವನು. ಹಂಸ ಮತ್ತು ಕಾಗೆ ಇವುಗಳಲ್ಲಿ ಹಾರುವ ಸ್ಪರ್ಧೆ ನಡೆಯುತ್ತದೆ(VIII.೨೮; ೯–೫೪). ಥಾಯ್‌ಲೆಂಡ್ ದೇಶದ 'ಪಂಚತಂತ್ರ'ವಾದ 'ತಂತ್ರಾಯಿ'ಯಲ್ಲಿ ಯೂ ಪಕ್ಷಿ ಪ್ರಕರಣದಲ್ಲಿ ಇಂಥದೇ ಕತೆ ಬರುತ್ತದೆ.

ಭೋಜನು ನಿದರ್ಶನಗಳಲ್ಲಿರುವ ನೀತಿಯ ಅಂಶಕ್ಕೆ ಹೆಚ್ಚು ಮಹತ್ವ ಕೊಟ್ಟಿರುವನು. ನಿದರ್ಶನವು 'ಕಾರ್ಯಾಕಾರ್ಯ ನಿರೂಪಣಪರಂ' ಎಂದು ಭೋಜನು ತೋರಿಸಿಕೊಟ್ಟಿರುವನು. ಪ್ರೊ. ರಾಘವನ್‌ರಂಥ ವಿದ್ವಾಂಸರೂ ಈ ಅಭಿಪ್ರಾಯವನ್ನು ಒಪ್ಪಿಕೊಂಡಿರುವರಲ್ಲದೇ, ನಿದರ್ಶನವು ನೀತಿಕತೆ ಹಾಗೂ ದೃಷ್ಟಾಂತ ಕತೆ ಇವುಗಳಿಗೆ ಮೂಲವಾಗಿದೆಯೆಂದೂ ಈ ಕತೆಗಳ ಲಕ್ಷಣಗಳು ನಿದರ್ಶನಗಳಲ್ಲಿ ಕಂಡುಬರುವವೆಂದೂ ಹೇಳಿರುವರು.

ನಿದರ್ಶನಗಳು ಪ್ರತ್ಯೇಕವಾಗಿರುವ ಕತೆಯಂತೆ, ಮೊದಲು ನಿರೂಪಿತವಾಗಿರದೇ, ಯಾವುದೋ ಒಂದು ಸಂಗತಿಯ ವಿವರಣೆಯಲ್ಲಿ ಅವು ಕೂಡಿಕೊಂಡು ಬಂದಿವೆ. ಸಂಕ್ಷಿಪ್ತತೆ, ನೀತಿ ನಿದರ್ಶನ, ಸಾಮಾಜಿಕ ರೀತಿಯ ನಿರೂಪಣೆ, ಸ್ವಾನುಭವ ಮುಂತಾದವು ನಿದರ್ಶನದ ವಿಶೇಷ ಲಕ್ಷಣಗಳಾಗಿವೆ.

ಮೊದಲು ಬರುವುದು ನಿದರ್ಶನ. 'ಮಹಾಭಾರತ'ದಲ್ಲಿ ಬಂದಿರುವುದರಿಂದ ಇದಕ್ಕೆ ಸಾಹಿತ್ಯದ ಲಕ್ಷಣಗಳೂ ಕೂಡಿಕೊಂಡಿದ್ದು, ನಿದರ್ಶನ ಸಾಹಿತ್ಯದಲ್ಲಿ ಸ್ಥಾನ ಪಡೆದಿದೆ. ಧಾರ್ಮಿಕ ಉಪದೇಶಕ್ಕಾಗಿ ಬೌದ್ಧರು ಜಾತಕ ಕಥೆಗಳನ್ನು, ಜೈನರು ಆರಾಧನಾ ಮೊದಲಾದ ಕತೆಗಳನ್ನು ಪ್ರಚುರ ಪಡಿಸಿದರು. ನಿದರ್ಶನದ ಲಕ್ಷಣಗಳೇ, ಈ ಕತೆಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿವೆ. ಮೂರನೆಯದಾಗಿ ಹಾಗೂ ಕೊನೆಯದಾಗಿ 'ಪಂಚತಂತ್ರ'ದಲ್ಲಿ ಬರುವ ನೀತಿಕತೆ, ಅನೇಕ ವಿವಿಧ ಲಕ್ಷಣಗಳಿಂದ ಕೂಡಿಕೊಂಡು ಈ ನೀತಿಕಥೆ ಸಾಹಿತ್ಯದಲ್ಲಿ ತನ್ನದೇ ಸ್ಥಾನವನ್ನು ಪಡೆದಿದೆ. ಆದರೆ ಈ ನೀತಿಕತೆಗಳ ಮೂಲ 'ನಿದರ್ಶನ'ದಲ್ಲಿದೆಯೆಂಬುದನ್ನು ಗಮನಿಸುವಂತಿದೆ

✡

(ನೆರವು : ಜಾರ್ಜ್ ಅರ್ಪೊಲಾ, ಜೆನ್‌ಫೇ ಹಾಗೂ ಪ್ರೊ. ರಾಘವನ್ ಇವರು ಈ ವಿಷಯವನ್ನು ಕುರಿತು ಬರೆದ ಲೇಖನಗಳು)

ಪದಾರ್ಥ ಚಿಂತಾಮಣಿ

— ೪ —

ಪ್ರತಿಭಟನಾ ಚಳುವಳಿಗಳ ಈ ಯುಗದಲ್ಲಿ ಚಳುವಳಿಗಳು ಪ್ರಯೋಗಿಸುವ ನಾನಾ ಉಪಾಯಗಳ ಅಭಿವ್ಯಕ್ತಿಗಾಗಿ ಶಬ್ದಗಳು ಇಲ್ಲಿಯೇ ಹುಟ್ಟುತ್ತಿವೆ, ಹೊರಗಿನಿಂದಲೂ ಬರುತ್ತಿವೆ. ಇತರ ಭಾಷೆಯಲ್ಲಿ ಅಲ್ಲದಿದ್ದರೂ ಜನರ ಬಾಯಲ್ಲಿ ಗಟ್ಟಿಯಾಗಿ ನೆಲೆಯೂರಿದ ಶಬ್ದಗಳಲ್ಲಿ ಬಾಯ್‌ಕಾಟ್ ಎಂಬುದೊಂದು. ಬಾಯಿ ಕಟ್ಟು ಎನ್ನುವ ಕನ್ನಡ ಶಬ್ದವನ್ನೇ ಹೋಲುವ ಈ ಪದ ಬಂದುದು ಇಂಗ್ಲೀಷಿನಿಂದ. ಅದರ ಅರ್ಥ ಬಹಿಷ್ಕರಿಸುವುದು. ಈ ಶಬ್ದದ ಕಥೆ ಸ್ವಾರಸ್ಯವಾದದ್ದು. ಕ್ಯಾಪ್ಟನ್ ಬಾಯ್‌ಕಾಟ್ ಎಂಬೊಬ್ಬ ನಿವೃತ್ತ ಇಂಗ್ಲಿಷ್ ಸೈನ್ಯಾಧಿಕಾರಿಯನ್ನು ಐರ್ಲೆಂಡಿನ ಮೇಯೋ ಕೌಂಟಿಯಲ್ಲಿ ಗೇಣಿ ವಸೂಲಿಗೆ ನೇಮಿಸಲಾಗಿತ್ತು. ಅವನು ರೈತ ಕೆಲಸಗಾರರನ್ನು ಬಹಳ ನಿರ್ದಯದಿಂದ ನೆರವೇರಿಸಿದನೆಂದರೆ ತಾಳಲಾರದ ಗೇಣಿದಾರರು ಸೇರಿ ಆ ಊರಿನಲ್ಲಿ ಅವನಿಗೆ ಅನ್ನ ನೀರು ಕೂಡ ಸಿಗದ ಹಾಗೆ ಸಂಪೂರ್ಣ ಬಹಿಷ್ಕರಿಸಿದರು. ಬಡಪಾಯಿ ಕಡೆಗೆ ಕೆಲಸ ಬಿಟ್ಟು ಇಂಗ್ಲೆಂಡಿಗೆ ಮರಳಿದನು. ಇದು ನಡೆದದ್ದು ೧೮೮೦ ರ ಇಸವಿಯಲ್ಲಿ. ಅಂದಿನಿಂದ ಸಂಘಟಿತ ಸಂಪೂರ್ಣ ಬಹಿಷ್ಕಾರಕ್ಕೆ ಬಾಯ್‌ಕಾಟನ ಹೆಸರೇ ಬಿದ್ದುಬಿಟ್ಟಿತು.

ಚಳುವಳಿ ಯುಗದಲ್ಲಿ ಕನ್ನಡ ಭಾಷೆಯೊಳಗೆ ಸೇರಿದ ಇನ್ನೊಂದು ಶಬ್ದ **ಹರತಾಳ.** ಆದರೆ ಇದು ಹೊಸದಾಗಿ ರಾಜ್ಯಕ್ಕಾಗಿ ನಿರ್ಮಿಸಿದ ಶಬ್ದವಲ್ಲ. ಹಿಂದಿನ **ಹಡತಾಲ** ಅಥವಾ **ಹರತಾಲ** ಎಂಬುದು ಕನ್ನಡದಲ್ಲಿ ಪರಿಚಿತವಾಗಿದೆ. ಹಿಂದಿಯಲ್ಲಿ ಅದು ಪೇಟೆಯನ್ನು ಮುಚ್ಚುವುದು ಮತ್ತು ಕೆಲಸ ನಿಲ್ಲಿಸುವುದು (= ಮುಷ್ಕರ) ಎಂಬ ಎರಡೂ ಅರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತದೆ. ಅದರ ಮೂಲ ಬಹುಶಃ **ಹಟ್ಟ** ಅಥವಾ **ಹಾಟಿ** (= ಅಂಗಡಿ ಪೇಟೆ) + ತಾಲ (= ಬೀಗ) ಎಂದಿದ್ದು ನಂತರದಲ್ಲಿ ಕೆಲಸಗಾರರ ಮುಷ್ಕರಕ್ಕೂ ಅನ್ವಯಿಸಲ್ಪಟ್ಟಿರಬಹುದು.

ಕಾರ್ಮಿಕರು ಪ್ರತಿಭಟನಾರ್ಥ ಕೆಲಸ ನಿಲ್ಲಿಸುವುದಕ್ಕೆ ಕನ್ನಡದಲ್ಲಿ **ಸಂಪು** ಮತ್ತು **ಮುಷ್ಕರ** ಎಂಬೆರಡು ಶಬ್ದಗಳು ರೂಢಿಗೆ ಬಂದಿವೆ. ಮೊದಲನೆಯದು ದೇಸೀ ಕನ್ನಡವಾಗಿ ಎರಡನೆಯದು ತೀರ ಸಂಸ್ಕೃತವಾಗಿ ಕಾಣಿಸುತ್ತದೆ. ಆದರೆ ಎರಡೂ ಸರಿಯಲ್ಲ. **ಸಂಪು** ಮರಾಠಿಯಿಂದ ಆಮದಾದದ್ದು. **ಮುಷ್ಕರ** ಸಂಸ್ಕೃತದಿಂದ ಉತ್ಪತ್ತಿಯಾದದ್ದಲ್ಲ. (**ಮುಷ್ಕ** ಶಬ್ದ ಸಂಸ್ಕೃತದಲ್ಲಿದ್ದರೂ ಅದರ ಅರ್ಥ ಪುರುಷರ ಅಂಡ ಎಂದು). **ಮುಷ್ಕರ** ತೆಲುಗು–ತಮಿಳು–ಮಲಯಾಳಗಳಿಂದ ಬಂತು. ಅಲ್ಲಿ ಅದಕ್ಕೆ ಮೊಂಡಾಟಿಕೆ, ಹಟ, ಧಾರ್ಷ್ಟ್ಯ ಇತ್ಯಾದಿ ಅರ್ಥ. ಮುಷ್ಕರವೂ ಒಂದು ಮೊಂಡುತನವಲ್ಲವೆ?

ತೀರ ಈಚೆಗೆ ಬಂದದ್ದು **ಘೇರಾವ್.** ಮೊದಲ ನೋಟಕ್ಕೇ ಕಾಣುವಂತೆ ಇದು ಹಿಂದೀ ಶಬ್ದ. ಅದರ ಅರ್ಥ **ಮುತ್ತಿಗೆಹಾಕು** ಎಂದು.

ಚಳವಳಿಗಳಲ್ಲಿ ಕೇಳಿಬರುವ ಘೋಷಣೆಗಳಲ್ಲಿ ಮುಖ್ಯವಾದವು **ಜಿಂದಾಬಾದ್** ಮತ್ತು **ಮುರ್ದಾಬಾದ್** ಇವುಗಳನ್ನು ಕ್ರಮವಾಗಿ ಇಂಗ್ಲಿಷಿನ long live (ಚಿರಕಾಲ ಬಾಳಲಿ!) down with (ಹಾಳಾಗಲಿ !) ಎಂಬುದಕ್ಕೆ ಸಮಾನಾರ್ಥದಲ್ಲಿ ಬಳಸುತ್ತಾರೆ. ಎರಡೂ ಹಿಂದುಸ್ತಾನಿ ಮೂಲಕ ಬಂದ ಪಾರಸೀ ಮೂಲದ ಪದಗಳು. **ಜಿಂದಾ** ಅಂದರೆ ಬದುಕಿರುವ (= ಸಂಸ್ಕೃತ **ಜೀವಂತ**) ಮತ್ತು **ಮುರ್ದಾ** ಅಂದರೆ ಸತ್ತ (= ಸಂ. ಮೃತ).

— **ಪಾವೆಂ.**

ಇದುವೇ ಜೀವ ಇದು ಜೀವನ

ನಮ್ಮ ತಾಲೂಕಿನಲ್ಲಿ ಆಗ ಕೆಲ ಜನ ನಿರುದ್ಯೋಗಿ ಪದವೀಧರರಿಗೆ ಯುವಜನ ಸೇವಾ ವಿಭಾಗದಲ್ಲಿ ೧೫೦ ರೂಪಾಯಿ ಸ್ಟೈಪೆಂಡಿನ ಕೆಲಸ ದೊರಕಿತ್ತು. ನಾನೂ ಅವರಲ್ಲೊಬ್ಬಳು. ಶಾಲೆಗಳಿಗೆ ಹೋಗಿ ಹೆಚ್ಚು ಗೈರು ಹಾಜರಾಗುವ ವಿದ್ಯಾರ್ಥಿಗಳ ಹೆಸರು-ವಿಳಾಸ ಪಡೆದು, ಆಯಾ ವಿದ್ಯಾರ್ಥಿಯ ಮನೆಗೆ ಹೋಗಿ ತಂದೆ-ತಾಯಿಗಳಿಗೆ, ವಿದ್ಯಾರ್ಥಿಗೆ ತಿಳಿ ಹೇಳಿ ಮನವೊಲಿಸಿ ನಿಯಮಿತವಾಗಿ ಶಾಲೆಗೆ ಹೋಗಬೇಕೆಂದು ಹೇಳುವುದು ನಮ್ಮ ಪಾಲಿಗೆ ಬಂದಿದ್ದ ಕೆಲಸ.

ನಾನು ನನ್ನ ಸ್ನೇಹಿತೆಯೊಂದಿಗೆ ಒಬ್ಬ ವಿದ್ಯಾರ್ಥಿಯ ಮನೆಗೆ ಹೋದೆ. ಹುಡುಗನ ತಂದೆ-ಸ್ವಲ್ಪ ವಯಸ್ಸಾದವರು—ನಾವು ಯಾರು, ಏಕೆ ಬಂದಿದ್ದೇವೆ ಮುಂತಾಗಿ ವಿಚಾರಿಸಿದರು. ನಾವು ಇದ್ದ ಸಂಗತಿ ಹೇಳಿದೆವು. ನಂತರ "ನಿಮ್ಮ ಮಗ ಬಹಳ ಗೈರು ಹಾಜರಾಗುತ್ತಾನೆ ಹೀಗಾದರೆ ಕಲಿಯದೇ ಆತನ ಭವಿಷ್ಯ ಕೆಟ್ಟು ಹೋಗುತ್ತದೆ. ದನ ಕಾಯಲು ಕಳಿಸಿದರ ಆತ ಅವಿದ್ಯಾವಂತ, ದನಗಾಹಿಯಾಗಿ ಉಳಿದು ನಿಮ್ಮ ಮನೆತನ ಬಡತನದಲ್ಲೇ ಉಳಿಯಲು ಕಾರಣನಾಗುತ್ತಾನೆ. ಸ್ವಲ್ಪ ಯೋಚಿಸಿ ನೋಡಿ" ಅಂದೆವು.

ಯಜಮಾನರು ಯೋಚಿಸತೊಡಗಿದರು. ನಮ್ಮ ಮಾತುಗಳು ಅವರ ಮನಸ್ಸನ್ನು ವಿಚಾರ ಮಾಡಹಚ್ಚಿರಬೇಕೆಂಬ ಸಂತೋಷ ನಮಗೆ. ಐದು ನಿಮಿಷ ಹಾಗೇ ವಿಚಾರಿಸಿ ಅವರು, "ಸರಿ. ನೀವು ಹೇಳುವುದೇನೋ ಸರಿ. ಆದರೆ ನೀವು ಎಷ್ಟು ಕಲಿತಿದ್ದೀರಿ?" ಎಂದು ಕೇಳಿದರು. ಹೆಮ್ಮೆಯಿಂದ "ಬಿ.ಎ." ಅಂದೆವು. "ಬಿ.ಎ. ನೀವು ಬಹಳ ಖರ್ಚು ಮಾಡಿ ಈ ಪರೀಕ್ಷೆ ಪಾಸಾದ್ರಿ. ನಿಮಗೆ ಎಂಥ ನೌಕರಿ ಸಿಕ್ಕಿದೆ? ನಿಮಗೆಷ್ಟು ಸಂಬಳ?" ಎಂದೆಲ್ಲ ಕೇಳಿ ನಮ್ಮ ಉತ್ಸಾಹದ ಬಲೂನನ್ನು ಟುಸ್ಸೆನಿಸುವುದರ ಜತೆಗೆ ನಾವೇ ನಮ್ಮ ಭವಿಷ್ಯದ ಬಗ್ಗೆ ಯೋಚಿಸುವಂತೆ ಮಾಡಿದರು.

ನಾವು ಹೊರಡುತ್ತಿದ್ದ ಹಾಗೇ ಹೇಳಿದರು- "ನಮ್ಮ ಹುಡುಗ ಬರಿ ದನ ಕಾಯುವುದಿಲ್ಲ. ನಮ್ಮ ಹೊಲದ ಉಸ್ತುವಾರಿಯನ್ನು ಈಗಿನಿಂದಲೇ ನೋಡಿಕೊಳ್ಳುತ್ತಿದ್ದಾನೆ."

— ಪುಷ್ಪಲತಾ

ಒಮ್ಮೆ ರಜೆಯಲ್ಲಿ ನಮ್ಮ ಹಳ್ಳಿಗೆ ಹೋದಾಗ 'ರಾಮಾಯಣ' ನಾಟಕ ನಡೆದಿತ್ತು. ಅಂದಿನ ನಾಟಕ ಯಶಸ್ವಿಯಾಗಿ ಸಾಗಿತ್ತು. ಪಾತ್ರ ನಿರ್ವಹಣೆಯೂ ಚೆನ್ನಾಗಿತ್ತು. ಅದರಲ್ಲೂ ಹನುಮಂತನ ಪಾತ್ರ ಎಲ್ಲರ ಗಮನವನ್ನೂ ಸೆಳೆಯುವಂತಿತ್ತು.

ಒಂದು ದೃಶ್ಯದಲ್ಲಿ ಹನುಮಂತನ ಮೇಲೆ ಕೋಪಗೊಂಡ ರಾವಣನು ಆರ್ಭಟಿಸುತ್ತ ತನ್ನ ಸೇವಕನಿಗೆ ಆಜ್ಞೆ ಮಾಡಿದನು. "ಆ ಕಪಿಯನ್ನು ಹಿಡಿದು ತಂದು ಅದರ ಬಾಲಕ್ಕೆ ಬೆಂಕಿಯನ್ನು ಹಚ್ಚಿರಿ" ಎಂದು. ಸರಿ! ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಬೇಕೆಂದು ಬಂದ ಸೇವಕನು ದಿಗ್ಭ್ರಾಂತನಾಗಿ ನಿಂತುಬಿಟ್ಟನು.

ನಡೆದ ಸಂಗತಿಯೆಂದರೆ ದೃಶ್ಯ ಬದಲಿಸುವ ಸಮಯದಲ್ಲಿ ನಾಟಕದ ಪರದೆಗೆ ಸಿಕ್ಕು ಪರದೆಯೊಂದಿಗೆ ಹನುಮಂತನ ಉದ್ದನಾದ ಬಾಲ ಕಿತ್ತು ಮೇಲಕ್ಕೆ ಹೋಗಿಬಿಟ್ಟಿತ್ತು. ಅದುವರೆಗೆ ಮಗ್ನರಾಗಿ ಕುಳಿತು ನೋಡುತ್ತಿದ್ದ ಪ್ರೇಕ್ಷಕ ವರ್ಗವೆಲ್ಲ ನಗೆಯ

ಕಡಲಿನಲ್ಲಿ ಮುಳುಗಿಹೋಗಿತ್ತು. "ಬಾಲವಿಲ್ಲದ ಹನುಮಂತ"ನನ್ನು ಗುರುತಿಸುವುದು ಪ್ರೇಕ್ಷಕರಿಗಷ್ಟೇ ಏಕೆ ರಾವಣನ ಸೇವಕನ ಪಾತ್ರಧಾರಿಗೂ ಕೂಡ ಕಷ್ಟವಾಗಿರಬೇಕು!

— ನಲಿನಿ ಜೋಶಿ

ನನ್ನ ಜೊತೆ ಭಿಲಾಯಿಯಲ್ಲಿ ಕೆಲಸಕ್ಕೆ ಸೇರಿದ ಕನ್ನಡಿಗ ಮಿತ್ರರೊಬ್ಬರಿಗೆ ಬೇರೆ ಭಾಷೆಗಳನ್ನು ಕಲಿಯುವ ಆಸೆ. ನಾವು ವಾಸಿಸಿದ್ದ ಹಾಸ್ಟೆಲಿನಲ್ಲಿ ಬೇರೆ ಭಾಷೆ ಮಾತನಾಡುವ ಸಹೋದ್ಯೋಗಿಗಳು ಇದ್ದರು. ತುಸುತುಸುವಾಗಿ ಇತರ ಭಾಷಾಭ್ಯಾಸ ಮಾಡಬೇಕೆಂದುಕೊಂಡರು, ನನ್ನ ಮಿತ್ರ. ಸರಿ, ಪಕ್ಕದ ರೂಮಿನಲ್ಲಿರುವ ಬಂಗಾಲಿಯೊಬ್ಬನ ಬಳಿಗೆ ಹೋಗಿ "ನಿಮ್ಮ ಹೆಸರೇನು? ಎನ್ನಲು ನಿಮ್ಮ ಭಾಷೆಯಲ್ಲಿ ಏನನ್ನಬೇಕು?" ಎಂದು ಇಂಗ್ಲೀಷಿನಲ್ಲಿ ವಿಚಾರಿಸಿದ. ಯಾವುದೋ ಕೆಲಸದಲ್ಲಿ ನಿರತನಾಗಿದ್ದ ಆತ ತಲೆ ಎತ್ತಿ "ಬೀಕೆ ಡೊಕಾನಿಯಾ" ಎಂದು ಉತ್ತರಿಸಿದ. ತಾನು ಬಂಗಾಲಿಯ ವಾಕ್ಯವೊಂದನ್ನು ಕಲಿತೆನೆಂದು ನನ್ನ ಸ್ನೇಹಿತನಿಗೆ ಸಂತೋಷವೋ ಸಂತೋಷ. ಇಡೀ ದಿನ ಬಹಳ ಉತ್ಸಾಹದಿಂದ ಕಂಡಕಂಡವರನ್ನೆಲ್ಲಾ 'ಬೀಕೆ-ಡೊಕಾನಿಯಾ?' ಎಂದು ಕೇಳಲು ಪ್ರಾರಂಭಿಸಿದ. ಅಷ್ಟರಲ್ಲಿ ನಮಗಿಬ್ಬರಿಗೂ ಸ್ನೇಹಿತನಾದ ಮತ್ತೊಬ್ಬ ಬಂಗಾಲಿ ಬಂದು, "ಅದೇನು ಬೀಕೆ ಡೊಕಾನಿಯಾನ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದೀಯಾ, ಅವನು ರೂಂ. ನಂ. ೪೪ ರಲ್ಲಿರುವುದು ನಿನಗೆ ತಿಳಿಯದೇ? ಏನಾಗಬೇಕಾಗಿತ್ತು?" ಎಂದಾಗ ನನ್ನ ಅನ್ಯಭಾಷಾಭ್ಯಾಸಾಸಕ್ತ ಮಿತ್ರ ಪೆಚ್ಚಾದ. ಕೆಲ ಹೊತ್ತಿನ ನಂತರ ನಮ್ಮ ಬಂಗಾಲಿ ಸ್ನೇಹಿತ ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತನ್ನ ಹೆಸರನ್ನೆ ತಿಳಿಸಿದ್ದನೇ ಹೊರತು 'ನಿಮ್ಮ ಹೆಸರೇನು?' ಎನ್ನುವುದಕ್ಕೆ ಬಂಗಾಲಿಯಲ್ಲಿ ಏನನ್ನುತ್ತಾರೆ ಎನ್ನುವುದನ್ನಲ್ಲ ಎಂದು ಗೊತ್ತಾಯಿತು. ಇದನ್ನು ಕೇಳಿದ ನಮಗೆಲ್ಲರಿಗೂ ತಡೆಯಲಾರದಷ್ಟು ನಗೆ ಬಂತು. 'ಬೀಕೆ ಡೊಕಾನಿಯಾ' ಕೂಡ ಎಲ್ಲರೊಡನೆ ಹಾಸ್ಯದ ಹೊನಲಿನಲ್ಲಿ ಒಂದಾದ.

— ಟಿ. ಕೆ. ನಾಗಭೂಷಣ

ಎರಡು ವರ್ಷಗಳ ಹಿಂದಿನ ಮಾತು. ನಾನು ಮುಂಬಯಿಯ ಗೋರೆಗಾಂವ ಕನ್ನಡ ಲೈಬ್ರರಿಯ ಸದಸ್ಯನಾಗಿದ್ದೆ. ಒಂದು ಸಂಜೆ ಲೈಬ್ರರಿಗೆ ಹೋಗಿದ್ದೆ. ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಆರಿಸಿ, ಲೈಬ್ರರಿಯನ್ ಕಡೆಗೆ ಹೋಗಿದ್ದೆ. ಅಷ್ಟರಲ್ಲಿ ಪರಿಚಿತರೊಬ್ಬರು ಅಲ್ಲಿ ಬಂದರು. ನನ್ನ ಕೈಯಲ್ಲಿ ಇರುವ ಕಾದಂಬರಿಯನ್ನು ನೋಡಿ, "ಅರೆ! ನಿಮಗೆ ಬೇರಾವ ಪುಸ್ತಕವೂ ಸಿಗಲಿಲ್ಲವೇ? ಕಾರಂತರೇನೋ ದೊಡ್ಡ ಸಾಹಿತಿಗಳಿರಬಹುದು. ಆದರೆ ಈ 'ಮೂಕಜ್ಜಿಯ ಕನಸುಗಳು' ಮೂಕರೇ ಓದಬೇಕಾದ ಬೋರ್ ಕಾದಂಬರಿ. ನಾನು ಮೊದಲ ಎರಡು ಪುಟಗಳನ್ನೋದಿ, ಕಾದಂಬರಿಯನ್ನು ಮುಚ್ಚಿಟ್ಟೆ!" ಎಂದು ಹೇಳಿ, ನನಗೆ ಬೇರೆ ಮಾತನಾಡಲು ಅವಕಾಶ ಕೊಡದೆ, ಬೇರೊಂದು ಕಾದಂಬರಿಯನ್ನು ಆರಿಸಿ, ನನ್ನ ಕೈಗಿತ್ತರು! ಕಳೆದ ವರ್ಷ ಮತ್ತೆ ಆ ಲೈಬ್ರರಿಯಲ್ಲಿ ಅವರ ಭೇಟಿಯಾಯಿತು. ಅವರ ಕೈಯಲ್ಲಿ 'ಮೂಕಜ್ಜಿಯ ಕನಸುಗಳು' ಕಂಡು ವಿಸ್ಮಿತನಾಗಿ, "ಈ ಬೋರ್ ಕಾದಂಬರಿ ಏಕೆ ಆರಿಸಿದಿರಿ?" ಎಂದೆ. ಅವರಿತ್ತ ಉತ್ತರ ಇದು: "ಈ ಕಾದಂಬರಿಗೇ, ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದ್ದು ನಿಮಗೆ ಗೊತ್ತಿಲ್ಲವೇ? ಕಳೆದ ಮೂರು ತಿಂಗಳಿನಿಂದ ಈ ಕಾದಂಬರಿಗಾಗಿಯೇ ಕಾದಿದ್ದೆ. ಇಂದು ಸಿಕ್ಕಿತು!"

— ಎಂ. ರಮೇಶ ಕಾಮತ್



ಮೂಲ: **ಖುಷ್ವಂತಸಿಂಗ್**   ಅನುವಾದ: **ಡಾ. ರಾ.ಯ.ಧಾರವಾಡಕರ**

"ಇದು ನಮ್ಮ ಕಾಳಿಂಗನಿಗೆ," ಎಂದನು ಗಂಗಾರಾಮ್ ಹಾಲನ್ನು ಸಾಸರಿನಲ್ಲಿ ಸುರುವುತ್ತ. "ನಾನು ಇದನ್ನು ಪ್ರತಿರಾತ್ರಿ ಗೋಡೆಯ ಬದಿಗಿನ ಪೋರಿನ ಹತ್ತಿರ ಇಡತ್ತೇನೆ. ಬೆಳಗಾಗುವುದರಲ್ಲಿಯೇ ಹಾಲು ಕುಡಿದಾಗಿರುತ್ತದೆ."

"ಬಹುಶಃ ಬೆಕ್ಕು ಹಾಲನ್ನು ಕುಡಿಯುತ್ತಿರಬೇಕು, ಗಂಗಾರಾಮ್"–ಎಂದು ನಾವು ಚಿಕ್ಕಮಕ್ಕಳು ಗೇಲಿಮಾಡಿದೆವು.

"ಬೆಕ್ಕು!! ಛೀ!" ಎಂದು ಉದ್ಗರಿಸಿದ ಹೇಯಾಸಿಕೆಯಿಂದ ಗಂಗಾರಾಮ್. "ಯಾವ ಬೆಕ್ಕೂ ಆ ಪೋರಿನ ಸನಿಹಕ್ಕೆ ಹೋಗುವುದಿಲ್ಲ. ಅಲ್ಲಿ ನಮ್ಮ ಕಾಳಿಂಗ ಸರ್ಪವಿದೆ. ನಾನು ಅದಕ್ಕೆ ಹಾಲನ್ನು ಕೊಡುವವರೆಗೆ, ಅದು ಈ ಮನೆಯಲ್ಲಿ ಯಾರನ್ನೂ ಕಚ್ಚುವುದಿಲ್ಲ. ನೀವು ಇಲ್ಲಿ ಎಲ್ಲಿ ಬೇಕಾದಲ್ಲಿ ಹೋಗಿ ಬರಿಗಾಲಿನಿಂದ ಆಟವಾಡಬಹುದು."

ನಮಗೆ ಗಂಗಾರಾಮನಿಂದ ಯಾವ ಉತ್ತೇಜನವೂ ಬೇಕಿರಲಿಲ್ಲ. "ನೀನು ಮೂರ್ಖ ಮುದುಕ ಬ್ರಾಹ್ಮಣ" ಎಂದು ನಾನೆಂದೆ. "ಹಾವುಗಳು ಹಾಲನ್ನು ಕುಡಿಯುವುದಿಲ್ಲವೆಂದು ನಿನಗೆ ಗೊತ್ತಿಲ್ಲವೇ? ಅದು ಕುಡಿದರೂ, ಪ್ರತಿನಿತ್ಯ ಒಂದು ಸಾಸರಿನಷ್ಟು ಹಾಲನ್ನಂತೂ ಎಂದಿಗೂ ಕುಡಿಯದು. ಹಾವು ಅನೇಕ ದಿನಗಳಲ್ಲಿ ಒಂದು ಸಲ ಮಾತ್ರ ಕುಡಿಯುತ್ತದೆಂದು ನಮ್ಮ ಮೇಷ್ಟರು ಹೇಳಿದ್ದಾರೆ. ಆದೇ ಆಗ ಕಪ್ಪೆಯನ್ನು ನುಂಗಿದ್ದ ಕೇರೆ ಹಾವನ್ನು ನಾವು ನೋಡಿದ್ದೇವೆ. ಅದು ನುಂಗಿದ ಆ ಕಪ್ಪೆ ಚೆಂಡಿನಂತೆ ಆ ಹಾವಿನ ಗಂಟಲಿನಲ್ಲಿಯೇ ಸಿಕ್ಕು ಬಿದ್ದಿತ್ತು. ಆ ಕಪ್ಪೆ ಕರಗಿ, ಬಾಲದವರೆಗೆ ಹೋಗಬೇಕಾದರೆ, ಎಷ್ಟೋ ದಿವಸಗಳೇ ಹಿಡಿದವು. ಇಂಥ ಹತ್ತಾರು ಹಾವುಗಳನ್ನು ರಸಾಯನದಲ್ಲಿ ಹಾಕಿ ನಮ್ಮ ಪ್ರಯೋಗಶಾಲೆಯಲ್ಲಿ ಇಟ್ಟಿದ್ದಾರೆ. ಅಷ್ಟೇ ಏಕೆ, ಎರಡೂ ಕಡೆಗೆ ಹರಿದಾಡುವ ಒಂದು ಹಾವನ್ನು ಕಳೆದ ತಿಂಗಳಷ್ಟೆ ನಮ್ಮ ಮೇಷ್ಟರು ಒಬ್ಬ ಹಾವಡಿಗನಿಂದ ಕೊಂಡರು. ಅದಕ್ಕೆ ಎರಡೂ ಕಡೆಗೆ ತಲೆ ಇದ್ದವು. [illegible] ಕಾಜಿನ ಭರಣಿಯಲ್ಲಿ ಹಾಕಿದಾಗ ನೀನು ಅದನ್ನು ನೋಡಬೇಕಿತ್ತು, ಗಂಗಾರಾಮ್. ಪ್ರಯೋಗಶಾಲೆಯಲ್ಲಿ ಖಾಲಿ ಭರಣಿ ಇರದ್ದರಿಂದ, ಅದನ್ನು ಇನ್ನೊಂದು ಮುದಿ ಹಾವಿದ್ದ ಭರಣಿಯಲ್ಲಿಯೇ ಮೇಷ್ಟರು ಹಾಕಿದರು. ಈ [illegible] ಹಾವಿನ ಎರಡೂ ಬದಿಗಳನ್ನು [illegible] ಹಿಡಿದು, ಅದನ್ನು ಭರಣಿಯಲ್ಲಿ ಹಾಕಿ ಮೇಷ್ಟರು ಭರಣಿಯ ಬಾಯನ್ನು ಮುಚ್ಚಿದರು. ಬಾಯನ್ನು ಮುಚ್ಚುವುದೊಂದೇ ತಡ, ಈ ಹೊಸ ಹಾವು ಅಲ್ಲಿದ್ದ ಬಡಪಾಯಿ ಮುದಿ ಹಾವನ್ನು [illegible] ತಿರುವಿ ಕಚ್ಚುತ್ತ ಕೋಲಾಹಲವನ್ನೆ [illegible]."

"ಶಾಂತಂ ಪಾಪಂ, ಶಾಂತಂ ಪಾಪಂ"ಎನ್ನುತ್ತ ಗಂಗಾರಾಮ್ ಹೆದರಿಕೆಯಲ್ಲಿ ತನ್ನ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡ. "ಈ ಪಾಪಕ್ಕಾಗಿ [illegible] ಒಂದು ಸಲ ದಂಡವನ್ನು [illegible] ಕೊಡಲೇಬೇಕಾಗುತ್ತದೆ" ಎಂದು ಗುಣುಗುಟ್ಟಿದ.

ಗಂಗಾರಾಮನ ಕೂಡ ವಾದಿಸಿ [illegible] ಎಲ್ಲ ಹಿಂದುಗಳಂತೆಯೇ, ಅವನೂ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣರಾದ ಬ್ರಹ್ಮ, [illegible] ಮಹೇಶ್ವರರಲ್ಲಿ ವಿಶ್ವಾಸವಿಟ್ಟಿದ್ದ. ಇವರಲ್ಲಿ [illegible] ವಿನ ಬಗ್ಗೆಯಂತೂ, ಅವನಿಗೆ ಅಪಾರವಾದ [illegible]. ವಿಷ್ಣು ಪರಮಾತ್ಮನಿಗೆ ಗೌರವ ಸಲ್ಲಿಸಲು ಅವನು ಪ್ರತಿದಿನ ಮುಂಜಾವು ತನ್ನ [illegible] ಮೇಲೆ ಇಂಗ್ಲಿಷ್ V ಆಕಾರದ ನಾಮವನ್ನು ಶ್ರೀಗಂಧದಿಂದ ಲೇಪಿಸಿಕೊಳ್ಳುತ್ತಿದ್ದ. ಗಂಗಾರಾಮ್ ಬ್ರಾಹ್ಮಣನಾಗಿದ್ದರೂ, ಅವನಿಗೆ ಓದು ಬರಹ ಬರುತ್ತಿರಲಿಲ್ಲ. ಅವನಲ್ಲಿ ವಿಪರೀತ [illegible] ನಂಬಿಕೆಗಳಿದ್ದವು. ಅವನಿಗೆ ಪರಮಾತ್ಮನ [illegible]

[illegible] ಹಾವೇ ಇರಲಿ. ಚೇಳೇ ಇರಲಿ. [illegible] ಕ್ಷುದ್ರ ಜಂತುವೇ ಇರಲಿ–ಅದೆಲ್ಲವೂ ಪವಿತ್ರವೆಂಬ ಭಾವನೆಯಿದ್ದಿತು. ಅವನು ಯಾವ ಹಾವು ಅಥವಾ ಚೇಳನ್ನು ಕಂಡ ಕೂಡಲೇ, ನಾವು ಎಲ್ಲಿ ಅದನ್ನು ಕೊಲ್ಲುತ್ತೇವೆಯೋ ಎಂಬ ಭಯದಿಂದ ಅದನ್ನು ಆಚೆ ಸರಿಸಿ ಪಾರುಮಾಡಲು ಯತ್ನಿಸುತ್ತಿದ್ದ. ಎಷ್ಟೋ ಸಲ, ನಾವು ನಮ್ಮ ಬ್ಯಾಡ್ಮಿಂಟನ್ ರ್‍ಯಾಕೆಟ್ಟಿನಿಂದ ಹೊಡೆದು ಗಾಯ ಗೊಳಿಸಿದ ಕಡಜೀರಿಗೆ ಹುಳಗಳ ರೆಕ್ಕೆಗಳನ್ನು ಮೃದುವಾಗಿ ಸೀವಿ, ಅವನ್ನು ಸರಿಮಾಡಲು ಯತ್ನಿಸುತ್ತಿದ್ದ. ಹೀಗೆ ಮಾಡುವಲ್ಲಿ, ಆ ಕಡಜೀರಿಗೆಗಳು ಎಷ್ಟೋ ಸಲ ಅವನಿಗೆ ಕಚ್ಚಿದ್ದೂ ಉಂಟು. ಹೀಗಾದರೂ, ಅವನ ನಂಬುಗೆ ಅಲುಗಾಡಿರಲಿಲ್ಲ. ಪ್ರಾಣಿ [illegible]ಯಂಕರವಿದ್ದಷ್ಟೂ, ಅದರ ಬಗೆಗೆ ಗಂಗಾರಾಮನಿಗೆ ಹೆಚ್ಚಿನ ಭಕ್ತಿಭಾವವಿದ್ದಿತು. ಅಂತೆಯೇ, ಹಾವುಗಳ ಬಗ್ಗೆ ಅವನಿಗೆ ಅಷ್ಟು ನಿಸ್ಸೀಮವಾದ ಭಕ್ತಿ. ಅದರಲ್ಲಿಯೂ ಕರಿನಾಗವಾದ ಕಾಳಿಂಗ ಸರ್ಪದಲ್ಲಿಯಂತೂ ಅವನಿಗೆ ಹೇಳಿಮುಗಿಸದ ಭಕ್ತಿ.

"ನಿನ್ನ ಕಾಳಿಂಗ ನಮ್ಮ ಕಣ್ಣಿಗೆ ಬಿದ್ದರೆ, ಅದನ್ನು ಕೊಂದುಹಾಕಿ ಬಿಡುತ್ತೇವೆ" ಎಂದು ನಾವೆಂದೆವು.

"ನಾನು ನಿಮ್ಮನ್ನು ಹಾಗೆಂದೂ ಮಾಡಗೊಡುವುದಿಲ್ಲ. ಕಾಳಿಂಗ ಈಗ ನೂರು ತತ್ತಿಗಳನ್ನು [illegible] ನೀವು ಕಾಳಿಂಗನನ್ನು ಕೊಂದರೆ, [illegible] ತತ್ತಿಗಳೆಲ್ಲವೂ ಮರಿನಾಗರಹಾವುಗಳಾಗುತ್ತವೆ. [illegible]ಯ ತುಂಬೆಲ್ಲ ಅವೇ ಹರಿದಾಡುತ್ತವೆ. ಆಗ, ನಿವೇನು ಮಾಡುವಿರಿ?" ಎಂದ ಗಂಗಾರಾಮ್.

"ಆಗ, ನಾವು ಅವನ್ನೆಲ್ಲ ಒಂದೊಂದಾಗಿ ಹಿಡಿದು, ಜೀವಂತವಾಗಿ ಬೊಂಬಾಯಿಗೆ ಕಳಿಸುತ್ತೇವೆ. ಹಾಲು ಹಿಂಡುವಂತೆ, ಅದರ ಮುಖವನ್ನು ಹಿಂಡಿ, ಹಾವು ಕಡಿತಕ್ಕೆ ಅಲ್ಲಿ ವಿಷವನ್ನು ತೆಗೆಯುತ್ತಾರೆ. ಒಂದು ಜೀವಂತ ನಾಗರಹಾವನ್ನು ಹಿಡಿದು, ನಾವು ಅಲ್ಲಿ ಕಳಿಸಿದರೆ, ಅವರು ನಮಗೆ ಎರಡು ರೂಪಾಯಿ ಕೊಡುತ್ತಾರೆ. ಈಗ ನಿನ್ನ ನೂರು ತತ್ತಿಗಳೂ ಮರಿಯಾದರೆ, ನಮಗೆ ಒಂದು ಹೊಡೆತಕ್ಕೆ ಎರಡೂ ನೂರು ರೂಪಾಯಿಗಳು ದೊರಕುತ್ತವೆ" ಎಂದೆವು ನಾವು.

"ಹಾಲನ್ನು ಹಿಂಡುತ್ತಾರೆಯೇ? ಹಾಗಿದ್ದರೆ, ನಿಮ್ಮ ಡಾಕ್ಟರರಿಗೆ ಮೊಲೆಗಳಿರಬೇಕು. ಯಾವ ಹಾವಿಗೂ ಮೊಲೆಯಿದ್ದದ್ದನ್ನು ನಾನು ಕಂಡಿಲ್ಲ. ಏನೇ ಆದರೂ, ಈ ಕಾಳಿಂಗನ ಗೊಡವೆಗೆ ಹೋಗಬೇಡಿರಿ. ಅದು ಫಣಿಯರ್. ಹೆಡೆನಾಗ ಅದಕ್ಕೆ ದೊ...ಡ್ಡ... ಹೆಡೆಯಿದೆ. ನಾನೇ ಅದನ್ನು ನೋಡಿದ್ದೇನೆ. ನಮ್ಮ ಕಾಳಿಂಗ ಮೂರು ಮಾರು ಉದ್ದವಿದೆ. ಅದರ ಹೆಡೆಯೋ...!" ಎನ್ನುತ್ತ ಗಂಗಾರಾಮ್ ಕಣ್ಣು ಮುಚ್ಚಿ, ಭಾವಪರವಶನಾಗಿ, ತನ್ನ ಅಂಗೈಗಳನ್ನು ಅಗಲವಾಗಿ ತೋರಿಸುತ್ತಾ, ತಲ್ಲೀನನಾದವನಂತೆ ತನ್ನ ತಲೆಯನ್ನು ಅತ್ತಿತ್ತ ತೂಗಿದ. "ಎಳೆ ಬಿಸಿಲಿರುವಾಗ ಈ ನಮ್ಮ ಕಾಳಿಂಗ ಹಸಿರು ಹುಲ್ಲಿನ ಮೇಲೆ ಬಿಸಿಲು ಕಾಯಿಸುವುದನ್ನು ನೋಡಬೇಕು" ಎಂದು ಕಣ್ಣರಳಿಸಿ ಗಂಗಾರಾಮ್ ಹೇಳಿದ.

"ಇದೇ ನೀನು ಎಂಥ ಸುಳ್ಳುಗಾರ ಎಂಬುದನ್ನು ಹೇಳುತ್ತದೆ. ಈ ನಿನ್ನ ಹಾವು ಫಣಿಯರ್ ಎಂದು ಹೇಳುತ್ತೀ. ಫಣಿಯರ್ ಗಂಡುನಾಗ. ಗಂಡು ನಾಗ ನೂರು ತತ್ತಿಗಳನ್ನು ಹಾಕಲು ಸಾಧ್ಯವೇ ಇಲ್ಲ. ಗಂಗಾರಾಮ್, ನೀನೇ ನೂರು ತತ್ತಿಗಳನ್ನು ಹಾಕಿರಬೇಕು" ಎಂದು ಪುನಃ ನಾವು ಅವನನ್ನು ಚುಚ್ಚಿ ನುಡಿದೆವು.

ನಮ್ಮ ಗುಂಪೆಲ್ಲ ಬೊಳ್ಳ್ಳ್ ಎಂದು ನಕ್ಕಿತು. "ಅವು ಗಂಗಾರಾಮನ ತತ್ತಿಗಳಾಗಿರಬೇಕು. ಆ ತತ್ತಿಗಳಿಂದ ಶೀಘ್ರವೇ ನೂರು ಗಂಗಾರಾಮರು ಹೊರಬರಲಿದ್ದಾರೆ".

ಗಂಗಾರಾಮ್ ಸೋತು ಮುಖ ಕೆಳಗೆ ಹಾಕಿದ. ಯಜಮಾನರೆದುರು ಯಾವಾಗಲೂ ಮುಖ ಕೆಳಗೆ ಹಾಕಲೇಬೇಕಾದುದೇ ಸೇವಕನ ದೈವ. ಆದರೆ, ಮನೆಯ ಹುಡುಗರು ಈ ರೀತಿ ತನ್ನನ್ನು ಗೇಲಿಮಾಡುವುದು ಗಂಗಾರಾಮನಿಗೂ ಅತಿಯಾಯಿತು. ಹೊಸ ವಿಚಾರದ ಗಾಳಿ ತುಂಬಿದ ಈ ಹುಡುಗರು ಎಂದೂ ಧರ್ಮಗ್ರಂಥಗಳನ್ನೋದಿದವಲ್ಲ. ಅದೂ ಹೋಗಲಿ, ಮಹಾತ್ಮಾ ಗಾಂಧಿಯವರು ಅಹಿಂಸೆಯ ಬಗ್ಗೆ ಹೇಳಿದ್ದನ್ನು ಸಹ ತಿಳಕೊಂಡವಲ್ಲ. ಅವರಿಗೆ ಗೊತ್ತಿದ್ದದ್ದು, ಹಕ್ಕಿಗಳನ್ನು ಕೊಲ್ಲುವ ತುಪಾಕಿ, ಹಾವುಗಳನ್ನು ಮುಳುಗಿಸಲು ರಸಾಯನದಿಂದ ತುಂಬಿದ ಭರಣಿ. ಜೀವಿಗಳ ಪಾವಿತ್ರ್ಯದ ಬಗೆ ತನಗಿರುವ

ಶ್ರದ್ಧೆಯನ್ನು ಗಂಗಾರಾವ್ ಎಂದೂ ಬಿಡಲಾರೆ. ದೇವರ ಸೃಷ್ಟಿಯಲ್ಲಿ ಹಾವು ಅತಿ ನೀಚವಾದದ್ದರಿಂದ, ಅವುಗಳಿಗೆ ಆಹಾರ ಹಾಕಿ ಅವುಗಳನ್ನು ಸಂರಕ್ಷಿಸುವುದು ತನ್ನ ಕರ್ತವ್ಯವೆಂದು ಗಂಗಾರಾವ್ ಬಲವಾಗಿ ನಂಬಿದ್ದ. ಅವುಗಳನ್ನು ಕೊಲ್ಲದೆ ಅವನ್ನು ನೀವು ಪ್ರೀತಿಸಿದರೆ, ನೀವು ಗೆದ್ದಂತೆಯೇ ಎಂದು ಅವನ ಅಭಿಪ್ರಾಯ.

ಗಂಗಾರಾವ್ ಏನು ರುಜುವಾತು ಪಡಿಸ [illegible] ವರೆಗೂ ಸ್ಪಷ್ಟವಾಗಲಿಲ್ಲ. ಒಟ್ಟು ಪ್ರತಿರಾತ್ರಿ, ಆ ಹೋರಿನ ಹತ್ತಿರ ಒಂದು ಸಾಸರು ಹಾಲನ್ನಿಟ್ಟರೆ ಅದು ಮರುದಿನ ಮುಂಜಾವು ಎನ್ನುವುದರಲ್ಲಿಯೇ ಮಾಯವಾಗುತ್ತದೆಂಬುದನ್ನು ಮಾತ್ರ ಅವನು ರುಜುವಾತುಪಡಿಸಿದ್ದ.

ಒಂದು ದಿವಸ ಬೆಳಗಿನಲ್ಲಿ ನಾವು ಗಂಗಾರಾಮನ ಕಾಳಿಂಗ ಸರ್ಪವನ್ನು ಕಂಡೆವು. ಅದರ ಹಿಂದಿನ ರಾತ್ರಿ ಮಾನ್ಸೂನ್ ಗಾಳಿ ರಭಸದಿಂದ ಬೀಸಿ, ಇಡೀ ರಾತ್ರಿ ಮಳೆಯಾಗಿದ್ದಿತು. ಬೇಸಗೆಯ ಸೂರ್ಯನ ಪ್ರಖರ ಶಾಖಕ್ಕೆ ಒಣಗಿ [illegible] ತ್ತಿತ್ತು. ಅಲ್ಲಲ್ಲಿ ನೀರು ನಿಂತಲ್ಲೆಲ್ಲ ಕಪ್ಪೆ ವಟಗುಡುತ್ತಿದ್ದವು. ಕೆಸರು ನೆಲದ ತುಂಬೆಲ್ಲ ಮಳೆಹುಳುಗಳು ಕಂಡುಬರುತ್ತಿದ್ದವು. ಕುತಣೆ ತುಪ್ಪಳದ ಪಕ್ಷಿಗಳು ಅಲ್ಲಲ್ಲಿ ಜಿಗಿದಾಡುತ್ತಿದ್ದವು. [illegible] ಅಮೃತಬಿಂದುಗಳನ್ನು ಇನ್ನೂ [illegible] ಮುರಿದು [illegible] ಗಂಗಾರಾಮನ ಕಾಳಿಂಗ [illegible] ದಲ್ಲೆಲ್ಲ ಹೊಕ್ಕಿತ್ತು. ಅದಕ್ಕಾಗಿ ಆ ಕರಿ ನಾಗ [illegible] ಹಸಿರುಗಾವಲಿನ [illegible] ಕೊಂಡಿತ್ತು. ಸೂರ್ಯನ ಬೆಳಕಿನಲ್ಲಿ ಅದರ ಕರೀ ಹೆಡೆ ಹೊಳೆಯುತ್ತಿತ್ತು. ಅದು ನಿಜವಾಗಿ ಭಯಂಕರವಾದ ಸರ್ಪ! ಸುಮಾರು ಆರು ಅಡಿ ಉದ್ದ ಮತ್ತು ನನ್ನ ಮುಂಗೈಯಷ್ಟು ದಪ್ಪ!

"ಕರೀ ಕಾಳಿಂಗ ಸರ್ಪ! ಅದನ್ನು ಹಿಡಿಯೋಣ" [illegible].

ಆ ನಾಗರಹಾವಿಗೆ ಪಾರಾಗಿ ಹೋಗಲು ಅವಕಾಶವೇ ಇರಲಿಲ್ಲ. ನೆಲವೆಲ್ಲ ಮಳೆಯಿಂದ ನೆನೆದು ಜಾರಿಕೆಯಾಗಿತ್ತು. ಎಲ್ಲ ಹೋರು ಪೊದರುಗಳೂ ಗಟಾರುಗಳೂ ನೀರಿನಿಂದ ತುಂಬಿಬಿಟ್ಟಿದ್ದವು. ಅಲ್ಲದೆ, ಈ ಕಾಳಿಂಗನಿಗೆ ಸಹಾಯ ಮಾಡಲು ಗಂಗಾರಾಮನೂ ಮನೆಯಲ್ಲಿರಲಿಲ್ಲ.

ಆ ಕಾಳಿಂಗಕ್ಕೆ ತನಗೊದಗಿದ ಗಂಡಾಂತರದ ಸೂಚನೆ ಒದಗುವುದರೊಳಗಾಗಿ ನಾವೆಲ್ಲರೂ [illegible] ಕೋಲುಗಳನ್ನು ಹಿಡಿದುಕೊಂಡು, ಅದನ್ನು ಸುತ್ತುವರೆದೆವು. ಕಾಳಿಂಗ ನಮ್ಮನ್ನು ಕಂಡಕೂಡಲೇ, ಅದರ ಕಣ್ಣುಗಳು ಬೆಂಕಿಯ ಕಿಡಿಗಳಾದುವು. ಭುಸಗುಡುತ್ತ, ತನ್ನ ನಾಲಗೆಯನ್ನು ಸಿಳಿಸಿಳಿ ಹೊರಗೆ ತೆಗೆಯುತ್ತ ಅದು ಸುತ್ತಲೂ ಕ್ರೂರವಾಗಿ ನೋಡಿತು. ಸೆಟೆದುನಿಂತ ಹೆಡೆ, ಬುಸುಗುಡುವ ಬಾಯಿ, ಸಿಳಿಸಿಳಿಸುವ ನಾಲಗೆ, ಉಬ್ಬಿದ ಮೈ, ಆ ಹಾವು ಭಯಂಕರವಾಗಿ ಕಾಣುತ್ತಿತ್ತು. ಅದು ಕೇವಲ ತನ್ನ ಬಾಲದ ಮೇಲೆ ನಿಂತು, ನಮ್ಮನ್ನೆಲ್ಲ ನುಂಗುತ್ತದೋ



ಏನೋ ಅನ್ನುವಂತೆ, ದುರುಗುಟ್ಟಿ ನೋಡುತ್ತಿತ್ತು. ಕ್ಷಣಾರ್ಧದಲ್ಲಿಯೇ, ಅದು ಮಿಂಚಿನ ವೇಗದಲ್ಲಿ ಸಮೀಪದ ಬಾಳೆಯ ಬನವನ್ನು ಹೊಕ್ಕಿತು.

ನೆಲವೆಲ್ಲ ಕೆಸರಾಗಿದ್ದರಿಂದ ಅದಕ್ಕೆ ವೇಗವಾಗಿ ಹೋಗಲು ಆಗದೆ, ಜಾರಿತು...ಅದು ಐದು ಗಜ ಹೋಗಿರಬಹುದು, ಅಷ್ಟರಲ್ಲಿಯೇ ಒಂದು ಕೋಲು ಠಪಾರ್ ಎಂದು ಅದರ ಬೆನ್ನಿನ ಮೇಲೆ ಬಿದ್ದಿತು. ಅದರ ನಡು ಮುರಿಯಿತು. ಫಟಾಫಟ್ ಫಟಾಫಟ್ ಹತ್ತೆಂಟು ಹೊಡೆತಗಳು ಬಿದ್ದು, ಅದನ್ನು ಅಪ್ಪಚ್ಚಿ ಮಾಡಿದವು. ಅದರ ರಕ್ತ ಹಾಗು ಸುತ್ತಲಿನ ಕೆಸರು ಎಲ್ಲ ಕಡೆಗೂ ಚಿಲ್ ಎಂದು ಚಿಮ್ಮಿತು. ಆದರೆ ಅದರ ಹೆಡೆಗೆ ಮಾತ್ರ ಹೊಡೆತ ತಾಕಿರಲಿಲ್ಲ.

"ಅದರ ಹೆಡೆಗೆ ಹೊಡೆಯಬೇಡಿರಿ. ಅದನ್ನು ನಮ್ಮ ಶಾಲೆಗೆ ತೆಗೆದುಕೊಂಡು ಹೋಗೋಣ", ಎಂದು ನಮ್ಮಲ್ಲೊಬ್ಬ ಕಿರುಚಿದ.

ಅದರಂತೆಯೇ, ನಾವು ಒಂದು ಕೋಲನ್ನು ಅದರ ಹೊಟ್ಟೆಯ ಕೆಳಗೆ ಹಾಕಿ, ಅದರ ತುದಿ ಯಿಂದ ಆ ಕರಿ ನಾಗವನ್ನು ಎತ್ತಿದೆವು. ಅದನ್ನು ಒಂದು ದೊಡ್ಡ ಬಿಸ್ಕಿಟ್ ಡಬ್ಬದಲ್ಲಿ ಹಾಕಿ, ಆ ಡಬ್ಬಕ್ಕೆ ಮುಚ್ಚಳವನ್ನು ಕಟ್ಟಿದೆವು. ಆ ದಿನ ಡಬ್ಬವನ್ನು ಮಂಚದ ಕೆಳಗೆ ಅಡಗಿಸಿಟ್ಟೆವು.

ಗಂಗಾರಾಮ್ ತನ್ನ ಹಾಲಿನ ಸಾಸರನ್ನು ಇಡುವ ರಾತ್ರಿಯ ಸಮಯಕ್ಕೆ ನಾನು ಅವನ ಸುತ್ತಲೇ ಸುತ್ತಾಡಿದೆ.

"ಇಂದು ರಾತ್ರಿ ನೀನು ಕಾಳಿಂಗನಿಗೆ ಹಾಲನ್ನೆ ಒಯ್ಯುವುದಿಲ್ಲವೇ ಗಂಗಾರಾಮ್?" ಎಂದು ನಾನು ಕೇಳಿದೆ.

"ಒಯುತ್ತೇನೆ" ಎಂದ ಗಂಗಾರಾಮ್ ಸಿಡಿ ಮಿಡಿಯಿಂದ, "ಹೋಗು, ನೀನು ಮಲಗಿಕೊ ಹೋಗು" ಎಂದ.

ಅವನಿಗೆ ಈ ವಿಷಯದ ಬಗ್ಗೆ ಚರ್ಚೆ ಬೇಕಾ ಗಿರಲಿಲ್ಲ.

"ನಿನ್ನ ಕಾಳಿಂಗನಿಗೆ ಇನ್ನೇನೂ ಹಾಲು ಬೇಕಾ ಗಲಿಕ್ಕಿಲ್ಲ" ಎಂದು ನಾನೆಂದೆ.

ಗಂಗಾರಾಮ್ ತಡೆದ.

"ಯಾಕೆ?"

"ಏನೂ ಇಲ್ಲ; ಈಗ ತಿನ್ನಲು ಅದಕ್ಕೆ ಬೇಕಾ ದಷ್ಟು ಕಪ್ಪೆಗಳಿವೆ ಸುತ್ತುಮುತ್ತು. ನಿನ್ನ ಹಾಲಿನ ಕಿಂತ ಅವು ಹೆಚ್ಚು ರುಚಿಯಿರಬಹುದು. ನೀನು ನಿನ್ನ ಹಾಲಿನಲ್ಲಿ ಸಕ್ಕರೆಯನ್ನು ಹಾಕುತ್ತೀಯಾ?" ಎಂದೆ.

ಮರುದಿವಸ ಹಾಲು ಹಾಗೇ ಇದ್ದ ಸಾಸರನ್ನೆ ಗಂಗಾರಾಮ್ ಹಾಗೆಯೇ ವಾಪಸು ತಂದ. ಅವನ ಮುಖ ಮ್ಲಾನವಾಗಿತ್ತು. ಅದರಲ್ಲಿ ಯಾವುದೋ ಸಂಶಯದ ಹೊಗೆಯಾಡುತ್ತಿದ್ದಿತು.

"ಹಾವುಗಳು ಹಾಲಿನಕಿಂತ ಕಪ್ಪೆಗಳನ್ನು ಹೆಚ್ಚು ಮೆಚ್ಚುತ್ತವೆ ಎಂದು ನಾನು ನಿನಗೆ ಹೇಳಿಲ್ಲವೇ?" ಎಂದು ನಾನೆಂದೆ...

ನಾವು ಮುಂಜಾನೆ ನಾಷ್ಟಾ ಮಾಡುವಾಗ ಗಂಗಾರಾಮ್ ನಮ್ಮ ಸುತ್ತಲೇ ಸುಳಿದಾಡಿದ. ಅಷ್ಟರಲ್ಲಿಯೇ ನಮ್ಮ ಶಾಲೆಯ ಬಸ್ಸು ಬಂದಿತು. ನಾವು ಆ ಬಿಸ್ಕಿಟ್ ಡಬ್ಬವನ್ನು ಹೊತ್ತುಕೊಂಡು ಬಸ್ಸಿನಲ್ಲಿ ನುಗ್ಗಿದೆವು. ಬಸ್ಸು ಚಲಿಸುತ್ತಲೇ, ನಾವು ಆ ಡಬ್ಬವನ್ನು ಗಂಗಾರಾಮನ ಕಡೆಗೆ ತೋರಿಸುತ್ತ,

"ನಿನ್ನ ಕಾಳಿಂಗ ಇಲ್ಲಿದೆ ಗಂಗಾರಾಮ್, ಈ ಡಬ್ಬದಲ್ಲಿ ಸುರಕ್ಷಿತ. ಅದನ್ನು ನಾವು ಸ್ಪಿರಿಟಿನಲ್ಲಿ ಹಾಕುತ್ತೇವೆ" ಎಂದೆವು.

ಗಂಗಾರಾಮನ ನಾಲಿಗೆ ಒಣಗಿ ಹೋಗಿತ್ತು. ಹೊರಡುತ್ತಿದ್ದ ಬಸ್ಸಿನ ಕಡೆಗೆ ಅವನು ದೈನ್ಯವದನ ನಾಗಿ ನೋಡುತ್ತಿದ್ದ...

ಶಾಲೆಯಲ್ಲೆಲ್ಲ ಉತ್ಸಾಹವೇ ಉತ್ಸಾಹ! ನಾವು ನಾಲ್ಕು ಜನ ಅಣ್ಣತಮ್ಮಂದಿರು ನಮ್ಮ ಗಟ್ಟಿಗತನಕ್ಕೆ ಹೆಸರಾಗಿದ್ದೆವು. ಅದನ್ನು ಈ ಸಲ ಪುನಃ ರುಜುವಾತುಪಡಿಸಿದ್ದೆವು.

"ಕಾಳಿಂಗ, ಕರಿ ನಾಗ!"

"ಆರು ಅಡಿ ಉದ್ದ!!"

"ಹೆಡೆನಾಗ—ಫಣಿಯರ್!!!"

ನಾವು ಆ ಡಬ್ಬವನ್ನು ನಮ್ಮ ಸೈನ್ಸ್ ಮೇಷ್ಟ ರಿಗೆ ಅರ್ಪಿಸಿದೆವು.

ಡಬ್ಬ ಮೇಷ್ಟರ ಮೇಜಿನ ಮೇಲಿತ್ತು. ಅವರು ಅದರ ಮುಚ್ಚಳವನ್ನು ತೆಗೆದು ನೋಡುವರು, ನಮ್ಮ ಜಾಣತನವನ್ನು ಪ್ರಶಂಸಿಸುವರು ಎಂದು ದಾರಿ ಕಾಯುತ್ತಿದ್ದೆವು. ಮೇಷ್ಟರು ನಮ್ಮ ಕಡೆಗೆ ಏನೂ ಲಕ್ಷ್ಯವಿಲ್ಲದವರಂತೆ ನುಡಿದರು. ಕೆಲವು ಪ್ರಮೇ

ಯುಗಳನ್ನು ನಮಗೆ ಬಿಡಿಸಲು ಹೇಳಿದರು. ಹಾಗೆ ಹೇಳಿದವರೇ, ತಾನೇ ಹೋಗಿ ಒಂದು ಇಕ್ಕಳವನ್ನು ಹಾಗು ಒಂದು ವಿಷದ ಹಾವನ್ನು ಹಾಕಿದ್ದ ಭರಣಿಯನ್ನು ತಂದರು. ಮೇಷ್ಟರು ನಿಧಾನವಾಗಿ ಹೂಂಕರಿಸುತ್ತ, ನಾವು ಮುಚ್ಚಕ್ಕೆ ಕಟ್ಟಿದ್ದ ಹುರಿಯನ್ನು ಸಾವಕಾಶವಾಗಿ ಬಿಚ್ಚತೊಡಗಿದರು…

ಹುರಿ ಬಿಚ್ಚುವುದೊಂದೇ ತಡ, ಡಬ್ಬದ ಮುಚ್ಚಳ ಆಕಾಶಕ್ಕೆ ಹಾರಿತು. ಮೇಷ್ಟರ ಮೂಗು ಅಪಾಯದಿಂದ ಸ್ವಲ್ಪದರಲ್ಲಿಯೇ ಪಾರಾಯಿತು. ಒಳಗಿನ ಕರಿ ನಾಗರ ಹೆಡೆಯೆತ್ತಿ ನಿಂತಿತ್ತು. ಅದರ ಕಣ್ಣುಗಳು ನಿಗಿನಿಗಿ ಕೆಂಡವಾಗಿ ಜ್ವಾಲೆಯನ್ನು ಉಗುಳುತ್ತಿದ್ದವು. ಸ್ವಲ್ಪವೂ ಪೆಟ್ಟು ತಾಕಿರದ ಅದರ ಹೆಡೆ ಅರಳಿ ನಿಂತಿತ್ತು. ಅದು ಭುಸುಗುಡುತ್ತಲೇ ಮೇಷ್ಟರ ಮುಖಕ್ಕೇ ಜಗಿಯಿತು. ಈ ಅನಿರೀಕ್ಷಿತ ಹಾವಳಿಯನ್ನು ತಪ್ಪಿಸಲು ಖುರ್ಚಿಯ ಕಡೆಗೆ ಒಮ್ಮೆಲೇ ವಾಲಿದ ಮೇಷ್ಟರು ಆಯ ತಪ್ಪಿ ನೆಲಕ್ಕೆ ಬಿದ್ದರು. ಅವರು ಹೆದರಿಕೆಯಿಂದ ತಣ್ಣಗೆ ಗಾರಾಗಿದ್ದರು. ಭಯಭ್ರಾಂತ ಕಣ್ಣುಗಳಿಂದ ಅಲ್ಲಿ ಬಿದ್ದಿರುವರೇ ಕಾಳಿಂಗದ ಕಡೆಗೆ ದಿಟ್ಟಿಸಿ ನೋಡುತ್ತಿದ್ದರು. ಹುಡುಗರೆಲ್ಲ ತಮ್ಮ ತಮ್ಮ ಮೇಜುಗಳ ಮೇಲೆ ನಿಂತುಕೊಂಡು ಅರಚುತ್ತಿದ್ದರು.


ಕರೀ ನಾಗ ತನ್ನ ವಿಸ್ಫುಲಿಂಗ ಕಣ್ಣುಗಳಿಂದ ಸುತ್ತೆಲ್ಲ ಹೆಡೆ ತಿರುಗಿಸಿ ಪರೀಕ್ಷಿಸಿತು. ಅದರ ಸಿಳಿಸಿಳಿ ನಾಲಿಗೆ ಸಿಟ್ಟಿನಿಂದ ಬಾಯಿಂದ ಹೊರಗೆ ಒಳಗೆ ಚಲಿಸುತ್ತಿತ್ತು. ನಾಗ ಫೂತ್ಕರಿಸುತ್ತ, ಅಲ್ಲಿಂದ ಪಾರಾಗಿ ಹೋಗಲು ಪ್ರಯತ್ನಿಸಿತು. ಅದು ಒಮ್ಮೆಲೆ ಡಬ್ಬದಿಂದ ಹೊರಚಿಮ್ಮಿ ದಬ್‌ಬ್ ಎಂದು ನೆಲಕ್ಕೆ ಬಿದ್ದಿತು. ಅದರ ಬೆನ್ನು ಮುರಿದದ್ದರಿಂದ, ಬಾಗಿಲ ಕಡೆಗೆ ಹಾಗೇ ತೆವಳಿಕೊಂಡು ಸರಿಯಿತು. ಅದು ಬಾಗಿಲಿನ ಹೊಸ್ತಿಲ ಸಮೀಪ ಹೋಗುತ್ತಲೇ, ಅದಕ್ಕೆ ಅಲ್ಲಿ ಇನ್ನೊಂದು ಗಂಡಾಂತರವು ಕಾಯ್ದಿತ್ತು. ಅದನ್ನು ಎದುರಿಸಲು ಅದು ಪುನಃ ತನ್ನ ಹೆಡೆಯನ್ನು ಬಿಚ್ಚಿ ಆ ಕಡೆಗೆ ನೋಡತೊಡಗಿತು…

ಹೊರಗೆ, ವರ್ಗದ ಹೊರಗೆ, ಬಾಗಿಲಿನಲ್ಲಿ ಗಂಗಾರಾಮ್ ಒಂದು ತಂಬಿಗೆ ಹಾಲು ಹಾಗು ಒಂದು ಸಾಸರವನ್ನು ಹಿಡಿದುಕೊಂಡು ನಿಂತಿದ್ದ. ತನ್ನ ಕಾಳಿಂಗನನ್ನು ಕಂಡೊಡನೇ, ಅವನು ಅದಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿದ. ಸಾಸರದಲ್ಲಿ ಹಾಲು ಹಾಕಿ, ಅದನ್ನು ಹೊಸ್ತಿಲದ ಹತ್ತಿರವಿಟ್ಟ. ಭಕ್ತಿಯುತವಾಗಿ ತಲೆಬಾಗಿ, ಕೈಮುಗಿದು, ಕಣ್ಣು ಮುಚ್ಚಿ ಕಾಳಿಂಗ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸತೊಡಗಿದ. ಅಷ್ಟರಲ್ಲಿಯೇ ಭಯಂಕರ ರಭಸದಿಂದ ಆ ಕರೀ ನಾಗ ಬುಸುಗುಡುತ್ತ, ಫೂತ್ಕರಿಸುತ್ತ, ಗಂಗಾರಾಮನ ತಲೆಯ ತುಂಬೆಲ್ಲ ಕಚ್ಚಿತು. ಕಚ್ಚಿದ್ದೇ, ಪ್ರಯತ್ನಪುರಸ್ಸರವಾಗಿ ತನ್ನನ್ನೇ ತಾನು ಎಳೆದುಕೊಳ್ಳುತ್ತ ಗಟಾರಕ್ಕೆ ಸಾಗಿ, ಅಲ್ಲೇ ಎಲ್ಲಿಯೋ ಸುರಳಿಸುತ್ತಿಕೊಂಡು ಕಣ್ಮರೆಯಾಯಿತು.

ಗಂಗಾರಾಮ್ ತನ್ನ ಮುಖದ ಮೇಲೆ ಕೈಗಳನ್ನು ಮುಚ್ಚಿಕೊಂಡು ನೆಲಕ್ಕುರುಳಿದ. ಅವನು ಸಂಕಟದಿಂದ ನರಳಹತ್ತಿದ. ಕರಿ ನಾಗದ ವಿಷ ಅವನ ಕಣ್ಣನ್ನು ಕ್ಷಣ ಮಾತ್ರದಲ್ಲಿಯೇ ಮಂದಗೊಳಿಸಿತ್ತು. ಒಂದೆರಡು ನಿಮಿಷದಲ್ಲಿಯೇ, ಅವನು ಪೇಲವನಾಗಿ, ನೀಲಿಯಾಗಿ, ಅವನ ಬಾಯಿಂದ ಬುರುಗು ಬರಹತ್ತಿತು. ಅವನ ಹಣೆ ತುಂಬೆಲ್ಲ ರಕ್ತದ ಸಣ್ಣ ಸಣ್ಣ ಹನಿಗಳು ಕಾಣತೊಡಗಿದವು. ಆ ಹನಿಗಳನ್ನು ಮೇಷ್ಟರು ತಮ್ಮ ಕೈವಸ್ತ್ರದಿಂದ ಒರೆಸಿದರು. ಕರಿನಾಗ ತನ್ನ ವಿಷದ ಹಲ್ಲುಗಳನ್ನು ಊರಿದ್ದ ಸ್ಥಳದ ಕೆಳಗೇ ಗಂಗಾರಾಮ್ ದಿನನಿತ್ಯ ತನ್ನ ಹಣೆಗೆ ಹಚ್ಚುತ್ತಿದ್ದ V-ವಿಷ್ಣು ಚಿಹ್ನವಿದ್ದಿತು. ✿

ಅನುಭವವಿಲ್ಲದೆ ಭಕ್ತಿ ಅರಿವಿಂಗೆ ಬಾರದು
ಅನುಭವವಿಲ್ಲದೆ ಏನೇನೂ ಅರಿಯಬಾರದು

– ಬಸವೇಶ್ವರ



ನಗೆಲಾಯ? ನ್ಯಾಯಾಲಯ!

ಎರಡನೇ ಕೇಸು !

ಕೋರ್ಟಿಗೆ ಬರುವ ದಾರಿಯಲ್ಲಿ ನ್ಯಾಯಾಧೀಶರಿಬ್ಬರು ತಮ್ಮ ಕಾರುಗಳನ್ನು, "ನಾ ಮುಂದೆ ತಾ ಮುಂದೆ" ಎಂದು ಓಡಿಸುವ ಭರದಲ್ಲಿ ರಸ್ತೆ ವೇಗದ ಮಿತಿಯನ್ನು ಮೀರಿದ ಬಗ್ಗೆ ವಿಚಾರಣೆಯನ್ನೆದುರಿಸುವ ಪ್ರಸಂಗ ಬಂದಿತು. ಕೋರ್ಟಿನಲ್ಲಿ ಇನ್ನೂ ಯಾರೂ ಬಂದಿರಲಿಲ್ಲ. ಅವರಿಬ್ಬರೂ ಮಾತನಾಡಿಕೊಂಡು ಒಂದು ಒಪ್ಪಂದಕ್ಕೆ ಬಂದರು. ಏನೆಂದರೆ ಮೊದಲನೇ ನ್ಯಾಯಾಧೀಶನ ಪ್ರಕರಣ ಎರಡನೇ ನ್ಯಾಯಾಧೀಶನೂ, ಎರಡನೇಯವನ ಕೇಸು ಮೊದಲನೆಯವನೂ ನಡೆಯಿಸತಕ್ಕದ್ದು. ಅದರಂತೆ ವಿಚಾರಣೆ ಪ್ರಾರಂಭವಾಯಿತು.

ಮೊದಲನೇ ನ್ಯಾ.: ಗುನ್ಹೆಗೆ ಕಬೂಲ ಇದೆಯೇ?

ಎರಡನೇ ನ್ಯಾ.: ಹೌದು.

ಮೊ. ನ್ಯಾ. : ಇನ್ನು ಮೇಲೆ ಹೀಗೆ ವೇಗಮಿತಿ ಮೀರತಕ್ಕದ್ದಲ್ಲ. ಈ ಬಾರಿ ಮಾಫ ಮಾಡಲಾಗಿದೆ.

ಈಗವರು ತಮ್ಮ-ತಮ್ಮ ಸ್ಥಾನ ಪಲ್ಲಟ ಮಾಡಿಕೊಂಡರು.

ಎರಡನೇ ನ್ಯಾ : ಗುನ್ಹೆಗೆ ಕಬೂಲ ಇದೆಯೇ ?

ಮೊ. ನ್ಯಾ. : ಹೌದು

ಎ. ನ್ಯಾ. : (ತುಂಬ ಗಂಭೀರವಾಗಿ,) ಈಗಿತ್ತಲಾಗಿ ಇಂಥ ಕೇಸುಗಳು ಬಹಳವಾಗಹತ್ತಿವೆ. ಇವತ್ತೇ ಇದು ಎರಡನೆಯ ಪ್ರಕರಣ. ಇಂಥ ಆದ್ದರಿಂದ ರೂ. ಹತ್ತು ದಂಡ ಕೊಡಬೇಕು. ತಪ್ಪಿದಲ್ಲಿ ಒಂದು ದಿನ ಸಾದಾ ಶಿಕ್ಷೆ!

•

ಕುಡಿದದ್ದು ಅವರೇ

ನ್ಯಾಯಾಧೀಶ ಆರೋಪಿಗೆ,

"ನಿನ್ನನ್ನು ಇಲ್ಲಿಗೆ - ಯಾರು ಕರೆ ತಂದರು?"

ಆರೋಪಿ : "ಇಬ್ಬರು ಪೋಲೀಸರು ಮಹಾಸ್ವಾಮೀ"

ನ್ಯಾ.: ಕುಡಿದ ಅಮಲಿನಲ್ಲಿ ತಾನೇ!"

ಆರೋಪಿ : "ಹೌದು ಸ್ವಾಮೀ, ಇಬ್ಬರೂ ಅವರಿಬ್ಬರೂ ಕುಡಿದಿದ್ದರು!"

•

ಅವರಿಗೂ ತಿಳಿಯಬೇಕು

ವಕೀಲನೊಬ್ಬ 'ಕೆಂಪುದೀಪ'ದ ರಸ್ತೆಯ ಸಾಕ್ಷಿಯೊಬ್ಬಳಿಗೆ ಪ್ರಶ್ನೆ ಕೇಳುತ್ತಾ "ನಿನ್ನ ಮನೆಯೆಲ್ಲಿದೆ ಹೇಳು ?"

ಸಾಕ್ಷಿ: ಇದೇನು ಸ್ವಾಮೀ ಹೀಗೆ ಕೇಳುತ್ತೀರಿ ? ದಿನಾಲೂ ಬರುತ್ತೀರಿ, ನಿಮಗೆ ಗೊತ್ತಿಲ್ಲವೆ?"

ವಕೀಲ : "ನನಗೆ ಗೊತ್ತಿರುವ ಸಮಾಚಾರ ಬೇರೆ. ಆದರೆ ನ್ಯಾಯಾಧೀಶರಿಗೆ ಗೊತ್ತಾಗಬೇಕಾಗಿದೆ!"

*

ಅಷ್ಟು ದಪ್ಪವಿಲ್ಲ

ಜಜ್ : (ತನ್ನ ಮುಷ್ಟಿಯನ್ನು ತೋರಿಸುತ್ತಾ) "ಆರೋಪಿ ಹೊಡೆದ ಕಲ್ಲು ಇಷ್ಟು ದೊಡ್ಡದಿತ್ತೇ?"

ಸಾಕ್ಷಿ : "ಊಹೂಂ, ಇನ್ನೂ ದೊಡ್ಡದಿತ್ತು?"

ಜಜ್ : (ಎರಡು ಕೈಯನ್ನು ಹಿಡಿದು) "ಇಷ್ಟು ದೊಡ್ಡ?"

ಸಾಕ್ಷಿ : "ಇಲ್ಲ ಇನ್ನೂ ದೊಡ್ಡದಿತ್ತು."

ಜಜ್: (ತನ್ನ ತಲೆಯನ್ನು ತೋರಿಸಿ) "ಇಷ್ಟು ದೊಡ್ಡ?"

ಸಾಕ್ಷಿ : (ಗಡ್ಡ ಕೆರೆಯುತ್ತಾ) "ಹುಂ ಅಷ್ಟು ದೊಡ್ಡದೇನೋ ಹೌದು, ಆದರೆ ಇಷ್ಟು ದಪ್ಪವಿರಲಿಲ್ಲ!"

*

ತಕರಾರೇ ಇಲ್ಲ!


ಬೆಂಗಳೂರು ಹೈಕೋರ್ಟಿಗೆ ಹೋಗುವ ದಾರಿಯ ಬದಿಗೆ ಕಟ್ಟೆಯ ಮೇಲೆ ಕೆಲವು ಜನ ಚುಟ್ಟಾ ಸೇದುತ್ತ ಹರಟೆಯಲ್ಲಿ ಮಗ್ನರಾಗಿದ್ದರು. ಆ ದಾರಿಯಲ್ಲೊಂದು ಕಾರು ಬಂತು. ಕಾರಿನಲ್ಲಿದ್ದ ವ್ಯಕ್ತಿ ಆಚೀಚೆ ನೋಡುತ್ತ ಆ ಜನರನ್ನು ಕೇಳಿದ,

"ನನಗೆ ಹೈಕೋರ್ಟಿಗೆ ಹೋಗಬೇಕಾಗಿದೆ." ಕಣ್ಣು ಕೂಡ ಮಿಟುಕಿಸದೇ ಚುಟ್ಟ ಎಳೆಯುತ್ತಿದ್ದ ಆಸಾಮಿಯೊಬ್ಬ,

"ನಮ್ಮ ತಕರಾರಿಲ್ಲ!" ಎಂದುತ್ತರಿಸಿದ.

–ಜೆಸ್‌ಕ್ವೀನ್





'ಅಮ್ಮಾ!
ನನಗೀಗ 3 ತಿಂಗಳಾದವು!'
'ಅಹುದು, ಈಗ ಕೊಡಲು ಪ್ರಾರಂಭಿಸಬೇಕು
ಫೆರೆಕ್ಸ್®'
ನಿಮ್ಮ ಮಗುವಿಗೆ ಘನ ಆಹಾರ ಕೊಡಲು
ಪ್ರಾರಂಭಿಸುವಾಗ ಡಾಕ್ಟರರು ಫೆರೆಕ್ಸ್® ನ್ನು
ಶಿಫಾರಸು ಮಾಡುತ್ತಾರೆ.
FAREX
ಮಗುವಿನ ಆದರ್ಶ
ಘನ ಆಹಾರ–
ಶೀಘ್ರ ಸರ್ವಾಂಗೀಣ
ಬೆಳವಣಿಗೆಗಾಗಿ.

ಡಾ. ಗೋಪಾಲ ಕಾರ್ಕಳ

ಸ್ವಾತಂತ್ರ್ಯ

ಪಾತ್ರಗಳು :

ವಿನೋದ :	ಮಧ್ಯ ವಯಸ್ಸಿನ ಒಬ್ಬ ಉನ್ನತ ಅಧಿಕಾರಿ
ಅಪರಿಚಿತ :	ಯಮಧರ್ಮರಾಜನಲ್ಲಿಯ ಚಿತ್ರಗುಪ್ತ
ಛತ್ರಪತಿ ಶಿವಾಜಿ ಮಹಾರಾಜ	
ನೂರಜಹಾನ ರಾಣಿ	
ಹಿಪ್ಪಿ ಯುವಕ	
ಶಾಂತಿ :	ಮಧ್ಯ ವಯಸ್ಸು ಮೀರಿದ ಅವಿವಾಹಿತ ಮಹಿಳೆ ವಿನೋದನ ಚಿಕ್ಕತ್ತೆ
ಸುಮನ :	ವಿನೋದನ ಸಹಕರ್ಮಚಾರಿ; ಉಪಮುಖ್ಯಾಧಿಕಾರಿ
ಕವಿ ಕಾಳಿದಾಸ :	ಒಬ್ಬ ಬುದ್ಧಿಜೀವಿ
ಸಾಮಾನ್ಯ ನಾಗರಿಕ :	ಲಲಿತ ಕಲೆಗಳಲ್ಲಿ ಆಸಕ್ತಿಯುಳ್ಳವ

ರಂಗಮಂಚ :

ತೆರೆ ಮೇಲೇಳುವಾಗ ರಂಗಮಂಚ ಪೂರ್ಣ ಕತ್ತಲಾಗಿರುತ್ತದೆ. ಕ್ರಮೇಣ ಮಧ್ಯಭಾಗದಲ್ಲಿ ಮಾತ್ರ ಬೆಳಕು ಬೀಳುತ್ತದೆ. ಆದರೆ ಎಡ ಹಾಗೂ ಬಲ ಪಾರ್ಶ್ವಗಳ ಪ್ರವೇಶದ್ವಾರ ಭಾಗಗಳು ಇನ್ನೂ ಕತ್ತಲಲ್ಲಿರುತ್ತವೆ.

ವಿನೋದ: (ಬೆಳಕು ಬಿದ್ದ ರಂಗದ ಮಧ್ಯಭಾಗದಲ್ಲಿ ವಿನೋದನು ಕಣ್ಣು ತಿಕ್ಕುತ್ತಾ, ಬಹಳ ಆಶ್ಚರ್ಯಚಕಿತನಾದವನ ಹಾಗೆ ತನ್ನ ಸುತ್ತ ಮುತ್ತಲಿನ ಪ್ರದೇಶವನ್ನು ಕುತೂಹಲದಿಂದ ನಿರೀಕ್ಷಿಸುತ್ತಾ, ಅಡ್ಡಾಡುತ್ತಾ) ಇದಾವ ಸ್ಥಳ? ಇಲ್ಲಿ ಯಾರಾದರೂ ಇದ್ದೀರೇನು? (ದೂರ ದಲ್ಲಿರುವವರನ್ನು ಕರೆಯುವಂತೆ ಕೈಯನ್ನು ಬಾಯಿಯ ಹತ್ತಿರಕ್ಕೆ ತಂದು "ಓ ಹೋಯ್" ಅನ್ನುತ್ತಾನೆ.)

ಅಪರಿಚಿತ: (ಕತ್ತಲೆಯ ಬಲ ಪಾರ್ಶ್ವದಿಂದ ಬೆಳಕುಳ್ಳ ಮಧ್ಯಭಾಗಕ್ಕೆ ಥಕ್ಕನೆ ಬರುತ್ತಾ) ನಿಮ್ಮ ಹೆಸರು ವಿನೋದನೆಂದೇನು?

ವಿನೋದ: (ಹೆದರಿ ಕಲಪೊಂದು ಹೆಜ್ಜೆ ಹಿಂದಕ್ಕೆ ಹೋಗುತ್ತಾ) ತಾವು ಯಾರು? ಇಲ್ಲಿಗೆ ನಾನೇ-ತಕ್ಕಾಗಿ ಬಂದಿರುತ್ತೇನೆ? ನನಗೊಂದೂ ಅರ್ಥವಾಗುವುದಿಲ್ಲ. ಯಾವ ವಿಷಯದ ಜ್ಞಾಪಕವೂ ಬರುತ್ತಿಲ್ಲವಲ್ಲ?

ಅಪರಿಚಿತ: ಕಟ್ಟಕಡೆಯದಾದ ಯಾವ ವಿಷಯದ ಜ್ಞಾಪಕವಿದೆ ನಿಮಗೆ ?

ವಿನೋದ: (ಆಲೋಚಿಸುತ್ತಾ)... ಹಾಂ... ನಾನು ನನ್ನ ಪತ್ನಿಯ ಜೊತೆ ಮಾತಾಡುತ್ತಾ ಇದ್ದೆ.

ಅಪರಿಚಿತ: ಅಂದರೆ ಜಗಳ ಮಾಡ್ತಾ ಇದ್ದಿರಿ. ಅನ್ನಿ.

ವಿನೋದ: (ಆಶ್ಚರ್ಯಚಕಿತನಾಗಿ) ಅಂದ ಹಾಗೆ ತಮಗೆ ಹೇಗೆ ಗೊತ್ತಾಯಿತು? ತಾವೇನು ಮನುಷ್ಯರ ಅಂತರಂಗದಲ್ಲಿರುವ ಮಾತನ್ನು ತಿಳಿಯುವ ಜ್ಯೋತಿಷಿಗಳೇನು?

ಅಪರಿಚಿತ: ಛೇ. ಛೇ, ಹಾಗೇನಿಲ್ಲ. ಸರಿ, ಮುಂದಕ್ಕೆ ಏನಾಯಿತು?

ವಿನೋದ: (ಸಂಕೋಚಪಡುತ್ತಾ) ನಾವು ವಾಗ್ವಾದ ಮಾಡ್ತಾ ಇದ್ದೆವು. ತಮಗೆ ಗೊತ್ತಿಲ್ಲ. ಪತಿ ಪತ್ನಿಯರ ಜಗಳ ಯಾವ ತರಹ ಇರುತ್ತದೆಂದು. ಅವಳಿಗೆ ಗಾಯನ ಕಚೇರಿಗೆ ಹೋಗ ಬೇಕಂತೆ. ನಿಜವಾಗಿಯೂ ಅವಳಿಗೆ 'ಸ' 'ಪ' ಗಳ ನಡುವಿನ ವ್ಯತ್ಯಾಸ ಸಹ ಗೊತ್ತಿಲ್ಲ. ಬರೇ ತನ್ನ ಮೈಸೂರು ಸಿಲ್ಕಿನ ಸೀರೆಯನ್ನೂ ಚಿನ್ನಾಭರಣಗಳನ್ನೂ ಇತರರೆದುರಿಗೆ ಪ್ರದರ್ಶಿಸುವುದಕ್ಕಾಗಿ ಅವಳು ಅಲ್ಲಿಗೆ ಹೋಗುವುದು. ಅದಲ್ಲದೆ ಆ ಸೀರೆ, ಆ ಆಭರಣಗಳಲ್ಲಿ ತಾನು ಹೇಮಾಮಾಲಿನಿ ಗಿಂತಲೂ ಸುಂದರಳಾಗಿ ಕಾಣುತ್ತೇನೆಂದು ಅವಳ ಭಾವನೆ. ನೋಡಿ ಸ್ವಾಮಿ. ನನಗೆ ಆಫೀಸಿನ ಒಂದು ಮಹತ್ವದ ಕೆಲಸ ಇತ್ತು. ಅದರಿಂದಾಗಿ ಅವಳ ಜೊತೆ ಗಾಯನ ಕಚೇರಿಗೆ ಹೋಗಲು ನನಗೆ ಸಮಯ ಇರಲಿಲ್ಲ. ತಮಗೆ ಗೊತ್ತಿಲ್ಲ. ಕಂಪೆನಿಯ ಮುಖ್ಯಾಧಿಕಾರಿಗೆ ಪ್ರತಿ ಯೊಂದು ನಿಮಿಷವೂ ಬಹಳ ಮಹತ್ವದ್ದು ಎಂದು. ಇಂದಿನ ಈ ಪೈಪೋಟಿ ದಿವಸಗಳಲ್ಲಿ ನಾವು ಕೆಲಸದ ಬಗ್ಗೆ ಉಪೇಕ್ಷೆ ಮಾಡಿದರೆ ನಮ್ಮ ಎದುರಾಳಿಗಳು ನಮ್ಮನ್ನು ಹಿಂದಕ್ಕೆ ತಳ್ಳಿ ತಾವು ಮುಂದಕ್ಕೆ ಹೋಗುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ತಮಗೆ ವ್ಯಾಪಾರ ವ್ಯವಹಾರದ ಈ ಸೂಕ್ಷ್ಮ ವಿಷಯಗಳ ಅರ್ಥವಾಗುತ್ತದಲ್ಲವೆ ?

ಅಪರಿಚಿತ: ಓಹೋ. ಅರ್ಥವಾಗದೆ ಏನು? ಅಂದರೆ ನೀವು ಸ್ವಲ್ಪ ತಾಳ್ಮೆ ತಪ್ಪಿ ಜೋರಾಗಿ ಒದರಾಡಿದ್ದಿರಬೇಕು ಅಂತ ಕಾಣುತ್ತೆ.

ವಿನೋದ: (ಪುನಃ ಆಶ್ಚರ್ಯ ಚಕಿತನಾಗಿ) ಅಂದ ಹಾಗೆ ತಾವು ನಿಜವಾಗಿಯೂ ಯಾರು ಸ್ವಾಮಿ? ಖಾಸಗೀ ಪತ್ತೇದಾರರೋ ಅಥವಾ ಇನ್ನಾವುದಾದರೂ ಕಂಪನಿಯ ಗುಪ್ತಚಾರರೊ?

ಅಪರಿಚಿತ: ಅಯ್ಯೋ ಹಾಗೇನಿಲ್ಲ. ಮುಂದಕ್ಕೆ?

ವಿನೋದ: (ಸಂದಿಗ್ಧ ಭಾವದಿಂದ) ಅವಳ ಹಟ ನೋಡಿ ನನ್ನ ಕೋಪ ನೆತ್ತಿಗೇರಿತು. ನಮ್ಮ ಕುಟುಂಬದ ಡಾಕ್ಟರರು ನನಗೆ ತಾಳ್ಮೆ ತಪ್ಪಬೇಡಿ, ಕೋಪಿಸಿಕೊಳ್ಳಬೇಡಿ ಎಂದು ಪದೇ ಪದೇ

ಹೇಳಿದ್ದರೂ ಕೂಡ ಇಂದು ನನಗೆ ತುಂಬಾ ಸಿಟ್ಟು ಬಂದಿತ್ತು. ಹಾಗೇ ಒದರಾಡುತ್ತಾ ಇರುವಾಗ ಎದೆಯಲ್ಲಿ ಇಲ್ಲಿ (ಕೈಯಿಂದ ಸ್ಥಳವನ್ನು ತೋರಿಸುತ್ತಾ) ಫಕ್ಕನೆ ಜೋರಾಗಿ ನೋವು ಪ್ರಾರಂಭವಾಯಿತು. (ಫಕ್ಕನೆ ತಿಳುವಳಿಕೆ ಬಂದವನ ಹಾಗೆ) ಅಲ್ಲಯ್ಯ ಇದಾವ ಸುಡುಗಾಡು ಸ್ಥಳ? ಆಗ ಇಲ್ಲಿ ಇದ್ದ ನೋವು ಈಗ ಏನಾಯಿತು?

ಅಪರಿಚಿತ: (ನಗುತ್ತಾ) ಇಲ್ಲಿ ಅಂತಹ ನೋವು ಸಂಕಟಗಳು ಯಾವುದೂ ಇಲ್ಲ.

ವಿನೋದ:(ಸಂಶಯದಿಂದ): ಹಾಗಾದರೆ… ನಾನು… ಸತ್ತುಹೋದೆನೇನು?… ಈಗ ಅರ್ಥವಾಯಿತು. ಆದರೆ (ಅತ್ತಿತ್ತ ನೋಡುತ್ತಾ) ಇಲ್ಲಿ ಬಿಸಿ ಎಣ್ಣೆ, ಕುದಿಯುವ ಕಷಾಯ ಇತ್ಯಾದಿ ಯಾವುದೂ ಕಂಡುಬರುವದಿಲ್ಲವಲ್ಲ?

ಅಪರಿಚಿತ: (ಗಂಭೀರಭಾವದಿಂದ) ಅವುಗಳನ್ನು ಇಲ್ಲಿ ನೋಡಬೇಕೆಂದು ಬಯಸುತ್ತೀರೇನು?

ವಿನೋದ: (ಸಮಾಧಾನಿಸುವ ರೀತಿಯಲ್ಲಿ ನೋಡಿ) ಸ್ವಾಮಿ, ಕೋಪಿಸಬೇಡಿ. ಭೂಲೋಕದಲ್ಲಿ ನಾನೇನು ಶುದ್ಧ ಪವಿತ್ರ ಜೀವನವನ್ನು ನಡೆಸಿಕೊಂಡು ಬಂದಿಲ್ಲ. ಅಂದರೆ ಸತ್ತ ನಂತರ ನಾನೇನಾದರೂ ಎಲ್ಲಿಗಾದರೂ ಹೋಗುವುದಿದ್ದರೆ ಅದು ಯಾವ ಸ್ಥಳವಾಗಿರಬಹುದು ಎಂಬುದನ್ನು ನೀವೇ ಊಹಿಸಿಕೊಳ್ಳಿ. ನನ್ನ ಮಾತು ತಮಗೆ ಗೊತ್ತಾಯಿತಲ್ವೆ? (ಅಪರಿಚಿತ ಹೌದು ಅನ್ನುವಂತೆ ತಲೆ ಅಲ್ಲಾಡಿಸುತ್ತಾನೆ) ಅಂದ ಹಾಗೆ ಇದು ಸ್ವರ್ಗವೇನು?

ಅಪರಿಚಿತ: (ನಗುತ್ತಾ) (ಸ್ವಗತ) ಅಯ್ಯೋ, ಈ ಹುಚ್ಚು ಮಾನವರಿಗೆ ಸ್ವರ್ಗ ಅಥವಾ ನರಕದ ಬಗ್ಗೆ ಏನೇನು ವಿಚಿತ್ರ ಕಲ್ಪನೆಗಳಿವೆಯೋ ಅವುಗಳನ್ನು ತಿಳಿಯುವುದು ಬಹಳ ಕಷ್ಟ. (ವಿನೋದನಿಗೆ ಕೇಳಿಸುವಂತೆ) ಕೇಳಿ ಸ್ವಾಮಿ, ಸ್ವರ್ಗ ಅಥವಾ ನರಕ ಎಂಬುದು ಒಂದು ಸ್ಥಳ ಅಲ್ಲ. ಅವುಗಳು ಬರೀ ಮಾನಸಿಕ ಪರಿಸ್ಥಿತಿ ಅಥವಾ ಅವಸ್ಥೆಗಳು.

ವಿನೋದ: (ತನ್ನ ಹಿಂದಿನ ಮಾತನ್ನೇ ಮುಂದುವರಿಸುತ್ತಾ) ಭೂಲೋಕದಲ್ಲಿರುವಾಗ ನಾನೇನು ಧಾರ್ಮಿಕ ಜೀವನವನ್ನು ನಡೆಸಿಕೊಂಡು ಬಂದಿಲ್ಲ. ನನಗೇನೋ ಪೂಜೆ, ಪಾಠ, ತೀರ್ಥಯಾತ್ರೆಗಳನ್ನೆಲ್ಲ ಮಾಡಬೇಕೆಂಬ ಇಚ್ಛೆ ಇತ್ತು. ಆದರೆ ಕಂಪನಿಯ ಕೆಲಸದಿಂದಾಗಿ ನನಗೆ ಒಂದು ನಿಮಿಷ ಕೂಡ ಸಮಯ ಸಿಕ್ಕುತ್ತಿರಲಿಲ್ಲ. ಹಾಗಾಗಿ…

ಅಪರಿಚಿತ: (ಆತನ ಮಾತನ್ನು ಅರ್ಧದಲ್ಲಿಯೇ ನಿಲ್ಲಿಸುತ್ತಾ ಕೋಪದಿಂದ) ಈ ಮಾತುಗಳ ಅಗತ್ಯ ಈಗ ಇಲ್ಲಿ ಇಲ್ಲ. ಮುಖ್ಯ ವಿಷಯವೇನೆಂದರೆ ಸ್ವರ್ಗ ನರಕಗಳೆಲ್ಲ ನಿಮ್ಮ ನಿಮ್ಮಲ್ಲಿಯೇ ಇವೆ. ಅವು ನಿಮ್ಮ ಹೊರಗೆ. ನಿಮ್ಮಿಂದ ಪ್ರತ್ಯೇಕವಾಗಿ ಕಾಣುವ ಸ್ಥಳಗಳಲ್ಲ. ಸ್ವರ್ಗ, ನರಕ ಎಂಬುದು ಒಂದು ಸಾತತ್ಯ. ಈ ಸಾತತ್ಯವು ಯಾವುದು ಆಗಬೇಕು ಎಂಬುದು ಮಾನವ ಇಚ್ಛೆಯನ್ನೇ ಅವಲಂಬಿಸಿದೆ.

ವಿನೋದ: ಅಂದರೆ ಸತ್ತ ನಂತರ ಪ್ರತಿಯೊಬ್ಬರೂ ಇಲ್ಲಿಗೆ ಬಂದೇ ಬರುತ್ತಾರೇನು?

ಅಪರಿಚಿತ: ಹೆಚ್ಚು ಕಡಿಮೆ ಹಾಗೆಯೇ ಎಂದು ಅರ್ಥ.

ವಿನೋದ: (ತುಚ್ಛ ಭಾವದಿಂದ) ಹಾಗಂದರೆ ನನ್ನ ಪತ್ನಿ ಕೂಡ ಇಲ್ಲಿಗೆ ಬರುತ್ತಾಳೇನು? ಇಂತಹ ಸ್ಥಳಕ್ಕೆ ಸ್ವರ್ಗ ಎಂದು ಹೇಗೆ ಹೇಳುತ್ತೀರಿ, ಸ್ವಾಮೀ?

ಅಪರಿಚಿತ: (ವಿವರಿಸುತ್ತಾ) ನೋಡಿ ಭೂಲೋಕದಲ್ಲಿರುವಾಗ ನೀವು ಯಾವ ತರಹದ ಚಾಪೆ ಹಾಸಿದ್ದೀರೋ ಇಲ್ಲಿ ಅದರಲ್ಲಿ ಮಲಗಿಯೇ ತೀರಬೇಕು? ಇದನ್ನು ಬದಲಿಸಲು ಹೇಗೆ ಸಾಧ್ಯ?

ವಿನೋದ: (ಅಂಗಲಾಚುತ್ತಾ) ಆದರೆ ಅವಳ ಜೊತೆ ಆ ಚಾಪೆಯಲ್ಲಿ ಮಲಗಲಾರೆ, ದಮ್ಮಯ್ಯ ಬೇಡ.

ಅಪರಿಚಿತ: (ಕೋಪಿಸಿಕೊಳ್ಳುತ್ತಾ): ಬೇಡ ಅಂದರೆ ಹೇಗೆ ಸಾಧ್ಯ? ನೀವು ಅಲ್ಲಿ ಮಾಡಿದ್ದನ್ನು ಇಲ್ಲಿ ಇಲ್ಲದ ಹಾಗೆ ಮಾಡಲು ನಾನೇನು ಮಾಂತ್ರಿಕನೂ ಅಲ್ಲ. ಅವತಾರಪುರುಷನೂ ಅಲ್ಲ. ಮಾಡಿದ್ದನ್ನು ಇಲ್ಲದ ಹಾಗೆ ಮಾಡಲು ಇಲ್ಲಿಯೂ ಸಾಧ್ಯವಿಲ್ಲ. ಅಲ್ಲಿಯೂ ಸಾಧ್ಯವಿಲ್ಲ. ನಿಮಗೆ ಇಷ್ಟವಿರಲಿ, ಇಲ್ಲದಿರಲಿ ಮಾಡಿದ್ದನ್ನು ಭೋಗಿಸಲೇಬೇಕು. (ವಿಡಂಬನೆಯ ಸ್ವರದಿಂದ) ಗೊತ್ತಾಯ್ತು, ನಿಮ್ಮಂಥವರ ವಿಚಾರ ನಮಗೆ ಎಲ್ಲಾ ಗೊತ್ತು. ಅಲ್ಲಿ ಹೊಲಸು ತಿಂದು ಇಲ್ಲಿ ಶುದ್ಧ ಮಾಡಿಸಿಕೊಂಡರೆ ಕೆಲಸ ಮುಗಿಯುತ್ತದೆ ಎಂದು ಎಣಿಸಿದ್ದೀರೇನು? ಆಯುಷ್ಯವಿಡೀ ಮನ ಬಂದಂತೆ ಮಾಡಿ ಕೊನೆ ಗಳಿಗೆಯಲ್ಲಿ "ದೇವರೇ ನನ್ನನ್ನು ಕ್ಷಮಿಸು. ಉದ್ಧಾರ ಮಾಡು" ಎಂದು ಬೇಡಿಕೊಂಡಾಕ್ಷಣ ಎಲ್ಲಾ ಸರಿಹೋಗುತ್ತದೆ ಎಂದು ತಿಳಿದುಕೊಂಡಿರೇನು? ಇಲ್ಲಿ ಅದೆಲ್ಲಾ ಸಾಧ್ಯವಿಲ್ಲ. ಅಷ್ಟು ಸುಲಭದಲ್ಲಿ ಈ ಬಂಧನದಿಂದ ಬಿಡುಗಡೆಯಾಗಲು ಸಾಧ್ಯವಿಲ್ಲ.

ವಿನೋದ: ಹಾಗಾದರೆ ಸ್ವರ್ಗಕ್ಕೆ ಹೋಗುವ ದಾರಿ ಯಾವುದು?

ಅಪರಿಚಿತ: (ತಾಳ್ಮೆ ತಪ್ಪುತ್ತಾ) ನಾನು ಈ ಮೊದಲೇ ಹೇಳಿದ್ದೆ, ಅದು ಸ್ವರ್ಗ ಎಂದರೇನು ಎಂಬ ನಿಮ್ಮ ಭಾವನೆಯನ್ನೇ ಅವಲಂಬಿಸಿದೆ ಎಂದು.

ವಿನೋದ: (ಸಂದೇಹದಿಂದ) ನೋಡಿ ಸ್ವಾಮೀ, ನನ್ನ ತಿಳುವಳಿಕೆ ಪ್ರಕಾರ ಸ್ವರ್ಗ ಅಂದರೆ ನಮ್ಮ ಮನಸ್ಸಿನಲ್ಲಿದ್ದ ಎಲ್ಲಾ ಆಶೆ, ಆಕಾಂಕ್ಷೆಗಳು ಸಿದ್ಧಿಸುವ ಸ್ಥಳ.

(ರಂಗ ಮಂಚದ ಎಡ ಪಾರ್ಶ್ವದ ಪ್ರವೇಶ ಭಾಗದಲ್ಲಿ ಬೆಳಕು ಬೀಳುತ್ತದೆ. ಅಲ್ಲಿ ಒಂದು ದೊಡ್ಡ ಮೇಜಿನ ಮೇಲೆ ವಿನೋದನ ಹೆಸರು ಇರುವ ಒಂದು ನಾಮಫಲಕ, ಕೆಲವು ಫೈಲ್ ಎರಡು ಮೂರು ಟೆಲಿಫೋನು ಇತ್ಯಾದಿ ಇರುವ ಒಂದು ಆಧುನಿಕ ಆಫೀಸು ಕಂಡು ಬರುತ್ತದೆ).

ವಿನೋದ: (ಆಫೀಸನ್ನು ನೋಡಿ ಮಂದಸ್ಮಿತನಾಗಿ ಮೇಜಿನ ಹತ್ತಿರ ಹೋಗುತ್ತಾ) ನೋಡಿ. ಈ ತರಹ ಆಶೆ ಈಡೇರುವ ಸ್ಥಳಕ್ಕೆ ಸ್ವರ್ಗ ಅನ್ನುವುದು, ಬಹುಶಃ ಇಲ್ಲಿಯೂ ನನಗೆ ಒಂದು ದೊಡ್ಡ ಕಂಪನಿಯನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ತೋರುತ್ತದೆ. ಭೂಲೋಕದಲ್ಲಿರುವಾಗ ನನಗೆ ಕೆಲವೊಮ್ಮೆ ನನ್ನ ಮೇಧಾವಿತನವನ್ನು ಅರ್ಥ ಮಾಡಿಕೊಳ್ಳುವವರು ಇಲ್ಲದ ಕಾರಣ ನನ್ನ ಬುದ್ಧಿ ಪರಿಶ್ರಮ ವ್ಯರ್ಥವಾಗಿ ಹಾಳಾಗಿ ಹೋಗುತ್ತಿದೆ ಎನ್ನುವ ಭಾವನೆ ಬರುತ್ತಿತ್ತು. (ಮೇಜಿನ ಹಿಂದೆ ಇರುವ ತಿರುಗು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ) ಸರಿ, ಇಲ್ಲಿ ನನ್ನ ನೈಪುಣ್ಯವನ್ನು ತೋರಿಸುವ ಅವಕಾಶ ಪುನಃ ಸಿಕ್ಕಿತಲ್ಲ, ಸಾಕು. ಅಂದ ಹಾಗೆ ಇಲ್ಲಿ ನಾನು ಯಾವ ಕಂಪನಿಯ ಸಂಚಾಲಕತ್ವವನ್ನು ವಹಿಸಿಕೊಳ್ಳಬೇಕು?

ಅಪರಿಚಿತ: ನಿಮಗೆ ಇಲ್ಲಿ ಯಾವ ಕೆಲಸ ಮಾಡುವ ಅಗತ್ಯವೂ ಇಲ್ಲ.

ವಿನೋದ: (ಕ್ರುದ್ಧ ಭಾವದಿಂದ ಎದ್ದು ನಿಲ್ಲುತ್ತಾ) ಏನೆಂದಿರಿ? ಯಾವ ಕೆಲಸ ಮಾಡುವ ಅಗತ್ಯವಿಲ್ಲ? ಇದೇನು ಅರ್ಥವಿಲ್ಲದ ಮಾತು ಸ್ವಾಮೀ? ಯಾವ ಕಂಪನಿಯ ಸಂಚಾಲಕತ್ವವನ್ನು ವಹಿಸಿಕೊಳ್ಳುವುದಿರದಿದ್ದರೆ ಇಷ್ಟು ದೊಡ್ಡ ಈ ಆಧುನಿಕ ಆಫೀಸಿನ ಅವಶ್ಯವೇನಿತ್ತು?

ಅಪರಿಚಿತ: (ಶಾಂತ ಭಾವದಿಂದ) ತಾಳ್ಮೆ ತಪ್ಪಬೇಡಿ. ಕೊಂಚ ಯೋಚಿಸಿ. ಭೂಲೋಕದಲ್ಲಿರುವಾಗ ನಿಮ್ಮ ಅತಿ ದೊಡ್ಡ ಅಭಿಲಾಷೆ ಯಾವುದಿತ್ತು ಎಂಬುದರ ಜ್ಞಾಪಕ ನಿಮಗಿದೆಯೇನು?

ವಿನೋದ: (ಯೋಚಿಸುತ್ತಾ) ಆಶೆ ಅಭಿಲಾಷೆಗಳೇನೋ ಬಹಳ ಇದ್ದುವು. ಅವುಗಳಲ್ಲಿ

ವನ್ನು ನೆನಪಿಸಿಕೊಳ್ಳಲು ಸಾಧ್ಯವಿದೆಯೇ? ಆದರೂ ಕೂಡ... ಹಾಂ... ಜ್ಞಾಪಕಕ್ಕೆ ಬಂತು. ನನಗೆ ಒಂದು ದೊಡ್ಡ ಆಧುನಿಕ ಆಫೀಸು ಹಾಗೂ ಇತರ ಸಲಕರಣೆಗಳು ಈ ರೀತಿ (ಅಭಿನಯಿಸುತ್ತಾ ತೋರಿಸುತ್ತಾ) ಬೇಕೆಂಬ ಅಭಿಲಾಷೆ ಇತ್ತು.

ಅಪರಿಚಿತ: ತುಂಬಾ ಸಂತೋಷದ ಮಾತು. ಅವುಗಳೆಲ್ಲ ನಿಮಗೆ ಇಲ್ಲಿ ಸಿಕ್ಕಿವೆಯಲ್ಲ?

ವಿನೋದ: (ಸಂತೋಷದಿಂದ) ಅವುಗಳೇನೋ ಸಿಕ್ಕಿದವು. ಆದರೆ ಈ ಆಫೀಸಿನಲ್ಲಿ ನನ್ನ ಕೈಕೆಳಗೆ ಕೆಲಸ ಮಾಡುವ ನೌಕರವರ್ಗವೆಲ್ಲಿ? ಯಾರೂ ಕಂಡುಬರುವುದಿಲ್ಲವಲ್ಲ?

ಅಪರಿಚಿತ: (ನಗುತ್ತಾ) ಇಲ್ಲಿ ಕೆಲಸ ಮಾಡುವಂಥವರಾರೂ ಇಲ್ಲ.

ವಿನೋದ: (ಕೋಪಿಸಿಕೊಳ್ಳುತ್ತಾ) ಹಾಗಾದರೆ ಯಾವ ಕೆಲಸಗಾರರೂ ಇಲ್ಲದೆ ನಾನು ಈ ಕಂಪನಿಯನ್ನು ನಡೆಸುವುದಾದರೂ ಹೇಗೆ?

ಅಪರಿಚಿತ: ಕೆಲಸಗಾರರು ಇಲ್ಲದ ಕಂಪನಿಯನ್ನು ನಡೆಸಿ ಎಂದು ಅಂದವರಾದರೂ ನಿಮಗೆ ಯಾರು? ನೋಡಿ ಸ್ವಲ್ಪ ಯೋಚಿಸಿ. ಸ್ವರ್ಗ ಅಂದರೆ ಮನಸ್ಸಿನಲ್ಲಿರುವ ಅಭಿಲಾಷೆಗಳು ಪೂರ್ಣವಾಗುವ ಸ್ಥಳ ಎಂದು ನೀವೇ ಅಂದಿರಿ. ನಿಮ್ಮ ಮನಸ್ಸಿನಲ್ಲಿ ಒಂದು ಪ್ರತಿಷ್ಠಿತ ಸ್ಥಾನಮಾನ ಬಯಸುವ ಅಭಿಲಾಷೆ ಇತ್ತು. ಅಲ್ಲದೆ ಇನ್ನೂ ಕೊಂಚ ಯೋಚಿಸಿ. ನಿಮ್ಮ ಹಾಗೆಯೇ ಪ್ರತಿಯೊಬ್ಬರೂ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಸಿಗಬೇಕೆಂದು ಬಯಸುವವರೇ. ಹೀಗಾಗಿ ಇಲ್ಲಿ ಕೆಲಸಗಾರರೇ ಇಲ್ಲ. ಸರಿ. ಕೆಲಸಗಾರರ ಚಿಂತೆ ಯಾತಕ್ಕಾಗಿ ಮಾಡುತ್ತಿದ್ದೀರಿ? ನಿಮ್ಮ ಮನಸ್ಸಿನ ಅಭಿಲಾಷೆ ಪೂರ್ಣವಾಯಿತೋ ಇಲ್ಲವೋ? ಇನ್ನು ಅನಂತಕಾಲದವರೆಗೆ ಇದನ್ನು ಅನುಭವಿಸುತ್ತಾ ನಿಮ್ಮ ಆಯುಷ್ಯ ಕಳೆಯಿರಿ. (ಎನ್ನುತ್ತಾ ರಂಗಮಂಚದ ಬಲಪಾರ್ಶ್ವದ ಮೂಲಕ ಹೊರ ಹೋಗಲು ಪ್ರಾರಂಭಿಸುತ್ತಾನೆ.)

ವಿನೋದ: (ಕುರ್ಚಿಯಿಂದ ಎದ್ದು ಓಡುತ್ತಾ ಅಪರಿಚಿತನನ್ನು ತಡೆದು ನಿಲ್ಲಿಸುತ್ತಾ). ಸ್ವಲ್ಪ ನಿಲ್ಲಿ. ನೀವು ಹೇಳುವುದಾದರೂ ಏನು ಎಂದು ಯೋಚಿಸಿದ್ದೀರೇನು? ಈ ಆಧುನಿಕ ಆಫೀಸಿನಲ್ಲಿರುವ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಆಯುಷ್ಯ ಎಲ್ಲಾ ಕಳೆ ಎಂದು ನೀವು ಹೇಳುತ್ತೀರಲ್ಲ. ಇದಕ್ಕೆ ಅರ್ಥವಿದೆಯೇ? ಇದಕ್ಕೆ ಜೀವನ ಎಂದು ಹೇಗೆ ಹೇಳುತ್ತೀರಿ? ಇದು ಜೀವನವಲ್ಲ. ಮರಣ– ಕೇವಲ ಮರಣ ಅಂತೀನಿ. ನೋಡಿ. ನನಗೆ ಇಲ್ಲಿಯೂ ಕೂಡ ತುಂಬಾ ಮಹತ್ವದ ಕೆಲಸ ಮಾಡಬೇಕು. ಇಲ್ಲವಾದರೆ ಸಾಧ್ಯವೇ ಇಲ್ಲ.

ಅಪರಿಚಿತ: (ತಾಳ್ಮೆ ತಪ್ಪುತ್ತಾ) ಹಾಗೇನು? ಅಂದರೆ ನಿಮ್ಮ ಮನಸ್ಸಿನಲ್ಲಿದ್ದ ಒಂದು ಅಭಿಲಾಷೆ ಪೂರ್ಣವಾದರೆ ಸಾಕಾಗಲಿಲ್ಲ. ಒಂದು ಆಸೆ ಪೂರ್ಣವಾದ ನಂತರ ಇನ್ನೊಂದು ಅಭಿಲಾಷೆ ಪೂರ್ಣವಾಗಬೇಕೆಂಬ ಇಚ್ಛೆ ಸರಿ. ಆದರೆ ಇದಕ್ಕೆ ಅಂತ್ಯ ಎಲ್ಲಿ? ಅಲ್ಲದೆ ಇನ್ನೊಂದು ವಿಷಯ. ನಿಮ್ಮ ಮನಸ್ಸಿನ ಎಲ್ಲಾ ಆಸೆಗಳನ್ನು ಪೂರ್ಣ ಮಾಡೋಣ ಎಂದು ಇಟ್ಟುಕೊಳ್ಳೋಣ. ಆದರೆ ಒಬ್ಬನ ಆಸೆ ಇನ್ನೊಬ್ಬನ ಅಭಿಲಾಷೆಗೆ ವಿರೋಧವಾಗಿದ್ದರೆ. ನಾವು ಯಾರ ಆಸೆಯನ್ನು ಪೂರ್ಣ ಮಾಡಲಿ! ನೀವೇ ಹೇಳಿ. ಇಲ್ಲ. ವಿನೋದ ಅವರೆ, ಈ ದಾರಿ ಸ್ವರ್ಗದ ದಾರಿಯಲ್ಲ.

ವಿನೋದ: (ದುಃಖಿತನಾಗಿ ಹಿಂದಕ್ಕೆ ಹೋಗಿ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ) ನನಗೇನೂ ಅರ್ಥವಾಗುವುದಿಲ್ಲ. ಈ ಸ್ವರ್ಗ ನರಕಗಳ ವಿಷಯ ನನಗೇನೂ ತಿಳಿಯುತ್ತಿಲ್ಲವಲ್ಲ! (ಹಣೆಗೆ ಕೈ ಹಚ್ಚಿಕೊಂಡು ಕುಳಿತುಕೊಳ್ಳುತ್ತಾನೆ.)

ಅಪರಿಚಿತ: (ಹೋಗುತ್ತಿರುವವನು ಹಿಂತಿರುಗಿ ಬರುತ್ತಾ) ಭಲೇ ಭೇಷ್, ನೋಡಿ ವಿನೋದ ಅವರೇ. ನೀವು ಇಲ್ಲಿಗೆ ಬಂದ ನಂತರ ಪ್ರಥಮ ಬಾರಿಗೆ ಇದೊಂದು ವಿವೇಕಪೂರ್ಣವಾದ ಮಾತನ್ನು ಹೇಳಿದಿರಿ.

ವಿನೋದ: (ಪತಾಶನಾಗಿ) ಆದರೆ ಅವುಗಳ ಬಗ್ಗೆ ತಿಳಿದುಕೊಳ್ಳುವುದಾದರೂ ಹೇಗೆ?

ಅಪರಿಚಿತ: (ಗಂಭೀರನಾಗಿ) ನೋಡಿ. ಅವುಗಳ ಬಗ್ಗೆ ವಿವರಿಸಿ ಹೇಳುವುದು ಅಷ್ಟೇನೂ ಸುಲಭವಾದ ಕೆಲಸವಲ್ಲ. ಚಿಂತಿಸುವವನ ಹಾಗೆ ಮಾಡುತ್ತಾ) ಬಹುಶಃ ನೀವು ಇಲ್ಲಿರುವ ಇತರರೊಡನೆ ಮಾತುಕತೆ ನಡೆಸಿದರೆ ನಿಮಗೆ ಸ್ವರ್ಗ ನರಕದ ಬಗ್ಗೆ ಸ್ವಲ್ಪ ಹೆಚ್ಚು ತಿಳುವಳಿಕೆ ಬರಬಹುದು ಎಂದು ನನ್ನ ಅಭಿಪ್ರಾಯ.

ವಿನೋದ: (ಉತ್ತೇಜಿತನಾಗಿ) ಅಂದರೆ ನನಗೆ ಬೇಕಾದವರನ್ನು ಕಂಡು ಅವರೊಡನೆ ಮಾತುಕತೆ ನಡೆಸಬಹುದೇನು? ಹಿಂದಕ್ಕೆ ಸತ್ತುಹೋದ ಮಹಾನ್ ವ್ಯಕ್ತಿಗಳನ್ನು ಕಂಡು ಅವರೊಡನೆ ಸಂಭಾಷಣೆ ಮಾಡಬಹುದೇ?

ಅಪರಿಚಿತ: (ಬೇಸರ ಭಾವದಿಂದ) ಇಲ್ಲಿ ನಾವು ಯಾರನ್ನೂ 'ಸತ್ತವರು' ಎಂಬ ಶಬ್ದದಿಂದ ಕರೆಯುವುದಿಲ್ಲ. ನಾವು ಅವರಿಗೆ 'ಹಿಂತಿರುಗಿ ಬಂದವರು' ಅನ್ನುತ್ತೇವೆ. ಗೊತ್ತಾಯಿತೇನು? (ವಿನೋದ ಹೌದು ಅನ್ನುವಂತೆ ತಲೆ ಅಲ್ಲಾಡಿಸುತ್ತಾನೆ.) ಸರಿ, ನೀವು ಯಾರನ್ನೂ ಕಾಣಬಹುದು. ಕೇವಲ ಅವರ ಹೆಸರನ್ನು ಜ್ಞಾಪಿಸಿಕೊಂಡಾಕ್ಷಣ ಅವರು ನಿಮ್ಮ ಮುಂದೆ ಪ್ರತ್ಯಕ್ಷರಾಗುತ್ತಾರೆ.

ವಿನೋದ: (ಆನಂದದಿಂದ) ನಾನು ಛತ್ರಪತಿ ಶಿವಾಜಿ ಮಹಾರಾಜರನ್ನು ನೋಡಬಯಸುತ್ತೇನೆ. ಅವರ ಬಗ್ಗೆ ನನಗೆ ತುಂಬಾ ಅಭಿಮಾನ ಇದೆ. ಅವರು ಭಾರತದ ಒಬ್ಬ ಮಹಾ ಕುಶಾಗ್ರ ರಾಜಕಾರಣಿಗಳು.

(ರಂಗಮಂಚದ ಬಲ ಪಾರ್ಶ್ವಭಾಗದಲ್ಲಿ ಬೆಳಕು ಬೀಳುತ್ತದೆ. ಅಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ನಿಂತುಕೊಂಡಿರುವುದು ಕಂಡುಬರುತ್ತದೆ.)

ಶಿವಾಜಿ: (ತುಚ್ಛ ಭಾವದಿಂದ) (ಸ್ವಗತ) ಅಯ್ಯೋ ದೇವ. ಇನ್ನೊಬ್ಬ ಹೊಸ ಆಗಂತುಕ ನನ್ನ ಪರಿಚಯ ಮಾಡಿಕೊಳ್ಳಬಯಸುತ್ತಾನೆ ಎಂದು ಕಾಣುತ್ತದೆ. ಈ ಹೊಲಸು ಸೂ... ಮಗನಿಗೆ ಮಹಾರಾಜರ ಸಮ್ಮುಖದಲ್ಲಿ ಯಾವ ತರಹ ವರ್ತಿಸಬೇಕು ಎಂದು ಕೂಡ ಗೊತ್ತಿಲ್ಲ. (ವಿನೋದನಿಗೆ ಕೇಳಿಸುವಂತೆ) ಇವನಾದರೋ ಬರೇ ಬೆಪ್ಪನೆಂದೇ ತೋರುತ್ತದೆ.

ವಿನೋದ: (ಅವಮಾನಿತನಾಗಿ) ಇವರು ಮಹಾರಾಜರಾದರೂ ಪ್ರಜೆಗಳೊಡನೆ ಹೇಗೆ ವರ್ತಿಸಬೇಕು ಎಂಬ ಸಭ್ಯತನದ ಅರಿವೇ ಇಲ್ಲವಲ್ಲ!

ಅಪರಿಚಿತ: ಇಲ್ಲಿ ಸಭ್ಯತನ, ಅಸಭ್ಯತನ ಯಾವುದೂ ಇಲ್ಲ. ಇಲ್ಲಿ ಶಬ್ದಗಳೇ ಇಲ್ಲ–ಕೇವಲ ಆಲೋಚನೆಗಳು. ಈ ಆಲೋಚನೆಗಳೇ ಶಬ್ದದ ರೂಪದಲ್ಲಿ ಕೇಳಬರುತ್ತವೆ. ನಿಮ್ಮ ಭೂಲೋಕದ ಹೊರ ತೋರಿಕೆಯ ಸಭ್ಯತನ ಇತ್ಯಾದಿಗಳೆಲ್ಲ ಜನರ ನಿಜವಾದ ಅಂತರಂಗದ ಆಲೋಚನೆಗಳನ್ನು ಮುಚ್ಚಿಡುವ ಸಾಧನಗಳು. ಇಲ್ಲಿ ಅಂತಹ ಕೃತಕ ಸಾಧನಗಳ ಅಗತ್ಯವೇ ಇಲ್ಲ.

ವಿನೋದ: (ಧೈರ್ಯ ಕಳೆದುಕೊಳ್ಳುತ್ತಾ) ನಾನು ಮಹಾರಾಜರೊಡನೆ ಮಾತಾಡಲೇನು? ಅಲ್ಲ, ಆಲೋಚನೆ ಮಾಡಲೇನು?

ಅಪರಿಚಿತ: ಸರಿ, ನಿಮ್ಮಿಷ್ಟದಂತೆ ಆಲೋಚನೆ ಮಾಡಿಕೊಳ್ಳಿ.

ವಿನೋದ: (ಮಹಾರಾಜರಿಗೆ ಅಭಿಮಾನದಿಂದ ಭಯಭಕ್ತಿಯಿಂದ ಮುಜುರೆ ಮಾಡುತ್ತಾ) ಮಹಾರಾಜ, ತಮ್ಮ ದರ್ಶನದಿಂದ ನಾನು ಇಂದು ಪುನೀತನಾದೆ. ತಾವು ನನ್ನ ಆದರ್ಶ ರಾಜ



ಕಾರಣಗಳು. ನಿಜವಾಗಿಯೂ ತಾವು ಭೂಲೋಕದ ಚರಿತ್ರೆಯಲ್ಲಿ ಕಂಡುಬರುವ ಎಲ್ಲಾ ರಾಜರುಗಳಲ್ಲಿ 'ಏಕಮೇವ ಚಕ್ರವರ್ತಿಗಳು' ಎಂದು ಹೇಳಲು ಅಡ್ಡಿ ಇಲ್ಲ.

ಶಿವಾಜಿ: (ಕೋಪಿಸಿಕೊಳ್ಳುತ್ತಾ) (ಸ್ವಗತ) ಸರಿ. ನಾನು ಎಣಿಸಿದಂತೆಯೇ ಆಯಿತು. ಇವನು ನನ್ನ ಇನ್ನೊಬ್ಬ ಹೊಗಳುಭಟ್ಟ. ಈ ಹೊಗಳಿಕೆಯು ಇನ್ನೊಂದು ತರದ ಅಸಭ್ಯತನ. (ವಿನೋದನಿಗೆ ಕೇಳಿಸುವಂತೆ) ಯಾತಕ್ಕಾಗಿ ನೀನು ನನ್ನನ್ನು ಈ ರೀತಿ ಹೊಗಳುತ್ತೀಯಯ್ಯಾ?

ವಿನೋದ: (ಆಶ್ಚರ್ಯದಿಂದ) ಯಾತಕ್ಕೆಂದರೆ ನನ್ನ ಅಭಿಪ್ರಾಯದಲ್ಲಿ ತಾವು ಬಹು ಅಸಾಮಾನ್ಯ ಮಹಾ ದಂಡನಾಯಕರು. ಲೋಕನಾಯಕರು ಎಂದು…

ಶಿವಾಜಿ: (ವಿನೋದನತ್ತ ಹಾರಿ ಅವನ ಬಾಯಿಯನ್ನು ಮುಚ್ಚುವ ಪ್ರಯತ್ನ ಮಾಡುತ್ತಾ) ಏ ಮುಚ್ಚು. ಬಾಯಿ ಮುಚ್ಚು! (ಅತ್ತಿತ್ತ ನೋಡುತ್ತಾ ಮೆಲ್ಲಗಿನ ಸ್ವರದಲ್ಲಿ) ಇಲ್ಲಿ ದಂಡನಾಯಕರನ್ನೂ ಭಂಡ ನಾಯಕರನ್ನೂ ಯಾರೂ ಮೆಚ್ಚುವುದಿಲ್ಲ. ಕೊಲೆಯನ್ನು ಭಂಡತನವನ್ನು ಹೊಗಳಿದಾಕ್ಷಣ ಕೊಲೆಗಾರ ಅಥವಾ ದರೋಡೆಗಾರ ಶ್ರೇಷ್ಠನಾಗುವುದಿಲ್ಲ. ನಮ್ಮಂತಹ ದಂಡನಾಯಕರು ಇತ್ಯಾದಿ ಪುರುಷರು ಇಲ್ಲಿಯ ಸಂತತಿ ಅಭಿವೃದ್ಧಿ ಕಾರಣಭೂತರು. ಅಲ್ಲದೆ ನಮ್ಮಂತಹ ರಾಜಕಾರಣಿಗಳಿಂದಾಗಿಯೂ ಇಲ್ಲಿಯವರ ಕೆಲಸ ಹೆಚ್ಚಾಗುತ್ತದೆ. ಅದಕ್ಕಾಗಿ ಇಲ್ಲಿಯವರು ನಮ್ಮನ್ನು ಹಾಗೂ ನಮ್ಮ ಕೆಲಸಗಳನ್ನು ಮೆಚ್ಚುವುದಿಲ್ಲ. ಗೊತ್ತಾಯಿತೇನು? ದಯವಿಟ್ಟು, ಇನ್ನು ಮುಂದಕ್ಕೆ ದಂಡನಾಯಕ, ಲೋಕನಾಯಕ ಇತ್ಯಾದಿ ಉಪಮೆಗಳಿಂದ ನನ್ನನ್ನು ಇಲ್ಲಿ ಸಂಬೋಧಿಸಬೇಡ.

ವಿನೋದ: (ಉತ್ಸಾಹ ಇಳಿದಂತಾಗಿ) ಹಾಗಾದರೆ ನಾನು ತಮಗೆ ಬರೇ ಚಕ್ರವರ್ತಿ ಎಂದು ಕರೆಯಬೇಕೇನು? ತಾವು ಸ್ವಲ್ಪ ಹೆಚ್ಚು ಸಮಯ ಭೂಲೋಕದಲ್ಲಿ ಜೀವಿಸುತ್ತಿದ್ದರೆ ಭರತಖಂಡದಿಂದ ಮೊಗಲರನ್ನು ಹೊಡೆದೋಡಿಸಿ ಸಮಗ್ರ ಭಾರತವನ್ನು ತಾವೇ ಆಳಬಹುದಿತ್ತು.

ಶಿವಾಜಿ: (ನಿಟ್ಟುಸಿರು ಬಿಡುತ್ತಾ) ಏನು ಹುಚ್ಚು ವಿಚಾರಗಳು! ನಾನು ನನ್ನ ಎಲ್ಲಾ ಆಯುಷ್ಯವನ್ನು ಭರತಖಂಡದ ಚಕ್ರವರ್ತಿಯಾಗಬೇಕೆಂಬ ಅಭಿಲಾಷೆಯಿಂದ ಹಾಳುಮಾಡಿಕೊಂಡೆ. ಅಯ್ಯೋ ಬೆಪ್ಪೆ, ನಿನಗೆ ಗೊತ್ತೇನು? ನೀನು ಭರತಖಂಡವೆನ್ನುವ ಆ ಸ್ಥಳವು ಈ ಅನಂತ ವಿಶ್ವದಲ್ಲಿ ಬರೇ ಒಂದು ಧೂಳೀಕಣ. ಇನ್ನಾದರೂ ನಿನ್ನ ಈ ಹುಚ್ಚುತನದ ಮನೋಭಾವನೆಯನ್ನು ಬಿಟ್ಟು ಬಿಡು,

ನನ್ನ ಆ ಹಿಂದಿನ ಕ್ಷುಲ್ಲಕ ಕೆಲಸವನ್ನು ಒಂದು ಮಹಾ ಕೆಲಸವೆಂದು ಭಾವಿಸುವುದನ್ನು ನಿಲ್ಲಿಸು.

ವಿನೋದ: (ಅರ್ಥವಾಗದಂತವನಾಗಿ) ಹಾಗಾದರೆ ನಿಮ್ಮ ಹಿಂದಿನ ಆ ಕೆಲಸವನ್ನು ಏನೆಂದು ಕರೆಯಬೇಕು?

ಶಿವಾಜಿ: ನನ್ನ ಆ ಕೆಲಸವು ಬರೇ ಮತಿಹೀನತನವಲ್ಲದೆ ಮತ್ತೇನಲ್ಲ. ನಾನು ಈ ಹಿಂದೆ ಸಂಗ್ರಾಮಗಳಲ್ಲಿ ತುಂಡರಿಸಿದ ಸಹಸ್ರ ಸಹಸ್ರ ಜನರನ್ನು ಇಲ್ಲಿ ದಿನಾಲೂ ನೋಡಿ ಯಾತನೆಪಡುತ್ತೇನೆ. ನನ್ನಿಂದಾಗಿ ಬಡವರಾದ, ದರಿದ್ರರಾದ ದೀನರನ್ನು ದಲಿತರನ್ನು ದಿನಾ ಇಲ್ಲಿ ನೋಡಿ ಪಡುವ ವೇದನೆಯನ್ನು ನಿನಗೆ ಹೇಗೆ ಹೇಳಲಿ? ಇವೆಲ್ಲ ನನ್ನ ಮನೋರಂಜನೆಯ ವಿಷಯಗಳೆಂದು ನೀನು ಭಾವಿಸಿದೆಯೇನು? ಈ ದಿನಗಳಲ್ಲಿ ಇಲ್ಲಿ ನನ್ನ ಆ ಹಿಂದಿನ ಕೆಲಸಗಳನ್ನು ಮರೆಯಲು ಬರುವುದಿಲ್ಲ—ಅವು ಇಲ್ಲಿ ನನ್ನನ್ನು ಸತತವಾಗಿ ಕಾಡಿಸುತ್ತಲೇ ಇರುತ್ತವೆ. ಒಂದು ದೃಷ್ಟಿಕೋನದಿಂದ ಅವುಗಳು ನನ್ನನ್ನು ಈ ತರದ ಕಾಡಿಸುವುದು ನ್ಯಾಯವೇ ಸರಿ.

ವಿನೋದ: (ಚಕಿತನಾಗಿ) ಹೀಗೆ ತಾವು ಈಗ ಭಾವಿಸುವುದಾದರೆ ಈ ಹಿಂದೆ ಆ ತರಹದ ಕೆಲಸಗಳನ್ನು ಯಾತಕ್ಕಾದರೂ ಮಾಡಿದಿರಿ?

ಶಿವಾಜಿ: (ಕುಪಿತನಾಗಿ ಒದರುತ್ತ) ಯಾತಕ್ಕೆಂದರೆ ನಿನ್ನಲ್ಲಿರುವ ಕೆಲವೊಂದು ಗ್ರಂಥಿಗಳ ಅಭಾವದಿಂದಾಗಿ ಈ ನಿನ್ನ ಮಣ್ಣುತುಂಬಿದ ತಲೆಗೆ ಈ ಸೂಕ್ಷ್ಮ ವಿಷಯವನ್ನು ನಾನು ಹೇಗೆ ವಿವರಿಸಲಿ? (ಶಾಂತನಾಗಿ) ನಿನ್ನ ಆ ಜಗತ್ತಿನಲ್ಲಿ ಪ್ರತಿಯೊಬ್ಬ ಮಾನವನು ತಾನು ಅದ್ವಿತೀಯ, ಅಜೇಯನೆಂದು ತಿಳಿದುಕೊಂಡಿರುತ್ತಾನೆ. ಅವನು ಪ್ರತಿಯೊಂದು ಕೆಲಸವನ್ನು ಆತ್ಮಸಂತೋಷಕ್ಕಾಗಿ ಮಾಡುತ್ತಾನೆ. ಆದರೆ ಆತನು ಇಲ್ಲಿಗೆ ಬಂದಾಕ್ಷಣ ಆತನ 'ತನ್ನತನ'ದ ಒಂದು ಭಾಗವು ಕಳೆದು ಹೋಗಿ 'ಸಂಘ'ತನವು ಬರುತ್ತದೆ. ಅಂದರೆ ಬೇರೆಯವರ ಮನಸ್ಸಿನ ಭಾವನೆಯು ಕೂಡ ಆತನಿಗೆ ತನ್ನದೇ ಮನಸ್ಸಿನ ಭಾವನೆಯಾಗುತ್ತದೆ. ಆದುದರಿಂದ ನನ್ನಿಂದಾಗಿ ನರಳಿದ ಎಲ್ಲರ ಭಾವನೆಯನ್ನು ಇಂದು ನಾನು ಇಲ್ಲಿ ಅನುಭವಿಸುತ್ತಿದ್ದೇನೆ.

ವಿನೋದ: (ತುಸು ಧೈರ್ಯ ತಳೆದು) ಆದರೂ ಕೂಡ ಭೂಲೋಕದಲ್ಲಿರುವಾಗ ತಮಗೆ ಆ ಕೆಲಸಗಳನ್ನು ಮಾಡುತ್ತಿರುವಾಗ ತುಂಬಾ ಸಂತೋಷವಾಗಿದ್ದಿರಬೇಕು.

ಶಿವಾಜಿ: (ನಿಟ್ಟುಸಿರು ಬಿಡುತ್ತಾ) ನಿಜ ಆ ಕೆಲಸಗಳು ಭೂಲೋಕದಲ್ಲಿ ನನಗೆ ತುಂಬಾ ಸಂತೋಷವನ್ನುಂಟುಮಾಡುತ್ತಿದ್ದುವು. ನೋಡು ನಾನೇನು ನಿನ್ನ ಹಾಗೆ ಹುಚ್ಚನಲ್ಲ. ಭೂಲೋಕದಲ್ಲಿ ನಾನು ತಂದ ಎಲ್ಲಾ ಸಾವು ನೋವು, ದುಃಖ, ದಾರಿದ್ರ್ಯ ಇತ್ಯಾದಿಗಳ ಕಲ್ಪನೆ ಆಗಲೂ ನನಗಿತ್ತು. ನಾನು ನನ್ನ ಈ ಕಣ್ಣುಗಳಿಂದಲೇ ಮನುಷ್ಯರು ನನ್ನ ಖಡ್ಗದಿಂದ ತುಂಡರಿಸಿ ಬೀಳುವುದನ್ನು ನೋಡಿದ್ದೇನೆ; ತೋಪುಖಾನೆಗಳಿಂದ ಹಳ್ಳಿ ಹಳ್ಳಿಗಳೇ ಸುಡುವುದನ್ನು ನೋಡಿದ್ದೇನೆ; ಇತರ ರಾಜ್ಯಗಳ ಕೋಟೆ ಕೊತ್ತಲಗಳಲ್ಲಿದ್ದ ಹೆಂಗಸರು, ಮಕ್ಕಳು, ಮುದುಕರು ತಿನ್ನಲು ಆಹಾರವಿಲ್ಲದೆ, ಕುಡಿಯಲು ನೀರಿಲ್ಲದೆ ನನ್ನ ಆಕ್ರಮಣದಿಂದಾಗಿ ಸಾಯುವುದನ್ನು ನೋಡಿದ್ದೇನೆ. ಇದೆಲ್ಲಾ ನನ್ನಿಂದಾಗಿ ಆಗುತ್ತದೆ ಎಂದು ನನಗೂ ಗೊತ್ತಿತ್ತು. ಆದರೆ ನಾನೇನು ಮಾಡಲಿ? ನನ್ನಲ್ಲಿದ್ದ ಆ ಅಹಂಭಾವವು ನನ್ನನ್ನು ಇದನ್ನೆಲ್ಲಾ ಮಾಡಲು ಪ್ರೇರೇಪಿಸುತ್ತಿತ್ತು, ಪ್ರಚೋದಿಸುತ್ತಿತ್ತು. ನನ್ನ ವಿವೇಕವಾದರೂ ನನ್ನನ್ನು ಈ ಕೆಲಸಗಳನ್ನು ಮಾಡದಂತೆ ತಡೆಯುವ ಪ್ರಯತ್ನ ಮಾಡುತ್ತಿತ್ತು. ಆದರೆ ಅದು ಸಫಲವಾಗಲಿಲ್ಲ. ನನ್ನ ಅಹಂಭಾವವು ನನ್ನ ವಿವೇಕವನ್ನು ಜಯಿಸುತ್ತಿತ್ತು, ಸೋಲಿಸುತ್ತಿತ್ತು. ಆದರಿಂದಾಗಿ ನಾನು ಇಂದು ಇಲ್ಲಿ ನಿನ್ನಂತಹ ಅವಿವೇಕಿಗಳ ಪ್ರಶ್ನೆಗಳಿಂದ ವೇದನೆ ಪಡೆಯಬೇಕಾಗುತ್ತದೆ. ಅಂದು ಹಾಗೂ ಇಂದು ನಿನ್ನಂಥವರೇ ನಾನು ಮಾಡಿದ್ದು ಅದ್ಭುತ, ಅಸಾಧ್ಯ ಕಾರ್ಯವೆಂದು ಭಾವಿಸಿ ಹೊಗಳಲು ಪ್ರಾರಂಭಿಸುತ್ತಾರೆ. ಇಲ್ಲಿ ಇವನು

ನಾನು ಇನ್ನು ಹೆಚ್ಚು ತಡೆದುಕೊಳ್ಳಲು ಸಾಧ್ಯವಿಲ್ಲ (ಎನ್ನುತ್ತಾ ತನ್ನ ತಲೆಯನ್ನು ಕೈಗಳಿಂದ ಮುಚ್ಚಿ ಕೊಳ್ಳುತ್ತಾ ನಿಷ್ಕ್ರಮಿಸುತ್ತಾನೆ)

(ಬಲ ಪಾರ್ಶ್ವದಲ್ಲಿ ಪುನಃ ಕತ್ತಲಾಗುತ್ತದೆ.)

ವಿನೋದ: (ನಿರಾಶನಾಗಿ) ಛೇ ಮಹಾರಾಜರು ನನ್ನನ್ನು ತೀರ ನಿರಾಶೆಗೊಳಿಸಿದರು.

ಅಪರಿಚಿತ: ನೀವೇನು ಇಲ್ಲಿಯೂ ಮಹಾರಾಜರು, ದಂಡನಾಯಕರು, ಲೋಕನಾಯಕರು ಇತ್ಯಾದಿ ಇದ್ದಾರೆಂದು ಭಾವಿಸಿದ್ದೀರಾ? ಒಂದು ವಿಷಯವನ್ನಿಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳಿ—ಇಲ್ಲಿಯ ಆಚಾರ ವಿಚಾರಗಳು ಭೂಲೋಕದ ಆಚಾರ ವಿಚಾರಗಳಿಗಿಂತ ಭಿನ್ನವಾಗಿವೆ, ಬಹಳ ಸರಳವಾಗಿವೆ, ನಿಷ್ಕಪಟವಾಗಿವೆ. ಸರಿ, ಇನ್ನಾರನ್ನು ನೋಡಬಯಸುತ್ತೀರಿ?

ವಿನೋದ: (ಆಲೋಚಿಸುತ್ತಾ)......ಸುರಸುಂದರಿ ನೂರಜಹಾನ ಮಹಾರಾಣಿಯವರನ್ನು. ಅವರು ಸೌಂದರ್ಯದ ಪ್ರತೀಕವೇ ಆಗಿದ್ದರು.

(ಬಲ ಪಾರ್ಶ್ವದಲ್ಲಿ ಪುನಃ ಬೆಳಕಾಗುತ್ತದೆ. ನೂರಜಹಾನರಾಣಿಯು ಒಂದು ಕೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಬಾಚಣಿಗೆಯಿಂದ ತನ್ನ ಬಿಳಿ ಕೂದಲನ್ನು ಬಾಚಿ ಕೊಳ್ಳುತ್ತಾ ಪ್ರವೇಶಿಸುತ್ತಾಳೆ.)

ನೂರಜಹಾನ: ಮೊದಲು ನಾನು ನನ್ನ ಕಳೆದುಹೋದ ಸೌಂದರ್ಯವನ್ನು ಮರಳಿ ಪಡೆಯಲೇ ಬೇಕು, ಅನಂತರ ನನ್ನನ್ನು ಸುರಸುಂದರಿ ಎಂದು ಹೇಳಲು ಏನೂ ಆತಂಕವಿಲ್ಲ.

ವಿನೋದ: (ಆಶ್ಚರ್ಯಚಕಿತನಾಗಿ) ಮಹಾರಾಣಿಯವರೇ ಇದೇನು ತಮ್ಮ ಸೌಂದರ್ಯವೇ ನಾಯಿತು? ತಾವು ಇಷ್ಟು ಹೊಲಸಾಗಿ ಕಾಣಲು ಕಾರಣವೇನು?

ನೂರಜಹಾನ. (ನಿಟ್ಟುಸಿರು ಬಿಡುತ್ತಾ) ನಾನು ಏನೆಂದು ಹೇಳಲಿ? ಇದೆಲ್ಲಾ ಆದದ್ದು ಇಲ್ಲಿನ ಜನರಿಂದಾಗಿ. ಇಲ್ಲಿ ಅವರು ಯಾರೂ ನನ್ನ ಸೇವೆಯನ್ನು ಮಾಡಲು ಸಿದ್ಧರಿಲ್ಲ. ಇದು ಬರೇ ಹೊಲಸು ಸ್ಥಳ. ಇಲ್ಲಿ ಯಾರಿಂದಲೂ ಯಾವ ಕೆಲಸವನ್ನೂ ಮಾಡಿಸಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಶ್ರಮಿಕರು, ಕಾರ್ಮಿಕರು, ರೈತರು ಎಲ್ಲರೂ ಸ್ವತಂತ್ರರಾಗಿದ್ದಾರೆ. ಅಲ್ಲದೆ ಅವರು ಇಲ್ಲಿ ಹಣಕ್ಕೆ ಯಾವ ಮಹತ್ವವನ್ನು ಕೊಡುವುದಿಲ್ಲ. ಅಷ್ಟೇ ಅಲ್ಲ. ಇಲ್ಲಿಗೆ ಬಂದ ನಂತರ ಯಾರಿಗೂ ಇತರರನ್ನು ದುಡಿಸಿಕೊಳ್ಳುವ ಅವಕಾಶವನ್ನೇ ಇಲ್ಲಿಯವರು ಕೊಡುವುದಿಲ್ಲ. ಇಲ್ಲಿ ಭಾರತದ ಚಕ್ರವರ್ತಿಗಳಿಗೂ ಹೊಲೆಮಾದಿಗರಿಗೂ ಏನೂ ವ್ಯತ್ಯಾಸವೇ ಇಲ್ಲವಂತೆ. ಎಲ್ಲರೂ ಸಮಾನರಂತೆ. ನೀವೇ ಸ್ವಲ್ಪ ಯೋಚಿಸಿ. ಇದೇನು ಹೊಲಸು ವಿಚಾರ? ಸಮಾನತೆಯಂತೆ, ಸಮಾಜವಾದವಂತೆ. ಈ ಮಾತಿಗೆಲ್ಲ ಅರ್ಥವಿದೆಯೇ ನಾವಾದರೋ ಶ್ರೇಷ್ಠ ಮೊಗಲ ವಂಶದ ರಾಜಮನೆತನದವರು. ಅಲ್ಲದೆ ನಾವು ಭಾರತವನ್ನು ಆಳಿದ ವಂಶಜರು. ಇಲ್ಲಿಗೆ ಬಂದು ಎಲ್ಲರಂತೆ ನಾವು ಕೂಡ ಸಾಮಾನ್ಯ ಪ್ರಜೆಗಳ ಸಂಗಡ ಅವರಂತೇ ಇರಬೇಕು ಅಂದರೆ ಅದಕ್ಕೆ ಅರ್ಥವಿದೆಯೇ? ನ್ಯಾಯವಿದೆಯೇ? ಸರಿ. ಇರಲಿ. ಇವರಿಗೆಲ್ಲಾ ನಾನು ಚೆನ್ನಾದ ಪಾಠ ಕಲಿಸದಿದ್ದರೆ ನನ್ನ ಹೆಸರು ನೂರ-ಜಹಾನಳಲ್ಲ. ಮೊದಲು ನಾನು ಕಳೆದು ಹೋದ ನನ್ನ ಸೌಂದರ್ಯವನ್ನು ಪಡೆದುಕೊಳ್ಳಬೇಕು. ಅನಂತರ ಇಲ್ಲಿಯವರೆಲ್ಲಾ ನನ್ನ ಸೌಂದರ್ಯವನ್ನು ಆರಾಧಿಸುವಂತೆ ಮಾಡುತ್ತೇನೆ. ನನ್ನ ಸೌಂದರ್ಯದ ಮೂಲಕ ಇವರನ್ನೆಲ್ಲಾ ಆಟ ಆಡಿಸುತ್ತೇನೆ; ನನ್ನ ಒಂದು ಪ್ರೇಮಕಟಾಕ್ಷಕ್ಕಾಗಿ ಸದಾ ಪರಿತಪಿಸುವಂತೆ, ಒಬ್ಬರನ್ನೊಬ್ಬರು ದ್ವೇಷಿಸುವಂತೆ ಹೊಡೆದಾಡುವಂತೆ ಮಾಡುತ್ತೇನೆ.



ನನ್ನ ರಾಜ ಮಹಲಿನಲ್ಲಿ ದಿನಾ ಜಲಸಾ ಮೇಜವಾನಿಗಳನ್ನು ನಡೆಸುತ್ತೇನೆ. (ರಾಣಿ ಆನಂದ ಪರವಶಳಾಗಿ ವಿನೋದನ ಸುತ್ತ ಕಥಕ್ ನಾಟ್ಯ ಶೈಲಿಯಲ್ಲಿ ಮುಜುರೆ ನೃತ್ಯ ಮಾಡುತ್ತಾಳೆ)

ವಿನೋದ: (ಅಪ್ರತಿಭನಾಗಿ) ಛೇ ಛೇ ಮಹಾರಾಣಿಯವರು ಇದೇನು ಮಾಡುತ್ತಿದ್ದೀರಿ?

ನೂರಜಹಾನ: (ಕುಪಿತಳಾಗಿ) ಇದೇನು ಹೊಲಸು ಸುಡುಗಾಡು ಸ್ಥಳ? ಸ್ವಲ್ಪ ಆಮೋದ ಪ್ರಮೋದ ಮಾಡುವ ಎಂದರೆ ಅಲ್ಲಿ ಪ್ರತಿಯೊಬ್ಬರೂ "ಛೇ ಇದೇನು ಮಾಡುತ್ತಿದ್ದೀರಿ?" ಎಂದು ಕೇಳುತ್ತಾರೆ. ಇಲ್ಲಿ ಜೀವನದ ಕೇವಲ ಒಂದು ಕ್ಷಣವನ್ನು ಕೂಡ ಆನಂದದಿಂದ ಕಳೆಯಲು ಅವಕಾಶವಿಲ್ಲ. (ಅಳುತ್ತಾಳೆ)

ವಿನೋದ: (ಸಂಕೋಚದಿಂದ) ಮಹಾರಾಣಿಯವರು ಚಿಕ್ಕಮಕ್ಕಳಂತೆ ವರ್ತಿಸುತ್ತಿದ್ದೀರಿ. ತಮ್ಮ ಮನಸ್ಸಿನಲ್ಲಿದ್ದ ಇಚ್ಛೆಯು ಕೂಡಲೇ ನೆರವೇರದಿದ್ದರೆ ಮಕ್ಕಳಂತೆ ಅಳಲು ಪ್ರಾರಂಭಿಸುತ್ತೀರಿ.

ನೂರಜಹಾನ: (ಕಣ್ಣೀರು ಒರೆಸುತ್ತಾ) ನಿಜ. ನಾನು ಮತ್ತೇನು ಮಾಡಲಿ? ಭೂಲೋಕದಲ್ಲಿರುವಾಗ ನನ್ನ ಮನಸ್ಸಿನಲ್ಲಿ ಬರುತ್ತಿತ್ತೋ ಅದೆಲ್ಲಾ ಸಿಗುತಿತ್ತು. ನಡೆಯುತ್ತಿತ್ತು. ಇಲ್ಲಿಗೆ ಬಂದ ನಂತರ ಜಲಸಾ ಮೇಜವಾನಿಗಳಿಲ್ಲ, ನೃತ್ಯಗಾಯನಗಳಿಲ್ಲ.

ವಿನೋದ: ಭೂಲೋಕದಲ್ಲಿರುವಾಗ ಆ ಮೇಜವಾನಿಗಳು ತಮಗೆ ಸಂತೋಷ ನೀಡುತ್ತಿದ್ದುವೆ?

ನೂರಜಹಾನ: ಮೊದಮೊದಲು ಮೋಜೆನಿಸುತ್ತಿತ್ತು, ನಂತರ ಮಾತ್ರ ಅವುಗಳು ಬೇಸರ ಬರಿಸತೊಡಗಿದವು. ಪ್ರತಿ ಮೇಜವಾನಿಗೂ ಅದೇ ಅದೇ ಸ್ತ್ರೀ ಪುರುಷರು ಬರುತ್ತಿದ್ದರು. ಪ್ರತಿ ಸಲವೂ ಅವರ ಹಳೇ ಸಲ್ಲಾಪಗಳನ್ನು ಕೇಳಿ ಕೇಳಿ ಬೇಸರ ಬರುತ್ತಿತ್ತು.

ವಿನೋದ: ಆದರೂ ಕೂಡ ಪ್ರತಿ ಮೇಜವಾನಿಗೂ ತಾವು ತಪ್ಪದೆ ಹೋಗುತ್ತಿದ್ದಿರಿ ಅಲ್ಲ.

ನೂರಜಹಾನ: ಮತ್ತಿನ್ನೇನು ಮಾಡಲಿ? ಈ ದೇಹವೊಂದು ಇದೆಯಲ್ಲ: ಅದಕ್ಕೆ ಏನಾದರೂ ಒಂದು ಚಟ ಬೇಕಲ್ಲವೇ? ಸಮಯ ಕಳೆಯಲು ಒಂದು ಸಾಧನ ಬೇಕಲ್ಲವೇ?

ವಿನೋದ: ಅಂದರೆ ಮನಸ್ಸಿಗೆ ಆ ಮೇಜವಾನಿಗಳು ಅಷ್ಟೊಂದು ಸಂತೋಷ ಕೊಡದಿದ್ದರೂ ದೇಹದ ಚಟದ ಕಾರಣಕ್ಕಾಗಿ ಅವುಗಳಿಗೆ ಹೋಗುವ ಅಗತ್ಯವಿತ್ತೆ?

ನೂರಜಹಾನ: ಅವುಗಳಿಗೆ ಹೋಗುವ ಅಗತ್ಯವಿರಲಿಲ್ಲ. ಆದರೆ ಅವುಗಳಿಗೆ ಹೋಗುವದರಿಂದ

ಸಮಯ ಕಳೆಯುತ್ತಿತ್ತು. ಅಲ್ಲದೆ ಕೆಲವೊಮ್ಮೆ ಮಹಾರಾಜರ ಕಣ್ಣು ತಪ್ಪಿಸಿ ಸಾಮಂತ ರಾಜರ ಸುಂದರ ಕುಮಾರರತ್ತ ಪ್ರೇಮಕಟಾಕ್ಷ ಬೀರುವ ಸಂದರ್ಭವೂ ಸಿಗುತ್ತಿತ್ತು. ಅಂತಹ ಅಪರೂಪದ ಸುಸಂಧಿಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲದಿದ್ದುದರಿಂದ ನಾನು ಅವುಗಳಿಗೆ ಹೋಗಲೇ ಬೇಕಾಗುತ್ತಿತ್ತು.

ವಿನೋದ: (ಏನೂ ತಿಳಿಯದಂಥವನಾಗಿ) ಮಹಾರಾಣಿಯವರೇ, ನನಗೆ ಇದೊಂದು ಅರ್ಥವಾಗುವುದಿಲ್ಲ. ಮೋಜುವಾನಿಗಳು ತಮಗೆ ಸಂಪೂರ್ಣ ಸಂತೋಷವನ್ನು ಕೊಡದಿದ್ದರೂ ತಾವು ಇಂದು ಇಲ್ಲಿ ಅವುಗಳಿಗಾಗಿ ಪರಿತಪಿಸುತ್ತಿದ್ದೀರಿ !

ನೂರಜಹಾನ: (ಹತಾಶಳಾಗಿ) ಈ ಸುಡುಗಾಡು ಸ್ಥಳದಲ್ಲಿ ಬೇರೆ ಇನ್ನೇನಿದೆ? ಅಲ್ಲದೆ ನಾನು ಮಹಾರಾಣಿಯಾಗಿದ್ದ ಕಾರಣಕ್ಕಾದರೂ ಅಂತಹ ಮೋಜುವಾನಿಗಳನ್ನು ಇಲ್ಲಿ ನಾನು ಆಶಿಸಬಾರದೇ?

(ಬಿಕ್ಕುತ್ತಾ ತಲೆ ಬಾಚಿಕೊಳ್ಳುತ್ತಾ ನಿಷ್ಕ್ರಮಿಸುತ್ತಾಳೆ. ಬಲ ಪಾರ್ಶ್ವದಲ್ಲಿ ಕತ್ತಲೆಯಾಗುತ್ತದೆ.)

ವಿನೋದ: (ತಲೆಕೊಡವಿಕೊಳ್ಳುತ್ತಾ) ಏನಪ್ಪಾ ಈ ಶೂನ್ಯ ಜೀವನ. ಇವರೂ ನನ್ನನ್ನು ತುಂಬಾ ನಿರಾಶೆಗೊಳಿಸಿದರು.

ಅಪರಿಚಿತ: ನಿಜ. ಮಾನವನ ಜೀವನವು ತುಂಬಾ ಅಸಂತೋಷಭರಿತವಾದಾಗ ಆತನು ದೊಡ್ಡ ಅಸಂತೋಷಕ್ಕಿಂತ ಚಿಕ್ಕ ಅಸಂತೋಷವೇ ಜೀವನದಲ್ಲಿ ಸರಿ ಎಂದು [illegible]. ಅಂತಹ ಸಂದರ್ಭದಲ್ಲಿ ಆತನು ಆ ಚಿಕ್ಕ ಅಸಂತೋಷದಲ್ಲಿಯೇ ಸಂತುಷ್ಟನಾಗಿ ಅದಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಾನೆ. ಇದುವೇ ಜೀವನ.

(ಬಲ ಪಾರ್ಶ್ವದಲ್ಲಿ ಪುನಃ ಬೆಳಕಾಗುತ್ತದೆ. ಒಬ್ಬ ಯುವಕ ವಾದ್ಯವನ್ನು ಬಾರಿಸುತ್ತಾ ಪ್ರೇಮಗೀತವನ್ನು ಹೇಳುತ್ತಾ ಪ್ರವೇಶಿಸುತ್ತಾನೆ.)

ಯುವಕ: ಅರೇ ಯಾರ್. ಇಲ್ಲಿ ತೀರ್ಥ ಪಾನಕವೆಲ್ಲಾದರೂ ಸಿಗುತ್ತದೇನಯ್ಯಾ ? ಒಂದು ವೇಳೆ ಪಾನಕವಿಲ್ಲವಾದರೆ ಬಿಸಿ ಆರತಿಯೂ ಆದೀತು. ನೀನೇನನ್ನುತ್ತೀಯಾ ಪ್ಯಾರೇ? (ಬಂದು ಅಪರಿಚಿತನ ಬೆನ್ನಿಗೆ ಸಲುಗೆಯಿಂದ ಬಾರಿಸುತ್ತಾನೆ.)

ಅಪರಿಚಿತ: (ನಗುತ್ತಾ) ಯಾವ ದೇವರ ತೀರ್ಥ ಮತ್ತು ಆರತಿ ಬೇಕು ನಿನಗೆ?

ಯುವಕ: ಓ ನನ್ನ ಮಗನೆ. ಏನೂ ಗೊತ್ತಿಲ್ಲದವನಂತೆ ಯಾಕೆ ವಿಚಾರ ಕೇಳುತ್ತೀಯಾ? ತಾರಯ್ಯಾ, ಪೂಜಾರತಿ ಹಾಗೂ ತುಳಸೀ ತೀರ್ಥ; ಯಾವುದಾದರೂ ಹಾಳು ಹನುಮನ ಗುಡಿಯಿಂದ.

ಅಪರಿಚಿತ: (ವಿವರಿಸಿ ಹೇಳುತ್ತಾ) ನೋಡಪ್ಪಾ, ನೀನು ಜೀವನದಲ್ಲಿ ಬಹಳ ದೊಡ್ಡ ತಪ್ಪು ಮಾಡುತ್ತಾ ಇದ್ದೀ. ಜೀವನದಿಂದ ಹೇಡಿಯಂತೆ ಓಡಿ ಹೋಗುವುದರಲ್ಲಿ ಏನೂ ಅರ್ಥವಿಲ್ಲ. ಜೀವನದಲ್ಲಿ ಸಫಲತೆ ಇದೆ. ಅದನ್ನು ಕಷ್ಟಪಟ್ಟು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡು...

ಯುವಕ: (ಅವನ ಮಾತನ್ನು ಅರ್ಧದಲ್ಲಿಯೇ ತಡೆಯುತ್ತ) ಛೇ ಸಾಕುಮಾಡಪ್ಪಾ. ಈ [illegible]. ಈ ತರಹದ ಭಾಷಣ ಕೇಳುವುದಕ್ಕೆ ನನ್ನಲ್ಲೇಕೆ [illegible]? ಯಾರಾದರೂ [illegible] ಇದ್ದಾರೇನು ನೋಡು. ಅಲ್ಲದೆ ಈ ತರಹದ ಭಾಷಣಕ್ಕೆ ಈ ಸ್ಥಳ ಚೆನ್ನಾಗಿಲ್ಲ; ಭೂಲೋಕಕ್ಕೆ ಹೋದರೆ ತುಂಬಾ ಮಂದಿ ಸಿಗುತ್ತಾರೆ. [illegible]

ಸುಂದರವಾದ ಸ್ಥಳ ಅಂತೀನಿ? ತೀರ್ಥವಿಲ್ಲ, ಆರತಿಯಿಲ್ಲ; ಪ್ರಸಾದವೂ ಇಲ್ಲ. ಇಂತಹ ಅನಾರೋಗ ಸ್ಥಳ ಈ ಜಗತ್ತಿನಲ್ಲಿ ಇನ್ನೆಲ್ಲಾದರೂ ಇದ್ದೀತೇನು ?

ಅಪರಿಚಿತ: ಇರಲಿಕ್ಕಿಲ್ಲ. ಸರಿ, ಹೋಗಲಿ ಬಿಡು. ನೀನು ಇಲ್ಲಿಗೆ ಬಂದದ್ದಾದರೂ ಹೇಗೆ ಅಂತ ಗೊತ್ತೇ ನಿನಗೆ?

ಯುವಕ: (ಅಭಿಮಾನಪೂರ್ವಕವಾಗಿ) ಗೊತ್ತಿಲ್ಲದೆ ಏನು ಬೇಟಾ; ತೀರ್ಥ ಬಹಳ ಚೆನ್ನಾಗಿತ್ತು. ಒಂದಿಷ್ಟು ಜಾಸ್ತಿ ಪ್ರಸಾದವನ್ನು ತಿಂದೆ. ಗುಡಿಯಿಂದ ಹೊರಕ್ಕೆ ಬಂದಾಗ ಪಕ್ಕದ ರೈಲ್ವೆ ಸ್ಟೇಶನ್‌ನಿಂದ ಗಾಡಿ ಓಡಲು ಪ್ರಾರಂಭ ಮಾಡಿತು. ಅದಕ್ಕ ನನ್ನನ್ನು ಬಿಟ್ಟು ಓಡಿ ಹೋಗು



ವಷ್ಟು ಸೊಕ್ಕೇ ಎಂದು ನನಗೆ ಕೋಪ ಬಂದುಬಿಟ್ಟಿತು. ತಾನು ಮಾನವರಿಗಿಂತ ಜೋರಾಗಿ ಓಡಬಲ್ಲೆ ಎಂಬ ಅದರ ಅಹಂಕಾರವನ್ನು ಮುರಿದು ಅದರ ಈ ಭಾವನೆಯನ್ನು ಸುಳ್ಳು ಎಂದು ಸಿದ್ಧಪಡಿಸಬೇಕೆಂಬ ಕೆಚ್ಚು ನನ್ನೆದೆಯಲ್ಲಿ ಬಂತು. ವ್ಹಾ! ಏನು ಮಜಾ! ಅರೇ ನೀನು ನೋಡಬೇಕಿತ್ತು–ನನ್ನ ಮತ್ತು ಆ ರೈಲಿನ ಪೈಪೋಟಿ ಓಟ!

ಅಪರಿಚಿತ: (ಸಂಯಮಿತ ಸ್ವರದಿಂದ) ಆದರೆ ಆ ರೇಸಿನಲ್ಲಿ ನೀನು ಸೋತುಹೋದೆಯಲ್ಲೊ ?

ಯುವಕ: (ಕೋಪದಿಂದ) ಏ ಹೋರೆ ಬೇಟಾ. ಸುಳ್ಳು ಹೇಳಬೇಡ. ನಿಜ ಹೇಳು–ರೈಲು ಗೆದ್ದಿತೇನು? ರೈಲು ಗೆಲ್ಲಲೂ ಇಲ್ಲ, ನಾನು ಸೋಲಲೂ ಇಲ್ಲ.

ಅಪರಿಚಿತ: ಏನೂ ಅಂದುಕೋ. ಆದರೆ ಅದು ನಿನ್ನ ಪಂಥವಾಗಿರಲಿಲ್ಲ. ನೀನು ಸುಮ್ಮನೆ ತೀರ್ಥ ಪ್ರಸಾದದ ಪ್ರಭಾವದಿಂದಾಗಿ ನಿನ್ನ ಪ್ರಾಣದೊಡನೆ ಕುಸ್ತಿ ಆಡಿದೆ. ಆದರೆ ಈ ಕುಸ್ತಿಯಲ್ಲಿ ನೀನು ಪ್ರಾಣ ಕಳೆದುಕೊಂಡೆ.

ಯುವಕ: (ಇನ್ನಷ್ಟು ಕೋಪಿಸುತ್ತಾ) ಹಾಳಾಗಿ ಹೋಗಯ್ಯಾ ನೀನು. ಎಲ್ಲಿಯ ತಲೆ ಒಡುಕ ನೀನು ಅಂತೀನಿ. ಪ್ರಾಣದೊಡನೆ ಕುಸ್ತಿ ಅಂತೆ, ಜೀವನದಲ್ಲಿ ಸಫಲತೆ ಅಂತೆ. ಇವೆಲ್ಲ ಅರ್ಥವಿಲ್ಲದ ಮಾತುಗಳನ್ನು ಯಾತಕ್ಕೆ ಹೇಳುತ್ತಿ? ಜೀವನ ಅಂದರೆ ಪ್ರೇಮ ಅನ್ನು. ಜೀವನ ಅಂದರೆ ತೀರ್ಥ ಪ್ರಸಾದವನ್ನು ಸವಿಯುವುದು ಎಂದು ಅರ್ಥವಿರುವ ಮಾತನ್ನು ಹೇಳು. ಇದನ್ನೆಲ್ಲಾ ಬಿಟ್ಟು ಏಳನೆಯವರಿಗೆ ಹೇಳುವ ಗೊಡ್ಡು ಪುರಾಣ ಹೇಳಿದರೆ ನನಗೆ ಅರ್ಥವಾಗುವುದಿಲ್ಲ.

(ವಿಸ್ಮಿತ್ತಾ ವಾದ್ಯ ಬಾರಿಸುತ್ತಾ ಪ್ರೇಮಗೀತ ಹಾಡುತ್ತಾ ನಿಷ್ಕ್ರಮಿಸುತ್ತಾನೆ. ಬಲ ಪಾರ್ಶ್ವದಲ್ಲಿ ಪುನಃ ಕತ್ತಲಾಗುತ್ತದೆ.)

ವಿನೋದ: (ತಲೆ ಕೊಡಹಿಕೊಳ್ಳುತ್ತಾ) ನೀವು ಈ ತರಹದ 'ಸಂದೇಶಗಳ'ನ್ನು ಆತನಿಗೆ ಉಪದೇಶಿಸಿದರೆ ಒಂದು ಕ್ಷಣವೂ ಆತ ಇಲ್ಲಿ ನಿಲ್ಲಲಿಕ್ಕಿಲ್ಲ.

ಅಪರಿಚಿತ: ಅದು ಸರಿ. ಆತನಿಗೆ ಭೂಲೋಕದಲ್ಲಿಯೂ ಬದುಕಲಿಲ್ಲ: ಅಲ್ಲಿಂದಲೂ ಓಡಿ ಹೋಗುವ ಪ್ರಯತ್ನ ಮಾಡಿದ್ದ. ಜೀವಿಸಲಿಕ್ಕೆ ತುಂಬಾ ಎದೆಗಾರಿಕೆ ಬೇಕು. ಬರೇ ಹೇಡಿಗಳು ಮಾತ್ರ ಜೀವನದಿಂದ ಪಲಾಯನ ಮಾಡುವ ಮಾತನ್ನು ಆಡುತ್ತಾರೆ.

ವಿನೋದ: (ಜ್ಞಾಪಕಕ್ಕೆ ಬಂದ ಹಾಗೆ) ಹಾಂ, ನನಗೆ ಈಗ ಜ್ಞಾಪಕಕ್ಕೆ ಬಂತು. ನನ್ನ ಚಿಕ್ಕತ್ತೆ ತುಂಬ ದೈವಭಕ್ತಳಾಗಿದ್ದಳು– ದಿನಾ ಪೂಜೆ. ವ್ರತ. ದಾನ, ಧರ್ಮ ಎಲ್ಲಾ ಮಾಡುತ್ತಿದ್ದಳು. ಅಲ್ಲದೆ ತುಂಬಾ ತೀರ್ಥಯಾತ್ರೆಗಳನ್ನು ಕೂಡ ಮಾಡಿದ್ದಳು.

(ಬಲ ಪಾರ್ಶ್ವದ ಪ್ರವೇಶ ಭಾಗದಲ್ಲಿ ಬೆಳಕಾಗುತ್ತದೆ. ಅಲ್ಲಿ ವಿನೋದನ ಚಿಕ್ಕತ್ತೆ ಶಾಂತಿ ಕಾಣು ಬರುತ್ತಾಳೆ.)

ಶಾಂತಿ: (ಆಶ್ಚರ್ಯದಿಂದ) ಅರೇ ಏನು ವಿನೋದ? ನನಗಿಂತಲೂ ಮೊದಲೇ ನೀನು ಇಲ್ಲಿಗೆ ಬಂದು ಬಿಟ್ಟೆಯಲ್ಲ? ನಿನಗೆ ನಾನು ತುಂಬಾ ಸಮಯದಿಂದ ಹೇಳುತ್ತಾ ಇದ್ದೆ–ನೋಡಪ್ಪಾ ಕಾಶಿ, ಬದರೀನಾಥ ಇತ್ಯಾದಿ ಪುಣ್ಯಕ್ಷೇತ್ರಗಳ ಯಾತ್ರೆ ಮಾಡಿಕೊಂಡು ಬಾ ಎಂದು.

ವಿನೋದ: (ನಮಸ್ಕಾರ ಮಾಡುತ್ತಾ)ಆಶೀರ್ವಾದ ಮಾಡು ಚಿಕ್ಕತ್ತೆ. ಹೇಗಿದ್ದಿ? ಆರೋಗ್ಯ ತಾನೆ?

ಶಾಂತಿ: (ಬೇಸರದಿಂದ) ಏನು ಹೇಳಲಿ ವಿನೋದ. ನನ್ನ ಆರೋಗ್ಯದ ಬಗ್ಗೆ ಕೇಳಬೇಡಪ್ಪಾ. ಇದು ಸುಡುಗಾಡು ಸ್ಥಳ. ಇಲ್ಲಿ ಎಂತಹ ಆರೋಗ್ಯ?

ವಿನೋದ: (ಆಶ್ಚರ್ಯದಿಂದ) ಅಲ್ಲ ಚಿಕ್ಕತ್ತೆ. ನೀನು ಅಷ್ಟು ಸಾತ್ವಿಕ ಜೀವನ ನಡೆಸಿಕೊಂಡು ಬಂದವಳು. ನಾನೆಣಿಸಿದ್ದೆ…

ಶಾಂತಿ: (ಆತನ ವಾಕ್ಯವನ್ನು ಮುಂದುವರಿಸುತ್ತಾ)...... ನಾನು ಇಲ್ಲಿ ಚೆನ್ನಾಗಿದ್ದೇನೆಂದೇನು? ಭೂಲೋಕದ ನನ್ನ ಆ ಜೀವನವನ್ನು ನೀನು ಒಳ್ಳೆಯದೆಂದು ಭಾವಿಸುತ್ತೀಯೇನು?

ವಿನೋದ: (ಏನೂ ತಿಳಿಯದಂತವನಾಗಿ) ನೋಡು ಚಿಕ್ಕತ್ತೆ. ನನಗೇನೂ ಇದೊಂದೂ ಅರ್ಥವಾಗುವುದಿಲ್ಲ. ಅಷ್ಟು ಧಾರ್ಮಿಕಭಾವದಿಂದ ಜೀವಿಸಿಕೊಂಡು ಬಂದವನಿಗೆ ಅದರ ಪ್ರತಿಫಲ ಇಲ್ಲಿ ಸಿಗಲೇಬೇಕು. ಇಲ್ಲವಾದರೆ ಆ ಸಾತ್ವಿಕ ಜೀವನದ ಅರ್ಥವೇನು? ಉದ್ದೇಶವೇನು?

ಶಾಂತಿ: (ನಗುತ್ತಾ) ಚೆನ್ನಾಗಿ ಹೇಳಿದೆ. ಭೂಲೋಕದಲ್ಲಿರುವಾಗ ನಾನು ಕೂಡ ನಿನ್ನ ಹಾಗೆಯೇ ಭಾವಿಸಿಕೊಂಡಿದ್ದೆ. ನಾನು ಆ ದಾನ, ಧರ್ಮ, ಪೂಜೆ, ತೀರ್ಥಯಾತ್ರೆ ಎಲ್ಲಾ ದೊಡ್ಡ ಕೆಲಸಗಳನ್ನು ಮಾಡಿದ್ದು ಬರೇ ಸ್ವಾರ್ಥಕ್ಕಾಗಿ: ಅಂದರೆ ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕು ಎಂದು. ಆ ನನ್ನ ಎಲ್ಲಾ ಕೆಲಸಗಳು ಸ್ವರ್ಗದ ಟಿಕೇಟಿಗಾಗಿ ದೇವರಿಗೆ ಕೊಟ್ಟ ಲಂಚ. ಅಲ್ಲದೆ ನನ್ನ ಸಮಾಜಸೇವೆ ತ್ಯಾಗ. ಅವಿವಾಹಿತಳಾಗಿ ಉಳಿದದ್ದು ಎಲ್ಲಾ ನನ್ನ ದುರ್ಬಲತೆ. ನೋಡಪ್ಪಾ, ನಾನು ಅಲ್ಲಿಯೂ ಏನೂ ಸುಖ ಸಂತೋಷ ಅನುಭವಿಸಲಿಲ್ಲ: ಇಲ್ಲಿಯೂ ಇಲ್ಲ.

ವಿನೋದ: ಅಂದರೆ ಈ ಹಿಂದೆ ನೀನು ಮಾಡಿದ್ದ ಆ ಎಲ್ಲಾ ಪುಣ್ಯ ಕೆಲಸಗಳಿಗೆ ಅರ್ಥವೇ ಇಲ್ಲವೆಂದು ಹೇಳುತ್ತೀಯಾ?

ಶಾಂತಿ: (ನಿಟ್ಟುಸಿರು ಬಿಡುತ್ತಾ) ಅವುಗಳೇನೊ ಚೆನ್ನಾದ ಕೆಲಸಗಳೆಂದು ಹೇಳಬಹುದು. ಆದರೆ ಪುಣ್ಯದ ಕೆಲಸಗಳೆಂದು ಹೇಳಲು ಬರುವುದಿಲ್ಲ. ಯಾಕೆಂದರೆ ನಾನು ನನ್ನ ಮನಸ್ಸಿನಲ್ಲಿದ್ದ ಎಲ್ಲಾ ಭಾವನೆಗಳನ್ನು ಹತ್ತಿಕ್ಕಿ ಒಂದು ಒಕ್ಕೀ ಜೀವನ ನಡೆಸುವ ಪ್ರಯತ್ನ ಮಾಡಿದೆ. ಇತರರಿಗೂ ನನ್ನಂತೆಯೇ ಬರಡು ಜೀವನ ನಡೆಸುವಂತೆ ಅಪ್ರತ್ಯಕ್ಷವಾಗಿ ಒತ್ತಾಯ ತಂದೆ. ನಾನೇನೋ ಅವರನ್ನು ಪಾಪದ ಮಾರ್ಗದಿಂದ ತಪ್ಪಿಸಿ ಪುಣ್ಯದತ್ತ ಕೊಂಡುಹೋಗುತ್ತೇನೆಂದು ಆಗ ಭಾವಿಸಿದ್ದೆ. ನಿಜವಾಗಿ ಹೇಳುವುದಿದ್ದರೆ ಅವರು ನನಗಿಂತ ಎಷ್ಟೋಯಾದರೂ ಹೆಚ್ಚು ಸುಖ ಜೀವನ ನಡೆಸಬಹುದೇನೋ ಎಂಬ ಮತ್ಸರದಿಂದ ಅವರಿಗೂ ನನ್ನಂತೆಯೇ ಬರಡು ಜೀವನ ನಡೆಸುವಂತೆ ಒತ್ತಾಯಿಸಿದ್ದು. ಒಂದು ವಿಷಯವನ್ನು ನಾನು ಇಲ್ಲಿಗೆ ಬಂದ ನಂತರ ಕಲಿತೆ. ಅದನ್ನು ಲಕ್ಷ್ಯಪೂರ್ವಕವಾಗಿ ಕೇಳು. ನಿಜವಾದ ಒಳ್ಳೆಯ ಕೆಲಸ ಇತರರಿಗೆ ಸಂತೋಷವನ್ನು ಕೊಡಬೇಕು. ನಿಮಗೆ ಒಳ್ಳೆಯದು ಮಾಡುವವನಿಗೆ ಮಾತ್ರ ಅಲ್ಲ. ಆದರೆ ಈ ವಿಷಯ ನನಗೆ ಭೂಲೋಕದಲ್ಲಿರುವಾಗ ತಿಳಿಯಲಿಲ್ಲ. ಈಗ ಈ ಮಾತಿನ ತಿಳುವಳಿಕೆಯಾದಾಗ ಸಮಯ ಮೀರಿ ಹೋಯಿತು. ಇಲ್ಲ ವಿನೋದ. ನನ್ನ ಕಳೆದು ಹೋದ ಜೀವನ ನಿಜವಾದ ಸಾತ್ವಿಕ ಜೀವನವಲ್ಲ. ಅದು ಒಂದು ವೇಷ, ಟೊಳ್ಳು ಜೀವನ.

ವಿನೋದ: (ಆಶ್ಚರ್ಯದಿಂದ) ಅಂದರೆ ನಿನಗೆ ಇಲ್ಲಿ ಸ್ವರ್ಗ ಸಿಗಲಿಲ್ಲ?

ಶಾಂತಿ: (ನಕ್ಕುತ್ತಾ) ಇಲ್ಲ. ಸ್ವರ್ಗದ ಟಿಕೇಟು ಪಡೆಯುವುದು ಅಷ್ಟು ಸುಲಭವಲ್ಲ; ಅದನ್ನು ಹಣದಿಂದ ಪಡೆಯಲು ಸಾಧ್ಯವಿಲ್ಲ; ಸಾಧು ಸಂತರ ವೇಷಧಾರಣೆ ಮಾಡಿಯೂ ಸಾಧ್ಯವಿಲ್ಲ. ಭೂಲೋಕದಲ್ಲಿ ನಾವೆಲ್ಲ ಮಾಡಿದ್ದು ಬರೇ ನಾಟಕ.

ವಿನೋದ: ಹಾಗಾದರೆ ಇಲ್ಲಿ ನೀನೇನು ಮಾಡುತ್ತಿ?

ಶಾಂತಿ: (ಅಳುತ್ತಾ) ನಾನು ಮತ್ತೇನನ್ನು ಮಾಡಲಿ? ಅಲ್ಲಿ ಆ ತರಹದಲ್ಲಿ ಬರಡು ಜೀವನ ಕಳೆದೆ; ಇಲ್ಲಿಗೆ ಬಂದು ಅದನ್ನು ಅಷ್ಟು ಬೇಗ ಬದಲಿಸಲು ಸಾಧ್ಯವಿದೆಯೇ? ಸರಿ. ಇನ್ನು ಅನಂತಕಾಲದ ವರೆಗೆ ಅಂದಿನ ಅದೇ ವೇಷದಿಂದ ಇಲ್ಲಿಯೂ ಆಯುಷ್ಯವನ್ನು ಕಳೆಯಬೇಕು. ಆದರೆ ಇಲ್ಲಿ



ಎಲ್ಲರೂ ನನ್ನ ವೇಷವನ್ನು ಗುರುತಿಸಿದ್ದಾರೆ. ಅಲ್ಲಿಯ ಹಾಗೆ ಇಲ್ಲಿಯವರ ಕಣ್ಣಿಗೆ ಧೂಳು ಎರಚಲಾರೆ. ದುಃಖದ ವಿಷಯವೆಂದರೆ ಈಗ ನನಗೂ ಗೊತ್ತು ನಾನೊಬ್ಬ ವೇಷಧಾರಿಣಿ ಎಂದು;

ಈ ಮಾತು ನನಗೆ ಆಗ ಗೊತ್ತಿರಲಿಲ್ಲ. (ಎನ್ನುತ್ತಾ ನಿಷ್ಕ್ರಮಿಸುತ್ತಾಳೆ. ಬಲ ಪಾರ್ಶ್ವದಲ್ಲಿ ಕತ್ತಲಾಗುತ್ತದೆ. ಸ್ವಲ್ಪ ಸಮಯದನಂತರವೇ ಪುನಃ ಬಲ ಪಾರ್ಶ್ವದಲ್ಲಿ ಬೆಳಕಾಗುತ್ತದೆ. ಅಲ್ಲಿ ಸುಮನ ನಿಂತುಕೊಂಡಿರುವುದು ಕಂಡುಬರುತ್ತದೆ.)

ವಿನೋದ: (ಆತನನ್ನು ನೋಡಿ ಹೆದರಿ. ಅಪರಿಚಿತನತ್ತ ನೋಡುತ್ತಾ) ಈ ಮನುಷ್ಯ ಇಲ್ಲಿ ಏನು ಮಾಡುತ್ತಿದ್ದಾನೆ? ಅವನನ್ನು ನೋಡಲು ನಾನು ಇಚ್ಛಿಸುವುದಿಲ್ಲ. ದಯಮಾಡಿ ಅವನಿಗೆ ಇಲ್ಲಿಂದ ಹೋಗಲು ಹೇಳಿರಿ.

ಅಪರಿಚಿತ: ಖಂಡಿತ ಅವರಿಗೆ ನಿಮ್ಮನ್ನು ಕಾಣುವ ಇಚ್ಛೆ ಇದ್ದಿರಬಹುದು. ನೋಡಿ. ಇಲ್ಲಿ ಪ್ರತಿಯೊಂದು ವಿಷಯಕ್ಕೂ ಎರಡು ಮುಖಗಳಿವೆ. ಅಂದರೆ ಇಲ್ಲಿ ಘಟನೆಗಳು ಎರಡೂ ಕಡೆಯಿಂದ ಘಟಿಸುತ್ತವೆ. ಒಂದು ನಿಮ್ಮ ಮನಸ್ಸಿನ ಅಭಿಲಾಷೆಯ ಪ್ರಕಾರ ಇಲ್ಲವೆ ಇತರರ ಮನೋಭಿಲಾಷೆಯ ಪ್ರಕಾರ.

ಸುಮನ: (ನಗುತ್ತಾ) ಆಹಾ! ಕೊನೆಗೂ ನೀನು ಇಲ್ಲಿ ಸಿಕ್ಕಿದಿ. ನಿನಗಾಗಿ ಬಹಳ ದಿನಗಳಿಂದ ಇಲ್ಲಿ ಕಾಯುತ್ತಾ ಇದ್ದೆ.

ವಿನೋದ: (ಹೆದರಿ) ನನಗಾಗಿ? ಯಾತಕ್ಕಾಗಿ? ನನ್ನ ಅಭಿಪ್ರಾಯದ ಪ್ರಕಾರ ನಿನ್ನನ್ನು ಎಂದೆಂದಿಗೂ ನೋಡಬಯಸಲಾರೆ ಎಂದಿತ್ತು.

ಸುಮನ: ನಿಜ. ಹಾಗೆ ನಾನೇನೂ ಬರಲು ಹೇಳಿರಲಿಲ್ಲವಲ್ಲ—ಯಾಕೋ? (ತಿರಸ್ಕಾರದಿಂದ) ನೀನಲ್ಲವೇ ನನ್ನ ಬಗ್ಗೆ ಸುಳ್ಳು ಸುಳ್ಳು ಅಪಪ್ರಚಾರವನ್ನು ಕಂಪನಿಯಲ್ಲಿ ಮಾಡಿದವನು? ನನಗೆ ಆರಂಭದಿಂದಲೇ ನಿನ್ನ ಮೇಲೆ ಸಂಶಯವಿತ್ತು. ನನಗೆ ನಿನಗಿಂತಲೂ ಹೆಚ್ಚು ವರ್ಷದ ಸರ್ವಿಸ್ ಇತ್ತು. ಹೀಗಾಗಿ ನ್ಯಾಯವಾಗಿಯೂ ನನಗೇ ಕಂಪನಿಯ ಆ ಮೇಲಾಧಿಕಾರಿಯ ಹುದ್ದೆ ಸಿಗಬೇಕಿತ್ತು. ಆದರೆ ಮೋಸದಿಂದ ನೀನು ಅದನ್ನು ಪಡೆಕೊಂಡೆ.

ವಿನೋದ: (ಕಂಗಾಲಾಗಿ) ಈಗ ಇಲ್ಲಿ ನಿನಗೇನು ಬೇಕಪ್ಪಾ ಅದನ್ನು ಹೇಳು. ಹಿಂದಕ್ಕೆ ಆಗಿ ಹೋದ ಘಟನೆಗಳ ಬಗ್ಗೆ ಈಗ ನಾನೇನೂ ಮಾಡಲಾರೆ.

ಸುಮನ: (ಕ್ರೋಧದಿಂದ ಚೂರಿಯನ್ನು ತೆಗೆದು) ಆ ಹೊತ್ತೇ ನಾನು ನಿನ್ನನ್ನು ಕೊಲ್ಲಬೇಕಿತ್ತು. (ಎನ್ನುತ್ತಾ ವಿನೋದನತ್ತ ಹೋಗುತ್ತಾನೆ.)

ವಿನೋದ: (ಹೆದರಿ ಹಿಂದಕ್ಕೆ ಹೋಗುತ್ತಾ) ನೋಡೂ... ನನ್ನ ಹತ್ತಿರ ಬರಬೇಡ...ದೂರವೇ ನಿಂತು ಮಾತಾಡು.

ಸುಮನ: (ನಗುತ್ತಾ) ಇಲ್ಲಿ ದೈಹಿಕವಾಗಿ ನಾನೇನೂ ನಿನಗೆ ಹಾನಿ ಮಾಡಲಾರೆ. ಇದು ನನ್ನ ದೌರ್ಭಾಗ್ಯ. ಬೇಕಿದ್ದರೆ ಅದನ್ನು ನೀನೇ ನೋಡು (ಎಂದು ಚೂರಿಯಿಂದ ವಿನೋದನಿಗೆ ತಿವಿಯುತ್ತಾನೆ. ಚೂರಿಯು ವಿನೋದನ ದೇಹಕ್ಕೆ ಏನೂ ಹಾನಿ ಮಾಡದೆ ಆತನ ಹಿಂದೆ ಸ್ಥಳದ ಗಾಳಿಯನ್ನು ಮಾತ್ರ ತಿವಿಯುತ್ತದೆ. ಆದರೂ ವಿನೋದನು ಹೆದರಿ ಅಪರಿಚಿತನನ್ನು ತನ್ನ ಮತ್ತು ಸುಮನನ ಮಧ್ಯ ನಿಲ್ಲಿಸಿಕೊಳ್ಳುತ್ತಾನೆ.) ನೋಡಿದೆಯೇನು? ನಿನ್ನಲ್ಲಿ ಈಗ ದೈಹಿಕ ಅಸ್ತಿತ್ವವೇ ಇಲ್ಲ. ಯಾತಕ್ಕಾಗಿ ನಾನು ನಿನ್ನನ್ನು ಇಲ್ಲಿ ಹಿಂಸಿಸಲಿ!

ವಿನೋದ: (ಧೈರ್ಯ ತಂದುಕೊಳ್ಳುತ್ತಾ) ಹಾಗಾದರೆ ಈಗ ನಿನಗೇನು ಬೇಕಪ್ಪಾ ಅದನ್ನಾದರೂ ಹೇಳು. ಇಲ್ಲವಾದರೆ ನನ್ನನ್ನು ನನ್ನ ಪ್ರಾರಬ್ಧಕ್ಕೆ ಬಿಟ್ಟುಬಿಡು.

ಸುಮನ: ಛೀ. ಛೀ... ನಿನ್ನಿಂದ ನನಗೇನೂ ಬೇಡ. ಆದರೆ ಇಲ್ಲಿ ನೀನು ಹೋದಲ್ಲೆಲ್ಲ ನಾನು ನಿನ್ನ ಹಿಂದೆ ಬರುತ್ತೇನೆ; ನೀನು ನನ್ನನ್ನು ಕೊಂದ ವಿಷಯ ಸದಾ ನಿನ್ನ ಜ್ಞಾಪಕಕ್ಕೆ ಬರುವಹಾಗೆ ಮಾಡುತ್ತೇನೆ.

ವಿನೋದ: (ಕೋಪದಿಂದ) ಸುಳ್ಳು ಈ ಮಾತು ಹಸೀ ಸುಳ್ಳು. ನಾನೇನು ನಿನ್ನನ್ನು ಕೊಲ್ಲಲಿಲ್ಲ. ನೀನೇ ಆತ್ಮಹತ್ಯೆ ಮಾಡಿಕೊಂಡು ಈಗ ನನ್ನ ಮೇಲೆ ಸುಳ್ಳು ಆರೋಪ ಹೊರಿಸುತ್ತಿ. (ಅಪರಿಚಿತನತ್ತ ತಿರುಗಿ) ನೋಡಿ ಸ್ವಾಮಿ, ಇಲ್ಲಿ ಯಾರೂ ಸುಳ್ಳು ಹೇಳುವುದಿಲ್ಲ ಎಂದು ನಾನು ಭಾವಿಸಿ–ಕೊಂಡಿದ್ದೆ.

ಅಪರಿಚಿತ: (ಸಮಾಧಾನ ಪಡಿಸುತ್ತ) ನಿಜ. ಇಲ್ಲಿ ಯಾರೂ ಸುಳ್ಳು ಹೇಳುವುದಿಲ್ಲ. ಆದರೆ ಸುಮನ ಹೇಳುವುದು ನಿಜ.

ಸುಮನ: (ವಿನೋದನು ಮಾತಾಡಲು ಬಾಯಿ ತೆರೆಯುತ್ತಾನೆ. ಅವನನ್ನು ತಡೆಯುತ್ತಾ) ನೋಡು ವಿನೋದ, ನನಗೆ ಕಂಪನಿಯಲ್ಲಿ ಪ್ರಮೋಶನ್‌ನ ಅಗತ್ಯ ಬಹಳ ಇತ್ತು. ಅದು ನನಗೆ ಸಿಕ್ಕಿಯೂ ಸಿಗುತ್ತಿತ್ತು. ಆದರೆ ನೀನು ನನ್ನ ಬಗ್ಗೆ ಸುಳ್ಳು ಸುಳ್ಳು ಅಪಪ್ರಚಾರ ನಡೆಸಿದೆ. ನನ್ನ ದೌರ್ಭಾಗ್ಯದಿಂದ ಕಂಪನಿಯ ಡೈರೆಕ್ಟರುಗಳು ನಿನ್ನ ಅಪಪ್ರಚಾರವನ್ನು ನಂಬಿದರು– ಆ ಪ್ರಮೋಶನ್ ನಿನಗೆ ಕೊಟ್ಟರು. ಹೀಗೆ ನೀನು ನನ್ನ ಹೊಟ್ಟೆಗೆ ಕಲ್ಲು ಹಾಕಿದೆ; ನನ್ನ ಸಂಸಾರವು ಬೀದಿಯಲ್ಲಿ ಬೀಳುವಂತೆ ಮಾಡಿದೆ; ನನ್ನ ಕರಿಯರ್‌ಗೆ ಮಣ್ಣು ಮುಕ್ಕಿಸಿದೆ. ಹಾಗಾಗಿ. ನನಗೆ ಆಗ ಆತ್ಮಹತ್ಯೆ ಮಾಡಿಕೊಳ್ಳುವುದಲ್ಲದೆ ಬೇರೇನೂ ದಾರಿ ಇರಲಿಲ್ಲ. ನಿಜವಾಗಿ ನಾನು ವಿಷಪ್ರಾಶನ ಮಾಡುವ ಮೊದಲೇ ನೀನು ನನ್ನನ್ನು ಮಾನಸಿಕವಾಗಿ ಕೊಂದಿದ್ದೆ. ನನ್ನನ್ನು ನೀನು ನಿನ್ನ ಅಣ್ಣನ ತರಹ ಎಂದು ಭಾವಿಸಿರುವದಾಗಿ ತೋರಿಸಿಕೊಳ್ಳುತ್ತಾ ಪ್ರಮೋಶನ್‌ಗಾಗಿ ನೀನು ಆ ತರಹ ಮಾಡಿದ್ದು ಕೊಲೆಗಡುಕತನವಲ್ಲವೇ? ನೀನು ನನ್ನ ಬಲಿ ತೆಗೆದುಕೊಂಡಿ. (ಸ್ವಲ್ಪ ಹೊತ್ತು ಸ್ತಬ್ಧನಾಗಿ ಮನಸ್ಸನ್ನು ಸ್ಥಿಮಿತಕ್ಕೆ ತರುತ್ತಾ) ಸರಿ, ಇನ್ನು ಮುಂದಕ್ಕೆ ನೀನು ಎಲ್ಲಿಗೆ ಹೋದರೂ ಅಲ್ಲಲ್ಲಿ ನಾನು ನಿನ್ನ ಹತ್ತಿರವೇ ಇದ್ದು. ಅನಂತ ಕಾಲದ ವರೆಗೆ ನಿನಗೆ ನಿನ್ನ ಆ ಕೃತಿಯ ಜ್ಞಾಪಕ ಮಾಡುತ್ತಾ ಇರುತ್ತೇನೆ. ಚಿಂತಿಲ್ಲ. ಈಗ ನಾನು ಹೋಗುತ್ತೇನೆ. ಆದರೆ ಒಂದು ಮಾತು ನೆನಪಿಟ್ಟುಕೊ– ಇಂದಿನಿಂದ ನೀನು ಎಂದಿಗೂ ಒಬ್ಬಂಟಿಗನಾಗಿರಲಾರೆ (ಎನ್ನುತ್ತಾ ನಿಷ್ಕ್ರಮಿಸುತ್ತಾನೆ. ಬಲಪಾರ್ಶ್ವದಲ್ಲಿ ಕತ್ತಲಾಗುತ್ತದೆ.)

ವಿನೋದ: (ಹೆದರಿ). ಹೇ ರಾಮಾ. ನಾನೇನು ಮಾಡಲಿ ಈಗ? ಇಂದಿಗೆ ಮುಗಿಯಿತು ನನ್ನ ಕತೆ–ಇದು ನಾನು ಮಾಡಿದ್ದುದರ ಪ್ರತಿಫಲ ಎಂದು ಕಾಣುತ್ತದೆ. ಇನ್ನು ಮುಂದೆ ಆತನು ನನ್ನನ್ನು ಸದಾ ಕಾಡಿಸುತ್ತಾ ಇರುತ್ತಾನೆ ಎಂದು ತೋರುತ್ತದೆ.

ಅಪರಿಚಿತ: ಇಲ್ಲಿ ಯಾರೂ ಯಾರನ್ನೂ ಕಾಡಿಸುವುದಿಲ್ಲ; ಅದನ್ನು ಯಾರೂ ಮಾಡಬೇಕಾಗಿಲ್ಲ–ಸ್ವತಃ ನೀವಾಗಿಯೇ ಮಾಡಿಕೊಂಡಿದ್ದೀರಿ.

ವಿನೋದ: (ಕೋಪದಿಂದ) ಸುಮನನೇನು ನನಗಿಂತ ಕಮ್ಮಿಯವನಲ್ಲ. ಅವನು ನನಗಿಂತಲೂ ಹೆಚ್ಚು ದುರಾಸೆ ಇದ್ದವನು; ಅವನಿಗೂ ದೊಡ್ಡ ಸ್ಥಾನಮಾನ ಪಡೆಯಬೇಕೆಂಬ ಅಭಿಲಾಷೆಯಿತ್ತು.

ಅಪರಿಚಿತ: (ಸಮಾಧಾನಿಸುವ ಸ್ವರದಲ್ಲಿ) ನಿಜ. ಅದಕ್ಕಾಗಿ ಅವರೂ ಇಲ್ಲಿ ಪರಿತಪಿಸಿಕೊಳ್ಳಬೇಕು. ನೋಡಿ ಒಂದು ವಿಷಯ. ಈ ಅಭಿಲಾಷೆ ಅಥವಾ ಮಹತ್ವಾಕಾಂಕ್ಷೆ ಇದೆಯಲ್ಲ. ಅದೊಂದು ತರಹದ ಅಂಟುರೋಗ. ಒಬ್ಬನಿಂದ ಇನ್ನೊಬ್ಬನಿಗೆ ಅದು ಹಬ್ಬುತ್ತದೆ. ಯಾವ ಮನುಷ್ಯ ತನ್ನ ಅಭಿಲಾಷೆಗಳನ್ನು ಪೂರ್ತಿ ಮಾಡಿಕೊಳ್ಳಲಾರನೋ ಆತನು ಒಂದು ದೃಷ್ಟಿಯಿಂದ ಸುಖಿ. ಅವನಿಗೆ ಬೇರೇನೂ ಇಲ್ಲವಾದರೂ ತನ್ನ ಅಭಿಲಾಷೆಯನ್ನು ಪೂರ್ತಿಮಾಡಿಕೊಳ್ಳುವ ಸ್ವಪ್ನವನ್ನು ಕಾಣುತ್ತಾ ಇರುತ್ತಾನೆ. ಅಲ್ಲದೆ ಅದನ್ನು ಪಡೆಯಬೇಕು ಎನ್ನುವ ಹುಮ್ಮಸ್ಸು ಇರುತ್ತದೆ. ಆದರೆ ಯಾವಾತನು ತನ್ನ ಅಭಿಲಾಷೆಗಳನ್ನು ಪೂರ್ತಿಮಾಡಿಕೊಳ್ಳುತ್ತಾನೆಯೋ ಹಾಗೂ ಅನಂತರ ತಾನು ಪಡೆದದ್ದೆಲ್ಲ ಬರೇ ಶೂನ್ಯ. ಮಾಯೆ ಎಂದು ಭಾವಿಸುತ್ತಾ

ಸೆಯೋ ಅವನು ನಿಜವಾಗಿಯೂ ಅಸುಖಿ.

ವಿನೋದ: (ದಣಿದವನಾಗಿ) ಹಾಗಾದರೆ ಇಲ್ಲಿ ಯಾರೂ ಪೂರ್ಣ ಸುಖಿ ಇಲ್ಲವೇ ?

ಅಪರಿಚಿತ: ಯಾಕಿಲ್ಲ? ಸಹಸ್ರ ಸಹಸ್ರ ಜನರಿದ್ದಾರೆ.

ವಿನೋದ: (ಅಂಗಲಾಚುತ್ತಾ) ದಯವಿಟ್ಟು. ಅಂತಹ ಒಬ್ಬರನ್ನು ನನಗೆ ತೋರಿಸಿರಿ.

(ಬಲ ಪಾರ್ಶ್ವದಲ್ಲಿ ಬೆಳಕಾಗುತ್ತದೆ. ಅಲ್ಲಿ ಕವಿ ಕಾಳಿದಾಸ ನಿಂತಿರುವುದು ಕಾಣಬರುತ್ತದೆ.)

ಅಪರಿಚಿತ: (ಪರಿಚಯ ಮಾಡಿಸುತ್ತಾ) ನೋಡಿ ಇವರೇ ಕವಿ ಪಂಡಿತೋತ್ತಮರು—ಮಹಾ ಕವಿ ಕಾಳಿದಾಸರು.

ವಿನೋದ: ಓಹೋ? ಇವರು ಕಾಳಿದಾಸರೇನು ? ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗ 'ಮೇಘದೂತ'ದ ಕೆಲವು ಭಾಗಗಳನ್ನು ಓದಿದ ಜ್ಞಾಪಕವಿದೆ.

ಕಾಳಿದಾಸ: (ಮಂದಸ್ಮಿತನಾಗಿ) ಬಹುಶಃ ಅವುಗಳನ್ನು ನಿಮ್ಮ ಶಾಲೆಯಲ್ಲಿ ಕಷ್ಟವಾಗಿ ಕಲಿಸುತ್ತಿರಬೇಕು.



ವಿನೋದ: ನಿಜ, ಆದರೂ ಕೂಡ ಅವುಗಳು ತುಂಬಾ ಒಳ್ಳೆಯ ಅಭಿರುಚಿಯನ್ನುಂಟು ಮಾಡುತ್ತಿದ್ದುವು. ಅಂದ ಹಾಗೆ ತಾವು ಆ ಕಾವ್ಯಗಳನ್ನು ಮನದಲ್ಲಿ ಹಾಡಿಕೊಂಡು ಬರೆಯುತ್ತಿದ್ದಿರೇ ? (ಹೌದು ಎನ್ನುವಂತೆ ಕಾಳಿದಾಸ ತಲೆಯನ್ನು ಅಲ್ಲಾಡಿಸುತ್ತಾನೆ.) ತಮಗೆ ಜೀವನದಲ್ಲಿ ಪೂರ್ಣ ಶಾಂತಿ ಸಿಕ್ಕಿರಬೇಕು.

ಕಾಳಿದಾಸ: ನನ್ನ ಜೀವನವು ಶಾಂತಿಮಯ ಜೀವನ. ಜೀವನವು ಒಂದು ಮಧುರ ಗಾನ. ಯಾವಾತನು ಜಗತ್ತಿನಲ್ಲಿ ಒಳ್ಳೆಯದನ್ನೇ ನೋಡುತ್ತಾನೋ, ಮಾಡುತ್ತಾನೋ ಅವನ ಬಾಳು ಶಾಂತಿಮಯ ಜೀವನ. ನಾನು ಜಗತ್ತನ್ನು ಪ್ರೀತಿಸಿದೆ, ನನ್ನನ್ನಲ್ಲ—ಇದು ನನ್ನ ಸುಖದ ಹಾಗೂ ಶಾಂತಿಯ ಗುಟ್ಟು. ನೀವಾದರೋ ಆ ಮೇಲಿನ ಪುಸ್ತಕಗಳಲ್ಲಿ ಇದ್ದು ಇತರರಿಗಿಂತ ಸಮಾಜದಲ್ಲಿ

ಹೇಗೆ ಪಟ್ಟ, ಸ್ಥಾನಮಾನ ಪಡೆಯಲಿ, ಇತರರನ್ನು ಕೆಳಕ್ಕೆ ತಳ್ಳಿ ತಾನು ಹೇಗೆ ಮೇಲಕ್ಕೆ ಬರಲಿ ಎಂಬ ಈ ವ್ಯಾವಹಾರಿಕ ವಿಷಯಗಳ ಚಿಂತೆಯನ್ನು ಮಾಡುತ್ತಾ ಜೀವನವನ್ನು ಕಳೆಯುತ್ತೀರಿ. ನಾನಾದರೋ ನನ್ನ ಜೀವನವನ್ನು ನಿಸರ್ಗದೊಡನೆ ಒಂದಾಗಿ ಕಳೆದೆ.

ವಿನೋದ: ನಾವೂ ಕೂಡ ನಿಸರ್ಗದಿಂದ ಬಹಳ ದೂರ ಇಲ್ಲ. ನಮ್ಮ ಸುತ್ತಲೂ [illegible] ಸಮುದ್ರ ಇದೆ. [illegible] ಇದೆ; ರಾತ್ರಿಯಾಗ ಚಂದ್ರ ಇದೆ-ಎಲ್ಲಾ ಇದೆ.

ಕಾಳಿದಾಸ: (ನಗುತ್ತಾ) ಅವಕ್ಕೇ ಪ್ರಕೃತಿಯ ಚಿಹ್ನೆಗಳು. ಅವುಗಳನ್ನು ನಿಸರ್ಗ ಎಂದು ಯಾತಕ್ಕಾದರೂ ಕರೆಯುತ್ತೀರಿ ?

ವಿನೋದ: ಅಂದ ಹಾಗೆ ನಿಮ್ಮ ನೆರೆಕರೆಯವರೇನು ಮಾಡುತ್ತಾರೆ? ಅವರ ಮನೆಯಲ್ಲಿ ಯಾವ ಯಾವ ಹೊಸ ವಸ್ತುಗಳು ಇದ್ದಾವೆ? ಎಂಬ ವಿಷಯಗಳ ಜಿಜ್ಞಾಸೆ ನಿಮಗಿಲ್ಲವೆ? ಈ ತರಹ ಭಾವನೆಗಳಿಲ್ಲದ ಕಾರಣ ತಾವು ನಮ್ಮನ್ನು ಒಂದು ವಿಚಿತ್ರ ತರಹದ ಮನುಷ್ಯರು ಎಂದು ಭಾವಿಸಿಕೊಳ್ಳುವುದಿಲ್ಲವೇ?

ಕಾಳಿದಾಸ: (ನಗುತ್ತಾ) ನಾನು ನೆರೆಕರೆಯವರ ಬಗ್ಗೆ ಅಷ್ಟೊಂದು ಜಿಜ್ಞಾಸೆ ಮಾಡುತ್ತಾ ಇರುತ್ತಿದ್ದರೆ ನಿಮ್ಮ ತರಹ ನಾನೂ ಅಶಾಂತನಾಗಿರಬೇಕಿತ್ತು. ನನ್ನ ಅಭಿಪ್ರಾಯದಲ್ಲಿ ನಿಮಗೆಲ್ಲ ನಿಮ್ಮ ಬಗ್ಗೆ ನಾಚಿಕೆಯಾಗಬೇಕಿತ್ತು. ನಿಮ್ಮ ನೆರೆಕರೆಯವರಂತೆ ನೀವೂ ಇರಬೇಕೆಂದು ಯಾತಕ್ಕಾದರೂ ದಿನಾ ಅಷ್ಟು ಚಿಂತಿಸುತ್ತೀರಿ ?

ವಿನೋದ: ಸ್ವಾಮಿ, ಮನುಷ್ಯ ಇತರರಿಗಿಂತ ಭಿನ್ನವಾಗಿ ಇರಬೇಕೆನ್ನುವುದು ಅಷ್ಟೊಂದು ಮಹತ್ವದ ವಿಷಯವೇ ?

ಕಾಳಿದಾಸ: [illegible] ಇತರರಂತೆ ತಾನೂ ಇರಬೇಕೆಂದು ಬಯಸುವುದರ ಅರ್ಥ [illegible] ಎಲ್ಲರಿಗಿಂತ ಭಿನ್ನವಾಗಿರಬೇಕೆನ್ನುವುದು ಬಹಳ ಮಹತ್ವದ್ದು.

ವಿನೋದ: ನಿಸರ್ಗದೊಂದಿಗೆ ಇದ್ದು ಸರಳ ಜೀವನವನ್ನು ನಡೆಸುವುದು ಒಳ್ಳೆ ಕಲ್ಪನೆ ನಿಜ. [illegible] ಕೇಳುತ್ತೇನೆ. ಟೆಲಿಫೋನ್, ಟೇಪ್‌ರೆಕಾರ್ಡರ್, ರೇಡಿಯೋ, ಹವಾನಿಯಂತ್ರಿತ ಕೋಣೆ, ಹಾರುವ ವಿಮಾನ-ಇತ್ಯಾದಿ ಆಧುನಿಕ ವಿಜ್ಞಾನದ ಹಾಗೂ ತಾಂತ್ರಿಕ ಅನ್ವೇಷಣೆಗಳ ಸುಖ ಸೌಲಭ್ಯಗಳು ಇಲ್ಲದಿರುವುದು ಎಂದು ಅರ್ಥ. ಈ ಆಧುನಿಕ ವಸ್ತುಗಳಿಲ್ಲದೆ ಸುಖಮಯ ಜೀವನವನ್ನು ಕಳೆಯುವುದಾದರೂ ಹೇಗೆಂದು ನನಗೆ ಅರ್ಥವಾಗುವುದಿಲ್ಲ.

ಕಾಳಿದಾಸ: ಜೀವಿಸುವುದು ಎಂದರೆ ಕೇವಲ ಆಧುನಿಕ ವಸ್ತುಗಳ ಉಪಭೋಗವನ್ನು ಮಾತ್ರ ಮಾಡುವುದು ಎಂದು ಅರ್ಥವಲ್ಲ.

ವಿನೋದ: ಜೀವನದಲಿ ತಮಗೆ ಇತರರ ಅಗತ್ಯವಿಲ್ಲವೇ? ಮಿತ್ರರೊಂದಿಗೆ ನಮ್ಮ ಸುಖ ದುಃಖ ಗಳನ್ನು ಹೇಳಿ ನಮ್ಮ ಮನಸ್ಸಿನ ಭಾರವನ್ನು ಹಗುರ ಮಾಡಿಕೊಳ್ಳಬಹುದು.

ಕಾಳಿದಾಸ: ನನ್ನ ಅಭಿಪ್ರಾಯದ ಪ್ರಕಾರ ಪಕ್ಷಿಗಳ ಚಿಲಿಪಿಲಿ, ಹಾಗೂ [illegible] ರವು ನಿಮ್ಮ ಆಪ್ತ ಮಿತ್ರರ ಹಾಳು ಹರಟೆಗಳಿಗಿಂತ ಎಷ್ಟೋ ಉತ್ತಮ. ಜೀವನದಲ್ಲಿ ನನಗೆ ಬಹಳ ಮಹತ್ವದ ಕೆಲಸ ಇದೆ; ಈ ಅಲ್ಪ ಸಮಯವನ್ನು ನಾವು ಬೇರೆ [illegible] ವ್ಯರ್ಥ ಮಾಡುತ್ತಾ ಕಳೆದರೆ ಅದು ದೊಡ್ಡ ಹೀನ ಕೆಲಸ. ಈ ವಿಶಾಲ ವಿಶ್ವದಲ್ಲಿ ನಾವು ತಿಳಿದು ಕೊಳ್ಳಬೇಕಾದ್ದು ಬಹಳ ಇದೆ. ನಮ್ಮ ಜ್ಞಾನ ಇನ್ನೂ ಸೀಮಿತ. [illegible] ನಿಸರ್ಗದ ರಹಸ್ಯವನ್ನು ತಿಳಿದುಕೊಳ್ಳುವುದು ಸಾಧಾರಣ [illegible] ಧ್ಯಾನ ಮಾಡುವುದು ಅಲ್ಲ ಅಥವಾ [illegible] ಅಲ್ಲ-ಅದು ನಿರಂತರ ಸಾಧನೆಯಿಂದಾಗಿ ಸಿಗುವುದು (ಮನ್ನ [illegible] ಕತೆ [illegible].)

ಅಪರಿಚಿತ: ನೋಡಿದಿರೇನು? ಅವನು ಇಳಿಯುವಾಗ ಮುಖ ಸಂತೋಷದಿಂದಲೇ ಇದ್ದಾನೆ.

ವಿನೋದ: ಹೌದು. ಅವರೆ ಅವರೆಲ್ಲ ಬುದ್ಧಿಜೀವಿ. ವಿಚಾರಶೀಲರು. ಜ್ಞಾನವಂತರು. ಅಂದ ಹಾಗೆ ಇಲ್ಲಿ ಕೇವಲ ಬುದ್ಧಿಜೀವಿಗಳು ಮಾತ್ರ [illegible]? ಸಾಮಾನ್ಯ ವ್ಯಕ್ತಿಗಳ ಭವಿಷ್ಯವೇನು? ಅವರಿಗೆ ಸ್ವರ್ಗ ಪಡೆಯಲು ಸಾಧ್ಯವಿಲ್ಲವೇ? ಸುಖ ಪಡೆಯಲು ಸಾಧ್ಯ ವಿಲ್ಲವೇ?

ಅಪರಿಚಿತ: ಯಾಕಿಲ್ಲ? ಅತ್ತ ಕಡೆ ನೋಡಿ. (ಬಲ ಪಾರ್ಶ್ವದ ಕಡೆ ತೋರಿಸುತ್ತಾನೆ)

(ಬಲ ಪಾರ್ಶ್ವದಲ್ಲಿ ದೀಪ ಬೆಳಗುತ್ತದೆ. ಅಲ್ಲಿ ಒಬ್ಬ ಸಾಮಾನ್ಯ ನಾಗರಿಕ ತನ್ನ ಕುಂಚದಿಂದ ಚಿತ್ರ ಬಿಡಿಸುತ್ತಾ ಇರುವುದು ಕಂಡುಬರುತ್ತದೆ)

ನಾಗರಿಕ: (ಅವರನ್ನು ನೋಡುತ್ತಾ ತನ್ನ ಕೆಲಸವನ್ನು ನಿಲ್ಲಿಸಿ, ನಗುತ್ತಾ) ನಮಸ್ಕಾರ ಸ್ವಾಮೀ ಬನ್ನಿ. ದಯಮಾಡಿಸೋಣವಾಗಲಿ. ತಾವುಗಳು ನನ್ನ ಈ ಅಲ್ಪ ಕೃತಿಯನ್ನು ನೋಡಲು ಬಂದದ್ದು ನನ್ನ ಸೌಭಾಗ್ಯವೇ ಎಂದು ತಿಳಿಯಬೇಕು.

ವಿನೋದ: ತುಂಬ ಸುಂದರ ಚಿತ್ರ ಬಿಡಿಸುತ್ತಾ ಇದ್ದೀರಿ!

ನಾಗರಿಕ: (ಸಂಕೋಚದಿಂದ) ಇದೇನೂ ದೊಡ್ಡ ಕಲಾಕೃತಿಯಲ್ಲ. ಇದೊಂದು ನನ್ನ ಅಲ್ಪ ಕೆಲಸ–ನನ್ನ [illegible].

ವಿನೋದ: (ಅರ್ಥವಾಗದೆ) ಏನು? ಯಾತಕ್ಕಾಗಿ? ಯಾರಿಗಾಗಿ?

ನಾಗರಿಕ: (ಆಶ್ಚರ್ಯದಿಂದ) ಯಾರಿಗಾಗಿ? ನನಗಾಗಿ–ಮತ್ತಾರಿಗಾಗಿ?

ವಿನೋದ: ನೀವು ಮಾಡುವ ಚಿತ್ರ ಮುಗಿದ ನಂತರ ಅದು ಏನಾಗುವುದು ?

ನಾಗರಿಕ: (ನಗುತ್ತಾ) ಹ್ಹ! ಹ್ಹ! ಅದನ್ನು ನಾನು ಮುಗಿಸುವುದೇ ಇಲ್ಲ.

ವಿನೋದ: (ಆಶ್ಚರ್ಯದಿಂದ) ಅಂದರೆ ಅನಂತಕಾಲದವರೆಗೆ ನೀವು ಅದನ್ನು ಮಾಡುತ್ತಾ ಹೋಗುತ್ತೀರೇನು?

ನಾಗರಿಕ: (ಅವಲೋಕಿಸುತ್ತಾ) ಬಹುಶಃ ನಿಮ್ಮ ಪ್ರಶ್ನೆಗೆ ಹೌದು ಎಂದು ತೋರುತ್ತದೆ.

ಅಪರಿಚಿತ: ಹೌದು. ಅಲ್ಲದೆ ಅವನಿಗೆ ತನ್ನ ಸ್ವಂತ ಹೆಸರೇ ಇಲ್ಲ.

ನಾಗರಿಕ: ಇದು ಆಶ್ಚರ್ಯಕರ ವಿಷಯ. ಪ್ರತಿಯೊಬ್ಬ ಮಾನವನಿಗೂ ತನ್ನ ಸ್ವಂತ ಹೆಸರು ಇರಲೇಬೇಕು.

ವಿನೋದ: (ತಾಳ್ಮೆ ತಪ್ಪುತ್ತಾ) ತಾವುಗಳು ಇದೇನು ಒಗಟಿನ ರೀತಿ ಮಾತನಾಡುತ್ತೀರಿ? ಹೆಸರು ಎಂಬುದರ ಅರ್ಥವೇನು? ಅದು ಪ್ರತಿಯೊಬ್ಬ ಮಾನವನಿಗೂ ಅಗತ್ಯವಾದರೆ ನಾನೂ ಅದನ್ನು ಕ್ರಯಕ್ಕೆ ಪಡೆದುಕೊಳ್ಳಲು ಸಿದ್ಧನಿದ್ದೇನೆ.

ನಾಗರಿಕ: (ನಗುತ್ತಾ) ನಿಜವಾಗಿಯೂ ನೀವು ಇಲ್ಲಿಗೆ ಹೊಸಬರು. [illegible] ಹೆಸರನ್ನು ಉಪಯೋಗಿಸಲಾರರು. ಇನ್ನೊಬ್ಬರ ಹೆಸರನ್ನು ಉಪಯೋಗಿಸುವುದು ಎಂದರೆ ಹೆಚ್ಚು ಕಡಿಮೆ ಇನ್ನೊಬ್ಬರ ಬುದ್ಧಿಯನ್ನು ಉಪಯೋಗಿಸಿದಂತೆ.

ವಿನೋದ: (ಕೋಪದಿಂದ) ಹಾಗಾದರೆ ಹೆಸರು ಎಂದರೆ ಏನೆಂದು ನೀವು ಯಾರಾದರೂ ಹೇಳು ತ್ತೀರೋ ಅಥವಾ ನೀವು ನಿಮ್ಮ ಹುಚ್ಚು ಮಾತನ್ನೇ ಆಡುತ್ತಾ ಇರುತ್ತೀರೋ?

ಅಪರಿಚಿತ: (ನಾಗರಿಕನಿಗೆ) ಸರಿ ಅವರಿಗೆ ತಿಳಿಸಿ ಹೇಳಿರಿ. ಅವರಿಗೂ ಸೀಮೆ ಎಂದರೇನು ಎಂದು ತಿಳಿಯುವ ಅಧಿಕಾರ ಇದೆ.

ನಾಗರಿಕ: ನೋಡಿ–ಸೀಮೆ ಅಂದರೆ ಒಂದು ವಸ್ತುವಲ್ಲ. ಅದನ್ನು ಮನುಷ್ಯ ಕ್ರಯಕ್ಕೆ ಪಡೆದುಕೊಳ್ಳಲಾರ. ಸೀಮೆ ಅಂದರೆ ಮಾನವನು ಅತಿಯಾಗಿ ಪ್ರೀತಿಸಿ ಮಾಡುವ ಕೆಲಸ.

ವಿನೋದ: ಅಂತಹ ಕೆಲಸದಿಂದ ಪ್ರಯೋಜನವೇನು?

ನಾಗರಿಕ: ಇತರರಿಗೆ ಅದರಿಂದ ಹೆಚ್ಚಿಗೆ ಉಪಯೋಗವಿರಲಿಕ್ಕಿಲ್ಲ. ಅಲ್ಲದೆ ಅಂತಹ ಕೆಲಸದಿಂದ ಮಾಡುವವನ ಹೊಟ್ಟೆ ತುಂಬುವುದಿಲ್ಲ; ಅವನಿಗೆ ಅದರಿಂದ ಹಣವೂ ಸಿಗುವುದಿಲ್ಲ. ಅಂತಹ ಕೆಲಸವನ್ನು ಆತನು ಏತಕ್ಕೆ ಮಾಡುತ್ತಾನೆಂದರೆ ಅದರಿಂದ ಆತನಿಗೆ ಪರಿಪೂರ್ಣತೆ ಸಿಗುತ್ತದೆ. ಉದಾಹರಣೆಗಾಗಿ ನಾನು ಮಾಡುವ ಈ ಕೆಲಸದತ್ತ ನೋಡಿ ಇದೇನೂ ಅಷ್ಟೊಂದು ದೊಡ್ಡ ಕಲಾಕೃತಿಯಲ್ಲ. ಇದನ್ನು ನೋಡಿ ಜಗತ್ತು ನನ್ನನ್ನು ಒಬ್ಬ ಮಹಾ ಕಲಾಕಾರ ಎಂದು ಹೊಗಳುವುದೂ ಇಲ್ಲ. ಅದಲ್ಲದೆ ಇತರರಿಗೆ ಇದು ಅಷ್ಟೊಂದು ಉಪಯೋಗದ ವಸ್ತುವೂ ಅಲ್ಲ–ಆದರೆ ನನಗೆ ಮಾತ್ರ ಇದೊಂದು ಉಪಯುಕ್ತ ವಸ್ತು. ಆದುದರಿಂದಾಗಿ ನಾನು ಈ ಕೆಲಸವನ್ನು ಪ್ರೀತಿಸುತ್ತೇನೆ. ಆದರೆ ಇದನ್ನು ಮಾಡಲು ನಾನು ಉತ್ಸುಕನಾಗಿದ್ದೇನೆ. ಹೀಗೆಯೇ ಪ್ರತಿಯೊಬ್ಬ ಮಾನವನಿಗೂ ತಾನು ಪ್ರೀತಿಸುವ ಒಂದು ಕೆಲಸ ಇದ್ದೇ ಇರಬೇಕು.

ವಿನೋದ: ಇತರರಿಗೆ ಉಪಯುಕ್ತವಿಲ್ಲದಿರುವ ಕೆಲಸದಿಂದ ಪ್ರಯೋಜನವೇನು?

ನಾಗರಿಕ: ಉಪಯುಕ್ತತೆಯು ಅದು ಒಂದು ವಸ್ತು ಒಬ್ಬರಿಗೆ ಸಂತೋಷವನ್ನು ಕೊಟ್ಟಾಗ ಆಗುತ್ತದೆ. ಅದರ ಮಹತ್ವ ಜನಸಂಖ್ಯೆಯನ್ನು ಅವಲಂಬಿಸಿಲ್ಲ. ಯಾವುದಾದರೂ ವಸ್ತು ಕೇವಲ ಒಬ್ಬನಿಗೆ ಉಪಯುಕ್ತವಾದರೂ ಕೂಡ ಈ ಜಗತ್ತಿನಲ್ಲಿ ಒಂದು ಉಪಯುಕ್ತ ವಸ್ತುವೇ. ಉದಾಹರಣೆಗಾಗಿ ಈ ಕಲೆಯ ಉಪಯುಕ್ತತೆ ನನಗೆ ಇದೆ; ನಾನೂ ಒಬ್ಬ ಮಾನವ.

ಅಪರಿಚಿತ: ಅವರು ಅನ್ನುವುದು ನಿಜ. ಅಂದ ಹಾಗೆ ಯಾವ ವಸ್ತುವು ಕೇವಲ ಒಬ್ಬನಿಗೆ ಅಪ್ರಯೋಜಕವಾದರೆ ಅದು ಜಗತ್ತಿಗೂ ಅಪ್ರಯೋಜಕ ವಸ್ತು.

ನಾಗರಿಕ: ನೀವು ಹೇಳಿದ ಮಾತನ್ನು ವಿವರಿಸಿ ಹೇಳುವುದಾದರೆ ಪ್ರತಿಯೊಬ್ಬ ಮಾನವನೂ ಒಂದು ವಸ್ತುವನ್ನು ಅಥವಾ ವಿಷಯವನ್ನು ಅರಸುತ್ತಾನೆ. ಅದರ ಬರವನ್ನು ಉತ್ಸುಕನಾಗಿ ಕಾಯುತ್ತಾನೆ. ಅಂತಹ ವಸ್ತು ಅಥವಾ ವಿಷಯ ಆತನಿಗೆ ಬಹಳ ಬೆಲೆ ಬಾಳುವಂಥದು. ಆತನಿಗೆ ಅದರಿಂದ ಆನಂದ ಸಿಗುತ್ತದೆ. ಆನಂದವೀಯುವ ವಸ್ತು ಅಥವಾ ಕೆಲಸವೇ ಸೀಮೆ. ಯಾವಾತನಿಗೆ ಸೀಮೆ ಇದೆಯೋ ಆತನಿಗೆ ಜಗತ್ತಿನಲ್ಲಿ ಎಲ್ಲಾ ಇದೆ, ಯಾರಿಗೆ ಸೀಮೆ ಇಲ್ಲವೋ ಆತನಿಗೆ ಜಗತ್ತಿನಲ್ಲಿ ಏನೂ ಇಲ್ಲ. ಅಂಥವನು ದರಿದ್ರ (ಎನ್ನುತ್ತಾ ನಿಷ್ಕ್ರಮಿಸುತ್ತಾನೆ. ಬಲ ಪಾರ್ಶ್ವದಲ್ಲಿ ಕತ್ತಲಾಗುತ್ತದೆ.)

ಅಪರಿಚಿತ: (ವಿನೋದನಿಗೆ) ನಿಮಗೆ ಅವರೆಂದ ಮಾತುಗಳ ಅರ್ಥವಾಯಿತೇನು?

ವಿನೋದ: (ಸಂದಿಗ್ಧ ಭಾವದಿಂದ) ಅವರೆಂದ ಮಾತುಗಳ ಅರ್ಥ ಸಂಪೂರ್ಣವಾಗಿ ನನಗೆ ಇನ್ನೂ ಆಗಲಿಲ್ಲ. ನೋಡಿ ಸ್ವಾಮಿ, ನನಗೂ ಏನೇನೊ ಮಾಡುವ ಆಸೆ, ಅಭಿಲಾಷೆಗಳಿದ್ದುವು. ಅವುಗಳನ್ನು ಉತ್ಸಾಹದಿಂದ ಮಾಡಿದ್ದೆ. ನಾನೂ ನಮ್ಮ ಕಂಪನಿಯಲ್ಲಿ ಒಬ್ಬ ಮುಖ್ಯಾಧಿಕಾರಿಯಾಗಿದ್ದೆ.

ಅಪರಿಚಿತ: ಆದರೆ ನೀವು ಮುಖ್ಯಾಧಿಕಾರಿಯ ಕೆಲಸವನ್ನು ಪ್ರೇಮಪೂರ್ವಕವಾಗಿ ಮಾಡುತ್ತಿದ್ದಿರೋ ಅಥವಾ ಆ ಅಧಿಕಾರದ ಮೂಲಕ ನಿಮಗೆ ಇತರರ ಮೇಲೆ ಅಧಿಕಾರ ಪ್ರಾಪ್ತಿಯಾಗುತ್ತಿತ್ತು ಎಂಬ ಭಾವನೆಯಿಂದಲೋ?

ವಿನೋದ: ಬೇರೆಯವರ ಮೇಲೆ ಅಧಿಕಾರ ಸ್ಥಾಪಿಸುವುದು ತಪ್ಪೇನು? ನೀವನ್ನುತ್ತಿದ್ದ ಮಾತಿನ ಪ್ರಕಾರ ಪ್ರತಿಯೊಬ್ಬ ಮಾನವನಿಗೂ ತಾನು ಮಾಡುವ ಕೆಲಸದಲ್ಲಿ ಪ್ರೇಮ, ಅಭಿಮಾನ ಇರಬೇಕು. ಇಂತಹ ಅಭಿಮಾನದ ಒಂದು ಶ್ರೇಷ್ಠ ವಿಷಯವೆಂದು ನೀವೇ ಈಗ ಅನ್ನುತ್ತಿದ್ದಿರಲ್ಲ?

ಅಪರಿಚಿತ: ಅಭಿಮಾನ ಶ್ರೇಷ್ಠ ವಸ್ತು ನಿಜ. ಆದರೆ ಅಭಿಮಾನ ಮತ್ತು ದುರಹಂಕಾರಗಳು ಬೇರೆ ಬೇರೆ. ನೀವು ಅಧಿಕಾರ ಪ್ರಾಪ್ತಮಾಡಿಕೊಂಡದ್ದು ದಬಾಯಿಸಲೆಂದರೆ ನಿಮ್ಮ ಕೈಕೆಳಗೆ ಕೆಲಸ ಮಾಡುವವರು ನಿಮ್ಮತ್ತ ಹೀನತನದಿಂದ ಅನಾಮಧೇಯರಂತೆ ನೋಡಬೇಕು ಎಂದಲ್ಲವೆ? ನಿಮ್ಮ ಮನಸ್ಸಿನಲ್ಲಿ ಅವರು ನಿಮ್ಮನ್ನು ಜಗತ್ತಿನಲ್ಲೇ ಬಹು ದೊಡ್ಡ ಅಧಿಕಾರಿ ಎಂಬ ಭಾವನೆಯಿಂದ ನೋಡಬೇಕು ಎಂದು ಇತ್ತು. ಅದು ಪ್ರೇಮವಲ್ಲ: ಅದು ನಿಮ್ಮ ಅಲ್ಪಪ್ರಕೃತಿ ಹಾಗೂ ಮತ್ಸರಭಾವ—ಅಹಂಭಾವ. ಇಷ್ಟು ಹೊತ್ತಿನ ತನಕ ಇಲ್ಲಿರುವರೆಲ್ಲ ನಿಮಗೇನು ಹೇಳುತ್ತಿದ್ದರೆಂದರೆ—ಸ್ವರ್ಗದ ದಾರಿ ಇತರರನ್ನು ತುಳಿದು, ಕಾಲ್ಕೆಳಗೆ ತಳ್ಳಿ ಅಲ್ಲ. ಜಗತ್ತನ್ನು ಗೆದ್ದು ಅಲ್ಲ: ಢೋಂಗಿ ಧಾರ್ಮಿಕ ವೇಷ ಹಾಕಿಕೊಂಡು ಅಲ್ಲ: ಜೀವನದಲ್ಲಿ ಮೇಲಿಂದ ಮೇಲೆ ಪಲಾಯನವಾದಿ ಅಲ್ಲ: ಅಥವಾ ಇತರರ ಬಗ್ಗೆ ಮತ್ಸರ ಅಲ್ಲ—ನಿಮ್ಮ ಮನಸ್ಸಿನ ಸ್ವರ್ಗವು ಕೇವಲ ನಿಮ್ಮ ಬಾಲಿಶ ಮನಸ್ಸಿನಲ್ಲಿರುವ ಸ್ವಪ್ನಚಿತ್ರ. ಅಜ್ಜಿ ಕತೆ ಹೇಗೆ ಮುಕ್ತಾಯವಾಗುತ್ತಿತ್ತು ಎಂದು ನಿಮಗೆ ಜ್ಞಾಪಕ ಇದೆಯೇನು? 'ನಂತರ ಅವರು ಅನಂತ ಕಾಲದ ವರೆಗೆ ಸುಖ ಸಂತೋಷದಿಂದ ಬಾಳಿ ಬದುಕಿದರು.' ಅಜ್ಜಿ ಹೀಗೇಕೆ ಅನ್ನುತ್ತಿದ್ದರು ಎಂದು ನೀವು ವಿಚಾರ ಮಾಡಿದ್ದೀರೇನು? ಭವಿಷ್ಯ ಅನಿಶ್ಚಿತ. ಭವಿಷ್ಯವನ್ನು ಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲದ ಕಾರಣಕ್ಕಾಗಿ ಅವರು ತಮ್ಮ ಕತೆಗಳನ್ನು ಆ ರೀತಿಯಾಗಿ ಮುಕ್ತಾಯಗೊಳಿಸುತ್ತಿದ್ದರು. ಈ ಸ್ವಪ್ನಸಾಮ್ರಾಜ್ಯದ ಸುಖ ಸಂತೋಷವು ಬರೇ ಸುಳ್ಳು: ಅದು ಮಾಯೆ. ಆದರೆ ಮಾನವನಿಗೆ ಬೇಕಾದದ್ದು ಕೇವಲ ಈ ಸುಖ ಸಂತೋಷ. ಇಷ್ಟರ ವರೆಗೆ ನೀವು ಇಲ್ಲಿರುವರಿಂದ ಕೇಳಿದ್ದು ಬಹಳ ಸರಳ ವಿಷಯ—ಅದೇನೆಂದರೆ ಸ್ವರ್ಗ ಎಂಬುದು ಒಂದು ಸ್ಥಳವಲ್ಲ. ಅದು ಭವಿಷ್ಯವೂ ಕೂಡ ಅಲ್ಲ: ಅದು ವರ್ತಮಾನ. ಅಂದರೆ 'ಈಗ ಇಲ್ಲಿ' ಎಂಬುದು ಸ್ವರ್ಗ 'ಮುಂದಕ್ಕೆ ನಂತರ' ಎಂಬುದು ಸ್ವರ್ಗವಲ್ಲ.

ವಿನೋದ: ಅಂದರೆ ಮನುಷ್ಯ ಸತ್ತ ನಂತರ ಏನೂ ಬದಲಾಗುವುದಿಲ್ಲವೆಂದು ಅರ್ಥ ತಾನೆ? ಸ್ವರ್ಗ ನರಕಗಳು ಪ್ರತಿಯೊಬ್ಬನ ಜೀವನದಲ್ಲಿಯೇ ಸಿಗುವ ಬೇರೆ ಬೇರೆ ಸ್ಥಿತಿಗಳೇನು? ಸ್ವರ್ಗ ಅಥವಾ ನರಕ ಮನುಷ್ಯನು ಸತ್ತ ನಂತರ ಹೋಗುವ ಸ್ಥಳ ಅಲ್ಲ—ಅದು ಜೀವಿಸುತ್ತಿರುವಾಗಲೇ ಅನುಭವಿಸುವ ಸ್ಥಿತಿಗಳೆಂದೇನು?

ಅಪರಿಚಿತ: ವಿನೋದ ಅವರೇ ಈಗ ನೀವು ಸರಿಯಾಗಿ ಸ್ವರ್ಗ ಮತ್ತು ನರಕಗಳೆಂದರೇನು ಎಂದು ತಿಳಿದುಕೊಂಡಿರುವಿರಿ. ಇದು ತುಂಬಾ ಸರಳವಾದ ವಿಷಯ.

ವಿನೋದ: ಹಾಗಾದರೆ ನಾನು ಪಾರಾಗಿ ಹೋದೆ.

ಅಪರಿಚಿತ: ನಿಜ. ಆದರೆ ಇದಕ್ಕೆ ಬೇರೆ ಯಾರೂ ಹೊಣೆ ಅಲ್ಲ. ಅದನ್ನು ನೀವೇ ಮಾಡಿಕೊಂಡದ್ದು ಹಾಗೂ ನೀವೇ ಅದನ್ನು ಭೋಗಿಸಬೇಕು. ನಾನೇನೂ ಮಾಡಲಾರೆ. ಸರಿ ಬನ್ನಿ ಒಳಕ್ಕೆ ಹೋಗೋಣ (ಎನ್ನುತ್ತಾ ಇಬ್ಬರು ನಿಷ್ಕ್ರಮಿಸುತ್ತಾರೆ. ರಂಗಮಂಚದಲ್ಲಿ ಕತ್ತಲೆಯಾಗುತ್ತದೆ ಹಾಗೂ ಕ್ರಮೇಣ ಪರದೆ ಮೆಲ್ಲನೆ ಇಳಿಯುತ್ತದೆ.) ✡

ಉಸಿರು ಕೊಟ್ಟ ದೇವರು ನಮಗೆ ಸ್ವಾತಂತ್ರ್ಯವನ್ನೂ ಕೊಟ್ಟನಲ್ಲವೇ?

-ಥಾಮಸ್ ಜೆಫರ್ಸನ್

ಸಂ.: ವಿ. ಎ. ಕಣ್ಣನ್

ಒಂದು ಚಂದ್ರ

ಕವಿಗಳ ಮನೆಯಂಗಳದ
ಬಣ್ಣದ ಬೀಸಣಿಗೆ
ನಮುದಿಂದ ತತ್ತರಿಸುತ್ತ ಹೊರ
ಬಿದ್ದ ಚಂದ್ರ
            ಮಲ್ಲಿಸಂಗಾಳಿಸೂರಿ
            ಜೀರಿಗೇದ

ಅತ್ತ ಇತ್ತ ನೋಡುತ್ತ
ನೆರೆ ಚೆಂದಿಗಳ ಚೆಂದಾ ಬಿತ್ತುತ್ತ
ಚಂದ್ರಮ ·
ಕಾಂಪೌಂಡುಗಳೊಳಗೆ ಹಾಯುತ್ತ ನಡೆದ.
ಬಿತ್ತಿದ ಹೂಗಳ ಗದ್ದ ಹಿಡಿದು ಚುಂಬಿಸುತ್ತ
ದೇಟು ಸವರುತ್ತ ಕಲೆತುಂಬಿ ಆ
ಕಳಿಸುತ್ತ ನಡೆದಂತೆ
ಫೂ ಇಲಾಖೆ ಮಂತ್ರಿ
ಮನೆ ನಾಯಿ ಗೌಗೌ ಬೊಗಳಿತು
ಹೌ ಹಾರಿ ಕಂಬಿ ಕಿತ್ತವನೇ
ಮಲ್ಲಿಗೆ ಮಂಟಪದ ಗುಂಟಾ ತುಂಟಾಗಿದ್ದು
ನರಘರ ಟಿಬಿ ಸಿಲ್ಯಾಬಸ್ ಕಾಲೇಜ್ ಕರೇ ಮನೆ
ಕೆಮ್ಮಿಕೆ ಸಂಪಾದಿಸ ಮಂಟ್ಟಿದ ಬಾಗಿಲಮಾರು
ತಟ್ಟುತ್ತ ನಿಂತ. ನಿಂತು ಕಾಯ್ದಿದ. ಕವಿ
ಸುತ್ತ ಬಿರಿ ಬಿರಿ ಮಿದುಳ ಮನ ಬಿಚ್ಚಿ
ನಡೆಯುತ್ತೋದಗಿದ
—ಅಷ್ಟಾತಿಷ್ಟ ಪಿಡಬ್ಲೂಡಿ ರೋಡಿಗುಂಟಾ

ದೂರ ದೂರದ ಗೋರಿ ಗಿರಿ ಗುಡಿ ಗಹ್ವರಗಳೊಳಗಿಂದ
ಪರ್ವತಗಳಾಚೆಗೆಂದೋ ಕೂಗಿದ ಕೂಗು
ಇಂದು ತಲುಪಿದಂತೆ
ಕೊಟ್ಟ ಶಾಪಗಳು ಇಂದು ಮೈ ಮೇಲೆ [illegible]
ಬೆವರುತ್ತ
[illegible] ರಕ್ತವೂ ಮೇಲೆ [illegible] ತೇಗುತ್ತ
ತಂಗಾಳಿ ದೀಪಗಳಲ್ಲಿ ಬೆಳಕು [illegible]
ವಿದ್ಯುತ್ ತಂತಿಗಳಲ್ಲಿ ಬತ್ತಿ [illegible]
ಬರಲು ಕಿಸೆಗಳೊಳಗೆ ಕೈ [illegible]
ಬೆಚ್ಚಗಾಗುತ್ತ ಬಂದ

ಒಗೆದಿಟ್ಟ [illegible] ಮೇಲೆ
ಅಕಾಲ ಗೂಡುಗಳೊಳಗಿನ
[illegible] ಅವಿದ ಮೇಲೆ
ಪಿಸಿ ಪಿಸಿ ಮಾತುಗಳ [illegible] ಮೇಲೆ
ಬಟ್ಟಲ ರಕ್ತದೊಳಗೆ ಬಿದ್ದ ಕಣ್ಣೀರಿನ ಮೇಲೆ
ಮಣ್ಣುಂಟ ಬೇರುಗಳ ಮಾತು ಬರೆದ ಮೇಲೆ

— [illegible] ಅಲ್ಲಿ ದೂರದ ದಾರಿ
ಮುಟ್ಟಿ ನಿಂದ.
ಕಪ್ಪು [illegible]
[illegible]
[illegible]
ಕಪ್ಪು [illegible] ಬಗಿದುಕೊಂಡು
ಗಪ್‌ಚುಪ್ ಸೂಳೆಗೇರಿ
[illegible] ಬಿಟ್ಟ.

ಇದೋ ಇಲ್ಲಿ ನನ್ನದ
ಒಳಗೆ ನಿನ್ನೆದೆಯೊಳಗೆ
ಅವಸುಲಿದಿಟ್ಟು
ಹೋದ
ಬೆಳಕು

ಜಯಂತ ಕಾಯ್ಕಿಣಿ



'ಅಮ್ಮಾ....'

(೧೯೫೪ರಲ್ಲಿ ಪ್ರಕಟವಾದ ಇದೇ ಲೇಖಕರ 'ಚಿಕಿತ್ಸೆಯ ಮು... ಮತ್ತು ಇತರ ಕಥೆಗಳು' ಸಂಗ್ರಹದಿಂದ ಆಯ್ದುಕೊಳ್ಳಲಾಗಿ... ಮೂಲದಲ್ಲಿ ಈ ಕಥೆಯ ತಲೆಕಟ್ಟು 'ಒಂದು ದಿನದ ತಾಯ್ತನ' ಎಂದಿತ್ತು

ಯಮುರ್ಣಂಜ ರಾಮಚಂದ್ರ

ಸುಭದ್ರಮ್ಮ ಅಂಗಳಕ್ಕಿಳಿದು, ಮನೆಯಿಂದು ವಿಶಾಲವಾಗಿ ಹರಡಿಕೊಂಡಿದ್ದ ಗದ್ದೆಯ ಬಯಲು ತನಕ ಒಮ್ಮೆ ನೋಡಿದರು. ಸಂಜೆಯ ಬಿಸಿಲಿಗೆ ಮೈಯೊಡ್ಡಿ ಮೌನವಾಗಿ ನಿಂತಿದ್ದ ಭತ್ತದ ಬೆಳೆಯ ಹೊರತು ಮತ್ತೇನೂ ಅವರ ಕಣ್ಣಿಗೆ ಕಾಣಿಸಲಿಲ್ಲ. ಅಲ್ಲಿಂದ ಹಿಂದಿರುಗಿ, ಬೇಸರದಿಂದ ಕೈ ಕೊಡಹಿಕೊಳ್ಳುತ್ತ ಮನೆಯನ್ನು ಹೊಕ್ಕು, ಇಲ್ಲದ ಕೆಲಸಗಳನ್ನು ಹುಡುಕಿಕೊಂಡು ಮಾಡತೊಡಗಿದರು.

ಸುಭದ್ರಮ್ಮನವರ ಮಟ್ಟಿಗೆ ಈಗೆರಡು ದಿನಗಳಿಂದ ಮನೆಯಿಡೀ ಭಣಭಣವೆನಿಸುತ್ತದೆ. ಅವರ ಪತಿ ಶಂಕರಯ್ಯ, ತಮ್ಮ ದೂರದ ತಂಗಿಯ ಮನೆಗೆ ಹೋದವರು ಇನ್ನೂ ಬಂದಿರಲಿಲ್ಲ. ಈಗ ಮನೆಯಲ್ಲಿ ಸುಭದ್ರಮ್ಮನವರೊಬ್ಬರೇ. ಶಂಕರಯ್ಯನವರು ಮನೆಯಲ್ಲೇ ಇದ್ದರೂ ಹೆಚ್ಚಿನ ಉತ್ಸಾಹ ಪಡುವುದೇನೂ ಇಲ್ಲ. ಅದಕ್ಕೆ ಕಾರಣ ಆ ಮನೆಯೇ ಎನ್ನಲೂಬಹುದು. ಸುಭದ್ರಮ್ಮನವರ ಹೇಳಿಕೆಯಂತೆ ಆ ಇಡೀ ಮನೆಯನ್ನು ಒಮ್ಮೆ ಸುತ್ತಲು ಒಂದು ತಾಸವು ಸಾಕಾಗುವುದಿಲ್ಲ! ಆದರೂ ಶಂಕರಯ್ಯ ಇದ್ದಾಗ, ಮನೆಯಲ್ಲಿ ಮನುಷ್ಯರ ಸುಳಿವು ಇದೆಯೆಂಬ ಒಂದೇ ಒಂದು ಸಮಾಧಾನವಾದರೂ ಇರುತ್ತಿತ್ತು. ಆಗಾಗ ಚುಟುಕಿನಲ್ಲಿಯೇ ಹೇಳಿ ಮುಗಿಸುವ "ಬೇಕು–ಬೇಡ"ವೆಂಬ ಶಂಕರಯ್ಯನವರ ಮಾತುಗಳನ್ನಾದರೂ ಕೇಳಬಹುದಿತ್ತು. ಆದರೆ ಈಗ ಎರಡು ದಿನಗಳಿಂದ ಅದೊಂದೂ ಇಲ್ಲ.

ಸುಭದ್ರಮ್ಮನವರಿಗೆ ಈಗ ಇದೊಂದೇ ಯೋಚನೆ: "ಇನ್ನೂ ಯಾಕೆ ಬರಲಿಲ್ಲ ಅವರು?" ಎಂದು. ಇದರೊಂದಿಗೆ ಅವರ ಮನಸ್ಸು ಶಂಕರಯ್ಯನವರು ಹೋದ ಸಂದರ್ಭವನ್ನು ನೆನೆಸಿಕೊಳ್ಳುತ್ತಿತ್ತು. ಆ ದಿನ ಅವರು ಪೇಟೆಯಿಂದ ಬರುವಾಗಲೇ ತುಂಬ ಗಡಿಬಿಡಿಯಿಂದಿದ್ದರು. ಬಂದವರೇ, "ನಾನು ಒಂದೆರಡು ದಿನಕ್ಕೆ ಒಮ್ಮೆ ತಂಗಿಯ ಮನೆಗೆ ಹೋಗಿ ಬರುತ್ತೇನೆ" ಎಂದುದನ್ನು ಕೇಳಿದಾಗ, ಸುಭದ್ರಮ್ಮನವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಶಂಕರಯ್ಯನವರಿಗೆ ಒಬ್ಬಳು ತಂಗಿಯೂ ಇದ್ದಾಳೆ ಎಂಬುದನ್ನು ಸುಭದ್ರಮ್ಮ ಮದುವೆಯಾದ ಅನಂತರದ ಈ ಹದಿನೈದು ವರ್ಷದ ಬಾಳ್ವೆಯಲ್ಲಿ ಕೇಳಿದುದು ಇದೇ ಮೊದಲು. ಆದುದರಿಂದ ಅವರು "ಏನು?" ಎಂಬಂತೆ ಪ್ರಶ್ನಾರ್ಥಕ ದೃಷ್ಟಿಯಿಂದ ತಮ್ಮ ಪತಿಯ ಮುಖವನ್ನು ನೋಡಿದರು. ಆಗಲೇ ಶಂಕರಯ್ಯ ಅರ್ಧಂಬರ್ಧವಾಗಿ ವಿಷಯವನ್ನು ವಿವರಿಸಿದರು.

ತಂಗಿಯೆಂದರೆ ಒಡಹುಟ್ಟಿದ ತಂಗಿಯಲ್ಲ. ಯಾವುದೋ ಬಾದರಾಯಣ ಸಂಬಂಧದ ಪ್ರಕಾರ ತಂಗಿಯಾಗಬೇಕಂತೆ. ಅವಳೀಗ ಮರಣಶಯ್ಯೆಯಲ್ಲಿದ್ದಾಳೆ. ಒಂದು ವರ್ಷದ ಹಿಂದೆ ಅವಳಿಂದ ಅವಳ ಪತಿಯನ್ನು ಕಸಿದುಕೊಂಡ ವಿಧಿ, ಈಗ ಅವಳ ಒಂದೂವರೆ ವರ್ಷದ ಮಗನನ್ನು ತಬ್ಬಲಿಯಾಗಿಸಿ, ಅವಳನ್ನು ಕಸಿದುಕೊಳ್ಳುವುದರಲ್ಲಿದೆಯಂತೆ. ಇಷ್ಟನ್ನು ಹೇಳಿದ ಶಂಕರಯ್ಯನವರು, ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆದಿರಲಿಲ್ಲ. ಬೇಗ ಬೇಗನೆ ತೆಂಗಿನ ಮಡಲಿನ ಸೂಟೆಯೊಂದನ್ನು ಉರಿಸಿಕೊಂಡು, ರಾತ್ರೋರಾತ್ರಿ ಹೊರಟೇಬಿಟ್ಟಿದ್ದರು.

ಶಂಕರಯ್ಯನವರು ಹೋಗಿ ಎರಡು ದಿನ ಕಳೆದರೂ ಇನ್ನೂ ಅವರ ಸುಳಿವು ಕಾಣಿಸಲಿಲ್ಲ. ಈ ಎರಡು ದಿವಸವನ್ನೆಲ್ಲ ಸುಭದ್ರಮ್ಮ ಯೋಚನೆಯಲ್ಲೇ ಕಳೆದಿದ್ದರು. ತಮ್ಮ ಒಂದೇ ಒಂದಾದ ಕರುಳಿನ ಮಗುವನ್ನು ತೊರೆದು ಹೋಗುತ್ತಿದ್ದ ಅತ್ತಿಗೆಯನ್ನು ಮನಸ್ಸಿನಲ್ಲೇ ಚಿತ್ರಿಸಿಕೊಳ್ಳುತ್ತಿದ್ದರು. ಒಮ್ಮೆ ನಕ್ಕು ಒಮ್ಮೆ ಅತ್ತು, ಅಂಬೆಗಾಲಿಡುತ್ತಿದ್ದ ಅವಳ ಮಗುವಿನ ಪುಟ್ಟ ಮುಖವನ್ನು ತನ್ನ ಅಭಿರುಚಿಗೆ ತಕ್ಕಂತೆ ಚಿತ್ರಿಸಿಕೊಂಡು, ಅದರಲ್ಲೇ ತಲ್ಲೀನರಾಗುತ್ತಿದ್ದರು. ಈ ರೀತಿಯಲ್ಲಿ

ರುವಾಗ ಸುಭದ್ರಮ್ಮನವರ ಒಳಮನಸ್ಸೊಂದು, ಈವರೆಗೆ ಕಣ್ಣಿನಿಂದ ಕಾಣದ ಅತ್ತಿಗೆಯನ್ನು "ನೀನು ಪುಣ್ಯವಂತೆ" ಎನ್ನುತ್ತಿತ್ತು. ಯಾಕೋ ಏನೋ ಈ ಸಮಾಧಿಯಿಂದ ಎಚ್ಚರವಾದಾಗ, ಸುಭದ್ರಮ್ಮನವರಿಗೆ ಒಂದು ರೀತಿಯ ನಾಚಿಕೆಯಾಗುತ್ತಿತ್ತು. ಅನಂತರ, ಯಾವುದೊಂದೂ ಚಟುವಟಿಕೆಯಿಲ್ಲದೆ ಬಿಮ್ಮನೆ ಬಿದ್ದುಕೊಂಡಿದ್ದ ತಮ್ಮ ವಿಶಾಲ ಮನೆಯನ್ನು ನೆನಸುವಾಗ, ಅವರಿಗೆ ತಮ್ಮ ಬಗೆಗೇ ಬೇಸರ ಉಂಟಾಗುತ್ತಿತ್ತು. ಒಮ್ಮೊಮ್ಮೆ ಉದ್ವೇಗವು ಮಿತಿ ಮೀರಿದಾಗ, "ನಿಜವಾಗಿ, ಸತ್ತರೂ ಎಷ್ಟು ಸುಖದಿಂದ ಸಾಯಬಹುದು! ಮಡಿಲಲ್ಲೇ ಕುಳಿತುಕೊಂಡ ಮಗನ ಬೆನ್ನನ್ನು ನೇವರಿಸುತ್ತ, ಅವನ ಮುಖದಲ್ಲೆ ಚಲಿಸದ ದೃಷ್ಟಿಯನ್ನಿಟ್ಟು ಸಾಯಬೇಕಾದರೂ ಎಂಥ ಪುಣ್ಯವಂತೆಯಾಗಿರಬೇಕು!" ಎಂದುಕೊಳ್ಳುತ್ತಿದ್ದರು. ಆದರೆ ತಮ್ಮ ಸ್ಥಿತಿಯನ್ನು ನೆನಸಿ, "ಆದರೆ... ಯಾರಿಗೆ ಬೇಕು ಹೀಗೆ ಬದುಕುವುದು?" ಎಂದು ಅವರ ಮನಸ್ಸು ವೇದನೆಯಿಂದ ಕೇಳಿಕೊಂಡಾಗ, ಸುಭದ್ರಮ್ಮನವರಿಗೆ ಕರುಳನ್ನೇ ಅಮುಕಿದಂತಹ ನೋವಾಗುತ್ತಿತ್ತು. ಯಾವುದನ್ನೊ ಗಾಢವಾಗಿ ಯೋಚಿಸುತ್ತ, ಮೌನವಾಗಿ ಕಣ್ಣೀರು ಸುರಿಸುತ್ತಿದ್ದರು. ಎಚ್ಚರವಾದಾಗ, "ಯಾರೋ ಏನೋ! ಎಲ್ಲಿ ಯಾದರೂ ಹೋದರೆ... ಮೂರು ಮೂರು ದಿನ ಮನೆಯ ಮುಖ ಕಾಣುವುದಕ್ಕಿಲ್ಲ. ಇಲ್ಲಿ ಬಾಕಿದ್ದವರು ಬದುಕಿದ್ದಾರೋ ಸತ್ತಿದ್ದಾರೋ ಎನ್ನುವ ಯೋಚನೆಯೂ ಇಲ್ಲ..." ಎಂದುಕೊಂಡು ಎಲ್ಲಾ ತಪ್ಪನ್ನೂ ಗಂಡನ ಮೇಲೆ ಹೊರಿಸಲು ಪ್ರಯತ್ನಿಸುತ್ತಿದ್ದರು.

ಮೆಲ್ಲ ಮೆಲ್ಲನೆ ಕತ್ತಲು ಕಾಲಿಡುತ್ತಿತ್ತು. ಸುಭದ್ರಮ್ಮ ದೀಪವನ್ನು ಉರಿಸಿ ಹೊರಗೆ ತಂದಿಟ್ಟು ತಿರುಗಿ ಅಂಗಳಕ್ಕಿಳಿದರು. ಗಂಡನ ಬಗೆಗೆ ಯಾವುದೇ ಒಂದು ಹೊಸ ಉತ್ಸಾಹವನ್ನು ಅವರು ತಾಳದಿದ್ದರೂ, ತಮ್ಮ ಆ ಅತ್ತಿಗೆಯ ಬಗೆಗೆ ಒಂದು ರೀತಿಯ ಕುತೂಹಲ ಅವರಲ್ಲಿ ಉಂಟಾಗಿತ್ತು. ಅಲ್ಲಿಯ ಸುದ್ದಿ ತಿಳಿಯಲು ಅವರು ಆತುರರಾಗಿದ್ದರು. ಆದುದರಿಂದಲೇ ಶಂಕರಯ್ಯನವರ ಆಕೃತಿ ಗದ್ದೆಯ ತುದಿಯಲ್ಲಿ ಕಾಣಿಸಿಕೊಂಡೊಡನೆಯೆ, ಅವರಿಗಾಗಿ ಸುಭದ್ರಮ್ಮನವರು ಒಳಗೆ ಹೋಗಿ, ಬೇಗಬೇಗನೆ ಮಜ್ಜಿಗೆ ನೀರಿನ ವ್ಯವಸ್ಥೆಯಲ್ಲಿ ತೊಡಗಿದ್ದರು. ಅವರು ಮೊರಗೆ ಬರುವುದರ ಮೊದಲೇ ಅಂಗಳದಿಂದ ಶಂಕರಯ್ಯನವರ ಧ್ವನಿ ಕೇಳಿಸಿತು. ಅದು ನಿತ್ಯವೂ ಕೇಳಿಸುವ ಮಾತೇ, "ತಣ್ಣಗೆ ಏನಾದರೂ ಇದೆಯೇ?" ಎಂದು. ಸುಭದ್ರಮ್ಮ ಮರು ಮಾತಿಲ್ಲದೆ, ಮಜ್ಜಿಗೆ ನೀರಿನೊಂದಿಗೆ ಹೊರಗೆ ಬಂದರು.

"ಸ್ವಲ ಹಸುವಿನ ಹಾಲು ತರುತ್ತೀಯಾ?" ಎಂದು ಶಂಕರಯ್ಯನವರು ಕೇಳಿದರು. ಇದೊಂದು ಹೊಸ ರೀತಿಯ ಪ್ರಶ್ನೆ. ಅದಕ್ಕಾಗಿಯೇ ಸುಭದ್ರಮ್ಮನವರು ಕಣ್ಣಗಲಿಸಿ ಪತಿಯೆಡೆಗೆ ನೋಡತೊಡಗಿದರು.

ಶಂಕರಯ್ಯನವರಿಗೂ ಇದು ಅರ್ಥವಾಯಿತು. ಅವರು ತಮ್ಮ ಹಿಂದೆ ಅವಿತುಕೊಂಡಿದ್ದ ಮಗುವನ್ನು ಕೈಹಿಡಿದು ಮುಂದಕ್ಕೆಳೆಯುತ್ತ, "ಇಗೋ ಇತ್ತ ಬಾರಪ್ಪ, ನೋಡು ಸ್ವಲ್ಪ ಹಾಲು ಕುಡಿದುಕೋ. ಮಧ್ಯಾಹ್ನದ ನಂತರ ಏನೂ ಹೊಟ್ಟೆಗೆ ಹೋಗಿಲ್ಲ.." ಎನ್ನತೊಡಗಿದರು.

ಸುಭದ್ರಮ್ಮ ನೋಡಿದರು. ಪುಟ್ಟ ಮಗುವೊಂದು ದೀನವಾಗಿ ಶಂಕರಯ್ಯನವರು ಎಳೆದಂತೆ ಮುಂದೆ ಮುಂದೆ ಬರುತ್ತಿತ್ತು. ಸುಭದ್ರಮ್ಮನವರಿಗೆ ಯೋಚಿಸುವ ಆವಶ್ಯಕತೆಯೇ ಬೀಳಲಿಲ್ಲ. ಒಂದೇ ಕ್ಷಣದಲ್ಲಿ ಎಲ್ಲವೂ ಅವರಿಗೆ ಅರಿವಾಯಿತು. ಆ ಮಗು ತಾಯಿಯಿಲ್ಲದ ತಬ್ಬಲಿಯಾದೀತೆಂದು ಅವರು ಬಗೆದಿದ್ದರೇ ಹೊರತು, ಅದನ್ನು ಹೊರುವ ಹೊಣೆ ತಮ್ಮ ಮೇಲೆ ಬರಬಹುದೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಒಂದು ಕ್ಷಣ ದಿಕ್ಕುಗೆಟ್ಟವರಂತೆ ಅವರು ನಿಂತುಬಿಟ್ಟರು. ಈ ತನಕ ಜಡವಾಗಿ ಬಿದ್ದಿದ್ದ ಕೈಗಳು ಯಾವುದೋ ಒಂದು ಹೊಸ ಆಶೆಗಾಗಿ ಲವಲವಿಕೆಯನ್ನು ತೋರಿಸಿದರೂ, ಸುಭದ್ರಮ್ಮನವರು, ತಮ್ಮ ದೌರ್ಭಾಗ್ಯವನ್ನು ನೆನಸಿಕೊಂಡು, ಅವುಗಳನ್ನು ಪ್ರಯತ್ನಪೂರ್ವಕವಾಗಿ ತಡೆಹಿಡಿದರು. ಅನಂತರ ಮೌನವಾಗಿ ತಲೆ ತಗ್ಗಿಸಿ ನಿಂತರು.

"ನಿನ್ನೆ ರಾತ್ರಿಯೇ ತೀರಿಕೊಂಡಳು... ಎಲ್ಲದಕ್ಕೂ ಒಂದು ವ್ಯವಸ್ಥೆ ಮಾಡಿ ಹೊರಡಬೇಕಾದರೆ ಮಧ್ಯಾಹ್ನವಾಯಿತು... ನೆಂಟರು ಇಷ್ಟರು, ಯಾರೂ ಇಲ್ಲ... ಇದ್ದ ಒಬ್ಬ ಮೈದುನ, ಬೇಕಾ

ಬರೆ ಮಗುವನ್ನು ಮಲಗಿಸುತ್ತಿದ್ದೇನೆ– ಎಂದ…" ಶಂಕರಯ್ಯನವರು ಒಂದೊಂದನ್ನೇ ಬಿಡಿಸಿ ಹೇಳುತ್ತಿದ್ದರು.

ಸುಭದ್ರಮ್ಮನವರ ಮನಸ್ಸಿನಲ್ಲಿ ಯಾವ ಖಚಿತವೂ ಉಂಟಾಗಲಿಲ್ಲ. "ಅಯ್ಯೋ… ಇನ್ನೇನು?" ಎಂಬ ಒಂದೇ ವಿಚಾರ ಅವರನ್ನು ಕಿತ್ತು ತಿನ್ನುತ್ತಿತ್ತು.

ಶಂಕರಯ್ಯ ತಿರುಗಿ ನೋಡಿದರು: "ಆದರೆ ಮೊದಲು ನನಗೆ ಏನು ಮಾಡುವುದೆಂದೂ ತೋಚಲಿಲ್ಲ… ಯೋಚಿಸಿ ಹೇಳುತ್ತೇನೆ–ಎಂದೆ…"

ಸುಭದ್ರಮ್ಮ ಬಹಳ ನೀಳವಾಗಿ ಉಸಿರೆಳೆದುಕೊಂಡರು. ಅವರ ಮನಸ್ಸಿಗೆ ಒಂದು ವಿಚಿತ್ರ ಸಮಾಧಾನವಾಗುತ್ತಿತ್ತು. ಅಷ್ಟೇ ಸರಿಯಾಗಿ ತಿಳಿದುಕೊಳ್ಳಲು. ಪತಿಯನ್ನು ಕೇಳಬೇಕೆನ್ನುವಷ್ಟರಲ್ಲೇ ಶಂಕರಯ್ಯನವರ ಮಾತು ಕೇಳಿಸ ತೊಡಗಿತು.

"ಹೋಗುತ್ತೀಯಾ ಮಗೂ? ಅಗೋ. ಹೋಗು. ಅಗೋ. ಅಮ್ಮ…ಹಾಲು ಕುಡಿಯುವುದಿಲ್ಲವೇ? ಹುಂ. ಹುಂ. ಅಮ್ಮ ಇಷ್ಟಲ್ಲಿಗೆ ಹೋಗು…"

ಸುಭದ್ರಮ್ಮನವರ ಹೃದಯಕ್ಕೆ ಬರೆಯಿಳೆದಂತಾಯಿತು. ತಾವು ಕೇಳಬೇಕೆಂದಿದ್ದುದನ್ನು ಕೇಳಲಾಗಲಿಲ್ಲ ಅವರಿಂದ. ಅನಂತರ ಒಂದು ಕ್ಷಣವೂ ಅವರು ಅಲ್ಲಿ ನಿಲ್ಲಲಿಲ್ಲ. ಬೇಗ ಬೇಗನೆ ಒಳಗೋಡಿ. ಗೋಡೆಗೊರಗಿಕೊಂಡು ನಿಶ್ಚಲವಾಗಿ ನಿಂತುಬಿಟ್ಟರು. ಅನಂತರ ಏನೋ ನೆನಪಾದಂತಾಗಿ. ತಟ್ಟೆಯಲ್ಲಿ ಸ್ವಲ್ಪ ಹಾಲು ಹಾಕಿಕೊಂಡು. ಮುಖ ತಗ್ಗಿಸಿಕೊಂಡೇ ಹೋಗಿ. ಶಂಕರಯ್ಯನವರ ಮುಂದೆ ಇಟ್ಟರು. ತುಸು ತಡೆದು ಧೈರ್ಯದಿಂದ. "ತಿರುಗಿ ಯಾವಾಗ ಹೋಗುವುದು?" ಎಂದು ಕೇಳಿದರು.

ಶಂಕರಯ್ಯ ದಂಗಾಗಿ. "ಯಾಕೆ?" ಎಂದರು. ಸುಭದ್ರಮ್ಮ ಏನನ್ನೂ ಹೇಳಲಿಲ್ಲ. ಮೌನವಾಗಿ ಒಳಗೆ ಹೋದರು. ಶಂಕರಯ್ಯನವರು ಮಾತ್ರ, ಮಗುವಿಗೆ ಹಾಲು ಕುಡಿಸುವುದನ್ನು ಮರೆತು, ಮೇಲೆ ಕೆಳಗೆ ನೋಡುತ್ತಿದ್ದರು. ಅನಂತರ ಹೇಗೋ ಮೆಲ್ಲಗೆ ಹೇಳಿದರು: "ಯಾವಾಗ ಬೇಕಾದರೂ ಹೋಗಬಹುದು…ನಾಳೆ…ನಾಡದು… ನಿನ್ನಿಷ್ಟ." ಆದರೆ ಈ ಮಾತು ಸುಭದ್ರಮ್ಮನವರಿಗೆ ಕೇಳಿಸಿತೋ ಇಲ್ಲವೋ. ಅವರು. ತಮ್ಮನ್ನೇ ಮರೆತು



ಒಳಗೆ ಎಲ್ಲಿಯೋ ನಿಶ್ಚಲವಾಗಿ ಕುಳಿತಿದ್ದರು.

ಇರುಳು ಆಯಿತು. ಯಂತ್ರದಂತೆ ಸುಭದ್ರಮ್ಮನವರು ನಿತ್ಯದ ಕೆಲಸಗಳನ್ನು ಮುಗಿಸಿದರು. ಗಂಡನಿಗೆ, ಮಗುವಿಗೆ ಬಡಿಸಿದರು. ಉಣ್ಣುವುದಕ್ಕರಿಯದೆ ಮಗು ಮೌನವಾಗಿ ಕುಳಿತಾಗ, ಶಂಕರಯ್ಯನವರೇ ಉಣಿಸಿದರು. ಊಟದ ನಂತರ ಮಗುವನ್ನು ತಮ್ಮ ಬಳಿಯಲ್ಲಿಯೇ ಮಲಗಿಸಿಕೊಂಡು, ನಿದ್ದೆ ಮಾಡಿಸಿದರು. ಸುಭದ್ರಮ್ಮನವರೊಡನೆ ಯಾವ ವಿಚಾರವನ್ನೂ ಅವರು ಕೇಳಲಿಲ್ಲ. ಸುಭದ್ರಮ್ಮನವರೂ ಮಾತಾಡಲಿಲ್ಲ. ಮಗುವಿನಿಂದ ಆದಷ್ಟು ದೂರ—ಒಳಗೆ—ಅವರು ತಮ್ಮ ಹಾಸಿಗೆಯನ್ನು ಬಿಡಿಸಿ ಮಲಗಿಕೊಂಡರು. ಎಷ್ಟೋ ಹೊತ್ತಿನ ತನಕ ನಿದ್ದೆಯಿಲ್ಲದೆ ಮಗ್ಗಲು ಬದಲಾಯಿಸಿಕೊಳ್ಳುತ್ತ ನಿಟ್ಟುಸಿರುಬಿಡುತ್ತಿದ್ದರು. ಶಂಕರಯ್ಯನವರ ಪರಿಸ್ಥಿತಿಯೂ ಹಾಗೆಯೇ ಎಂಬುದನ್ನೂ ಅವರು ಯೋಚಿಸಲಿಲ್ಲ. ಮಗು ಮಾತ್ರ ಮುರುಟಿಕೊಂಡು, ಯಾವುದೋ ಕನಸನ್ನು ಕಾಣುತ್ತ ಮೌನವಾಗಿ ನಿದ್ರಿಸುತ್ತಿತ್ತು. ಅದೆಂತಹ ಕನಸೋ!

ಕೋಳಿಯ ಕೂಗನ್ನು ಕೇಳಿ, ಆಗ ತಾನೆ ನಿದ್ರಿಸತೊಡಗಿದ ಸುಭದ್ರಮ್ಮ ಎದ್ದು, ನಿತ್ಯದಂತೆ ಕಸ ಗುಡಿಸತೊಡಗಿದರು. ಹೊರಗೆ ಬಂದಾಗ ಪಕ್ಕನೆ ಕಾಲನ್ನು ಹಿಂದೆಳೆದುಕೊಳ್ಳುವಂತಾಯಿತು. ಮಗು ಮಲಗಿದಲ್ಲಿಂದ ಎದ್ದು, ಅಳುತ್ತ ಅಂಬೆಗಾಲಿಡುತ್ತ, ಅತ್ತಿತ್ತ ಹೋಗುತ್ತಿತ್ತು. ಸುಭದ್ರಮ್ಮನವರ ಮನಸ್ಸಿನ ಗಲಿಬಿಲಿ ಅವರನ್ನು ಒಳಗೆ ನೂಕುತ್ತಿತ್ತು. ಕೆಳಗೆ ನೋಡಿದಾಗ ಮಗು ಅವರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡು, ಅವರ ಮುಖವನ್ನೇ ನೋಡುತ್ತ ಅಳುತ್ತಿತ್ತು.

"ಜೋ...ಜೋ..." ಸುಭದ್ರಮ್ಮ, ನಿದ್ರಿಸುತ್ತಿದ್ದ ಪತಿಯನ್ನು ಗಾಬರಿಯಿಂದ ಆಗಾಗ ನೋಡಿಕೊಳ್ಳುತ್ತ, ಮಗುವಿನ ಕೈಯಿಂದ ಬಿಡಿಸಿಕೊಳ್ಳತೊಡಗಿದರು. ಆದರೆ ಇದರೊಂದಿಗೆ ಮಗುವಿನ ಅಳುವೂ ಹೆಚ್ಚತೊಡಗಿತು.

"ಉಹುಂ...ಇಲ್ಲ ಬೇಡ,ಬೇಡ..."ಸುಭದ್ರಮ್ಮ ಬೇಗಬೇಗನೆ ಮಗುವನ್ನೆತ್ತಿಕೊಂಡು ಅದನ್ನು ಸಮಾಧಾನಪಡಿಸತೊಡಗಿದರು. ಅದರಿಂದಲೂ ಹೆಚ್ಚು ಅವರಿಗೆ ಗಾಬರಿಯಾಗುತ್ತಿತ್ತು. ಎಲ್ಲಿ ಶಂಕರಯ್ಯನವರು ನೋಡಿಬಿಡುವರೋ ಎಂದು.

ಮಗು ಅಳುವನ್ನು ಮೆಲ್ಲಮೆಲ್ಲನೆ ಕಡಿಮೆ ಮಾಡುತ್ತಿತ್ತು. ಒಲ್ಲದ ಮನಸ್ಸಿನಿಂದ ಅದನ್ನೆತ್ತಿಕೊಂಡು, ಸುಭದ್ರಮ್ಮ ಸಮಾಧಾನಪಡಿಸುತ್ತಿದ್ದರು. ಕೊನೆಗೊಮ್ಮೆ ಮಗು ಅಳು ನಿಲ್ಲಿಸಿತೆಂದಾಗ, ಮೆಲ್ಲನೆ ಅವನನ್ನು ಶಂಕರಯ್ಯನವರ ಬಳಿಯಲ್ಲಿ ಬಿಡಲು ಕೆಳಗಿಳಿಸಿದರು. ಆದರೆ ಮಗು ಅದನ್ನು ಒಪ್ಪಲಿಲ್ಲ. ಸುಭದ್ರಮ್ಮ ದಾರಿ ಕಾಣದೆ ಸುಮ್ಮನೆ ನಿಂತುಬಿಟ್ಟರು. ಅಷ್ಟರಲ್ಲಿ "ಯಾರು?" ಎಂದೆನ್ನುತ್ತ ಶಂಕರಯ್ಯನವರು, ಮೆಲ್ಲನೆ, ನಿದ್ರಾಲೋಕದಿಂದ ಇಳಿಯುತೊಡಗಿದರು. ಆದರೆ ಅವರು ಪೂರ್ಣವಾಗಿ ಕಣ್ಣು ಬಿಟ್ಟಾಗ, ಮಗುವಿನ ಹೊರತು ಬೇರೆ ಯಾರೂ ಅಲ್ಲಿರಲಿಲ್ಲ. ಮಗು ಶಂಕರಯ್ಯನವರ ಕೈ ಹಿಡಿದೇಳುತ್ತ ಅಳುತ್ತಿತ್ತು. ಆಗಾಗ ಒಳಗೆ ಕೈ ತೋರಿಸುತ್ತ, "ಅಮ್ಮ... ಅಮ್ಮ..." ಎನ್ನುತ್ತಿತ್ತು. ಸುಭದ್ರಮ್ಮ ಒಳಗಿನಿಂದಲೇ ಎಷ್ಟು ಸಲ ಆ ಮಗುವನ್ನು ಶಪಿಸಿದರೋ ಏನೊ!

ಬೇಗ ಬೇಗನೆ ತಮ್ಮ ಪ್ರಾತಃಕರ್ಮಗಳನ್ನು ತೀರಿಸಿಕೊಂಡು ಶಂಕರಯ್ಯನವರು, ತಮ್ಮ ಪತ್ನಿಯನ್ನು ಕೂಗಿ, "ನಾನೊಮ್ಮೆ ಪೇಟೆಗೆ ಹೋಗಿ ಬರುತ್ತೇನೆ..." ಎಂದು ಬೇರೇನನ್ನೊ ಹೇಳಲು ಹೋದವರು ತಡೆದು ನಿಂತರು. ತುಸು ತಡೆದು ಸಂಶಯದ ಸ್ವರದಲ್ಲಿ ಹೇಳಿದರು. "ಹುಡುಗನನ್ನು ಬಿಟ್ಟುಬರಲು ನಾಳೆ ಬೆಳಿಗ್ಗೆ ಹೋಗುತ್ತೇನೆ."

ಇಷ್ಟು ಹೇಳಿ, ತುಸು ಹೊತ್ತು ಸುಭದ್ರಮ್ಮನವರ ಒಪ್ಪಿಗೆಗೆ ಕಾದು ನಿಂತರು. ಒಳಗಿದ್ದ ಸುಭದ್ರಮ್ಮ ಮಾತನಾಡಲಿಲ್ಲ. ಒಂದು ವೇಳೆ "ಹೂಂ" ಎಂದಿದ್ದರೂ ಅದು ಗಂಟಲಿನಲ್ಲಿಯೇ ಉಳಿದಿತ್ತು. ತಿರುಗಿ ಸುಭದ್ರಮ್ಮ ಹೊರಗೆ ಬಂದಾಗ, ಶಂಕರಯ್ಯ ಹೋಗಿದ್ದರು. ಅವರೊಡನೆಯೇ ಕಾಫಿ ಕುಡಿದುಕೊಂಡ ಮಗು ಮಾತ್ರ ಅಲ್ಲಿಯೇ ಒಂದು ಬದಿಯಲ್ಲಿ ಮಲಗಿಕೊಂಡಿತ್ತು. ಸುಭದ್ರಮ್ಮ ಮಾತನಾಡದೆ ತಮ್ಮ ಕೆಲಸಕ್ಕೆ ಹಿಂತಿರುಗಿದರು.

ಮಧ್ಯಾಹ್ನದ ಊಟಕ್ಕೆ ಎಲ್ಲವೂ ಸಿದ್ಧವಾಗಿದ್ದರೂ ಶಂಕರಯ್ಯನವರು ಇನ್ನೂ ಬಂದಿರಲಿಲ್ಲ. ನಿದ್ದೆಯಿಂದ ಎಚ್ಚರಗೊಂಡ ಮಗು ಮೆಲ್ಲಮೆಲ್ಲನೆ

ಅಳುತ್ತಿತ್ತು. ಅದರ ಅಳುವಿನ ಸ್ವರಕ್ಕೆ ಸರಿಯಾಗಿ ಸುಭದ್ರಮ್ಮನವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುತ್ತಿದ್ದರು. ಗಟ್ಟಿಯಾಗಿ ಅತ್ತಾಗ ಕಳೆದುಕೊಂಡ ತಾಯಿಗಾಗಿ ಅಳುತ್ತಿರಬಹುದು–ಎಂದುಕೊಳ್ಳುತ್ತಿದ್ದರು. ಕ್ಷೀಣವಾಗಿ ಅಳತೊಡಗಿದಾಗ, ಹಸಿವೆಯಿರಬಹುದು–ಎಂದುಕೊಂಡರು.

ಆದರೆ ಎಷ್ಟು ಕಾದರೂ ಶಂಕರಯ್ಯನವರ ಸುಳಿವು ಕಾಣಿಸಲಿಲ್ಲ. ಮಗುವಿನ ಅಳು ಮಾತ್ರ ಮೆಲ್ಲನೆ ಕೇಳಿಸುತ್ತಿತ್ತು. ಸುಭದ್ರಮ್ಮನವರು ಹೊಸತಿಲ ವರೆಗೆ ಬಂದು ಮಗುವಿನ ಕಡೆಗೆ ಮೆಲ್ಲನೆ ಇಣಿಕಿದರು. ಮಗು ಬೆವರಿ ಒದ್ದೆಯಾಗಿ ಅತ್ತಿತ್ತ ಹೊರಳುತ್ತ ಬಿಕ್ಕಳಿಸುತ್ತಿತ್ತು.

ಯಾವುದೋ ಒಂದು ಹೊಸ ಶಕ್ತಿ ಸುಭದ್ರಮ್ಮನವರನ್ನು ಹೊರಗೆ ತಳ್ಳಿತು. ಎಲ್ಲಿ, ಯಾರು ನೋಡುತ್ತಾರೋ ಎಂದು ಸುತ್ತಮುತ್ತ ನೋಡಿಕೊಳ್ಳುತ್ತ ಅವರು ಮಗುವಿನ ಸಮೀಪಕ್ಕೆ ನಡೆದರು. ಆದರೆ ಮಗು ಇದೊಂದನ್ನೂ ಗಮನಿಸದೆ, ಗೋಡೆಯ ಬದಿಗೆ ಮುಖ ಮಾಡಿಕೊಂಡು, ಆಗಾಗ ಕ್ಷೀಣವಾಗಿ ಅಳುತ್ತಿತ್ತು. ನಡಗುತ್ತಿದ್ದ ಕೈಯನ್ನು ಅದರ ಮೈ ಮೇಲೆ ಇರಿಸಿದವರೇ, ಸುಭದ್ರಮ್ಮ ಬೆಚ್ಚಿಬಿದ್ದರು. ಅದರ ಮೈ ಅಷ್ಟು ಸುಡುತ್ತಿತ್ತು.

ಸುಭದ್ರಮ್ಮನವರ ಕಡೆಗೆ ಹೊರಳಿದ ಮಗು, ಯಾವ ಹೊಸತನವನ್ನೂ ತೋರಿಸಲಿಲ್ಲ. ದೈನ್ಯದಿಂದ ಅವರ ಮುಖವನ್ನೇ ನೋಡತೊಡಗಿತು. ಸುಭದ್ರಮ್ಮನವರಿಗೆ ಅದನ್ನು ಕಂಡು "ಅಯ್ಯೋ" ಎನಿಸಿತು. ಯಾವುದೋ ಯೋಚನೆಯಲ್ಲಿ ಮಗುವನ್ನೆತ್ತಿಕೊಂಡರು, ಮತ್ತೇನನ್ನೋ ನೆನೆಸಿಕೊಂಡು, ಗಾಬರಿಯಿಂದ ಹಿಂದೆ ನೋಡಿಕೊಳ್ಳುತ್ತ, ತಿರುಗಿ ಅದನ್ನು ಕೆಳಗಿಳಿಸಲು ಪ್ರಯತ್ನಿಸಿದರು. ಆದರೆ ಮಗು ಇದನ್ನೊಪ್ಪಲಿಲ್ಲ. ಅಳುವಿನ ಧ್ವನಿಯನ್ನು ಏರಿಸುತ್ತ, ಸುಭದ್ರಮ್ಮನವರ ಕೊರಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಿತ್ತು. ಇದನ್ನು ಕಂಡು ಅವರು, ಅದರ ಅಳುವನ್ನು ತಡೆಯಲು ಯತ್ನಿಸಿದರು. ಅನಂತರ ಮೆಲ್ಲನೆ ಚಾವಡಿಯ ತುದಿಯ ತನಕ ಬಂದು, ಗದ್ದೆಯ ದೂರದ ಮೂಲೆಯಲ್ಲಿದ್ದ ದಾರಿಯನ್ನೊಮ್ಮೆ ನೋಡಿ, ಮಗುವನ್ನೆತ್ತಿಕೊಂಡೇ ಒಳಗೆ ನಡೆದರು.

ಮೊದಲು ಸುಭದ್ರಮ್ಮನವರಿಗೆ ಏನು ಮಾಡುವುದು ತೋರಲಿಲ್ಲ. ಅವರನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ ಮಗು, ಏನು ಮಾಡಿದರೂ ಕೆಳಗಿಳಿಯಲಿಲ್ಲ. ಕೊನೆಗೆ ಅದನ್ನೆತ್ತಿಕೊಂಡೇ, ಬಾಳೆಯೆಲೆಯ ತುಂಡಿನಲ್ಲಿ ಸ್ವಲ್ಪ ಅನ್ನವನ್ನು ತಂದುಹಾಕಿ, ಅದಕ್ಕೆ ಹಾಲು ಬೆರೆಸಿ, ನುಣ್ಣಗೆ ಅರೆದಿಟ್ಟರು. ಆದರೂ ಮಗು ಕೆಳಗಿಳಿಯಲಿಲ್ಲ. ಸುಭದ್ರಮ್ಮ ಅದನ್ನು ಹಿಡಿದುಕೊಂಡೇ ಕೆಳಗೆ ಕುಳಿತರು. ಒಂದು ತುತ್ತು ಅನ್ನವನ್ನು ಮಗುವಿನ ಬಾಯಲ್ಲಿಟ್ಟು, ಫಕ್ಕನೆ ಅದನ್ನು ಕೆಳಗೆ ಕೂರಿಸಿದರು. ಆದರೆ ಸುಭದ್ರಮ್ಮ ನೆನೆಸಿದಂತೆ, ಮಗು ವೇನೂ ಆಕ್ಷೇಪವೆತ್ತಲಿಲ್ಲ. ಅದರ ಬದಲು, ಬಾಯಲ್ಲಿದ್ದುದನ್ನೆಲ್ಲ ಒಮ್ಮೆಲೆ ನುಂಗಿ, ತಿರುಗಿ ಸುಭದ್ರಮ್ಮನವರ ಕಡೆಗೆ ನೋಡತೊಡಗಿತು; ಆದರೆ ಅವರಿಗೆ ಈ ಕಡೆ ಲಕ್ಷ್ಯವೇ ಇರಲಿಲ್ಲ. ಅವರು ನೆಟ್ಟ ದೃಷ್ಟಿಯಿಂದ ಮಗುವಿನ ಮುಖವನ್ನು ನೋಡುತ್ತಿದ್ದರು. ಅವರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದಕ್ಕಾಗಿ ಗಟ್ಟಿಯಾಗಿ "ಅಮ್ಮಾ..." ಎಂದು ಮಗು ಒತ್ತಿ ಕರೆಯಿತು. ಸುಭದ್ರಮ್ಮ ಬೆಚ್ಚಿಬಿದ್ದು "ಆಂ...?" ಎಂದು, ತಿರುಗಿ ಅದರ ಮುಖದಲ್ಲೇ ತವ[illegible] ವನ್ನು [illegible]ರು.

"ಅಮ್ಮ...ಆ..." ಮಗು, [illegible] ದ್ರಮ್ಮನವರ ಕೈಬೆರಳನ್ನು ಹಿಡಿಯತೊಡಗಿತು. ಆದರೂ ಸುಭದ್ರಮ್ಮನವರ ಲಕ್ಷ್ಯ ಅದರ ಕಡೆಗೆ ಹೋಗಲಿಲ್ಲ. ಇದರಿಂದ ಬೇಸರ ಹೊಂದಿತೋ, ಏನೋ. ಮಗು, ಎದುರಿಗಿದ್ದ ಬಾಳೆಯೆಲೆಯನ್ನು ಅತ್ತ ಇತ್ತ ಎಳೆದಾಡತೊಡಗಿತು.

"ಹುಂ...ಬರುತ್ತೇನೆ..." ಎಂದುಕೊಂಡು ಸುಭದ್ರಮ್ಮನವರು ಬೇಗ ಬೇಗನೆ ಹೊರಗೆ ಬಂದು, ಒಮ್ಮೆ ಗದ್ದೆಯ ತುದಿಯ ವರೆಗೆ ನೋಡಿ, ತಿರುಗಿ ಒಳಗೆ ಹೋದರು. ಅನಂತರ ಮಗುವನ್ನು ಅಕ್ಕರೆಯಿಂದ ಮಡಿಲಲ್ಲಿ ಕುಳ್ಳಿರಿಸಿಕೊಂಡರು.

"ಊಂ......ಏನು?"

ಆದರೆ ಮಗು ಯಾವ ಉತ್ತರವನ್ನೂ ಕೊಡಲಿಲ್ಲ. ಅದರ ಬದಲು, ಅನ್ನವನ್ನೆಲ್ಲ [illegible] ಚೆಲ್ಲಾಡತೊಡಗಿತು. ಸುಭದ್ರಮ್ಮ ಅದರ ಕೈ

ಯನ್ನು ತಡೆದು, ಉಣಿಸತೊಡಗಿದರು. ತುಸು ನಂತರ, ಎಡದ ಕೈಯಿಂದ ಮಗುವಿನ ಕೈಯನ್ನಲುಗಾಡಿಸಿ ತಿರುಗಿ ಕೇಳಿದರು.

"ಏನು?"

ಇದಕ್ಕೂ ಮಗುವಿನ ಉತ್ತರವಿಲ್ಲ. ಮೌನವಾಗಿ, ತುಂಬಿದ ತನ್ನ ಬಾಯಿಯನ್ನು ಇನ್ನಷ್ಟು ಅಗಲಿಸಿ, ಇದ್ದ ನಾಲ್ಕು ಕಿರುಹಲ್ಲುಗಳನ್ನು ತೋರಿಸಿತು. ಸುಭದ್ರಮ್ಮ ಅಕ್ಕರೆಯಿಂದ ಅದರ ಮುಖವನ್ನು ತನ್ನಲ್ಲಿ ಅಡಗಿಸಿಕೊಂಡರು. ಹೀಗೆಯೆ ಮಗುವಿನ ಊಟ ಸಾಗಿತ್ತು. ನಾಲ್ಕು ತುತ್ತನ್ನು ಸರಿಯಾಗಿ ನುಂಗಿಕೊಳ್ಳಲು ಸುಭದ್ರಮ್ಮ ಅವಕಾಶ ಕೊಡಲಿಲ್ಲ. ಅವರ ಮಾತಿನ ಗಡಿಬಿಡಿಯಲ್ಲಿ, ಆಗಾಗ ಮೈ ಅಲುಗಿಸುವುದರಲ್ಲಿ ಮಗುವಿಗೆ ಅತ್ತಿತ್ತ ನೋಡುವುದೂ ಆಗುತ್ತಿರಲಿಲ್ಲ.

ಹೊರಗೆ ಯಾರೋ ಬಂದ ಸದ್ದು ಕೇಳಿಸಿತು. ಈಗ ಸುಭದ್ರಮ್ಮ ಇಹಲೋಕಕ್ಕಿಳಿದರು. ಹಿಂಗದ ಆಶೆಯನ್ನು ತಡೆಹಿಡಿದು, ಬೇಗ ಬೇಗನೆ ಮಗುವನ್ನು ಕೆಳಗೆ ಕುಳ್ಳರಿಸಿ, ದೂರದಿಂದಲೇ ಉಣಿಸತೊಡಗಿದರು. ಶಂಕರಯ್ಯ ಒಳಗೆ ಬಂದು ನೋಡಿದಾಗ ವಿಶೇಷವೇನೂ ಇದ್ದಂತೆ ಕಾಣಿಸಲಿಲ್ಲ. ಒಲ್ಲದ ಮನಸ್ಸಿನಿಂದ ಮಗುವಿಗೆ ಉಣಿಸುತ್ತಿರುವಂತೆ, ಸುಭದ್ರಮ್ಮನವರಿದ್ದರು.

ಮತ್ತೆ ತಿರುಗಿ ಮೊದಲಿನಂತೆ. ಊಟ ಮುಗಿಸಿ ಶಂಕರಯ್ಯನವರ ಬಳಿ ಬಿಟ್ಟು, ಮಗುವಿನ ಕಡೆಗೆ ಅನಂತರ ಸುಭದ್ರಮ್ಮ ಹಾಯಲಿಲ್ಲ. ಶಂಕರಯ್ಯ ಎಲ್ಲಾದರೂ ಹೊರಗೆ ಅತ್ತಿತ್ತ ಹೋದಾಗ,



"ಯಾಕಪ್ಪಾ... ನೀವು... ಅಷ್ಟು... ಗಾಬರಿಯಾಗಿದ್ದೀರಾ...? ಮೊನ್ನೆ... ಗವಾಸ್ಕರ್ ಕೂಡ ಹಳೇ ರಿಕಾರ್ಡ್‌ಗಳನ್ನೆಲ್ಲಾ ಮುರಿದು ಹಾಕಿದನಂತೆ..."

ಗಾಬರಿಯಿಂದ ತಿರುಗಿ ನೋಡಿಕೊಳ್ಳುತ್ತ. ಮಗುವಿನ ಗಲ್ಲವನ್ನೊಮ್ಮೆ ಹಿಡಿದಲುಗಿಸಿ ಹೋಗುತ್ತಿದ್ದರು. ಆದರೆ ಆದರಿಂದ ದೂರದಲ್ಲಿದ್ದಾಗ ಅವರ ಮನಸ್ಸು ಬೇರೆ ಕಡೆಗೆ ಹಾರುತ್ತಿತ್ತು. ತನ್ನ ದೌರ್ಭಾಗ್ಯಕ್ಕಾಗಿ ಮರುಗುತ್ತಿದ್ದ ಮನಸ್ಸಿನೆದುರು. ಆ ಮಗುವಿನ ರೂಪ ಬಂದು ನಿಂದಾಗ, ಅವರಿಗೆ ಎಲ್ಲಿಲ್ಲದ ವೇದನೆಯಾಗುತ್ತಿತ್ತು. "ಇವನನ್ನು ಇಲ್ಲಿಯವರೆಗೆ ತರದಿದ್ದರೆ ಏನು ನಷ್ಟವಾಗುತ್ತಿತ್ತು........." ಎಂದುಕೊಳ್ಳುತ್ತಿದ್ದರು....... ಇಂತಹ ಮನಃಸ್ಥಿತಿಯಲ್ಲಿರುವಾಗಲೇ, ರಾತ್ರಿ ಶಂಕರಯ್ಯನವರು ಉಣ್ಣುತ್ತ ಅವರೊಡನೆ ಕೇಳಿದರು, "ಹಾಗಾದರೆ ನಾಳೆ ಬೆಳಗ್ಗೆ ಕರೆದುಕೊಂಡು ಹೋಗಿ, ಬಿಟ್ಟು ಬರಲೇ?"

ಸುಭದ್ರಮ್ಮ ತತ್‌ಕ್ಷಣ "ಹುಂ" ಎಂದರು.

ಅನಂತರ ಇದನ್ನು ನೆನೆಸಿಕೊಂಡಾಗ, ಸುಭದ್ರಮ್ಮನವರಿಗೆ ಹೊರಗೊಮ್ಮೆ ಸಮಾಧಾನವೆನಿಸುತ್ತಿದ್ದರೂ, ಒಳಮನಸ್ಸೊಂದು ಅಸಹ್ಯ ವೇದನೆಯಿಂದ ಬಳಲುತ್ತಿತ್ತು. ಅದನ್ನು ಮುಚ್ಚಿಕೊಳ್ಳಲು ತಮ್ಮಿಂದಾದಷ್ಟು ಅವರು ಪ್ರಯತ್ನಿಸುತ್ತಿದ್ದರು. ಆದರೆ, ರಾತ್ರಿ, ಶಂಕರಯ್ಯನವರು ಮಗುವನ್ನು ಮಲಗಿಸಲು ಪ್ರಯತ್ನಿಸುತ್ತಿದ್ದಾಗ ಅವನು ತಿರುಗಿ ಅಳಲು ಮೊದಲು ಮಾಡಿದ. ಈಗ ಸುಭದ್ರಮ್ಮನವರ ಪ್ರಯತ್ನವೆಲ್ಲ ಒಮ್ಮೆಲೇ ವ್ಯರ್ಥವಾಯಿತು. ಅವರು ಕಟ್ಟಿದ ಒಡ್ಡುಗಳೆಲ್ಲ ಒಂದೊಂದಾಗಿ ಕದಲತೊಡಗಿದವು. ಕೊನೆಗೆ ತಡೆಯಲಾರದೆ ಶಂಕರಯ್ಯನವರೊಡನೆ, "ಅವನನ್ನು ಇತ್ತ ಕೊಡಿ, ಬೇಕಾದರೆ ಮಲಗಿಸಿಕೊಳ್ಳುತ್ತೇನೆ" ಎಂದರು. ಕೊನೆಯ ಪ್ರಯತ್ನವೆಂದೋ ಏನೋ–"ಬೇಕಾದರೆ" ಎಂಬ ಪದ ಅವರ ಬಾಯಿಯಿಂದ ಹೊರಬಿದ್ದಿತು. ಆದರೂ ಅವರಿಗೆ, ತಮ್ಮ ಬಗೆಗೆ ಆಗುತ್ತಿದ್ದ ತಿರಸ್ಕಾರವನ್ನು ತಾಳುವುದಾಗಲಿಲ್ಲ. ಶಂಕರಯ್ಯನವರ ಹತ್ತಿರದಿಂದ ಮಗುವನ್ನೆತ್ತಿಕೊಂಡು ಒಳಗೆ ಹೋಗುವಾಗ, ನೆಟ್ಟಗೆ ತಲೆಯೆತ್ತಿಕೊಳ್ಳುವ ಸ್ಥೈರ್ಯ ಅವರಲ್ಲಿರಲಿಲ್ಲ.

ಬಳಿಯಲ್ಲೇ ಮಲಗಿಕೊಂಡಿದ್ದ ಮಗು, ನಿನ್ನೆಯಂತೆ ಇಂದೂ ಜಡವಾಗಿ ಬಿದ್ದಿರಲಿಲ್ಲ. ಕಳೆದು ಹೋದ ತಾಯಿಯ ರೂಪವನ್ನು ಸುಭದ್ರಮ್ಮನವರ ಮುಖದಲ್ಲಿ ಕಂಡಿತೋ ಏನೊ! ಆಗಾಗ ಸುಭದ್ರಮ್ಮನವರ ಕೈಯನ್ನು ಹಿಡಿದೆಳೆಯುತ್ತಿತ್ತು. ಒಮ್ಮೊಮ್ಮೆ ತುಂಬು ದನಿಯಿಂದ "ಅಮ್ಮಾ..." ಎಂದು ಒತ್ತಿ ಕರೆಯುತ್ತಿತ್ತು. ಆಗ ಸುಭದ್ರಮ್ಮ ಥಕ್ಕನೆ ಮಗುವಿನ ಬಾಯ ಮೇಲೆ ಕೈಯಿಟ್ಟು, ಬಾಗಿಲ ಕಡೆಗೆ ಕಳ್ಳನೋಟವನ್ನೆಸೆಯುತ್ತಿದ್ದರು. ಅನಂತರ ಎರಡೂ ಕೈಗಳಿಂದ ಅವನ ಮುಖವನ್ನು ಹಿಡಿದು ಅಲುಗಿಸುತ್ತ ಪಿಸು ಧ್ವನಿಯಲ್ಲಿ, "ಹುಂ" ಎನ್ನುತ್ತಿದ್ದರು. ಆಗ ಅವರಿಗೆ ಹುದುಗಿಸಲಾರದ ಒಂದು ರೀತಿಯ ಅವ್ಯಕ್ತ ಆನಂದವಾಗುತ್ತಿತ್ತು. ಆದರ ಫಲವೋ ಏನೊ–ಆ ಮಗುವನ್ನು ಅವರು ಇನ್ನಷ್ಟು ತಮ್ಮ ಬಳಿಗೆ ಎಳೆದುಕೊಳ್ಳುತ್ತಿದ್ದರು.

ಮಗು ನಿಧಾನವಾಗಿ ನಿದ್ದೆಯಲ್ಲಿ ಮಲಗಿತು. ಮರುದಿನದ ಕಾರ್ಯಕ್ರಮಗಳೇ ತಲೆಯಲ್ಲಿ ಸುತ್ತುತ್ತಿದ್ದ ಶಂಕರಯ್ಯನವರೂ ಮೆಲ್ಲಮೆಲ್ಲನೆ ಗೊರಕೆ ಹೊಡೆಯತೊಡಗಿದರು. ಸುಭದ್ರಮ್ಮನವರೂ ಹಾಗೆಯೇ ತೂಕಡಿಸತೊಡಗಿದರು. ಆದರೂ ಮಗುವಿನ ಬೆನ್ನಮೇಲಾಡುತ್ತಿದ್ದ ಅವರ ಕೈ ಒಂದು ನಿಮಿಷವೂ ಸುಮ್ಮನಾಗಲಿಲ್ಲ. ಮಗುವನ್ನು ಬಿಗಿದು ಅಪ್ಪಿಕೊಂಡಿದ್ದ ಇನ್ನೊಂದು ಕೈ ಸ್ವಲ್ಪವೂ ಹಿಂದೆ ಚಲಿಸಲಿಲ್ಲ.

ಕೋಳಿಯ ಕೂಗನ್ನು ಕೇಳಿ, ನಿತ್ಯದಂತೆ ಸುಭದ್ರಮ್ಮ ಎಚ್ಚತ್ತರು. ಮುಂಜಾವದ ಚಂದ್ರನ ಬೆಳಕು ಕಿಟಕಿಯಿಂದ ತೂರಿ ಬಂದು ಕೋಣೆಯ ಗೋಡೆಯ ಮೇಲೆ ಮಂದವಾಗಿ ಬಿದ್ದಿತ್ತು. ಇರುಳಿನ ಶಾಂತತೆಯು ಅಳಿದು, ದಿನದ ಪುಟ್ಟಪುಟ್ಟ ಭಾಗಗಳು ತಮ್ಮ ತಮ್ಮ ಶಬ್ದಕಾರ್ಯಕ್ಕೆ ಮೊದಲು ಮಾಡಿದ್ದವು. ತಂಗಾಳಿಯ ಮಂದಗಮನಕ್ಕೆ ಒಲಿದು ತಲೆದೂಗುವ ಛತ್ತ್ರದ ತೆನೆಗಳ "ಸರೋ" ಎಂಬ ಸದ್ದು, ಇನ್ನೊಂದು ಹೊಸ ಲೋಕವನ್ನೇ ಸೃಷ್ಟಿಸುವ ಒಕ್ಕಲುಮಕ್ಕಳ "ಓ... ಓ..."ವಿನ ದೀರ್ಘ ಅಲಾಪನೆ, ಪಕ್ಷಿಗಳ ಚಿಲಿಪಿಲಿ ನಾದ, ಸಾವಿರ ದಿಕ್ಕುಗಳಿಂದ ಕೇಳಿಸುವ ಸಾವಿರ ಕೋಳಿಗಳ ಒಂದೇ ರೀತಿಯ ಕಲೆತ, ಹಟ್ಟಿಯಿಂದ ದನಕರುಗಳು ಮೊರೆಯಿಡುವ ಸದ್ದು, ಎಲ್ಲವೂ ನಿತ್ಯದಂತೆ ಮೊದಲಾಯಿತು. ಆದರೆ ಸುಭದ್ರಮ್ಮನವರು ಕಸ ಗುಡಿಸುವ "ಸರ್...ಸರ್..." ಸದ್ದು

ಇನ್ನೂ ಕೇಳಿಸಲು ತೊಡಗಲಿಲ್ಲ. ಮಗುವಿನ ಮುದ್ದುಮುದ್ದಾದ ಮೈಯ ಮೇಲಾಡುತ್ತಿದ್ದ ತಮ್ಮ ಬೆರಳುಗಳನ್ನು ಹಿಂತೆಗೆದುಕೊಳ್ಳುವ ಮನಸ್ಸು ಅವರಿಗೆ ಆಗಲಿಲ್ಲ. ಇತರರಂತೆ ತಾವೂ ಈ ಮಧುರ ಜೀವನವನ್ನು ಎಂದಿನಿಂದಲೋ ಅನುಭವಿಸುತ್ತಿರುವಂತೆ ಅವರಿಗೆ ಎನಿಸುತ್ತಿತ್ತು.

ಆದರೆ ತಂಗಾಳಿಯ ಒಂದು ಸೆಳಕು ಸುಯ್ಯನೆ ಕೋಣೆಯೊಳಗೆ ಬೀಸಿ ಸುಭದ್ರಮ್ಮನವರ ಹೃದಯವನ್ನು ಅಲುಗಿಸಿತು. "ನಿನ್ನೆ ನೀನು ಹೇಳುತ್ತಿದ್ದ 'ನಾಳೆ' ಇಗೋ ಬಂದಿದೆ" ಎಂದು ಸಾರಿ ಸಾರಿ ಹೇಳುತ್ತ, ಸುಭದ್ರಮ್ಮನವರ ಹೃದಯವನ್ನು ಆಲೋಲಕಲ್ಲೋಲವಾಗಿಸಿತು. ಬೆಚ್ಚಿಬಿದ್ದ ಅವರು ತಮ್ಮನ್ನೇ ಸಮಾಧಾನಪಡಿಸಿಕೊಳ್ಳುತ್ತ ಮಗುವನ್ನು ಇನ್ನಷ್ಟು ಹತ್ತಿರಕ್ಕೆಳೆದುಕೊಂಡರು.

ಹೊರಗಿನಿಂದ ಶಂಕರಯ್ಯನವರು ಏಳುತ್ತಿದ್ದ ಸದ್ದನ್ನು ಕೇಳಿ ಸುಭದ್ರಮ್ಮನವರೂ ಏಳಲೇ ಬೇಕಾಯಿತು. ಏಳುವಾಗ ಅವರಿಗೆ ಎಲ್ಲಿಲ್ಲದ ಬೇಸರವೆನಿಸುತ್ತಿತ್ತು. ಆದರೂ ಸಂಕೋಚದ ಪರದೆಯ ಹಿಂದೆ ಯಾವುದೋ ಒಂದು ಹೊಸ ಆಸೆ ಅವರಲ್ಲಿ ತಲೆದೋರಿತು. ಅದೇ ಅವರಿಗೆ, ಬಚ್ಚಲು ಕೆಲಸಕ್ಕೆ ಹೋಗುವಷ್ಟು ಶಕ್ತಿಯನ್ನು ತಂದುಕೊಟ್ಟಿತು.

ಬೇಗಬೇಗನೆ ಉಂಡುಕೊಂಡು, ಶಂಕರಯ್ಯನವರು ಹೊರಡುವ ಸನ್ನಾಹ ತೋರಿಸಿದಾಗ, ಸುಭದ್ರಮ್ಮನವರ ಹೃದಯ ಒಮ್ಮೆ "ಅಯ್ಯೋ …" ಎಂದಿತು. "ಏನು…ಏನು…ಅಯ್ಯೋ… ಏನು ಮಾಡಲಿ?" ಎಂದು ಇನ್ನೊಮ್ಮೆ ಒಂದೇ ಸಮನೆ ಚೀರಿಟ್ಟಿತು. ಏನನ್ನೋ ಹೇಳಬೇಕೆಂದು ಹೊರಕ್ಕೆ ತೇಲಿದ ಸುಭದ್ರಮ್ಮ ಮೌನದಿಂದ ಅಲ್ಲಿಯೋ ಕಣ್ಣನ್ನು ಕೀಲಿಸಿ ನಿಂತೇಬಿಟ್ಟರು. ತುಸು ನಂತರ "ನಿಲ್ಲಿ, ಅವನಿಗೆ ಸ್ವಲ್ಪ ಏನಾದರೂ ಕೊಟ್ಟು ಬಿಡುತ್ತೇನೆ" ಎಂದು ತೊದಲಿ, ಮಗುವನ್ನೆತ್ತಿಕೊಂಡು ಬಿರಬಿರನೆ ಒಳಗೆ ನಡೆದರು.

ಶಂಕರಯ್ಯ, "ಇನ್ನೂ ಆಗಲಿಲ್ಲವೇ?" ಎಂದಾಗಲೂ ಸುಭದ್ರಮ್ಮನವರಿಗೆ ಎಚ್ಚರವಾಗಲಿಲ್ಲ. ಆ ತನಕ ಮೌನವಾಗಿ ಮಗುವನ್ನು ಬಿಗಿದಪ್ಪಿಕೊಂಡು ಎಲ್ಲಿಯೋ ನೋಡುತ್ತಿದ್ದವರು. ಆಗ "ಹಾಂ" ಎಂದರು. ಯಾವು ಯಾವುದೋ ಮಾತುಗಳನ್ನು ಮನಸ್ಸಿನಲ್ಲೇ ಗಟ್ಟಿಮಾಡಿಕೊಳ್ಳುತ್ತ ಮೆಲ್ಲನೆ ಹೊರಗೆ ಬಂದರು. ಶಂಕರಯ್ಯನವರು ಹೊಸ್ತಿಲ ಬಳಿಯಲ್ಲೇ ಮಗುವಿನ ಕಡೆಗೆ ಕೈ ನೀಡಿದರು. ನಿಜಸ್ಥಿತಿ ಅರಿವಾದಾಗ, ಸುಭದ್ರಮ್ಮನವರು ಗಟ್ಟಿಮಾಡಿಕೊಂಡಿದ್ದ ಮಾತುಗಳೆಲ್ಲ ಎಲ್ಲಿಯೋ ಹಾರಿಹೋದವು. ಅವರ ಮುಖ ಅನಂತ ವೇದನೆಯಿಂದ ಕೆಳಗೆ ಬಾಗಿತು. ಅವರಿಗರಿವಿಲ್ಲದಂತೆಯೇ ಮಗುವನ್ನೆತ್ತಿಕೊಂಡು ಹೋಗುತ್ತಿದ್ದ ಶಂಕರಯ್ಯನವರನ್ನು ನೋಡಿದರು. ಮತ್ತೂ ಮತ್ತೂ ಕಣ್ಣಗಲಿಸಿ ನೋಡಿದರು. ನೋಡುತ್ತಿದ್ದಂತೆಯೇ ಕಣ್ಣು ತುಂಬಿ ಬಂತು. ಆದರೂ ಅವರ ನಾಲಗೆ ತುಸುವೂ ಕದಲದೆ ಮುಕವಾಗಿ ಬಿದ್ದಿತ್ತು. ಅದೇಕೊ ಹಾಗೆ? ಎಂಬುದು ಅವರಿಗೂ ಅರಿವಾಗಲಿಲ್ಲ. ಅವರ ಹೃದಯ ಕೂಗಿ ಕೂಗಿ ಕೇಳುತ್ತಿತ್ತು, "ಅಯ್ಯೋ … ಯಾಕೆ…ಯಾಕೆ ಮಾತನಾಡಲಿಲ್ಲ…? ಯಾಕೆ ಹೇಳಲಿಲ್ಲ…?…"

✡

ಶಿಕ್ಷಣ ಶಿಬಿರದಲ್ಲಿ ಗರ್ಲ್ ಗೈಡುಗಳಿಗೆ ತರಬೇತಿ ನೀಡಲಾಗುತ್ತಿತ್ತು. ಅಧ್ಯಾಪಕರು, ಆಪತ್ತಿನಲ್ಲಿ-ತುರ್ತು ಪರಿಸ್ಥಿತಿಯಂಥ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕು, ಎಂಬ ಬಗೆಗೆ ಪಾಠಮಾಡುತ್ತಿದ್ದರು.

ಅವರು ಕೇಳಿದ ಪ್ರಶ್ನೆಗಳಲ್ಲಿ ಇದೂ ಒಂದು: "ಮನೆಬಾಗಿಲ ಬೀಗದ ಕೈಯನ್ನು ಮಗು ಅಕಸ್ಮಾತ್ ನುಂಗಿದಾಗ ಏನು ಮಾಡುತ್ತೀರಿ?"

ಒಬ್ಬ ಗರ್ಲ್ ಗೈಡ್ ಉತ್ತರಿಸಲು ಮೇಲೆದ್ದು ನಿಂತಳು: "ಕಿಟಕಿ ಮೂಲಕ ಮನೆಯೊಳಕ್ಕೆ ಜಿಗಿದು ಡುಪ್ಲಿಕೇಟ್ ಬೀಗದ ಕೈತಂದು ಮನೆಬಾಗಿಲ ಬೀಗ ತೆಗೀತೀನಿ ಸರ್."

ನೀನಿರುವುದಿಲ್ಲ

ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ನಗರ–ವ್ಯಾಕರಣ ಹಕ್ಕಿ ಹಾಡುಗಳ ಹುಡುಕಿ
ನನ್ನ ಸಂಸಾರಕ್ಕೆ ಅರ್ಥಗಳ ತಡತಡಕಿ
ಧೂಳುಗಣ್ಣನು ಹಕ್ಕಿ ಮೋಸ–ಕೆಸರಲಿ ಸಿಕ್ಕಿ
ಸುಮನಿಯ ಅನ್ನದಲಿ ಬರಿ ಹರಳುಗಳ ಅಕ್ಕಿ
ತಿನ್ನುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಅನಗತ್ಯಗಳು ಮಾತ್ರ ಭಾಷೆಯಲಿ ಉಕ್ಕಿರಲು
ಸುತ್ತಲಿನ ಕಾಲಗಳು ಸಿಕ್ಕಂತೆ ಸೊಕ್ಕಿರಲು
ಬೆಳಗು ಅಪರಾಹ್ನವಾಗಿ ಸಂಧ್ಯಾಕಾಲವಾಗಿ
ಹಳದಿಯಲಿ ಹಸಿರಿನಲಿ ನೀ ಬಿಳಿ ಕಾಲವಾಗಿ
ಕರಿಯುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಮಾತು ಮಾತಿಗೆ ರೆಕ್ಕೆ ರೆಕ್ಕೆ ರೆಕ್ಕೆಗೆ ಮುಳ್ಳು
ಬಟ್ಟೆಯಲಿ ತಟ್ಟೆಯಲಿ ಹೊಟ್ಟೆಯಲಿ ಹಸಿ ಸುಳ್ಳು
ಹಾದರಗಳಂಕೆಯಲಿ ಪಾವಿತ್ರ್ಯಗಳ ನೋವು
ಭಾಷಣಗಳಡಿಯಲ್ಲಿ ಶಾಸನದ ಹುಸಿ ಹೂವು
ನೋಡುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಹೆಂಡತಿಯ ಹಾಸಿಗೆಯು ಹಾದಿ ತಪ್ಪಿದ ಅಡವಿ
ಕಾಮಿನಿಯರಪ್ಪುಗೆಯು ಹತ್ತು ಸಲ ತೊಡರೆಡವಿ
ಎಲ್ಲ ಬಾಗಿಲದಲ್ಲಿ ಹಸಿವೆಗಳು ಹಾವುಗಳು –
ನನ್ನ ಅದೃಷ್ಟದಲಿ ನಿನ್ನ ಸೆರೆ ಬಾಹುಗಳು
ಎನ್ನುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಕಣ್ಣುಗಳು ಬಣ್ಣಗಳು ನೀರಸದ ನೆತ್ತರು
ನಗೆಯ ಮಲ್ಲಿಗೆ ಮೊಗ್ಗ ಅರಳಿಸದೆ ಹತ್ತಿರದ
ಯಾವ ನೆನಪಿನ ಗಾಯ ನಿನ್ನ ಮಾಯವಾಸೂತ್ರ
ಮೌನದಲಿ ಕತ್ತರಿಸಿ ಬಿಗಿದೆನ್ನನು ಮಾತ್ರ
ಯಾಕೆ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಹಾದಿ ಪೇಟೆಗಳಲ್ಲಿ ಹಾಳಿ ಪಾಟಿಗಳಲ್ಲಿ
ಚೈತ್ರ–ಚಿಗುರುಗಳಲ್ಲಿ ನತ್ತು–ಮುತ್ತುಗಳಲ್ಲಿ
ಸತ್ತು ಉಸುರುತ್ತಿರುವ ನನ್ನ ತಿದಿ ಹೆಣಗಳು
ನಿನ ಬೀಜವ ಬಯಸಿ ನಿಂತ ಒಣ ಕಣಗಳು
ಪಾಪ ಸಂಜೆಯಾಗುತ್ತದೆ.
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ನಿದ್ರೆ–ಹಾವಳಿಯೊಂದು ಬೆಳಕು–ತಂತಿಯ ಗುಂಟ
ಹಲವೃಕ್ಷಕೆ ಕನವರಿಕೆ ಹಚ್ಚೆ ಗೆಜ್ಜೆಯ ಗುಂಟ
ಚಂದ್ರ–ಶಿಲೆಯಲಿ ನಗುವ ಕವನ–ನಾಟಕಗಳು
ಪ್ರೀತಿ ಮೆಟ್ಟುತ ನಡೆವ ಮಹಾ ಪಾತಕಗಳು
ಕುಣಿಯುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ

ಬಂಧನವ ಗೆದ್ದು ಮರೆಯ ಕೆಸರಲಿ ಗರಿ ಕುಣಿಸಿದೆ
ನಂದನವನೊದ್ದು ಮಧುರ ಮೌನದ ಹಸಿ ಹರಿಸಿದೆ
ಶಂಕೆ–ಬೆಂಕಿಯ ಮೇಲೆ ಒಲವು ಜಲ ಸುರಿಸಿದೆ
ಕಸಿವಿಸಿಯ ಕನಸುಗಳ ಕಣ್ಣೀರು ಸುರಿದಿದೆ
ಕನಲುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ಬದುಕು ಬಲು ಪ್ರೀತಿ ನೀ ಮಾತ್ರ ಇಡಿ ಬದುಕು
ನೀ ಪವನ ಸಂಪರ್ಕ ಗಗನಕೂ ಈ ನೆಲಕು
ಖಿತಿಯು ಗತಿಗೆಟ್ಟಾಗ ಮತಿ ಜಡಗಟ್ಟಿದಾಗ
ಕರುಣೆ ಮಡುಗಟ್ಟಿದಾಗ ನೀ ನನ್ನ–ತನ–ಭಾಗ
ಅಂಜುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

ನೀನಿರುವುದಿಲ್ಲ ಎನ್ನುದಲಿಯ ನೀನು
ನೆರೆ ನಿಂತ ನೀರಲಿ ಕಾಣೆ ಮುಟ್ಟುವ ಮೀನು
ಹಲವು ಹಂಬಲಗಳಲಿ ಹೊಸ ಕಾಲು ಮುರಿದಂತಾಗಿ
ನನ್ನ ಅಸ್ತಿತ್ವದಲಿ ಚೈತನ್ಯ ಇಡಿಯಾಗಿ
ಮಬ್ಬುತ್ತ ಸಂಜೆಯಾಗುತ್ತದೆ
ಮನೆಗೆ ಮರಳುತ್ತೇನೆ
ನೀನಿರುವುದಿಲ್ಲ

–ಸಿದ್ಧಲಿಂಗ ಪಟ್ಟಣಶೆಟ್ಟಿ

ಅಪ್ಪಯ್ಯ ದೀಕ್ಷಿತರು ಮದ್ದು ಸೇವಿಸಿ ಕಾವ್ಯರಚನೆ ಮಾಡಿದರು

ಟಿ. ಎಸ್. ಸಂಜೀವರಾವ್

ಅದ್ವೈತಾಚಾರ್ಯರೂ, ಶ್ರೇಷ್ಠ ಸಂಸ್ಕೃತ ಕವಿಗಳೂ, ಮಹಾ ಭಾಷ್ಯಕಾರರೂ ಆಗಿದ್ದ ಅಪ್ಪಯ್ಯ ದೀಕ್ಷಿತರು ಉನ್ಮಾದಕಾರಕವಾದ ವನಸ್ಪತಿಯನ್ನು ಸೇವಿಸಿ ಕಾವ್ಯರಚನೆ ಮಾಡಿದ್ದಾರೆ ಎಂಬುದು ಭಾರತ ಕಾವ್ಯಪ್ರಪಂಚದಲ್ಲಿ ಒಂದು ಅತ್ಯಂತ ಕುತೂಹಲಕಾರಿಯಾದ ಪ್ರಸಂಗ.

ಅದ್ವೈತ ತತ್ತ್ವಶಾಸ್ತ್ರವನ್ನು ಅದ್ಭುತವಾಗಿ ಪ್ರತಿಪಾದಿಸಿರುವ ಆಧ್ವರ್ಯುಗಳಲ್ಲಿ ಗೌಡಪಾದ, ಶಂಕರಾಚಾರ್ಯ ಇವರಾದ ಮೇಲೆ ಅಪ್ಪಯ್ಯ ದೀಕ್ಷಿತರೇ ಮೂರನೆಯವರೆಂದು ವಿದ್ವಾಂಸರ ಮತ. ಇವರು ೧೬ನೇ ಶತಮಾನದಲ್ಲಿ ತಮಿಳು ನಾಡಿನ ಚಿದಂಬರಂ ಕ್ಷೇತ್ರದಲ್ಲಿ ವಾಸವಾಗಿದ್ದು ಅನೇಕ ಭಾಷ್ಯ, ವ್ಯಾಖ್ಯಾನ, ಸ್ತೋತ್ರಗಳನ್ನು ರಚಿಸಿದ್ದಾರೆ. ಇವರ ಶ್ರೇಷ್ಠ ಕೃತಿ "ಪರಿಮಳ." ಅಮಲಾನಂದರ "ಕಲ್ಪತರು" ಎಂಬ ಅದ್ವೈತ ತತ್ತ್ವ ವ್ಯಾಖ್ಯಾನದ ಮೇಲಿನ ಭಾಷ್ಯ, ಅದ್ವೈತ ತತ್ತ್ವಶಾಸ್ತ್ರದ ಆಧಾರಸ್ತಂಭಗಳಂತಿರುವ ಐದು ಮಹಾಕೃತಿಗಳಲ್ಲಿ "ಪರಿಮಳ"ವೂ ಒಂದು ಎಂದು ವಿದ್ವಾಂಸರು ಎಣಿಸುತ್ತಾರೆ. ಇದರ ರಚನೆಯ ನಂತರ ದೀಕ್ಷಿತರಿಗೆ ಅದ್ವೈತಸ್ಥಾಪನಾಚಾರ್ಯ ಎಂಬ ಬಿರುದು ಕೊಡಲ್ಪಟ್ಟಿತು. ಇವರ ಇನ್ನೆರಡು ಪ್ರಸಿದ್ಧ ಕೃತಿಗಳಾದ "ನ್ಯಾಯರಕ್ಷಾಮಣಿ", "ಸಿದ್ಧಾಂತ ಲೇಶ ಸಂಗ್ರಹ", ವೇದಾಂತವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆಲ್ಲ ಪಠ್ಯವಾದ ಪುಸ್ತಕಗಳು. ಇಷ್ಟು ಸುಪ್ರಸಿದ್ಧ ಅದ್ವೈತಪ್ರತಿಪಾದಕರಾದಾಗ್ಯೂ ಅಪ್ಪಯ್ಯ ದೀಕ್ಷಿತರು ಶ್ರೀವೈಷ್ಣವರಿಗೂ, ಮಾಧ್ವರಿಗೂ ಪ್ರಿಯವಾಗಿರುವ ಕೃತಿಗಳನ್ನೂ ರಚಿಸಿದ್ದಾರೆ. ವೇದಾಂತದೇಶಿಕರನ್ನು ಬಹಳವಾಗಿ ಮೆಚ್ಚಿಕೊಂಡ ಅವರು ದೇಶಿಕರ ಕೃತಿಯಾದ "ಯಾದವಾಭ್ಯುದಯ"ದ ಮೇಲೆ ಭಾಷ್ಯವನ್ನು ಬರೆದಿದ್ದಾರೆ. ಆಗಿನ ಪ್ರಮುಖವಾದ ನಾಲ್ಕು ವೈದಿಕ ಮತಗಳನ್ನು ವಿಶಾಲಭಾವನೆಯಿಂದ ಪ್ರತಿಪಾದಿಸುವ "ಚತುರ್ಮತ ಶಾಸ್ತ್ರ" ಎಂಬ ವಿದ್ವತ್ಪೂರ್ಣ ಗ್ರಂಥವನ್ನೂ ಅವರು ಬರೆದಿದ್ದಾರೆ. "ನಯಮಂಜರಿ" ಎಂಬುದರಲ್ಲಿ ಅದ್ವೈತವನ್ನು, "ನಯಮಣಿಮಾಲ" ಎಂಬುದರಲ್ಲಿ ಶ್ರೀಕಂಠಮತವನ್ನು, "ನಯಮಯೂಖಮಾಲಿಕಾ"ದಲ್ಲಿ ರಾಮಾನುಜರ ಶ್ರೀವೈಷ್ಣವ ಮತವನ್ನು,

"ನ್ಯಾಯಮುಕ್ತಾವಳಿ"ಯಲ್ಲಿ ಮಧ್ವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಪರಮತ ತತ್ತ್ವಗಳನ್ನು ಸಹ ಇವರು ಎಷ್ಟು ವಿಶಾಲ ದೃಷ್ಟಿಯಿಂದ ಪ್ರತಿಪಾದಿಸಿದ್ದಾರೆಂದರೆ, ಇವರ "ನಯಮಯೂಖಮಾಲಿಕಾ"ವನ್ನು ಶ್ರೀವೈಷ್ಣವರೂ, "ನ್ಯಾಯಮುಕ್ತಾವಳಿ"ಯನ್ನು ಮಾಧ್ವರೂ ಗೌರವದಿಂದ ಕಾಣುತ್ತಾರೆ.

ಇಷ್ಟು ಹೆಸರಾದ ತತ್ತ್ವಶಾಸ್ತ್ರ ಪ್ರತಿಪಾದಕರಾದಾಗ್ಯೂ, ಅಪ್ಪಯ್ಯ ದೀಕ್ಷಿತರು, ಶಂಕರಾಚಾರ್ಯರ ಹಾಗೆ, ಉತ್ತಮೋತ್ತಮ ಭಾವಜೀವಿಗಳೂ ಆಗಿದ್ದರು. ಇದಕ್ಕೆ ಅವರು ರಚಿಸಿರುವ ಅನೇಕಾನೇಕ ಚೇತೋಹಾರಿಯಾದ ಕಾವ್ಯಮಯ ಶ್ಲೋಕಗಳೇ ನಿದರ್ಶನವಾಗಿವೆ. "ದುರ್ಗಾ ಚಂದ್ರ ಕಲಾಸ್ತುತಿ," "ಆದಿತ್ಯಸ್ತವರತ್ನ", "ವರದರಾಜ ಸ್ತವ", "ಆತ್ಮಾರ್ಪಣಸ್ತುತಿ" ಇವೇ ಇವರ ಮುಖ್ಯವಾದ ಸ್ತೋತ್ರಮಾಲಿಕೆಗಳು. ಕೊನೆಯದಾದ "ಆತ್ಮಾರ್ಪಣಸ್ತುತಿ"ಗೆ "ಉನ್ಮತ್ತಪಂಚಾಶತ್" ಎಂಬ ಹೆಸರೂ ಇದೆ. ಇದರರ್ಥ ಉನ್ಮತ್ತಾವಸ್ಥೆಯಲ್ಲಿ ರಚಿಸಿದ ಐವತ್ತು ಶ್ಲೋಕಗಳು ಎಂದು. ಇದರ ಹಿಂದೆ ಸ್ವಾರಸ್ಯವಾದ ಕಥೆ ಇದೆ.

ದೀಕ್ಷಿತರಿಗೆ ಒಂದು ಸಾರಿ ದೇವರಲ್ಲಿ ತಮ್ಮ

ಅಪ್ಪಯ್ಯ ದೀಕ್ಷಿತರು ಸೇವಿಸಿದ ದತ್ತೂರ ಎಂಥದು, ರಸ ಕುಡಿದದ್ದು ಎಷ್ಟು ಎಂಬುದಕ್ಕೆ ಸರಿಯಾದ ಮಾಹಿತಿ ಇಲ್ಲ. ದತ್ತೂರದಲ್ಲಿ ನಾಲ್ಕೈದು ಜಾತಿಗಳಿವೆ. ಭಾರತದಲ್ಲಿ ಎಲ್ಲೆಲ್ಲಿಯೂ ಸಾಮಾನ್ಯವಾಗಿ ಕಾಣಬರುವ ದತ್ತೂರ ಎಂದರೆ "ದತೂರ ಸ್ಟ್ರಾಮೋನಿಯಮ್" (Datura Stramonium). ಇದರಲ್ಲೂ ಹೂವಿನ ಬಣ್ಣವನ್ನನುಸರಿಸಿ ಬಿಳಿ ಮತ್ತು ಕಪ್ಪು ಎಂಬ ಎರಡು ವಿಭೇದಗಳಿವೆ. ತಿಪ್ಪೆಗಳಲ್ಲಿ, ರಸ್ತೆಗಳ ಬದಿಗೆ, ಇವನ್ನು ಸಾಮಾನ್ಯವಾಗಿ ಕಾಣಬಹುದು. ಮೊನಚಾದ ಅನೇಕ ತುದಿಗಳುಳ್ಳ ದೊಡ್ಡ ದೊಡ್ಡ ಎಲೆಗಳು, ಗಂಟೆಯಾಕಾರದ ಬಿಳಿ ಅಥವಾ ನೀಲಿ ಹೂಗಳು, ಮುಳ್ಳು ಮುಳ್ಳಿನ ದೊಡ್ಡ ನಿಂಬೆ ಹಣ್ಣುಗಾತ್ರದ ಹಸುರು ಕಾಯಿಗಳು ಇವುಗಳಿಂದ ಗಿಡವನ್ನು ಸುಲಭವಾಗಿ ಗುರುತಿಸಬಹುದು.

ಆಯುರ್ವೇದ ಹಾಗೂ ಸಿದ್ಧ ಪದ್ಧತಿ ಪ್ರಕಾರ ಇದು ಪಿತ್ಥರಸ, ಉಷ್ಣವೀರ್ಯ, ಕಟು ವಿಪಾಕಗುಣಗಳುಳ್ಳದ್ದು, ದತ್ತೂರದ ಮದ್ಯಾರ್ಕ(tincture)ವನ್ನು ಅಫೀಮಿನಂತೆಯೇ ಉಪಯೋಗಿಸಬಹುದು. ಎಂದು ಡಾ. ಕೆ.ಎಮ್. ನಾಡಕರ್ಣಿಯವರು ಇಂಡಿಯನ್ ಮೆಟೀರಿಯ ಮೆಡಿಕಾದಲ್ಲಿ ಹೇಳಿದ್ದಾರೆ. ದತ್ತೂರ ಎಲೆಯ ರಸ ಬಾವು, ಊತಗಳಿಗೆ ಸಿದ್ಧೌಷಧ ಎಂದು ಹೆಸರಾಗಿದೆ. ಬೀಜಗಳಿಗೆ ಅಮಲೇರಿಸುವ ಗುಣವಿದೆ–ಯೆಂದು ವೈದ್ಯರು ಹೇಳುತ್ತಾರೆ.



ಭಕ್ತಿ ಎಷ್ಟು ಆಳ, ಎಷ್ಟು ನಿರ್ವ್ಯಾಜ ಎಂದು ಪರೀಕ್ಷೆ ಮಾಡಿಕೊಳ್ಳಬೇಕು ಎಂದೆನಿಸಿತಂತೆ. ಮನಸ್ಸಿನ ನಿರ್ಬಂಧಗಳನ್ನೆಲ್ಲಾ ಕಳಚಿ ಹಾಕುವ ಔಷಧಿಯನ್ನು ಸೇವಿಸಿದರೆ ತಮ್ಮ ಮನಸ್ಸು ಹೇಗೆ ವರ್ತಿಸಬಹುದು? ಎಂದು ಆಲೋಚನೆ ಮಾಡಿದರು. ಅವರಿಗೆ ದತ್ತೂರ (ಉಮ್ಮತ್ತಿ ಗಿಡ) ಎಂಬ ಸಸ್ಯದ ವಿಚಾರ ತಿಳಿದಿತ್ತು. ಆಯುರ್ವೇದದಲ್ಲಿ ಇದನ್ನು ಅನೇಕ ವ್ಯಾಧಿಗಳಿಗೆ ಔಷಧವಾಗಿ ಉಪಯೋಗಿಸುತ್ತಾರೆ. ಇದಕ್ಕೆ ಉನ್ಮಾದವನ್ನುಂಟುಮಾಡುವ ಶಕ್ತಿಯೂ ಇದೆ ಎಂಬುದು ಹಿಂದಿನ ಕಾಲದಿಂದಲೂ ವೈದ್ಯರಿಗೆ ತಿಳಿದಿತ್ತು. ಉಮ್ಮತ್ತಿ ಗಿಡ ಎಂದು ಹೆಸರು ಬಂದಿರುವುದು ಆ ಕಾರಣದಿಂದಲೇ. ದೀಕ್ಷಿತರು ಈ ಗಿಡದ ರಸವನ್ನು ತೆಗೆದು ಕುಡಿದರು. ತಮ್ಮ ಶಿಷ್ಯರನ್ನು ಹತ್ತಿರ ಕೂರಿಸಿಕೊಂಡು ಉನ್ಮತ್ತಾವಸ್ಥೆಯಲ್ಲಿ ತಮ್ಮ ಚರ್ಯೆಯನ್ನು ಅವರು ಸೂಕ್ಷ್ಮವಾಗಿ ಪರಿಶೀಲಿಸಬೇಕೆಂದೂ, ಬಾಯಿಂದ ಹೊರಡುವ ಮಾತುಗಳನ್ನೆಲ್ಲಾ ಬರೆದುಕೊಳ್ಳಬೇಕೆಂದೂ ಆಜ್ಞಾಪಿಸಿದರು. ಸ್ವಲ್ಪ ಹೊತ್ತಿನಲ್ಲೇ ಅವರು ಉನ್ಮತ್ತಾವಸ್ಥೆಯನ್ನು ತಲುಪಿದರು. ಮನಸ್ಸಿನ ನಿರ್ಬಂಧಗಳು ಕಳಚಿದವು. ಆದರೂ ಈ ಪುಣ್ಯಾತ್ಮನ ಮನಸ್ಸು ಎಷ್ಟು ನಿರ್ಮಲವಾಗಿತ್ತೆಂದರೆ ಯಾವ ಅಚಾತುರ್ಯವೂ ನಡೆಯಲಿಲ್ಲ. ಬದಲಾಗಿ, ಅವರ ಬಾಯಿಂದ ಸುಬದ್ಧ, ಸುಮಧುರ, ಸುಂದರವಾದ ಐವತ್ತು ಶ್ಲೋಕಗಳು ನಿರಾಯಾಸವಾಗಿ ಹೊರಟವು. ಅದೇ "ಉನ್ಮತ್ತಪಂಚಾಶತ್" ಎಂದು ಪ್ರಸಿದ್ಧವಾದ "ಆತ್ಮಾರ್ಪಣಸ್ತುತಿ". ಇದರಲ್ಲಿ ದೀಕ್ಷಿತರು ಪರಮಾತ್ಮನನ್ನು ಸಂಸಾರ ಬಂಧನದಿಂದ ನನ್ನನ್ನು ಬಿಡಿಸು, ನಾನು ನಿನಗೆ ಸಂಪೂರ್ಣ ಶರಣಾಗತನಾಗಿದ್ದೇನೆ ಎಂದು ಆತ್ಮಾರ್ಪಣ ಮಾಡಿಕೊಂಡಿದ್ದಾರೆ.

✡



ನೆಹರೂಜಿ ಸಭೆಯೊಂದರಲ್ಲಿ ಭಾಷಣ ಮುಗಿಸಿ ವೇದಿಕೆಯಿಂದ ಕೆಳಗಿಳಿಯುತ್ತಿದ್ದಂತೆಯೇ ತರುಣನೊಬ್ಬ ಅವರ ಬಳಿ ಬಂದವನೇ ಹಸ್ತಾಕ್ಷರ ನೀಡುವಂತೆ ವಿನಂತಿಸಿ ಹಸ್ತಾಕ್ಷರ ಸಂಗ್ರಹ ಪುಸ್ತಕವನ್ನು ಮುಂದೆ ಮಾಡಿದ.

ಜವಾಹರರು ಸಹಿ ಮಾಡಿದರು. ಆಗ ಆ ತರುಣ "ಡೇಟನ್ನೂ ಹಾಕಿರಿ" ಅಂದ. ನೆಹರೂ ಅದನ್ನೂ ಪೂರೈಸಿದರು. ಆತ ಅಷ್ಟಕ್ಕೇ ಬಿಡಲಿಲ್ಲ. "ಚಾಚಾಜಿ, ನೀವು ಹಸ್ತಾಕ್ಷರವನ್ನು ಹಿಂದಿಯಲ್ಲೂ ಡೇಟನ್ನು ಇಂಗ್ಲೀಷಲ್ಲೂ ಹಾಕಿದಿರಲ್ಲಾ, ಯಾಕೆ?"

"ನೀನು ಹಾಗೇ ಹೇಳಿದೆ" ಅಂದರು ಪಂಡಿತಜಿ. 'ಹಸ್ತಾಕ್ಷರ' ಹಿಂದಿ ಪದ. 'ಡೇಟ್' ಇಂಗ್ಲೀಷ್ ಪದ." ಅಂದಾಗ ತರುಣ ನಾಚಿ ನೀರಾದ.

*

"ಜಗತ್ತು ಪರಿಪೂರ್ಣವಾದಾಗ ಮಾತ್ರ ನಾನು ಕಾರ್ಯಪ್ರವೃತ್ತನಾಗುತ್ತೇನೆ, ಆಗ ಮಾತ್ರ ನನಗೆ ಆನಂದ ಸಿಗಬಲ್ಲುದು" ಎಂದು ಹೇಳುವ ಮನುಷ್ಯ ಮತ್ತು ತುಂಬಿ ಹರಿಯುವ ನದಿಯ ದಡದಲ್ಲಿ ಕುಳಿತು, "ಇದರ ಕೊನೆ ಹನಿಯೂ ಸಮುದ್ರ ಸೇರಿದಾಗ ನಾನು ದಾಟ ಹೋಗಬಲ್ಲೆ" ಎಂದು ಹೇಳುವ ಮನುಷ್ಯ—ಇಬ್ಬರೂ ಒಂದೆ; ಅವರಿಗೆ ಪ್ರಯತ್ನ, ಮುನ್ನಡೆಯೆಂಬ ಶಬ್ದಗಳ ಪರಿಚಯುವೇ ಇಲ್ಲ ಅನಿಸುತ್ತದೆ.

—ಸ್ವಾಮಿ ವಿವೇಕಾನಂದ



ಪ್ರೊಫೆಸರ್ ಕುಲಕರ್ಣಿ

ಹೇಮಾ

ವಸಂತ ಕಣ್ಣು ಹಿಗ್ಗಿಸಿ ನೋಡಿದ. ನಂಬಿಕೆಯಾಗಲಿಲ್ಲ. ಕಣ್ಣು ಕಿರಿದುಗೊಳಿಸಿ ನೋಡಿದ. ಊಹೂ, ಮತ್ತೆ ಇನ್ನೊಮ್ಮೆ ಕಣ್ಣರಳಿಸಿದ. ಅವನಿಗೆ ದಿಗ್ಭ್ರಮೆ. ಇಲ್ಲವೆನಿಸಿದರೂ ಹೌದು. ಗೇಟ್ ಕೀಪರನ ಕೈಯಲ್ಲಿ ಪಾಸ್ ಕುಕ್ಕಿ ಥಿಯೇಟರ್ ಒಳ ಬಂದು ತಲೆ ಕೆಳಗೆ ಹಾಕಿಕೊಂಡು ನಿಧಾನವಾಗಿ, ಬಹಳ ನಿಧಾನವಾಗಿ ನಡೆಯುತ್ತಾ ಒಂದು ಸ್ಥಳದ ಹತ್ತಿರ ನಿಂತು ಅತ್ತಿತ್ತ ನೋಡಿ ಕುಳಿತುಕೊಂಡವರು ಪ್ರೊಫೆಸರ್ ಕುಲಕರ್ಣಿ! ನಿಸ್ಸಂಶಯವಾಗಿಯೂ ಹೌದು. ಪ್ರತಿನಿತ್ಯ ಹಾಕಿಕೊಳ್ಳುತ್ತಿದ್ದ ಕರಿಟೊಪ್ಪಿಗೆಯು ಬದಲಾಗಿ ಈಗ ಅವರು ತಲೆಗೆ ಹಾಕಿಕೊಂಡ ಕಿವಿಟೊಪ್ಪಿಗೆ ವಸಂತನನ್ನು ಮೋಸಗೊಳಿಸಲಾರದು.

ವಸಂತ ಗಲಿಬಿಲಿಗೊಂಡ. ತಾನು ಕುಳಿತ ಬಾಲ್ಕನಿಯ ಮೊದಲ ಸಾಲಿನಿಂದ ನೇರವಾಗಿ ಕಾಣುವ ಮೂರನೆಯ ದರ್ಜೆಯ ಬೆಂಚುಗಳು, ಶರ್ಟುಗಳು, ಕೋಟುಗಳು, ಬೀಡಿಗಳ ಬೆಂಕೀ ಕಿಡಿಗಳು ಅಸ್ಪಷ್ಟವಾಗತೊಡಗಿದರೂ ಕಿವಿಟೊಪ್ಪಿಗೆ ಮಾತ್ರ ನಿಚ್ಚಳವಾದಂತೆ ಅವನಿಗೆ ಅನಿಸತೊಡಗಿತು.

ಜಾಹೀರಾತು ಚಿತ್ರಗಳು ರೀಲು ರೀಲಾಗಿ ಒಂದರ ನಂತರ ಇನ್ನೊಂದು ಬಿಚ್ಚಿಕೊಳ್ಳುತ್ತಿದ್ದವು. ವಸಂತನಿಗೆ ಒಂದು ಥರ ಚಡಪಡಿಕೆ. ಎದ್ದು ಹೊರಬಂದ. ಕಿಸೆಗೆ ಕೈ ಹಾಕಿ ಪ್ಯಾಕ್ ತೆರೆದುನೋಡಿದರೆ ಖಾಲಿ. ಇದು ಹೊಸ ಅನುಭವ ಅವನಿಗೆ. ಇನ್ನೂ ಬೇಸರವಾಯಿತು. ಅಂಗಡಿಗೆ ಹೋಗಿ ತಂದು ಸೇದುವಷ್ಟೂ ಸಹನೆ, ಉತ್ಸಾಹಗಳಿರಲಿಲ್ಲ. ಕುತೂಹಲ ಒಂದು ಕಡೆಯಾದರೆ ಇನ್ನೊಂದು ಕಡೆಗೆ 'ಮೊರ್ಯಾಲಿಟಿ' ಅವನ ಕಣ್ಣೆದುರೇ ಕೊನೆಯುಸಿರೆಳೆಯುತ್ತಿದೆ!

ಧಡ ಧಡ ಮೆಟ್ಟಿಲಿಳಿದು ವಸಂತ ಥರ್ಡ್ ಕ್ಲಾಸ್ ವಿಭಾಗದ ಹತ್ತಿರ ಬಂದ. ಗೇಟ್‌ಕೀಪರ್‌ಗೆ ತನ್ನ ಕಿಸೆಯುಲ್ಲಿನ ಟಿಕೇಟಿನ ತುಂಡು ತೋರಿಸಿ. ಏನೋ ಹೇಳಿ ಒಳಹೊಕ್ಕ. ಕತ್ತಲು. ಚಿತ್ರದ ಎರಡನೆ ಭಾಗ ಆರಂಭವಾಗಿತ್ತು. ಕಪ್ಪು ಕರಗಿ ಕಿವಿಟೊಪ್ಪಿಗೆ ಕಂಡಿತು, ಕಳೆದುದು ಸಿಕ್ಕಂತೆ; ಜೊತೆಗೆ ದುಗುಡ ಬೇರೆ. ಟೊಪ್ಪಿಗೆಯು ಹಿಂದಿನ ಬೆಂಚು ಅರ್ಧದಷ್ಟು ಖಾಲಿಯಿದ್ದಂತೆ ಕಾಣಿಸಿತು. ಅದೇ ಸಾಲಿನ ತುದಿಗೆ ಬಂದು ಖಾತ್ರಿಮಾಡಿ

ಕೊಂಡ. ಕುಳಿತವರ ಗೊಣಗಾಟಕ್ಕೆ ಕಿವುಡನಾದ ವಸಂತ ನಿಶ್ಶಬ್ದವಾಗಿ ಹೋಗಿ ಅಲ್ಲಿ ಕುಳಿತ.

ಅವನ ಕಣ್ಣೆದುರು ಬಣ್ಣ–ಬಣ್ಣದ ಬೇರೆ ಚಿತ್ರಗಳೇ ಕುಣಿಯುತೊಡಗಿದವು.

ಪ್ರೊಫೆಸರ್ ಕುಲಕರ್ಣಿ ಎಂದೂ ಗಟ್ಟಿಸಿ ಸಹ ಮಾತಾಡಿದವರಲ್ಲ. ಕ್ಲಾಸಿನಲ್ಲಿಯೂ ಹಾಗೆಯೇ. ತೀರಾ ಕಟ್ಟುನಿಟ್ಟಿನ ಆಸಾಮಿ, ಶಿಸ್ತಿನ ಅವತಾರ. ಅವರ ವೇಷ ಭೂಷಣಗಳೂ ಅಷ್ಟೇ, ಎಂದೂ ಬಾಹ್ಯ ಆಡಂಬರಕ್ಕೆ ಮನಸೋತವರಲ್ಲ. ಸೀದಾ ಸಾದಾ ಮನುಷ್ಯ. ಎದುರಿಗೆ ಬರುತ್ತಲೇ ಸಾತ್ವಿಕ ತೇಜಸ್ಸಿನಿಂದ ನಳನಳಿಸುವ ಶುಭ್ರ ಮುಖ, ಆಸ್ತಿಕತೆಯ ಸಂಕೇತವಾಗಿ ನಾಮ ಗೋಪೀ ಚಂದನಗಳು. ಎಷ್ಟೋ ವರ್ಷಗಳಾಗಿದ್ದರೂ ಚಾಂಚಲ್ಯಕ್ಕೆ ಸಿಕ್ಕು ಬದಲಿಸಿದ ಕಡು ನೀಲಿ ಕೋಟು, ಕರಿ ಟೊಪ್ಪಿಗೆ ಗರಿಗರಿ ಬಿಳಿ ನಿರ್ಮಲ ಮಲ್ ಧೋತರ ಇಷ್ಟೇ. ಆಗೀಗ ಚಪ್ಪಲಿ, ಇಲ್ಲದಿದ್ದರೆ ಅದೂ ಇಲ್ಲ.

ಇಡೀ ಕಾಲೇಜಿನಲ್ಲಿ ಯಾರಾದರೂ ಜನ್ಮಸಿದ್ಧ ಹಕ್ಕಿನಿಂದ ನೈತಿಕತೆಯ ಬಗ್ಗೆ ಮಾತಾಡುತ್ತಿದ್ದವರೆಂದರೆ ಪ್ರೊಫೆಸರ್ ಕುಲಕರ್ಣಿ ಮಾತ್ರ. ಕಲಿಸುವುದು ಹಿಂದಿಯಾದರೂ ಅವರು ಸದಾ ಮಾತನಾಡುವುದು ಇಂಗ್ಲೀಷೇ. ಮಾತಿಗೊಂದು ಸಂಸ್ಕೃತ ಶ್ಲೋಕ ಉದಾಹರಿಸುವುದು ಸಾಮಾನ್ಯ ರೂಢಿ. ಮಾತು, ಭಾಷೆಗಳಿಂದ ಸಂಸ್ಕೃತಿಯನ್ನು ಗುರುತಿಸಲು ಸಾಧ್ಯ ಎಂಬುದು ಅವರ ಖಚಿತಾಭಿಪ್ರಾಯ.

ಹಿಂದಿನ ದಿನ ತಾನು 'ಫಿಲ್ಮ್ ಫೇರ್'ನ್ನು ಹಿಡಿದುಕೊಂಡೇ ಪ್ರೊಫೆಸರ್ ಕುಲಕರ್ಣಿಯವರ ಕ್ಲಾಸಿಗೆ ಹೋದ ಘಟನೆ ವಸಂತನಿಗೆ ನೆನಪಾಯಿತು. ಅಕಸ್ಮಾತ್ ಅದನ್ನು ನೋಡಿದ ಪ್ರೊಫೆಸರ್‌ರರಿಗೆ ಸ್ವಾಭಾವಿಕವಾಗಿ ಸಹನೆ ಮೀರಿತು. ಅವಿಧೇಯತೆ, ಅಸಡ್ಡೆ, ನಿಷ್ಕಾಳಜಿ ಯಾವುದೂ ಅವರಿಗಾಗದ ವಿಷಯ. ಬರೀ 'ಇಮ್ಮೊರ್ಯಾಲಿಟಿ'ಯ ಬೀಜ ಬಿತ್ತುವ ಸಿನಿಮಾಗಳ ಚರಿತ್ರೆ—ಪುಸ್ತಕ ತಮ್ಮ ಕ್ಲಾಸಿನಲ್ಲಿ! ಪ್ರೊಫೆಸರ್ ನೊಂದುಕೊಂಡರು. ಆಧುನಿಕ ಜಗತ್ತಿಗೆ ಸಿನೆಮಾ ಹೇಗೆ ಮಾರಕ ಎಂಬುದನ್ನು ವಿವರಿಸಲು ಏಳೆಂಟು ಬೇರೆ ಬೇರೆ ಚಿತ್ರಕಥೆಗಳನ್ನು ಸಂಕ್ಷಿಪ್ತವಾಗಿ ಹೇಳಿ. ಎಲ್ಲದರಲ್ಲೂ ಕಾಮ ಹೇಗೆ ಪ್ರಧಾನವಾಗಿದೆ ಎಂಬುದನ್ನು ತಿಳಿಯಪಡಿಸಿದರು. ಇಂಥವುಗಳನ್ನು ನೋಡುವುದರಿಂದ ನವಯುವಕ–ಯುವತಿಯರ ಮನಸ್ಸಿನ ಮೇಲಾಗುವ ದುಷ್ಪರಿಣಾಮಗಳ ಸರಮಾಲೆ ಬಿಚ್ಚಿದರು. 'ನೈತಿಕತೆಯೇ ಬಾಳಿನ ಬುಡಕಟ್ಟು' ಎಂದು ಮೂರು ಮೂರು ಸಾರೆ ಒತ್ತಿ ಹೇಳಿದರು. ಮಿಸ್ ಬರ್ವೆ, ಪಾಠಕ, ಇನ್ನೂ ಒಂದಿಬ್ಬರು ಹುಡಿಗೆಯರು ಆ ವಾಕ್ಯವನ್ನು ಭರಭರ ಬರೆದುಕೊಂಡರು. ಪ್ರೊಫೆಸರರು ವಸಂತನನ್ನು ಎಬ್ಬಿಸಿ ನಿಲ್ಲಿಸಿ 'ತಪ್ಪಾತು' ಅನ್ನಿಸಿದಾಗ ಕ್ಲಾಸಿನ ಗಂಟೆಯಾಗಿ ಅರ್ಧ ತಾಸು ಕಳೆದಿತ್ತು.

ಕಿವಿ ಟೊಪ್ಪಿಗೆ ಎದ್ದು ನಿಂತಿತು. ಜನರನ್ನು ಸರಿಸುತ್ತ ಸರ ಸರ ಹೊರಟಿತು. ವಸಂತ ಪರದೆಯ ಕಡೆಗೆ ನೋಡಿದ. ಹೆಣ್ಣು–ಗಂಡುಗಳ ಅಲಿಂಗನ. ಕೊನೆಯ ಹಂತವೆಂದಾಯಿತು. ಇವನೂ ಎದ್ದ. ಪ್ರೊಫೆಸರ್ ಬಾಗಿಲಿನ ಕರಿ ಪರದೆ ಸರಿಸಿ ದಾಟಿದರು. ಅಕ್ಕಪಕ್ಕ, ಸುತ್ತೆಲ್ಲ ನೋಡಿದರು. ಅವರನ್ನು ಹಿಂಬಾಲಿಸಿದ ವಸಂತ ಒಂದು ಅಂಚಿಗೆ ಸರಿದು ನಿಂತ. ಮೊಣಕಾಲವರೆಗೆ ಮಾತ್ರ ಮುಚ್ಚಿದ ಪ್ರೊಫೆಸರರ ಪಂಚೆಯು ಕಡೆಗೇ ಅವನ ಲಕ್ಷ್ಯ. ಓಡುತ್ತ ಹೋಗಿ, 'ನಮಸ್ಕಾರ ಸರ್' ಎನ್ನಬೇಕು ಅನಿಸಿ, ಪಾಪ ಅಂದುಕೊಂಡ. ಪ್ರೊಫೆಸರ್ ಕುಲಕರ್ಣಿಯವರ ಆಕೃತಿ ಸಣ್ಣದಾಗಿ, ಸ್ಪಷ್ಟವೆನಿಸುತ್ತ ದೂರ ದೂರವಾಯಿತು. ರಾತ್ರಿ ಹನ್ನೆರಡರ ವಿದ್ಯುದ್ದೀಪದ ಬೆಳಕಲ್ಲಿ ಥೇಟರಿನ ವಾಲ್ ಪೋಸ್ಟರಿನ ಮೇಲೆ ಅರೆನಗ್ನ ಹೆಣ್ಣೊಂದಿಗೆ 'ವಯಸ್ಕರಿಗೆ ಮಾತ್ರ' ನಗುತ್ತಿತ್ತು.

ಪ್ರತಿವರ್ಷದಂತೆ ಪ್ರೊಫೆಸರ್ ಕುಲಕರ್ಣಿಯವರ ನೇತೃತ್ವದಲ್ಲಿ ಈ ಸಲ ಶಿರಸಿ, ಬನವಾಸಿ, ಜೋಗ್‌ಗಳಿಗೆ ಟ್ರಿಪ್ಪೆಂದು ಪ್ರಕಟಿಸಿದಾಗ ಮಾಧವಿ ಉತ್ಸಾಹದಿಂದ ಹೆಸರು ಕೊಟ್ಟಿದ್ದಳು. ಅವಳಿಗೆ ಪ್ರೊಫೆಸರ್ ಕುಲಕರ್ಣಿ ಅಂದರೆ ಅಚ್ಚುಮೆಚ್ಚು. 'ಅಚ್ಚುಕಟ್ಟು' 'ವಿನಯ' 'ಶುಭ್ರ' 'ಸದ್ಗುಣ' ಇತ್ಯಾದಿ ಶಬ್ದಗಳಿಗೆ ಅವಳ ಕಣ್ಣೆದುರು ನಿಲ್ಲುವ

ಮೂರ್ತಿ ಪ್ರೊಫೆಸರ್ ಕುಲಕರ್ಣಿ.

ಹದಿನಾರು ಸ್ಥಳಾವಕಾಶದ ಮೇಟಾಡೋರ್ ವ್ಯಾನಿನಲ್ಲಿ ಇಪ್ಪತ್ತೆರಡು ಜನರನ್ನು ತುರುಕಬೇಕಾದದ್ದು ಪ್ರಯಾಸದ್ದಾಗಿದ್ದರೂ ಕುಶಾಗ್ರಮತಿಗಳಾದ ಪ್ರೊಫೆಸರ್‌ರು ಒಂದು ಬದಿಯಲ್ಲಿ ಕುಳಿತ ಏಳು ಹುಡುಗಿಯರ ಮಗ್ಗುಲಲ್ಲಿ ಒಂದು ಮೊಳಕ್ಕಿಂತ ಹೆಚ್ಚೇ ಸ್ಥಳ ಖಾಲಿಯಾಗಿಯೇ ಬಿಡಿಸಿ ನಂತರ ತಮ್ಮ ಕಲೀಗ್ ರಮೇಶರನ್ನು ಕೂಡ್ರಿಸಿ ತಾವು ಎದುರಿನ ಸಾಲಿನಲ್ಲಿ ಕುಳಿತು ತಮ್ಮೆಲ್ಲ ಗಮನವನ್ನು ಎದುರಲ್ಲೇ ಕೇಂದ್ರಿಕರಿಸಿದ್ದರು. ಇಂಥ ಆರಕ್ಷಣೆಯೇ ಟ್ರಿಪ್ಪಿನುದ್ದಕ್ಕೂ ಕ್ರಿಯಾತ್ಮಕವಾಗಿದ್ದರಿಂದ ಹುಡುಗ ಹುಡಿಗೆಯರು ಹುಚ್ಚುಚ್ಚು ಬಡೆಯಲು ಆಸ್ಪದವಿರದೇ ಯಾವ ಹುಡಿಗೆಯ ಕೂದಲೂ ಕೊಂಕದಿರುವುದು ಎಂದು ಮಾಧವಿಗೆ ಅನಿಸಿತು.

ಬನವಾಸಿಯಲ್ಲಿ ಮೊದಲು ಪ್ರೊ. ರಮೇಶರ ಮನೆಗೆ ಹೋದಾಗ ಆಸರೆಯೆಂದು ಕಷಾಯದ ಕಾರ್ಯಕ್ರಮವಾಯಿತು. ಪ್ರೊ. ಕುಲಕರ್ಣಿ ಮಾತ್ರ ಒಂದು ಹನಿ ನೀರನ್ನೂ ಮುಟ್ಟದೆ ತಮ್ಮ ಮಡಿಯನ್ನು ಕಾಪಾಡಿಕೊಂಡರು.

ಶಿರಸಿಯ ಮಾರಿಕಾಂಬೆಯ ಗುಡಿಯಲ್ಲಿ ವಿಶೇಷ ವಿವರದ ಕಲ್ಲಿಗಿಂತ ಹೆಚ್ಚಿನ ವಿಷಯ ನೀಡಿದವರು ಪ್ರೊಫೆಸರ್‌ರೇ. ಮಾರಿಕಾಂಬೆಯನ್ನು ಎಲ್ಲ ಜಾತಿಯವರೂ ಪೂಜಿಸುತ್ತಿದ್ದರೂ ಮೂಲದಲ್ಲಿ ಅವಳು ಅಬ್ರಾಹ್ಮಣರ ದೇವತೆ, ಮಾರಿಬೇನೆಯ ಅಧಿದೇವತೆ, ಬಲಿ ತೆಗೆದುಕೊಳ್ಳುವ ಅವಳ ತಾಮಸೀ ಗುಣದ ಜೊತೆಗೆ ಜಾತ್ರೆಯಲ್ಲಿ ಅವಳ ಮದುವೆ, ಮೆರವಣಿಗೆ, ಪ್ರತಿಷ್ಠಾಪನೆ ಅಲ್ಲದೆ ಅವಳು ರಂಡಿಯಾಗುವ ಸವಿಸ್ತರ ವೃತ್ತಾಂತ ಮುಂತಾದವನ್ನು ಕೇಳಿದಾಗ ಮಾಧವಿಗೆ ಪ್ರೊಫೆಸರ್‌ರ ಜ್ಞಾನದ ಬಗ್ಗೆ ಹೆಮ್ಮೆ ಅನಿಸಿತು. ಆದರೂ ಪ್ರೊಫೆಸರ್‌ರು ಗರ್ಭಗುಡಿಯ ಹತ್ತಿರ ಬಂದು ತೀರ್ಥ ಪ್ರಸಾದ ಏನೂ ತೆಗೆದುಕೊಳ್ಳದೆ ದೂರವೇ ಉಳಿದುದರ ಬಗ್ಗೆ ಅವಳಿಗೆ ಸೋಜಿಗವಾಯಿತು.

ಮುಂದೆ ಜೋಗದ ದಾರಿ. ಮಾವಿನಗುಂಡಿಗೆ ಬರುತ್ತಲೇ ವ್ಯಾನು ನಿಲ್ಲಿಸಲು ಹೇಳಿದ ಪ್ರೊಫೆಸರ್ ಅಲ್ಲಿ ಸಿಕ್ಕುವ ಉತ್ಕೃಷ್ಟ ಪೈನಾಪಲ್ ಜ್ಯೂಸ್ ಕುಡಿದು ಬರಲು ಹುಡುಗರನ್ನೆಲ್ಲ ಕಳಿಸಿ ತಾವು ವ್ಯಾನಿನಲ್ಲೇ ಕುಳಿತರು. ಮಾಧವಿಯೂ ಇಳಿಯಲಿಲ್ಲ. ಕೆಲವರು ಜ್ಯೂಸ್ ಶಾಪ್ ಹೊಕ್ಕರು. ಕೆಲವರು ಕಂಟಿ, ಮರೆ ಹುಡುಕಿಕೊಂಡು ಹೊರಟರು. ಹದಿನೈದು ನಿಮಿಷಗಳಲ್ಲಿ ಎಲ್ಲರೂ ಒಬ್ಬೊಬ್ಬರಾಗಿ ಬಂದು ವ್ಯಾನಿನಲ್ಲಿ ಕುಳಿತರು. ಮಾಧವಿ 'ಸರ್, ಒಂದ್ನಿಮಿಷ' ಎಂದು ಕೇಳಿ ಇಳಿದುಹೋದಳು. ಯಾರಾದರೂ ಜ್ಯೂಸ್ ಶಾಪಿನಲ್ಲೇ ಉಳಿದಿರುವರೋ ನೋಡಿಕೊಂಡು ಬರುವೆನೆಂದು ಪ್ರೊ. ಕುಲಕರ್ಣಿ ಅವರೂ ಹೋದರು.

ಮಾಧವಿ ಮರಳಿ ಬರುವಾಗ ಶಾಪ್ ಒಳಗಡೆ ಪ್ರೊ. ಕುಲಕರ್ಣಿ ಒಂದೇ ಉಸಿರಿನಲ್ಲಿ ಗಟಗಟ ಹಳದಿ ರಸ ಗುಟುಕರಿಸುತ್ತಿದ್ದಾರೆ. 'ಪಾಪ, ಸರ್‌ಗೆ ಎಷ್ಟು ನೀರಡಿಕೆ ಆಗಿದೆ. ಹಣ್ಣಿನ ರಸ ಮೈಲಿಗೆಯಲ್ಲವೆಂದೇ. ಕುಡಿಯುತ್ತಿರಬೇಕು,' ಅಂದುಕೊಳ್ಳುತ್ತ ಮಾಧವಿ ವ್ಯಾನ್ [illegible].

ಪ್ರೊಫೆಸರ್‌ರು ಈ ಮೊದಲು ಅದೆಷ್ಟೋ ಬಾರಿ ಜೋಗ ಪ್ರವಾಸ ಕೈಕೊಂಡದ್ದರಿಂದ ಅವರಿಗೆ ಎಲ್ಲಿ ಹೇಗೆ ನಿಂತು ಧಬೆಧಬೆ ನೋಡಬೇಕೆಂಬುದೆಲ್ಲ ಗೊತ್ತು. ಮೊದಲು [illegible] ಬಂಗ್ಲೊ ಹತ್ತಿರ ವ್ಯಾನ್ [illegible]. ಅಲ್ಲಿಂದ ತಡಸಲಿನ ನೆತ್ತಿಯ ಮೇಲೆಯೇ ಹೋಗಬಹುದೆಂದು ಪ್ರೊಫೆಸರ್‌ರು ಹೇಳಿದಾಗ ಎಲ್ಲ ಮುಖಗಳಲ್ಲೂ ಉತ್ಸಾಹ ಉಕ್ಕಿತು.

ವ್ಯಾನ್‌ನಿಂದ ಇಳಿಯುವಾಗ ಅದರಲ್ಲಿ ತಮ್ಮ ಯಾವ ಸಾಮಾನುಗಳನ್ನೂ ಇಡಬಾರದೆಂದು ಪ್ರೊಫೆಸರ್‌ರು ತಾಕೀತು ಮಾಡಿದ್ದರಿಂದ ಎಲ್ಲರೂ ತಮ್ಮ ಕೈಚೀಲಗಳನ್ನು ಎತ್ತಿಕೊಂಡರು. ಹುಡಿಗೆಯರ ಚೀಲಗಳನ್ನೂ ಹುಡುಗರಿಗೇ ಹಿಡಿದುಕೊಳ್ಳಲು ಪ್ರೊಫೆಸರ್‌ರು ಹೇಳಿದಾಗ ಮಾಧವಿಗೆ ಮುಜಗರವಾದರೂ ಹಾಯೆನಿಸಿತು.

ಪ್ರೊಫೆಸರ್‌ರು ಹುಡಿಗೆಯರನ್ನು ಮುಂದೆ ಹಾಕಿಕೊಂಡು ಅವರಿಗೂ ಹಿಂದಿನ ಹುಡುಗರಿಗೂ ಮಧ್ಯೆ ಗೋಡೆಯಾಗಿ ಎಲ್ಲ ವ್ಯೂ ಪಾಯಿಂಟ್‌ಗಳಿಗೂ ಹೋಗಿ, ವಿವರಿಸುತ್ತ, ಶರಾವತಿ ಕಂದಕಕ್ಕೆ ಜಾರಿದ ಆಯಕಟ್ಟಿನ ಸ್ಥಳಕ್ಕೆ ಬಂದರು. ಸಹಜ ಸೌಂದರ್ಯಗಳಿಂದ ವಂಚಿತರಾದ ಹುಡುಗರೆಲ್ಲ ಕೈಭಾರ ಹೊತ್ತು ಹಿಂದಿದ್ದರು.

ವ್ಯಾನ್ ಶರಾವತಿಯ ಆಚೆ ದಡಕ್ಕೆ ಹೊರಟು ಸೇತುವೆಯ ಮೇಲೆ ಬಂದಾಗ ಪಕ್ಕದ ನೀರು, ಬಂಡೆಗಲ್ಲುಗಳ ನಡುವೆ ಚಿಕ್ಕ ಆಕೃತಿಗಳೊಂದಿಗೆ ಒಂದು ಕ್ಯಾಮರಾ ಕಂಡು ಪ್ರೊಫೆಸರು ವ್ಯಾನ್ ನಿಲ್ಲಿಸಿದರು. ಅದೇ ಸ್ಥಳದಲ್ಲಿ ತಾವು ಈ ಹಿಂದೆ ನೋಡಿದ ಶೂಟಿಂಗ್, ನಟ–ನಟಿಯರೊಂದಿಗೆ ತಮ್ಮ ಪರಿಚಯದ ಬಗ್ಗೆ ಹೇಳುತ್ತ ಹುಡುಗರಿಗೂ ಪರಿಚಯ ಮಾಡಿಸಿಕೊಡುವುದಾಗಿ ಹೇಳಿ ದುಡುದುಡು ಕೆಳಗಿಳಿದರು. ಕ್ಯಾಮರಾ ಕ್ರಿಯಾಶೀಲವಾಗಿತ್ತು. ಹೀರೋ, ಹೀರೋಯಿನ್ ಬಂಡೆಗಳ ಮರೆಯಲ್ಲಿ ಕಣ್ಣು ಮುಚ್ಚಾಲೆ ನಡೆಸಿದ್ದರು. ಹೀಗಾಗಿ ಸಹನಟಿಯರೊಂದಿಗೆ ಮಾತಾಡುವುದು ಉತ್ಸಾಹದಾಯಕವಲ್ಲದಿದ್ದರೂ ಅನಿವಾರ್ಯವಾಗಿತ್ತು. ಪ್ರೊಫೆಸರ್ ಇರುವುದನ್ನೂ ಮರೆತು ಮಾಧವಿ ಆ ಗುಂಪಿನಲ್ಲಿ ಸೇರಿಕೊಂಡಳು.

ಮುಖ್ಯ ನಟಿ ಮಿಸ್ ಕಲಾವತಿ ಬಂದಳು. ಪ್ರೊಫೆಸರ್ ನಾಲ್ಕು ಹೆಜ್ಜೆ ಮುಂದೆ ಹೋಗಿ ತಮ್ಮ ಸ್ವಂತ ಪರಿಚಯ ಹೇಳಿಕೊಂಡರು. ಅವರು ತಮ್ಮ ವಿದ್ಯಾರ್ಥಿಗಳನ್ನು ಸಂಪೂರ್ಣವಾಗಿ ಮರೆತುದಕ್ಕೆ ಮಾಧವಿಯೊಂದಿಗೆ ಉಳಿದವರಿಗೂ ಹಳಹಳಿಯಾಯಿತು. ಹುಡುಗರೆಲ್ಲ ಮಿಸ್ ಕಲಾವತಿಯನ್ನು ಸುತ್ತುಗಟ್ಟಿದಾಗ ಆ ಅನಾಗರಿಕ ವರ್ತನೆಗಾಗಿ ಪ್ರೊಫೆಸರ್‌ರಿಗೆ ಬೇಸರವಾಗಿ ಆ ನಟಿಗೆ ತಿಳಿಯದಂತೆ ಕಣ್ಣು, ಕೈಗಳಿಂದಲೇ ಸನ್ನೆ ಮಾಡಿ ದೂರ ಕಳಿಸಿದರು.

ಮಿಸ್ ಕಲಾವತಿಯವರ ಅಮೋಘ ಕಲಾಸೇವೆಯನ್ನು ಮುಕ್ತ ಕಂಠದಿಂದ ಹೊಗಳಿದ ಪ್ರೊಫೆಸರರು 'ನಮ್ಮ ವಿದ್ಯಾರ್ಥಿನಿಯರಿಗೆ ನಿಮ್ಮೊಂದಿಗೆ ಫೋಟೋ ತೆಗೆಯಿಸಿಕೊಳ್ಳುವ ಹಂಬಲ' ಎಂದು ಅನುಮಾನಿಸುತ್ತ ಹೇಳಿದರು. ಮಿಸ್ ಕಲಾವತಿಯವರ ಪಕ್ಕದಲ್ಲಿ ತಾನೇ ನಿಂತುಕೊಳ್ಳಬೇಕು ಎಂದು ಮಾಧವಿಗೆ ಅನಿಸಿದರೂ ಅಷ್ಟರಲ್ಲಿ ಪ್ರೊಫೆಸರ್‌ರು ಅಲ್ಲಿ ನಿಂತದ್ದು ನೋಡಿ ಸುಮ್ಮನಾದಳು.

ಸಹನಟಿಯೊಬ್ಬಳ ಕನ್ನಡಕದಿಂದಾಗಿ ಬೆಳಕು ಪ್ರತಿಫಲಿಸಿ ಫೋಟೋ ಕೆಡುವ ಸಂಭವವಿರುವುದರಿಂದ ಆ ಕನ್ನಡಕ ತೆಗೆಯಲು ಪ್ರೊಫೆಸರ್ ಅವಳನ್ನು ಕೇಳಿಕೊಂಡಿದ್ದರಿಂದ ಮಾಧವಿಗೆ ಅವರ ಫೋಟೋಗ್ರಾಫಿಕ್ ಸೆನ್ಸ್ ಅದ್ಭುತವೆನಿಸಿತು. ಮತ್ತೆ ವ್ಯಾನ್ ಹೊರಟಾಗ ಹುಡುಗರೆಲ್ಲ ದುಮುದುಮು ಮೋರೆ ಮಾಡಿಕೊಂಡು ಕುಳಿತಿದ್ದರು.

ಹುಡುಗರೆಲ್ಲ ಊಟಮಾಡುತ್ತಿದ್ದಾಗ ಸುಮ್ಮನೆ ಕುಳಿತ ಪ್ರೊಫೆಸರ್‌ರು ಮಿಸ್ ಕಲಾವತಿ ಮತ್ತು ಡೈರೆಕ್ಟರ್ ರಮಣರ ಅನೈತಿಕ ಸಂಬಂಧದ ಶೋಚನೀಯ ಕಥೆಯನ್ನು ಹೇಳಿದಾಗ ಮಾಧವಿಗೆ ತಾನು ಫೋಟೋದಲ್ಲಿ ಅವಳ ಮಗ್ಗುಲಲ್ಲಿ ನಿಲ್ಲದಿದ್ದುದೇ ಒಳ್ಳೆಯದಾಯಿತು ಅನಿಸಿತು.

ಸ್ವಲ್ಪ ಹೊತ್ತಿನಲ್ಲೇ ಪ್ರೊಫೆಸರ್‌ರು ಸನ್ನೆ ಮಾಡಿ 'ಮಿಸ್ ಮಾಧವಿ, ಒಂದು ನಿಮಿಷ' ಎಂದು ಬದಿಗೆ ಕರೆದು ಒಂದು ಪಾನಪಟ್ಟಿ ಅವಳ ಕೈಗಿತ್ತರು. ಅರ್ಧ ತಾಸಿನಲ್ಲಿ ಎಲ್ಲ ಹುಡಿಗೆಯರೂ ಪಾನಪಟ್ಟಿಯನ್ನೇ ಮೆಲ್ಲತೊಡಗಿದ್ದನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು.

ಊಟದ ನಂತರ ಹುಡುಗರೆಲ್ಲ ಅತ್ತಿತ್ತ ತಿರುಗುತ್ತಿದ್ದರು. ಇಳಿಹೊತ್ತಿನ ಝಳ ಅವರ ಉತ್ಸಾಹವನ್ನು ಕುಗ್ಗಿಸಿರಲಿಲ್ಲ. ಆದರೆ ಗುಂಡಿಯಲ್ಲಿ ಇಳಿಯುವ ಅವರ ಬಯಕೆಗೆ ಪ್ರೊಫೆಸರ್‌ರ ವಾರ್ನಿಂಗ್ ಅಡ್ಡಿಯಾಗಿತ್ತು.

ಸೂರ್ಯಾಸ್ತಕ್ಕೆ ಸರಿಯಾಗಿ ಅಲ್ಲಿಂದ ಹೊರಡಲು ಪ್ರೊಫೆಸರ್ ಅವಸರಿಸಿದರು. ಮಠ, ಅಥವಾ ಪಾಠಶಾಲೆಗಳಿರದಲ್ಲಿ ಅವರು ತಂಗುವುದೇ ಇಲ್ಲ.

ಅಂತೂ ಮಾಧವಿ ಮನೆ ತಲುಪಿದಾಗ ರಾತ್ರಿ ಹನ್ನೊಂದು ಗಂಟೆ.

ಟ್ರಿಪ್ಪಿನ ಫೋಟೋಗಳನ್ನು ನೋಡುತ್ತ ನಿಂತಿದ್ದ ರಮೇಶನಿಗೆ Lotus like faces in Sharavati with Kalavati ಎಂಬ ಅಡಿಟಿಪ್ಪಣಿಯೊಂದನ್ನು ನೋಡಿ ಮಜಾ ಅನಿಸಿತು. ನಗು ಬಂತು. ತಾವು ಮ್ಯಾಗಝಿನ್ ಸಲುವಾಗಿ ಪ್ರೊಫೆಸರ್ ಕುಲಕರ್ಣಿಯವರನ್ನು ಭೇಟಿ ಮಾಡಬೇಕಿರುವುದು ನೆನಪಾಗಿ ಅವರ ರೂಮಿನತ್ತ ಹೆಜ್ಜೆ ಹಾಕಿದರು.

ಬಾಗಿಲು ಮುಚ್ಚಿತ್ತು. ಒಳಗೆ ಒಂದೊಂದೇ ವಾಕ್ಯವನ್ನು ನಾಲ್ಕೈದು ಸಲ ತಿರುತಿರುಗಿ ಅನ್ನುವ ಪ್ರೊಫೆಸರರ ಧ್ವನಿ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಬಾಗಿಲು ಖಟ ಖಟ ಮಾಡಿದಾಗ ಬಾಗಿಲು ತೆರೆದ ಕುಲಕರ್ಣಿಯವರು ಸೌಜನ್ಯದಿಂದ ರಮೇಶರನ್ನು ಒಳಗೆ ಕರೆದರು. ಅವತ್ತೇ ಹಿಂದೀ ವಿಭಾಗದ ವ್ಯಾಲೆಡಿಕ್ಟರಿ ಫಂಕ್ಷನ್ ಇಟ್ಟುಕೊಂಡಿರುವುದಾಗಿಯೂ ಸ್ವಾಗತ ಭಾಷಣ, ಪರಿಚಯ, ಕೃತಜ್ಞತಾರ್ಪಣೆ ಎಲ್ಲ ತಾವೇ ವಹಿಸಿಕೊಂಡು ರಮೇಶರಿಗೆ ಯಾವ ತೊಂದರೆಯೂ ಇಲ್ಲದಂತೆ ಮಾಡಿರುವುದಾಗಿ ಹೇಳಿದರು. ರಮೇಶನಿಗೆ ಏನು ಮಾತಾಡಬೇಕೋ ತಿಳಿಯಲಿಲ್ಲ.

ಸ್ವಲ್ಪ ತಡೆದು ತಮ್ಮ ವಿಭಾಗದ ವಾರ್ಷಿಕ ಮ್ಯಾಗಝಿನ್‌ಗಾಗಿ ಲೇಖನಗಳನ್ನು ಇಬ್ಬರೂ ಸೇರಿಯೇ ಆಯ್ಕೆ ಮಾಡಬೇಕಿರುವುದನ್ನು ರಮೇಶರೇ ಜ್ಞಾಪಿಸಿದರು. ಪ್ರೊ. ಕುಲಕರ್ಣಿ ತಾವೇ ಆಯ್ದಿಟ್ಟಿರುವುದಾಗಿ ಹೇಳಿ ಎಲ್ಲ ಲೇಖನಗಳನ್ನು ಅವರೆದುರಿಟ್ಟರು. ರಮೇಶರು ಮಾತಿಲ್ಲದೆ ಪುಟ ತಿರುವತೊಡಗಿದರು. ಮೂರ್ನಾಲ್ಕು ಬೇರೆ ಬೇರೆ ಹುಡಿಗೆಯರ ಲೇಖನಗಳು ಪ್ರೊ. ಕುಲಕರ್ಣಿಯವರ ಅಕ್ಷರದಲ್ಲಿದ್ದವು. ಅದರಲ್ಲಿಯ ಮಿಸ್ ಸ್ಮಿತಾ ಭಾಗವತ ಹೆಸರಿನ ಲೇಖನ ಎತ್ತಿ 'ಸರ್ ಇದು' ಅಂದರು. 'ಅದು ಅದೇ. ಅವರೇ ಬರೆದದ್ದು—ಅಕ್ಷರ ಸರಿಯಿರಲಿಲ್ಲ. ನಾನೇ ಕಾಪಿ ಮಾಡಿಟ್ಟಿರುವೆ' ಅಂದರು. 'ನಿಮಗ್ಯಾಕೆ ತೊಂದರೇಂತ ಎಲ್ಲ ನಾನೇ ಮಾಡಿದೆ' ಎಂದೂ ವಿನಯದಿಂದ ಸೇರಿಸಿದರು. 'ಥ್ಯಾಂಕ್ಸ್' ಹೇಳಲೂ ಆಗದೇ ರಮೇಶ ಹೊರಬಂದರು.

ಮಿಸ್ ಭಾಗವತ ಎದುರಾದಳು. ಸ್ವಾಭಾವಿಕ ನಗುವಿನೊಂದಿಗೆ 'ನಮಸ್ಕಾರ ಸಾರ್' ಅಂದಳು 'ನೀವು ಮ್ಯಾಗಝಿನ್‌ಗೆ ಕೊಟ್ಟ ಆರ್ಟಿಕಲ್...' ಎಂದು ಏನೋ ಹೇಳಹೊರಟ ರಮೇಶರನ್ನು ತಡೆದ ಭಾಗವತ, 'ಯಾವ್ದು ಸರ್? ನಾನೇನೂ ಬರೆದು ಕೊಟ್ಟಿಲ್ಲಾ' ಅಂದಳು. ಕ್ಷಣ ತಡೆದು ರಮೇಶ, 'ಓಹ್ ನೀವಲ್ಲ, ನಾನೇ ಕನ್‌ಫ್ಯೂಜ್ ಮಾಡಿಕೊಂಡಿದ್ದೆ' ಅಂದು ಮುಂದೆ ಸಾಗಿದರು.

ಸಂಜೆಯ ಫಂಕ್ಷನ್ನಿನಲ್ಲಿ ಪ್ರೊಫೆಸರ್‌ರು ಅತಿಥಿಗಳಿಗೆ ತಮ್ಮ ಪರಿಚಯವನ್ನೂ ಮಾಡಿಸದಿರುವುದು ರಮೇಶರನ್ನು ಬಹಳ ನೋಯಿಸಿತು. ಕೊನೆಯವರೆಗೂ ಆಗಂತುಕರಂತೇ ಕುಳಿತು, ನಂತರದ ಚಹಾ–ಕಾರ್ಯಕ್ರಮಕ್ಕೂ ಹೋಗದೆ ತಮ್ಮ ಡಿಪಾರ್ಟ್‌ಮೆಂಟ್ ರೂಮಿಗೆ ಬಂದು ಕುಳಿತರು.

ಮುಕ್ಕಾಲು ಗಂಟೆಯ ನಂತರ ಅದೇ ರೂಮಿಗೆ ಬಂದ ಪ್ರೊಫೆಸರ್ ಕುಲಕರ್ಣಿ 'ಅರೇ, ನೀವಿಲ್ಲೇ ಇದ್ದೀರಲ್ಲಾ. ಚಹಾಕ್ಕ ಬರಬೇಕಿತ್ತು. ನಾನಂತೂ ಏನೂ ತುಗೊಳ್ಳುದಿಲ್ಲಾ. ನೀವು ಬಂದಿದ್ರ ಗೆಸ್ಟ್‌ಗೆ ಕಂಪನಿಯಾಗತಿತ್ತು' ಅಂದರು. 'ಇಲ್ಲಾ ಸರ್ ನನಗೆ ತಲೆನೋವಿತ್ತು. ಸುಮ್ಮನೆ ಬಂದು ಇಲ್ಲೆ ಕೂತುಬಿಟ್ಟೆ' ಎಂದರು ರಮೇಶ. 'ಹೌದಾ? ಈಗ ನಾನು ಹೋಗ್ತೇನಿ. ನನಗೆ ಇನ್ನೂ ಸ್ವಲ್ಪ ಕೆಲಸವಿದೆ' ಅನ್ನುತ್ತಾ ಪ್ರೊಫೆಸರ್ ಕುಲಕರ್ಣಿ ಹೊರನಡೆದರು.

ರಮೇಶ ಇನ್ನೂ ಬೇಸರಗೊಂಡು ರೂಮಿನಿಂದ ಹೊರಗೆ ಬಂದು ನಿಂತರು. ಕೋಟು, ಟೊಪ್ಪಿಗೆಗಳು ಸ್ಕೆಚ್ ಎದ್ದು ಕಾಣಿಸಿತು. ಆಕೃತಿ ಸಣ್ಣದಾಗಿ, ಸ್ಪಷ್ಟವೆನಿಸುತ್ತ ದೂರ ಹೋಯಿತು. ✡

"ಥಿಯೇಟರ್ ಅಂದರೇನು?" ಎಂಬ ಪ್ರಶ್ನೆಗೆ, "ಥಿಯೇಟರ್ ಅಂದರೆ ನಾನು" ಎಂದುತ್ತರಿಸಿದರು ಮರಾಠಿಯ ಹಿರಿಯ ನಾಟಕಕಾರರೊಬ್ಬರು. "ಅದು ಹೇಗೆ?" ಎಂದು ಮತ್ತೆ ಪ್ರಶ್ನೆ. "ಥಿಯೇಟರ್‌ನ ಸ್ಪೆಲ್ಲಿಂಗ್ ನೋಡಿ- The-Atre. ಆದ್ದರಿಂದ ನಾನು. ನನ್ನ ಹೆಸರಲ್ಲವೆ ಇದು?" ಎಂದು ಮರುಸವಾಲು ಹಾಕಿದರು ಅವರು. ಅವರು ಮರಾಠಿ ರಂಗಭೂಮಿಯ ಜೀವಾಳವಾಗಿದ್ದ ಆಚಾರ್ಯ ಅತ್ರೆ (Atre)ಯವರು.

ಮರಾಠಿ ಸಾಹಿತ್ಯದಲ್ಲಿ ಬೆಳವಡಿ ಮಲ್ಲಮ್ಮ

ದ. ಕೃ. ಜೋಶಿ

ಬೆಳವಡಿ ಮಲ್ಲಮ್ಮನ ಬಗ್ಗೆ ಒಂದು ಲೇಖನವು 'ಕಸ್ತೂರಿ'ಯ ಜುಲೈ ೧೯೬೯ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಶಿವಾಜಿಯೊಡನೆ ಸೆಣಸಿದ ವೀರ ಮಹಿಳೆಯಾದ ಮಲ್ಲಮ್ಮನ ಬಗ್ಗೆ ಮರಾಠಿ ಸಾಹಿತ್ಯದಲ್ಲಿಯೂ ಉಲ್ಲೇಖವಿದ್ದಿರಬಹುದಾದ್ದರಿಂದ ಆ ದಿಶೆಯಲ್ಲಿ ತುಸು ಪ್ರಯತ್ನಿಸಲಾಗಿ ಶಿವಾಜಿಯ ಬಗ್ಗೆ ಉದ್ಗ್ರಂಥಗಳನ್ನು ಬರೆದ ಅನೇಕ ಇತಿಹಾಸಕಾರರೂ, ಹಳೆಯ ಲೇಖನಗಳನ್ನು ಸಂಗ್ರಹಿಸಿ ಸಂಪಾದಿಸಿದ ಲೇಖಕರೂ ಬೆಳವಡಿಯ ಒಡತಿಯ ಬಗ್ಗೆ, ಅವಳ ಶೌರ್ಯದ ಬಗ್ಗೆ ಉಲ್ಲೇಖಿಸಿದ್ದಾರೆ. ಆದರೆ ಬಹುಶಃ ಅವರೆಲ್ಲರೂ ಬೆಳವಡಿಯ ಕಾದಾಟದ, ಬೆಳವಡಿಯ ಕೋಟೆಯ ಪತನದ ಮತ್ತು ಮಲ್ಲಮ್ಮನು ಸೋತು ಸೆರೆಯಾಳಾದ ವಿಷಯವನ್ನು ಛತ್ರಪತಿ ಶಿವಾಜಿಯ ಮಹತಿಯನ್ನು ಬೆಳೆಸಲು ಹೆಚ್ಚಾಗಿ ಉಪಯೋಗಿಸಿದ್ದಾರೆಯೇ ಹೊರತು ಮಲ್ಲಮ್ಮನ ಸಾಹಸಶೌರ್ಯಗಳನ್ನು ಅಷ್ಟೊಂದು ಶ್ಲಾಘಿಸಿಲ್ಲ. ಮರಾಠಿಯಲ್ಲಿ ಬಖರೂಪದಲ್ಲಿದ್ದ ಬೆಳವಡಿಯ ದೇಸಾಯಿತಿಯ ಕಥಾಕನಕದಲ್ಲಿ ಒಂದೆರಡು ಮಾತುಗಳು ಬೆಳವಡಿಯ ಮತ್ತು ಕರ್ನಾಟಕದ ಸ್ಥಳೀಯರಿಗೆ ಕೂಡ ಗೊತ್ತಿರಲಿಕ್ಕಿಲ್ಲ. 'ಮಲ್ಲಮ್ಮ' ಎಂಬ ನಾಮ ಮರಾಠಿಯಲ್ಲಿ ಉಲ್ಲೇಖಗೊಳ್ಳದೆ ಬೆಳವಡಿಯ ದೇಸಾಯಿತಿಯ ಹೆಸರನ್ನು 'ಸಾವಿತ್ರಿ' ಎಂದು ಉಲ್ಲೇಖಿಸಿದ್ದಾರೆ. (ಒಂದೆರಡು ಕಡೆಗಳಲ್ಲಿ ಮಾತ್ರ ಬೆಳವಡಿಗೆ 'ಒಲವುಡ' ಎಂದೂ ಅಲ್ಲಿಯ ರಾಣಿಯನ್ನು 'ಮಲವಾಯಿ' ಎಂದೂ ಉಲ್ಲೇಖಿಸಿದ್ದಾರೆ. ಮರಾಠಿಯಲ್ಲಿ 'ಶೆಟವಾಯಿ' ಎಂದು ಕನ್ನಡದಲ್ಲಿಯ 'ಶೆಟ್ಟೆವ್ವ'ನಿಗೆ ಅನ್ನುವಂತೆ 'ಮಲವಾಯಿ' ಬಹುಶಃ 'ಮಲ್ಲವ್ವ'ದ ಮರಾಠಿ ರೂಪವಾಗಿರಬಹುದು.) ಅಲ್ಲದೆ ಸೆರೆ ಸಿಕ್ಕ ಅವಳಿಗೆ ಅಪಮಾನಾಸ್ಪದ, ಮಾನಹಾನಿಯ ನಡೆವಳಿಕೆ ನೀಡಿದ ಸಖೋಜಿ ಗಾಯಕವಾಡ ಎಂಬ ಸರದಾರನ ಕಣ್ಣುಗಳನ್ನು ಶಿವಾಜಿಯು ಕೀಳಿಸಿದನೆಂಬ ವಿಷಯ ಬಹುಶಃ ಎಲ್ಲ ಕಡೆಗೂ ಬಂದಿದೆ. ಕರ್ನಾಟಕದಲ್ಲಿ ಪ್ರಚಲಿತವಿದ್ದ 'ಮಲ್ಲಮ್ಮ' ಎಂಬ ಹೆಸರು ಅನ್ವರ್ಥಕವಾಗಿರಬಹುದು ಇಲ್ಲವೆ ಅವಳಿಗೆ ಎರಡು ಹೆಸರುಗಳು ಇದ್ದಿರಲೂ ಬಹುದು. ಆದರೆ ಮಲ್ಲಮ್ಮ ಮತ್ತು ಸಾವಿತ್ರಿ ಇಬ್ಬರೂ ಒಂದೇ



ವ್ಯಕ್ತಿ ಎಂಬುದರಲ್ಲಿ ಸಂದೇಹವಿಲ್ಲ.

ಉಲ್ಲೇಖಗಳು

'ಶಿಲ್ಪ ಬೋಲತೆ ಕಥಾ' ಎಂಬ ಐತಿಹಾಸಿಕ ಕಥೆ ಜುಲೈ ೧೯೭೧ರ 'ಕಿರ್ಲೋಸ್ಕರ' (ಮರಾಠಿ) ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಮಲ್ಲಮ್ಮನ ಮೇಲಿನ ಅತ್ಯಾಚಾರದ ಅತಿರೇಕವನ್ನು ಅತಿ ಭೀಭತ್ಸವಾಗಿ ಬಣ್ಣಿಸಲಾಗಿದೆ. ಅದರ ಬಗ್ಗೆ ಕಲ್ಪನೆಯೇ ಇಲ್ಲದ ಕನ್ನಡಿಗರಿಗೆ ಬಗೆ ಕದಡಿದಂತಾಗುತ್ತದೆ. ಆ ಕತೆಯ ಅಂಶಗಳ ಸತ್ಯಾಸತ್ಯತೆಯನ್ನು ಅರಿಯುವ ಕುತೂಹಲದಲ್ಲಿ ಕೆಲವೊಂದು ಗ್ರಂಥಗಳನ್ನು ಪರಿಶೀಲಿಸಿದಾಗ ದೊರೆತ ಸಂದರ್ಭಗಳನ್ನು ಸಂಕ್ಷಿಪ್ತದಲ್ಲಿ ಕೆಳಗೆ ಕೊಡಲಾಗಿದೆ.

'ಶಿವಾಜಿ ಮತ್ತು ಶಿವಕಾಲೀನ' ಎಂಬ ಜದುನಾಥ ಸರಕಾರರ ಗ್ರಂಥದಲ್ಲಿ ಕೆಳಗಿನಂತೆ ಮಾಹಿತಿಯಿದೆ:

"ಇಸವಿ ಸನ್ ೧೬೭೮ ರ ಜನೇವರಿಯ ಮಧ್ಯದ ಸುಮಾರಿಗೆ ಶಿವಾಜಿಯ ಸೈನ್ಯ ಸಂಪಗಾವಿಗೆ ಬಂತು. ಈ ಪ್ರಾಂತದಲ್ಲಿ ಬೆಳವಡಿ ಎಂಬಲ್ಲಿ ಕೋಟೆಯಿತ್ತು. ಅಲ್ಲಿ ದೇಸಾಯಿತಿ ರಾಣಿಯಾಗಿದ್ದಳು. ಅವಳು ಶಿವಾಜಿಯ ದವಸಧಾನ್ಯಗಳನ್ನು ಹೊತ್ತುಕೊಂಡು ನಡೆದಿದ್ದ ಅನೇಕ ಎತ್ತುಗಳನ್ನು ಹಿಡಿಸಿಕೊಂಡು ಹೋದಳು. ಅದು ಶಿವಾಜಿ ರಾಜನಿಗೆ ತಿಳಿಯಿತು. ಬೆಳವಡಿಯ ಕೋಟೆಗೆ ಮುತ್ತಿಗೆ ಬಿತ್ತು. ಸಾವಿತ್ರಿಬಾಯಿಯು ಒಳ್ಳೆಯ ಶೌರ್ಯದಿಂದ ಕಾದಿ ಕಿಲ್ಲೆಯನ್ನು ಸಂರಕ್ಷಿಸಿದಳು. ಕೊನೆಗೆ ಅವಳು ಸೋತಳು. ಅವಳನ್ನು ಮರಾಠಿಗರು ಸೆರೆ ಹಿಡಿದರು. ಮತ್ತು ಸಖೂಜಿ ಗಾಯಕವಾಡ ಎಂಬವನು ಅವಳಿಗೆ ಅವಮಾನ ಮಾಡಿದನು ಮತ್ತು ಬಹಳ ಕಾಡಿದನು. ಈ ಸುದ್ದಿಯನ್ನು ಕೇಳಿದೊಡನೆಯೇ ಶಿವಾಜಿಯು ಸಖೂಜಿಯ ಕಣ್ಣು ಕಿತ್ತಿಸಿ ಅವನನ್ನು ಸಾಯುವವರೆಗೆ ಸೆರೆಯಲ್ಲಿಟ್ಟನು."

'ಸಭಾಸದ ಬಖರ್'ನಲ್ಲಿ ಕೆಳಗಿನಂತೆ ಉಲ್ಲೇಖವಿದೆ:

"ಮಹಾರಾಜರು ಏಕೋಜಿರಾಯರಿಗೆ ಪತ್ರ ಬರೆದರು. ಗದಗ ಪ್ರಾಂತದಲ್ಲಿ ಬಂದರು. ಅಲ್ಲಿ ಬೆಳವಡಿ ಎಂಬ ಗ್ರಾಮವಿತ್ತು. ಊರಿಗೆ ಕೋಟೆಯಿತ್ತು. ಕೋಟೆಯಲ್ಲಿ ಒಬ್ಬ ದಿಟ್ಟ ಮಹಿಳೆಯಿದ್ದಳು. ಅವಳು ಅಲ್ಲಿಯ ದೇಸಾಯಿತಿಯಾಗಿದ್ದಳು. ಅವಳ ಹೆಸರು ಸಾವಿತ್ರಿ. ಈ ಹೆಂಗಸು ಒಳ್ಳೆಯ

ಗಡಸುಗಾತಿಯಾಗಿದ್ದಳು. ಮಹಾರಾಜರ ಸೈನ್ಯ ಸಂಪಗಾವಿಯಲ್ಲಿ ತಳವೂರಿತ್ತು. ಮರಾಠೀ ಸೈನ್ಯ ದಲ್ಲಿಯ ಕೆಲವೊಂದು ಸಾಮಾನು ಸಾಗಿಸುವ ಎತ್ತುಗಳನ್ನೇ ಅವಳು ಓಡಿಸಿಕೊಂಡು ಹೋದಳು. ಮಹಾರಾಜರಿಗೆ ಇದು ತಿಳಿಯಿತು. ಅವರು ಕೂಡ ಲೇ ಬೆಳವಡಿಯ ಕೋಟೆಗೆ ಮುತ್ತಿಗೆ ಹಾಕಲು ಸೈನ್ಯ ಕಳಿಸಿದರು.ಮುತ್ತಿಗೆ ಬಿತ್ತು. ಅದೆಷ್ಟು ಚಿಕ್ಕ ಕೋಟೆ! ಮರಾಠರ ಸೈನ್ಯದ ಮುಂದೆ ಅವಳ ಬಲವೆಷ್ಟು! ಆದರೆ ಆ ಕೆಚ್ಚಿನ ಮಹಿಳೆ ಒಟ್ಟು ಸುಮಾರು ಒಂದು ತಿಂಗಳವರೆಗೆ ಆ ಮಣ್ಣು ಕೋಟೆಯನ್ನು ಸಂರಕ್ಷಿಸಿದಳು. ಮರಾಠಿ ಸೈನ್ಯಕ್ಕೆ ಮಾನ ಹೋಗುವ ಸ್ಥಿತಿ ಬಂದಿತ್ತು. ದೊಡ್ಡ ದೊಡ್ಡ ರಾಜ್ಯ ಮತ್ತು ಯುದ್ಧಗಳನ್ನು ಗೆದ್ದ ಮರಾಠಿ ಸೈನಿಕರಿಗೆ ಈ ಕೋಟೆಯ ಗೋಡೆಗಳು ಮತ್ತು ಒಡತಿ ಜಗ್ಗಲಿಲ್ಲ. ಒಂದು ತಿಂಗಳನಂತರ ಅದನ್ನು ಗೆದ್ದ ಮೇಲೆ ಸಖೋಜಿ ಗಾಯಕವಾಡ ಎಂಬ ಶಿವಾಜಿಯ ಸರದಾರನು ಸಾವಿತ್ರಿಯನ್ನು ಅತ್ಯಂತ ಹೇಯ ರೀತಿಯಿಂದ ನಡೆಸಿಕೊಂಡನು. ಅದು ತಿಳಿದ ಮೇಲೆ ಶಿವಾಜಿಯು ಸಖೋಜಿ ಗಾಯಕ ವಾಡನ ಕಣ್ಣು ಕಿತ್ತಿಸಿ ಅವನನ್ನು ಸೆರೆಯಲ್ಲಿಟ್ಟನು."

'ಮಗನನ್ನು ರಕ್ಷಿಸಿರಿ'

ಪುರಂದರೆ ಲಿಖಿತ 'ರಾಜಾಛತ್ರಪತಿ' ಇದರ ಉತ್ತರಾರ್ಧದಲ್ಲಿ ಕೆಳಗಿನಂತೆ ಬರೆಯಲಾಗಿದೆ:

"...ಕೊನೆಗೆ ಒಂದು ತಿಂಗಳ ನಂತರ ಕೋಟೆ ಮರಾಠರ ಕೈಸೇರಿತು. ಮತ್ತು ಆ ಹೆಂಗಸನ್ನು ಕೈದುಮಾಡಿ ಮಹಾರಾಜರ ಮುಂದೆ ತರಲಾ ಯಿತು. ಹೆಂಗಸು ಸೋತಿದ್ದಳು. ಆದರೆ ಮಹಾ ರಾಜರು ಅವಳಿಗೆ ಆದರ ನೀಡಿದರು. ಮತ್ತು ಅವಳನ್ನು ಮರ್ಯಾದೆಯಿಂದ ಮುಕ್ತಗೊಳಿಸಿದರು. ಈ ಸ್ತ್ರೀಗೆ ಒಬ್ಬ ಚಿಕ್ಕ ಬಾಲಕನು ಇದ್ದಿರಬಹುದು. ಅವನನ್ನು ಮಹಾರಾಜರ ತೊಡೆಯ ಮೇಲೆ ಕುಳ್ಳಿರಿಸಿ ಅವನಿಗೆ ಅಭಯ ಮತ್ತು ಸಂರಕ್ಷಣೆ ನೀಡಲು ಅವಳು ಕೇಳಿಕೊಂಡಿರಬಹುದು. ಮಹಾ ರಾಜರು ಅದನ್ನು ನೀಡಿರಲೂ ಬಹುದು. ಏತರ ಮೇಲಿಂದ? ಧಾರವಾಡ ಜಿಲ್ಲೆಯಲ್ಲಿ ಯಾದವಾಡ ಎಂಬ ಊರಿದೆ. ಆ ಊರಿನ ಶನಿ ಅಥವಾ ಮಾರುತಿ ಗುಡಿಯಲ್ಲಿ ಒಂದು ಚಿತ್ರಶಿಲ್ಪವನ್ನು ಕೂಡ್ರಿಸ ಲಾಗಿದೆ. ಚಿತ್ರದಲ್ಲಿ ಶಿವಾಜಿ ಮಹಾರಾಜರ ತೊಡೆಯ ಮೇಲೆ ಒಂದು ಮಗುವಿದೆ. ಮತ್ತು ಅವರ ಕೈಯಲ್ಲಿ ಒಂದು ಬಟ್ಟಲಿದೆ. ಮುಂದೆ ಈ ದೇಸಾಯಿತಿ ನಿಂತಿದ್ದಾಳೆ. ಹೀಗೆ ತೋರಿಸಿ ದ್ದಾರೆ. ಇದನ್ನು ಮತ್ತು ಇಂಥ ಅನೇಕ ಶಿಲ್ಪಗಳನ್ನು ದೇಸಾಯಿತಿ ತಯಾರಿಸಿ ಅನೇಕ ಸ್ಥಳಗಳಲ್ಲಿ ಕೂಡ್ರಿಸಿದ್ದಾಳೆ ಎಂದು ಆಖ್ಯಾಯಿಕೆಯಿದೆ..."

ಕೃ. ಅ. ಕೇಳುಸ್ಕರ ಲಿಖಿತ 'ಛತ್ರಪತಿ ಶಿವಾಜಿ ಮಹಾರಾಜ ಯಾಂಚೆ ಜೀವನ ಚರಿತ್ರ' ಎಂಬ ಗ್ರಂಥದಲ್ಲಿ ಈ ರೀತಿಯಿದೆ:

"...ಅಲ್ಲಿಂದ ಮುಂದೆ ಸಂಪಗಾವಿಯ ಕಡೆಗೆ ಮಹಾರಾಜರ ಸೈನ್ಯ ಮುನ್ನಡೆಯುತ್ತಿದ್ದಾಗ, ಮಾರ್ಗದಲ್ಲಿ ಒಂದು ಕೋಟೆ. ಕೋಟೆಯ ಒಡತಿ ಸಾವಿತ್ರಿಬಾಯಿ ದೇಸಾಯಿತಿ. ಅವಳು ಮಹಾರಾಜರ ಸಾಮಾನು ಸಾಗಿಸುವ ವಿಭಾಗಕ್ಕೆ ತೊಂದರೆಕೊಟ್ಟಳು. ಕೋಟೆಯನ್ನು ಮುತ್ತ ಲಾಯಿತು. ಸಾವಿತ್ರಿಬಾಯಿಯುಎದೆ ಗುಂದದೆ ಕಾದಿ ಕೋಟೆಯನ್ನು ೨೭ ದಿನಗಳವರೆಗೆ ಸಂರಕ್ಷಿಸಿ ದಳು. ಕೊನೆಗೆ ಸೋತು ಮರಾಠರ ಕೈಸೆರೆ ಯಾದಳು. ಮಹಾರಾಜರು ಸಖೋಜಿ ಗಾಯಕ ವಾಡ ಎಂಬ ಸರದಾರನು ಅವಳನ್ನು ಸೆರೆ ಹಿಡಿದು ಕೆಟ್ಟ ರೀತಿಯಿಂದ ವರ್ತಿಸಿದನೆಂಬ ಸುದ್ದಿ ತಿಳಿದು ಅವನ ಎರಡೂ ಕಣ್ಣುಗಳನ್ನು ಕಿತ್ತಿಸಿ ಅವನನ್ನು ಮಾನವಲಿ ಊರಿನಲ್ಲಿ ಸೆರೆಯಿಟ್ಟರು..."

'New History of Marathas' Vol. I ಎಂಬ ಗೋ. ಸ. ಸರದೇಸಾಯಿಯವರ ಗ್ರಂಥದಲ್ಲಿ ಇಂತಿದೆ:

"......While returning to his home-land towards the end of 1677, he (Shivaji) met a slight opposition at Belawadi from Desai and his heroic wife Savitribai. Belawadi was captured after a month's attack and the distressed and humiliated lady was taken under protection of Shivaji......"

(ಇ. ಸ. ೧೬೭೭ ರ ಅಂತ್ಯದ ಸುಮಾರಿಗೆ ಸ್ವದೇ

ಶಕ್ಕೆ ಹಿಂತಿರುಗುತ್ತಿರುವಾಗ ಬೆಳವಡಿಯೆಂಬಲ್ಲಿ ಅಲ್ಲಿಯ ದೇಸಾಯಿಯಿಂದ ಮತ್ತು ಅವನ ಶೂರ ಪತ್ನಿಯಿಂದ ಶಿವಾಜಿಗೆ ತುಸು ವಿರೋಧವಾಯಿತು. ಬೆಳವಡಿಯು ಒಂದು ತಿಂಗಳ ಮುತ್ತಿಗೆಯ ನಂತರ ವಶವಾಯಿತು. ದುಃಖಿತ ಮತ್ತು ತ್ರಸ್ತ ಳಾದ ಆ ಹೆಂಗಸಿಗೆ ಶಿವಾಜಿಯು ಸಂರಕ್ಷಣೆ ನೀಡಿದನು.)

ಬಿತ್ತು ಮುತ್ತಿಗೆ

ರಣಜಿತ್ ದೇಸಾಯಿಯವರು ತಮ್ಮ 'ಶ್ರೀಮಾನ್ ಯೋಗಿ' ಎಂಬ ಪುಸ್ತಕದಲ್ಲಿ ಮೇಲಿನ ಕಥಾನಕವನ್ನೇ ವಿಶದವಾಗಿ ಸುಲಲಿತ ಸಾಹಿತ್ಯ ಶೈಲಿಯಲ್ಲಿ ರೂಪಿಸಿದ್ದಾರೆ. ಅವರು ಅನೇಕ ಸಂದರ್ಭ ಗ್ರಂಥಗಳನ್ನು ಆಧರಿಸಿ ಬರೆದಿದ್ದುದರಿಂದ ಅವರ ಬರೆವಣಿಗೆಯನ್ನು ಪೂರ್ಣ ವಾಗಿ ಕೆಳಗಿನಂತೆ ಕನ್ನಡಕ್ಕೆ ಇಳಿಸಲಾಗಿದೆ:

"...ಛತ್ರಪತಿ ಶಿವಾಜಿ ಮಹಾರಾಜರ ಛಾವಣಿ ಗದಗ ಪ್ರಾಂತದಲ್ಲಿಯ ಸಂಪಗಾವಿಯ ಹತ್ತಿರ ವಿಶ್ರಮಿಸಿತ್ತು. ಚಳಿಗಾಲವಿದ್ದುದರಿಂದ ವಾತಾ ವರಣ ಪ್ರಸನ್ನವಾಗಿತ್ತು. ಮಹಾರಾಜರು ತಮ್ಮ ಡೇರೆಯ ಹೊರಗಡೆ ಆನಂದರಾವ್ ಅವರ ಜೊತೆಗೆ ನಿಂತುಕೊಂಡಿರುವಾಗ ಮಹಾರಾಜರ ಸರದಾರ ಸಖೂಜಿ ಗಾಯಕವಾಡ ಮುಜುರೆ ಮಾಡಲು ಬಂದನು. ಮಹಾರಾಜರು ಕೇಳಿದರು:

"ಏನು ಸಖೂಜಿ, ಛಾವಣಿಯ ವ್ಯವಸ್ಥೆ ಹೇಗಿದೆ?"

"ಎಲ್ಲ ಚೆನ್ನಾಗಿದೆ ಮಹಾರಾಜ. ಆದರೆ ಒಂದೇ ತಕರಾರು ಬಂದಿದೆ."

"ಎಂಥ ತಕರಾರು?"

"ನಿನ್ನೆ ನಮ್ಮ ಸಾಮಾನು ಒಯ್ಯುವ ಎತ್ತು ಗಳು ಮುಂದಿನ ಮುಕ್ಕಾಮಿಗಾಗಿ ಹೋಗು ತ್ತಿರುವಾಗ ಬೆಳವಡಿಯ ಕೋಟೆಯ ಪಾಟೀಲನು ಅವುಗಳನ್ನು ತಡೆದನು ಮತ್ತು ಸಾಮಾನು ಸಹಿತ ಅವುಗಳನ್ನು ಓಡಿಸಿಕೊಂಡು ಹೋದನು."

ಮಹಾರಾಜರು ತುಸು ವಿಚಾರಮಗ್ನರಾ ಗಿದ್ದು ನಂತರ ನುಡಿದರು:

"ಸಖೂಜಿರಾವ್, ಏನೋ ತಪ್ಪು ತಿಳುವಳಿಕೆ ಯಾಗಿದೆ. ಬೆಳವಡಿಯೊಂದು ತೀರ ಚಿಕ್ಕ ಕೋಟೆ. ಅವರು ಇಷ್ಟು ಧೈರ್ಯ ಮಾಡಲಾರರು. ಪಾಟೀ ಲರಿಗೆ ತಿಳಿಸಿ ಹೇಳಿ ಎತ್ತುಗಳನ್ನು ಬಿಟ್ಟು ಬಿಡಲು ಆಜ್ಞೆ ಮಾಡಿರಿ."

ಮಹಾರಾಜರ ಆಜ್ಞೆಯನ್ನು ಪಡೆದು ಸಖೂಜಿ ರಾವ್ ಹೊರಟು ಹೋದನು. ಬೆಳವಡಿ ಸಮ ತಟ್ಟಾದ ಭೂಮಿಯ ಮೇಲೆ ನೆಲೆಸಿದ ನಾಲ್ಕೂ ನಿಟ್ಟಿಗೆ ಮಣ್ಣಿನ ಗೋಡೆಗಳುಳ್ಳ ಒಂದು ಸಣ್ಣ ಕೋಟೆ. ಆದರೆ ಆ ಕೋಟೆಯ ಪಾಟೀಲನು ಬಹಳ ಧೈರ್ಯಶಾಲಿಯಾಗಿದ್ದನು. ಸಖೂಜಿರಾವ್ ಗಾಯಕವಾಡನಿಂದ ಸಂದೇಶ ಅವನಿಗೆ ತಿಳಿದಾಗ ಅವನು ಒಂದೇ ಮಾತನ್ನಾ ಡಿದನು:

"ಧೈರ್ಯವಿದ್ದರೆ. ಶಕ್ತಿಯಿದ್ದರೆ ಎತ್ತುಗಳನ್ನು ಬಿಡಿಸಿಕೊಂಡು ಹೋಗಿರಿ."

ಮಹಾರಾಜರಿಗೆ ಪಾಟೀಲನ ಪ್ರತ್ಯುತ್ತರ ತಿಳಿಯಿತು. ಅವರು ಸಖೂಜಿಗೆ ಆಜ್ಞೆಯಿತ್ತರು.

"ಪಾಟೀಲನು ತನ್ನ ಸೊಕ್ಕಿನಲ್ಲಿಯೇ ಇದ್ದಾ ನೆಂದು ಕಾಣುತ್ತದೆ. ಸಾಮೋಪಚಾರ ಅವನಿಗೆ ಸಮ್ಮತಿಯಿಲ್ಲವೆಂದು ತೋರುತ್ತದೆ. ಸಖೂಜಿ ರಾವ್ ನೀವು ಸೈನ್ಯ ತೆಗೆದುಕೊಂಡು ಹೋಗಿ ಬೆಳವಡಿಯನ್ನು ಗೆದ್ದು ಎತ್ತುಗಳನ್ನು ವಶಪಡಿಸಿ ಕೊಳ್ಳಿರಿ. ಅಲ್ಲಿಯವರೆಗೂ ನಮ್ಮ ಬೀಡು ಇಲ್ಲಿಯೇ ತಳವೂರಿ ನಿಲ್ಲುವದು."

ಕೈಸೇರಲಿಲ್ಲ

ಸಖೂಜಿರಾವ್ ತನ್ನ ಸೈನಿಕರೊಂದಿಗೆ ಬೆಳವಡಿ ಯನ್ನು ಸುತ್ತುವರೆದನು. ನಾಲ್ಕೂ ಕಡೆಗೆ ಸೈನ್ಯ ಕೇಂದ್ರಗಳನ್ನು ನಿರ್ಮಿಸಿದನು. ಆಗಾಗ್ಗೆ ಕದನ ತೊಡಗಿತು. ಆದರೆ ಮರಾಠಾ ಸೈನ್ಯ ಬೆಳವಡಿಯ ಕೋಟೆಯ ಗೋಡೆಯ ವರೆಗೆ ಹೋಗುವದು ಸಾಧ್ಯವಾಗದಾಯಿತು. ಕೋಟೆಯನ್ನು ಸಮೀ ಪಿಸುವ ಪ್ರಯತ್ನಗಳು ಮಧ್ಯದಲ್ಲಿಯೇ ವಿಫಲ ಯುತ್ತಿದ್ದವು. ಕರ್ನಾಟಕದ ಕಾಲಾಳುಗಳು ಯುದ್ಧದಲ್ಲಿ ನುರಿತವರೆಂಬ ಅನುಭವ ಸಖೂಜಿಗೆ ಬರತೊಡಗಿತು. ದಿವಸಗಳುರುಳಿದವು. ಆದರೆ ಕೋಟೆ ಕೈಸೇರುವ ಲಕ್ಷಣ ಕಾಣಲಿಲ್ಲ. ಮಹಾ ರಾಜರ ಛಾವಣಿಯಿಂದ ಕೋಟೆ ಕಾಣುತ್ತಿತ್ತು. ಎಲ್ಲ ಸೈನ್ಯ ಕೋಟೆಯ ಕಡೆಗೆ ದಿಟ್ಟಿ ನೆಟ್ಟಿ

ಮಹಾರಾಜರ ಮನಃಕ್ಷೋಭೆ ಬೆಳೆಯುತ್ತ ಹೋಯಿತು. ಅವರು ವಿಚಾರಮಗ್ನರಾಗಿ ಕುಳಿತಿರುವಾಗಲೇ ಸಖೋಜಿರಾವ ಬಂದ ಸುದ್ದಿ ಬಂತು. ಸಖೋಜಿರಾವ್ ಸಮ್ಮುಖದಲ್ಲಿ ಬಂದೊಡನೆಯೇ ಮಹಾರಾಜರು ಪ್ರಶ್ನಿಸಿದರು:

"ಏನು ಸಖೋಜಿರಾವ್ ಕೋಟೆ ಕೈಸೇರಿತೆ?"

ಸಖೋಜಿಯ ಮುಖ ಇಳಿಯಿತು. ಹತಾಶನಾಗಿ ಅವನು ಹೇಳಿದನು.

"ಕೋಟೆಯನ್ನು ಎಲ್ಲ ಕಡೆಯಿಂದಲೂ ಸುತ್ತುವರಿದಿದ್ದೇವೆ. ಕೋಟೆ ಬಹಳ ದಿನ ತಾಳಲಾರದು ಎನಿಸುತ್ತಿದೆ."

ಮಹಾರಾಜರು ನಸುನಕ್ಕರು.

ಶಭಾಸ್, ಚೆನ್ನಾಗಿದೆ ಸಖೋಜಿರಾವ್, ಯಾರಾದರೂ ಜ್ಯೋತಿಷಿ ಭೆಟ್ಟಿಯಾಗಿದ್ದರೆ?"

"ಹೌದು ಅವರೂ ಅದನ್ನೇ ಹೇಳಿದರು."

ಮಹಾರಾಜರ ದೃಷ್ಟಿ ಬದಿಯಲ್ಲಿಯೇ ನಿಂತುಕೊಂಡಿದ್ದ ಆನಂದರಾವ್ ಅವರ ಕಡೆಗೆ ಹೊರಳಿತು. ಆನಂದರಾವ್ ಎಂದರೆ ಸೇನೆಯ ಎರಡನೇ ಸೇನಾಪತಿಯೇ ಆಗಿದ್ದರು.

"ಆನಂದರಾಯರೇ, ನಮ್ಮ ಸಖೋಜಿಯನ್ನು ಎಷ್ಟು ಹೊಗಳಿದರೂ ಸಾಲದು. ಜ್ಯೋತಿಷಿಯನ್ನು ಕೇಳುವಷ್ಟು ಅವರ ಶೌರ್ಯ ಉನ್ನತಿಗೇರಿದೆ! ಇಷ್ಟು ದಕ್ಷಿಣ ದಿಗ್ವಿಜಯ ಮಾಡಿ ನಾವು ಬಂದೆವು. ಆದರೆ ಬೆಳವಡಿಯ ಈ ಪುಟ್ಟ ಕೋಟೆಯನ್ನು ವಶಪಡಿಸಿಕೊಳ್ಳದಾದೆವು. ಬೆಳವಡಿಯ ಪಾಟೀಲನು ಈ ಉಪದ್ವ್ಯಾಪ ಮಾಡಿ[illegible] ನಮ್ಮ ಲಕ್ಷ್ಯ ಆ ಕೋಟೆಯ ಕಡೆಗೇ [illegible]. ಸಖೋಜಿರಾವ್, ನಾವು ಈ [illegible] ವೇಳೆ ಹಾಳು ಮಾಡುವದು [illegible]."

"ಮಹಾರಾಜರೇ, ತಮ್ಮ ಒಂಟೆಯ ಮೇಲಿನ ತೋಫಖಾನೆಯನ್ನು ಉಪಯೋಗಿಸುವ ಆಜ್ಞೆ ಮಾಡಬೇಕು. ಒಂದೇ ದಿವಸದಲ್ಲಿ ಕೋಟೆಯನ್ನು ನೆಲಸಮ ಮಾಡುವೆವು."

"ಅದೆಷ್ಟು ಹೆಸರು ಗಳಿಸುವಿರಿ! ಒಂದು ಸಾಮಾನ್ಯ ಕೋಟೆಗೆ ಅಷ್ಟು ದೊಡ್ಡ ತೋಫ[illegible]! ನಮ್ಮ ಸೈನ್ಯವೇನು ಕಡಿಮೆ ಇದೆಯೇ? [illegible] ಕೈಯಿಂದ ಈ ಕಾರ್ಯವಾಗದಿದ್ದರೆ ಹೇಳಿರಿ. ನಾವು ಬೇರೆಯವರನ್ನು ಕಳುಹಿಸಿಕೊಡುತ್ತೇವೆ."

ಮರಳಿ ಯತ್ನ

ಮಹಾರಾಜರನ್ನು ಬೀಳ್ಕೊಂಡು ಸಖೋಜಿ ಹೊರಗೆ ಬಂದನು. ತನ್ನ ಸೈನಿಕರೊಂದಿಗೆ ಕೋಟೆಯ ಬಳಿಸಾರಲು ಯತ್ನಿಸತೊಡಗಿದನು. ಕಾದಾಟಗಳು ಸುರುವಾದವು. ಒಂದು ದಿನ ಕೋಟೆಯ ಬಾಗಿಲ ಬಳಿಯಲ್ಲಿ ನಡೆದಿದ್ದ ಘನಘೋರ ಯುದ್ಧದಲ್ಲಿ ಸೋಲಾಗುತ್ತಿದೆಯೆಂದು ಕಂಡು ಬಂದೊಡನೆಯೇ ಕೋಟೆಯ ಪಾಟೀಲನು ತ್ವೇಷದಿಂದ ಹೊರಬಿದ್ದನು. ನಿಕರವಾದ ಯುದ್ಧವಾಯಿತು. ಅದರಲ್ಲಿ ಪಾಟೀಲನು ವೀರಸ್ವರ್ಗವನ್ನಪ್ಪಿದನು. ಅವನನ್ನು ಎತ್ತಿಕೊಂಡು ಅವನ ಸೈನಿಕರು ಕೋಟೆಯನ್ನು ಸೇರಿದರು.

ಪಾಟೀಲನು ಮಡಿದ ಸುದ್ದಿ ತಿಳಿದು ಸಖೋಜಿಗೆ ಆನಂದವಾಯಿತು. ಕೋಟೆ ಕೈವಶವಾಗುವದಿನ್ನೇನು ತಡ ಎಂದು ಮರುದಿವಸ ಕೋಟೆಯ ಮೇಲೆ ಮತ್ತೆ ದಾಳಿ ಮಾಡಿದನು. ಆದರೆ ಅಲ್ಲಿಯ ದೃಶ್ಯ ನೋಡಿ ಅವನು ಆಶ್ಚರ್ಯಚಕಿತನಾದನು. ಪಾಟೀಲನ ನಂತರ ಪತಿಯ ಕಾರ್ಯವನ್ನು ನಿರ್ವಹಿಸಲು ಸಾವಿತ್ರಿದೇವಿಯು ಕೋಟೆಯ ಮೇಲೆ ಸಿದ್ಧಳಾಗಿ ನಿಂತಿದ್ದಳು. ಒಳ್ಳೆಯ ಶೌರ್ಯದಿಂದ ಕಾದಿ ಕೋಟೆಯನ್ನು ಸಂರಕ್ಷಿಸುತ್ತಿದ್ದಳು. ಬರಿಯ ಕಾಲಾಳುಗಳಿಂದ ಕೋಟೆಯ ಪತನವಾಗುವದು ಅಸಾಧ್ಯವೆಂದು ತೋರತೊಡಗಿತು. ದಿವಸಗಳು ಮಾತ್ರ ಒಂದರ ಹಿಂದೊಂದು ಉರುಳತೊಡಗಿದವು. ಒಂದರ ಮೇಲೊಂದರಂತೆ ೨೧ ದಿನಗಳು ಕಳೆದವು. ಸಾವಿತ್ರಿದೇವಿಯು ಕೋಟೆಯನ್ನು ರಕ್ಷಿಸುವ ಕೆಲಸ ದಕ್ಷತೆಯಿಂದ ನಡೆದೇ ಇತ್ತು. ಇದು ಮಹಾರಾಜರಿಗೆ ತಿಳಿದಾಗ ಅವರು ಉದ್ಗರಿಸಿದರು.

"ಧನ್ಯ, ಧನ್ಯ! ಆ ಶೂರ ಸ್ತ್ರೀಯು ಧನ್ಯ! ಪತಿಯ ಮರಣದ ನಂತರ ಸಹ ತನ್ನ ದುಃಖ ಮರೆತು ತನ್ನ ಕೋಟೆಯ ರಕ್ಷಣೆಯಲ್ಲಿ ತೊಡಗಿದ್ದಾಳೆ! ಅವಳ ಶೌರ್ಯಕ್ಕೆ ಸಾಟಿಯಿಲ್ಲ. ನಾವು ಇನ್ನೂ ೨೧ ದಿವಸ ದಾರಿ ನೋಡೋಣ. ಇಲ್ಲವೆ ಹೋದರೆ ನಮಗೆ ಸ್ವತಃ ಈ [illegible]

ಭಾಗ ತೆಗೆದುಕೊಳ್ಳಬೇಕಾಗುತ್ತದೆ. ಅದರ ಹೊರತು ಇನ್ನೊಂದು ಮಾರ್ಗವಿಲ್ಲ."

ಮಹಾರಾಜರ ನಿರ್ಧಾರ ಸಖೋಜಿಗೆ ತಿಳಿಯಿತು. ಅವನು ತ್ವೇಷದಿಂದ ಅವಡುಗಚ್ಚಿದನು.

ಮರುದಿವಸ ಛಾವಣಿಯ ಮೇಲೆ ದಟ್ಟವಾದ ಮಂಜು ಮುಸುಕಿತ್ತು. ರಾತ್ರಿಯೆಲ್ಲ ಉರಿಯುತ್ತಿದ್ದ ದೀವಟಿಗೆಗಳನ್ನು ಮುಂಜಾನೆ ನಂದಿಸುವದು ನಡೆದಿತ್ತು. ಸೂರ್ಯೋದಯಕ್ಕೇನೆ ಪೂಜೆ ಮುಗಿಸಿ ಮಹಾರಾಜರು ಡೇರೆಯ ಹೊರಗಡೆ ಬಂದರು. ಅವರ ದೃಷ್ಟಿ ಬೆಳವಡಿಯ ಕೋಟೆಯ ಕಡೆಗೆ ಹೋಯಿತು. ಮಹಾರಾಜರು ಆನಂದರಾವ್ ಅವರನ್ನು ಪ್ರಶ್ನಿಸಿದರು;

"ಆನಂದರಾವ್, ಸಖೋಜಿರಾವ್ ಬರಲಿಲ್ಲವೆ?"

"ಮಹಾರಾಜ್, ಈ ಹೊತ್ತು ಬೆಳಗು ಮುಂಜಾನೆಯಲ್ಲಿಯೇ ಸಖೋಜಿರಾವ್ ತನ್ನ ಸೈನಿಕರೊಂದಿಗೆ ಕೋಟೆಯ ಮೇಲೆ ದಾಳಿ ಇಡಲು ಹೋಗಿದ್ದಾನೆ."

"ನಿನ್ನೆಯ ನಮ್ಮ ಮಾತುಗಳನ್ನು ಅವನು ಬಹಳ ಹಚ್ಚಿಕೊಂಡಂತೆ ಕಾಣುತ್ತದೆ."

"ಸಖೋಜಿರಾವ್ ಕೆಲಸದಲ್ಲಿ ಹೆಚ್ಚು ಕಡಿಮೆ ಮಾಡುವವರಲ್ಲ" ಎಂಬ ವಿಶ್ವಾಸವನ್ನು ಆನಂದರಾಯರು ವ್ಯಕ್ತಪಡಿಸಿದರು.

ಸಾಧ್ಯವೆ?

"ನಾವೆಲ್ಲಿ ಹಾಗೆನ್ನುತ್ತೇವೆ. ಆದರೆ ಈ ಇಕ್ಕಟ್ಟೇ ಬೇರೆ. ಇಷ್ಟು ದೊಡ್ಡ ಸೈನ್ಯ ಕೈಯಲ್ಲಿದ್ದಾಗಲೂ ಕೋಟೆಯ ಮೇಲೆ ಏರಿ ಹೋಗಲು ಬರಲೊಲ್ಲದು. ಒಂದು ಚಿಕ್ಕ ಕೋಟೆಯ ಮೇಲೆ ನಾವು ತೋಫಖಾನೆ ಉಪಯೋಗಿಸಿದರೆ ಅಪಕೀರ್ತಿ ತಪ್ಪದು. ಹಿಡಿದರೆ ಕಡಿಯುವದು, ಬಿಟ್ಟರೆ ಓಡುವದು ಹೀಗಾಗಿದೆ. ಇದರಲ್ಲಿ ಸಖೋಜಿಯವರ ದೋಷವಿಲ್ಲ. ಅವರ ಹತ್ತಿರ ಸಾಹಸವಿದೆ, ಶೌರ್ಯವಿದೆ. ಆದರೆ..."

"ಆದರೆ ಏನು ಮಹಾರಾಜ?"

"ಯುಕ್ತಿಯಿಲ್ಲ. ಅದರ ಬದಲು ಕ್ರೋಧವಿದೆ. ಕ್ರೋಧದಿಂದ ಬುದ್ಧಿಯ ಮೇಲಿನ ನಿಯಂತ್ರಣ ತಪ್ಪುತ್ತದೆ. ಉಪಾಯ ಹೊಳೆಯುವದಿಲ್ಲ. ಇಲ್ಲದಿದ್ದರೆ ಈ ಕೋಟೆ ಕೈವಶವಾಗಲು ಇಷ್ಟು ವಿಲಂಬವಾಗುತ್ತಿರಲಿಲ್ಲ."

ಒಮ್ಮೆಲೆ ತುತಊರಿಯ ಧ್ವನಿ ಎಲ್ಲ ಪ್ರದೇಶದಲ್ಲಿ ನಿನಾದಿಸಿತು. ಎಲ್ಲರೂ ಧ್ವನಿಯತ್ತ ಲಕ್ಷ್ಯ ನಿಟ್ಟಿಸಿದರು. ಕೋಟೆಯ ಕಡೆಯಿಂದಲೇ ಧ್ವನಿ ಬರುತ್ತಿತ್ತು. ಮಹಾರಾಜರ [illegible] ನಗೆ ಮೂಡಿತು. ಅವರು ಕೈ ಜೋಡಿಸಿ ಉದ್ಗರಿಸಿದರು. "ಜಗದಂಬೆಯ ಕೃಪೆ! ಆನಂದರಾಯರೇ, ಸಖೋಜಿ ವಿಜಯಿಯಾದರು. ನಡೆಯಿರಿ ವಿಜಯೀ ವೀರರ ಸ್ವಾಗತಕ್ಕೆ ನಾವೇ ತುಸು ಮುಂದೆ ಹೋಗೋಣ."

ಗಡಿಬಿಡಿಯಿಂದ ಕುದುರೆಗಳನ್ನು ತರಲಾಯಿತು. ಜಾಧವರಾವ್, ನಿಂಬಾಳಕರ್, ಆನಂದರಾವ್ ಮುಂತಾದವರು ಕೂಡಲೇ ಕುದುರೆಗಳೊಂದಿಗೆ ಸಿದ್ಧರಾಗಿ ಡೇರೆಯ ಹೊರಗಡೆ ಬಂದರು. ಮಹಾರಾಜರೂ [illegible] ಹೊರಗಡೆ ಬಂದರು. ಎಲ್ಲರತ್ತ ನೋಡಿದರು. ಒಂದು ಅಶ್ವಪಥವೇ ಸಿದ್ಧವಾಗಿತ್ತು. ಮಹಾರಾಜರು ಕುದುರೆಯ ಮೇಲೆ [illegible] ಕರಿಯ ಕುದುರೆ ಒಳ್ಳೆಯ ಡೌಲಿನಿಂದ ಹೆಜ್ಜೆ ಕಿತ್ತಿತು. ಹಿಂದಿನಿಂದ ಸರದಾರರು ನಡೆದರು. ಅವರ ಹಿಂದೆ ಅಶ್ವದಳ ನಡೆಯಿತು. ಮಹಾರಾಜರು ಕೋಟೆಯನ್ನು ಸಮೀಪಿಸಿದರು. ಮುಖ್ಯ ದ್ವಾರದ ಮೇಲಿನ ನಗಾರಿ ಬಾರಿಸುತ್ತಿತ್ತು. ಮಹಾರಾಜರು ಕುದುರೆಯಿಂದ ಇಳಿದರು. ಎಷ್ಟೋ ಗಾಯಾಳುಗಳು ಅಲ್ಲಿದ್ದರು. ವೀರಸ್ವರ್ಗವನ್ನೈದಿದ ಸೈನಿಕರ ಮೇಲೆ ಉತ್ತರೀಗಳನ್ನು ಹೊದಿಸಲಾಗಿತ್ತು. ಮಹಾರಾಜರು ಗಂಭೀರರಾದರು. ಸ್ವಾಗತಕ್ಕಾಗಿ ಶ್ರೀಪತರಾವ್ ನಾಯಿಕ ಬಂದದ್ದನ್ನು ನೋಡಿ ಮಹಾರಾಜರು ಸ್ತಂಭಿತರಾದರು. ಶ್ರೀಪತರಾಯರ ಮುಜುರೆಯನ್ನು ಸ್ವೀಕರಿಸಿ ಮಹಾರಾಜರು ಪ್ರಶ್ನಿಸಿದರು:

"ಶ್ರೀಪತರಾವ್, ಸಖೋಜಿಯೆಲ್ಲಿ?"

ಸೆರೆಹಿಡಿಯಹೋದ

ಮಹಾರಾಜರ ಚಿಂತೆಯನ್ನು ಊಹಿಸಿ ಶ್ರೀಪತರಾವ್ ನುಡಿದರು:

"ಕೋಟೆ ಬಲು ಪ್ರಯಾಸದಿಂದ [illegible]

... ಬದರೆ ಈ ಅನರ್ಥಕ್ಕೆ ಕಾರಣೀಭೂತ ಳಾದ ಸಾವಿತ್ರಿದೇವಿ ಮಾತ್ರ ಮಂಜಿನ ಮರೆಯಲ್ಲಿ ನಮ್ಮ ಕೈಯಿಂದ ತಪ್ಪಿಸಿಕೊಂಡಳು. ಅವಳನ್ನು ಸೆರೆಹಿಡಿಯಲು ಸಖೂಜಿರಾವ್ ಸ್ವತಃ ಹೋಗಿದ್ದಾರೆ."

ಮಹಾರಾಜರು ನಿಟ್ಟುಸಿರು ಬಿಟ್ಟು ಆನಂದರಾಯರನ್ನು ಉದ್ದೇಶಿಸಿ ನುಡಿದರು:

"ಏನು ಆನಂದರಾಯರೇ, ನಾನು ಹೇಳಿದ್ದು ನಿಜವಾಯಿತು, ಅಲ್ಲವೆ? ಕೋಟೆ ಕೈಸೇರಿದರೂ ಸಖೂಜಿ ನಿಲ್ಲಲಿಲ್ಲ. ಅವರ ಸಿಟ್ಟು ಅಷ್ಟರಿಂದಲೇ ಶಾಂತವಾಗಿದ್ದರೆ ಆಶ್ಚರ್ಯವೆ! ನಾವು ಅವರ ಸ್ವಾಗತಕ್ಕೆ ಇಲ್ಲಿಯವರೆಗೆ ಬಂದೆವು. ಆದರೆ ಅವರ ಪತ್ತೆಯೇ ಇಲ್ಲ! ಶ್ರೀಪತರಾಯರೇ, ಯುದ್ಧದಲ್ಲಿ ಬಹಳ ಹಾನಿಯಾಯಿತೆ?"

"೫-೬ ಜನರು ಮಡಿದರು. ಗಾಯಗೊಂಡವರ ಸಂಖ್ಯೆ ಹೆಚ್ಚು." ಶ್ರೀಪತರಾಯರು ನಮ್ರತೆಯಿಂದ ನುಡಿದರು.

ನಿಟ್ಟುಸಿರು ಬಿಟ್ಟು ಮಹಾರಾಜರು ನುಡಿದರು.

"ತೀರಿಕೊಂಡವರಿಗೆ ಯೋಗ್ಯೋಚಿತ ಮರ್ಯಾದೆ ಮಾಡಿರಿ. ಗಾಯಗೊಂಡವರ ಕಡೆಗೆ ಲಕ್ಷ್ಯಗೊಡಿರಿ. ನಾವು ಹೊರಡುತ್ತೇವೆ."

"ಮಹಾರಾಜರೇ, ತಾವು ಕೋಟೆಯಲ್ಲಿ ಬರಮಾಡಬೇಕು."

"ಅವಶ್ಯ ಬರುವೆವು. ಆದರೆ ಯಾರು ಈ ಕೋಟೆಯನ್ನು ಪರಿಶ್ರಮದಿಂದ ಗೆದ್ದರೋ, ಆ ಸಖೂಜಿರಾವ್ ಕೋಟೆಯಲ್ಲಿ ಇಲ್ಲ. ನಾವು ಹೇಗೆ ಒಳಬರಬೇಕು? ಅದು ಚೆನ್ನಾಗಿ ಕಾಣದು. ಸಖೂಜಿ ಬಂದ ಮೇಲೆ ಅವರಿಗೆ ಹೇಳಿರಿ. ನಾವು ಅವರ ಭೆಟ್ಟಿಗಾಗಿ ಇಲ್ಲಿಯ ವರೆಗೆ ಬಂದಿದ್ದೆವು. ಅವರ ಭೆಟ್ಟಿಗಾಗಿ ನಾವು ಉತ್ಸುಕರಾಗಿದ್ದೇವೆ ಎಂದು."

ತದನಂತರ ೨-೩ ದಿವಸಗಳುರುಳಿದರೂ ಸಖೂಜಿಯು ಪತ್ತೆಯಿಲ್ಲ. ಮಹಾರಾಜರು ಚಿಂತಾ ಮಗ್ನರಾದರು. ತಳ ಕಿತ್ತುವ ಗಡಿಬಿಡಿ ಸುರುವಾಯಿತು. ಮಹಾರಾಜರು ಸಖೂಜಿಯ ದಾರಿ ನೋಡುತ್ತಿದ್ದರು. ಅವನನ್ನು ಶೋಧಿಸಲು ಕೆಲವು ಸೈನಿಕರನ್ನು ಕಳಿಸಲಾಯಿತು.

ಮಹಾರಾಜರು ಶಾಮಿಯಾನಾದಲ್ಲಿ ಆಸನದಲ್ಲಿ ಮಂಡಿಸಿದಾಗ ಎಲ್ಲ ಸರದಾರರೂ ಕಾರ್ಯದರ್ಶಿಗಳೂ ಅಲ್ಲಿ ಹಾಜರಾದರು. ಮಹಾರಾಜರು ಮುಂದಿನ ಯೋಜನೆ ವಿವರಿಸುತ್ತಿದ್ದರು. ಅಷ್ಟರಲ್ಲಿಯೇ ಗುಪ್ತಚಾರನೊಬ್ಬನು ಒಳಗೆ ಬಂದು ಮುಜುರೆ ಮಾಡಿ ನುಡಿದನು.

"ಮಹಾರಾಜರೇ ಸಖೂಜಿ ಬಂದರು."

"ಸಖೂಜೀ ಬಂದರೇ?" ಎನ್ನುತ್ತ ಶಿವಾಜಿ ಮಹಾರಾಜರು ಆಸನದಿಂದ ಮೇಲೆದ್ದರು. ಅದೇ ವೇಳೆಯಲ್ಲಿ ಶಾಮಿಯಾನಾದ ಪ್ರವೇಶದ್ವಾರದಿಂದ ಸಖೂಜಿರಾವ್ ಪ್ರವೇಶಿಸುವಂಥವರಾದರು. ಮಹಾರಾಜರು ಮುಂದುವರೆದರು. ಸಖೂಜಿಯು ನಮಸ್ಕರಿಸಲು ಬಾಗುತ್ತಿದ್ದಂತೆಯೇ ಅವನನ್ನು ಬರಸೆಳೆದು ಬಿಗಿದಪ್ಪಿದರು.

ಹೆಡಮುರಿಗೆ

"ಸಖೋಜಿರಾವ್, ಧನ್ಯರಿದ್ದೀರಿ! ನಾವು ಇಲ್ಲಿ ನಿಮ್ಮ ಸ್ವಾಗತಕ್ಕಾಗಿ ಆತುರರಾಗಿದ್ದೇವೆ. ನೀವು ಮಾತ್ರ ಮಾಯ!" ಮಹಾರಾಜರು ತಮ್ಮ ಎಡಗೈಯನ್ನು ಸಖೋಜಿಯ ಎಡ ಹೆಗಲ ಮೇಲೆ ಇರಿಸುತ್ತ ನಗುತ್ತ ಪ್ರಶ್ನಿಸಿದರು. "ಕೊನೆಗೆ ಅಪರಾಧಿ ಕೈಗೆ ಸಿಕ್ಕರೆ?"

"ಶತ್ರು ಕೈಸೇರಿರದಿದ್ದರೆ ನಾನು ನಿಮ್ಮೆದುರಿಗೆ ಬರುತ್ತಲೇ ಇರಲಿಲ್ಲ."

"ಶಾಭಾಶ್!"

"ಮಹಾರಾಜರೇ, ಶತ್ರುವನ್ನು ತಮ್ಮೆದುರು ಹಾಜರ ಮಾಡಲು ಅಪ್ಪಣೆ ಕೊಡಬೇಕು."

ಮಹಾರಾಜರು ಗೋಣು ಹಾಕಿ ತಮ್ಮ ಸಮ್ಮತಿ ಸೂಚಿಸಿದರು. ಸಖೋಜಿರಾವ್ ಹೊರಗೆ ಹೋದನು. ಎಲ್ಲರ ಕಣ್ಣುಗಳೂ ಪ್ರವೇಶ ದ್ವಾರದ ಕಡೆಗೆ ಹೊರಳಿ ಸ್ಥಿರವಾದವು. ಸಖೋಜಿ ರಾವ್ ಒಳಗೆ ಬಂದನು. ಅವನ ಹಿಂದಿನಿಂದಲೇ ಹಗ್ಗದಿಂದ ಬಿಗಿದ ಸಾವಿತ್ರಿಯನ್ನು ಕಾಣುತ್ತ ಮಹಾರಾಜರ ನಗೆ ಮಾಯವಾಯಿತು. ಅವರು ಸಖೋಜಿಯೆಡೆಗೆ ನೋಡಿದರು. ಸಖೋಜಿ ನುಡಿದನು:

"ಮಹಾರಾಜ, ಇವರೇ ಆ ಸಾವಿತ್ರಿದೇವಿ."

"ಆದರೆ ಸ್ತ್ರೀಯರನ್ನು ಹೆಡಮುರಿಗೆ ಬಿಗಿಯುವ ಅವಶ್ಯಕತೆಯೇನಿತ್ತು?" ಮಹಾರಾಜರ ಧ್ವನಿ ಕಠೋರವಾಯಿತು.

"ಮಹಾರಾಜರೇ, ಕ್ಷಮೆಯಿರಲಿ. ಯಾವಳು ಇಷ್ಟು ದಿಟ್ಟತನದಿಂದ ಕೋಟೆಯನ್ನು ರಕ್ಷಿಸಿದಳೋ ಮತ್ತು ಯಾವಳು ಅನ್ನ-ನೀರಿಲ್ಲದೆ ನಮ್ಮನ್ನು ಕಾಡಿನಲ್ಲಿ ಅಲೆದಾಡಹಚ್ಚಿದಳೋ ಅಂಥ ಈ ಹೆಂಗಸು ಸಾಮಾನ್ಯಳಲ್ಲ. ಈಕೆಯ ಬೆಂಗಾವಲಿನ ಕೊನೆಯ ಸೈನಿಕ ಸಾಯುವವರೆಗೂ ಇವಳು ನಮ್ಮ ಕೈಸೇರಲಿಲ್ಲ. ಕೋಟೆ ಗೆಲಿಯಲು ಕಳೆದುಕೊಂಡ ಸೈನಿಕರಿಗಿಂತಲೂ ಹೆಚ್ಚು ಸೈನಿಕರನ್ನು ಇವಳನ್ನು ಹಿಡಿಯುವಾಗ ಕಳೆದುಕೊಳ್ಳಬೇಕಾಯಿತು.

"ದೇವಿ, ಧನ್ಯರು ನೀವು. ನಿಮ್ಮ ಪರಾಕ್ರಮವು ಅನುಪಮವಾದದ್ದು! ಧನ್ಯವಾದದ್ದು!!" ಮಹಾರಾಜರು ಉದ್ಗರಿಸಿದರು. ಸಖೋಜಿರಾವ್, ಈ ದೇವಿಯವರಿಗೆ ಬಿಗಿದಿದ್ದ ಹಗ್ಗಗಳನ್ನು ಬಿಚ್ಚಿರಿ."

"ಆದರೆ ಮಹಾರಾಜ..."

"ಸಖೋಜಿ, ಅಬಲೆಯರನ್ನು ಹಗ್ಗದಿಂದ ಬಂಧಿಸುವದು ವೀರರಿಗೆ ಶೋಭಿಸುವದಿಲ್ಲ. ಅವರು ನಮ್ಮ ತಾಯಿಯ ಸಮ. ಮೊದಲು ಅವರನ್ನು ಬಿಡುಗಡೆಗೊಳಿಸಿರಿ."

ಹಗ್ಗಗಳನ್ನು ಬಿಚ್ಚಲಾಯಿತು. ಸಾವಿತ್ರಿದೇವಿಯು ಅಧೋವದನಳಾಗಿ ನಿಶ್ಚಲಳಾಗಿ ನಿಂತಲ್ಲಿಯೇ ನಿಂತುಕೊಂಡಳು. ಮಹಾರಾಜರು ಗಂಭೀರವಾಣಿಯಿಂದ ನುಡಿದರು:

"ಸಾವಿತ್ರಿದೇವಿ, ನಿಮಗೆ ತೊಂದರೆ ಕೊಡಬೇಕೆಂಬ ಉದ್ದೇಶ ನಮ್ಮದಿರಲಿಲ್ಲ. ಈಗಲೂ ಇಲ್ಲ. ನಿಮ್ಮ ಪತಿಯು ಸುಮ್ಮಸುಮ್ಮನೆ ನಮ್ಮನ್ನು ತಡವಿದನು. ನಮ್ಮ ಎತ್ತು ಸಾಮಾನುಗಳ ಲೂಟಿ ಮಾಡಿದನು. ಯುದ್ಧ ಮಾಡಲು ಅಣಿಯಾದನು. ಆದರೆ ಅವಿವೇಕಿ ಸಾಹಸಕ್ಕೆ ಏನೂ ಅರ್ಥವಿಲ್ಲ. ಸ್ವರಾಜ್ಯ ಸ್ಥಾಪನೆಗಾಗಿ, ಧರ್ಮ ಸಂಸ್ಥಾಪನೆಗಾಗಿ ಪ್ರಯತ್ನಿಸುತ್ತಿರುವಾಗ ತಮ್ಮಂಥ ಶೌರ್ಯಶಾಲಿಗಳಿಂದ ಬಂದ ವಿರೋಧದಿಂದ ನಮಗೆ ಅತೀವ ದುಃಖವಾಗುತ್ತದೆ. ಸ್ವಧರ್ಮ ಸ್ವರಾಜ್ಯಕ್ಕಾಗಿ ನಮಗೆ ನಿಮ್ಮ ಆಶೀರ್ವಾದದ ಅವಶ್ಯಕತೆಯಿದೆ. ನಿಮ್ಮಿಂದ ವಿರೋಧವೇಕಾಯಿತೋ?"

ಮಿಂಚು ಸಂಚಾರ

ಸಾವಿತ್ರಿದೇವಿ ಸಭೆಯಲ್ಲಿ ಮೊದಲ ಬಾರಿ ಕಣ್ಣೆತ್ತಿ ನೋಡಿದಳು. ಮಿಂಚು ಹೊಡೆದಂತೆ ಅವಳ ದೃಷ್ಟಿ ಒಮ್ಮೆ ಎಲ್ಲೆಡೆಗೂ ಹರಿಯಿತು. ಕಣ್ಣು ಕೆಂಡ ಕಾರುತ್ತಿದ್ದವು. ಮಹಾರಾಜರು ಆಶ್ಚರ್ಯದಿಂದ ಕೇಳಿದರು:

"ಹೇಳಿರಿ ದೇವಿಯವರೆ, ಇದು ಸೋಲಿನ ಪರಿಣಾಮವೇ?"

"ಹುಂ!" ಸಾವಿತ್ರಿದೇವಿ ಹೂಂಕರಿಸಿದಳು. "ಸೋಲು-ಗೆಲುವು ದೈವಾಧೀನ. ಅದರ ಬಗ್ಗೆ ನನಗೆ ದುಃಖವಿಲ್ಲ."

"ನಿಜ" ಮಹಾರಾಜರು ನುಡಿದರು.

"ಆದರೆ ನಿನ್ನ ರಾಕ್ಷಸೀ ರಾಜ್ಯಕ್ಕೆ ಸ್ವರಾಜ್ಯದ ತಿಲಕವನ್ನೇಕೆ ಇಡುವೆ? ನಾನೇ ದುರ್ದೈವಿ. ಈ ಹೊತ್ತು ನನಗೆ ಸೋಲಾಯಿತು. ಸತ್ಕಾರ್ಯದಲ್ಲಿ

ದೇವರು ನನಗೆ ಸಹಾಯಮಾಡಲಿಲ್ಲ."

"ಬಾಯಿ ಮುಚ್ಚಿರಿ" ಆನಂದರಾಯರು ಒಮ್ಮೆಲೆ ಗರ್ಜಿಸಿದರು. ಮಹಾರಾಜರ ದೃಷ್ಟಿ ಕ್ಷೇಪವಾದೊಡನೆ ತಪ್ಪು ಮಾಡಿದವರಂತೆ ಸುಮ್ಮನಾದರು.

"ಹೇಳಿರಿ ದೇವಿ. ನೀವು ಹೇಳುವದೆಲ್ಲವನ್ನೂ ನಾವು ಕೇಳುವೆವು. ನಿಮ್ಮ ಮೇಲೆ ಅನ್ಯಾಯ ವಾಯಿತು ಎಂದು ಏಕೆ ಅನಿಸುತ್ತದೆ?"

"ಅನ್ಯಾಯವೆ? ನಿಮಗೆ ನ್ಯಾಯದ ಬಗ್ಗೆ ಆದರವಿದೆಯೆ?" ಕಲ್ಲಿನ ಮೇಲೆ ಬೆಳ್ಳಿಯ ರೂಪಾಯಿ ಬಿದ್ದಂತೆ ಆ ಪ್ರಶ್ನೆ ಸಭಾಗಾರದಲ್ಲಿ ನಿನದಿಸಿತು.

ಮಹಾರಾಜರು ನೆಟ್ಟ ದಿಟ್ಟಿಯಿಂದ, ಸ್ಥಿರ ಚಿತ್ತದಿಂದ ಮಾತನಾಡಿದರು:

"ಅಮ್ಮ, ಈ ಶಿವಾಜಿಯ ಬಗ್ಗೆ ಅನೇಕ ಪ್ರವಾದಗಳಿರಬಹುದು. ಆದರೆ ಸ್ವರಾಜ್ಯದ ಉದ್ದಿಷ್ಟದ ಬಗ್ಗೆ ಯಾರೂ ಈವರೆಗೆ ಶಂಕೆಯನ್ನು ವ್ಯಕ್ತಪಡಿಸಿಲ್ಲ. ನಿಮ್ಮದೇನೋ ತಕರಾರು ಇದೆ. ನಮ್ಮ ಅಭಯ ನಿಮಗಿದೆ. ಬಿಚ್ಚು ಮನಸ್ಸಿನಿಂದ ಹೇಳಿರಿ. ನಿಮ್ಮ ಮೇಲೆ ಅನ್ಯಾಯವಾಗಿದ್ದರೆ, ನ್ಯಾಯ ದೊರೆತೇ ದೊರೆಯುವದು, ಆದರೆ ಹೆಂಗಸೆಂದು ಶತ್ರುವಿನ ಅಕಾರಣ ಇಚ್ಛೆಯನ್ನು ಪೂರೈಸುವೆವು ಎಂದು ಮಾತ್ರ ತಿಳಿಯಬೇಡಿರಿ."

ಸಾವಿತ್ರಿದೇವಿ ಸ್ತಬ್ಧವಾಗಿ ನಿಂತಿದ್ದಳು. ನೀರವತೆ ಅಸಹ್ಯವಾಯಿತು.

"ದೇವಿ, ಹೇಳಿರಿ" ಮಹಾರಾಜರು ನುಡಿದರು.

ಅವನತ ಮುಖಿಯಾಗಿ ಕೆಳದನಿಯಲ್ಲಿ ಸಾವಿತ್ರಿದೇವಿ ನುಡಿದಳು:

"ತುಂಬಿದ ಸಭೆಯಲ್ಲಿ ನಾನು ಏನು ಹೇಳಲಿ?"

ಮಹಾರಾಜರು ಆಜ್ಞೆ ಇತ್ತರು. ಚಕಿತರಾದ ಎಲ್ಲರೂ ಹೊರಗೆ ಹೋದರು.

"ಹೇಳಿರಿ" ಮಹಾರಾಜರು ವಿನಂತಿಸಿದರು.

ಆಘಾತ

ನಾಗಿಣಿಯಂತೆ ಸಂತಪ್ತಳಾಗಿದ್ದ ಸಾವಿತ್ರಿದೇವಿ ಆ ಶಬ್ದದೊಂದಿಗೆಯೇ ಕುಸಿದು ಕಂಪಿಸತೊಡಗಿದಳು. ಒಮ್ಮೆಲೇ ಅವಳು ತನ್ನ ಮುಖವನ್ನು ಎರಡೂ ಕೈಯಿಂದ ಮುಚ್ಚಿಕೊಂಡಳು. ಬಿಕ್ಕಿದ ಸಪ್ಪಳ ಕೇಳಿಬಂತು. ರಾಜರು ಎದ್ದು ನಿಂತರು.

"ತಾಯಿ, ಹೇಳಿರಿ ನಾನೊಬ್ಬ ನಿಮ್ಮ ಮಗನೆಂದು ತಿಳಿದು ಸಂಕೋಚವಿಲ್ಲದೆ ಹೇಳಿರಿ."

ಸಾವಿತ್ರಿದೇವಿ ಕಣ್ಣೊರಿಸಿಕೊಂಡಳು. ರಾಜನ ಕಡೆಗೆ ನೋಡಿ ನುಡಿದಳು.

"ಸಖೂಜಿಯು ನನ್ನ ಮಾನ ಕಳೆಯುವ ಪ್ರಯತ್ನ ಮಾಡಿದನು."

"ಅಶಕ್ಯ!" ಮಹಾರಾಜರು ಅಸ್ವಸ್ಥರಾಗಿ ಒಮ್ಮೆಲೇ ಉದ್ಗರಿಸಿದರು. "ದೇವಿ, ಇದು ಸುಳ್ಳಾದರೆ ಶಿರಚ್ಛೇದದ ಶಿಕ್ಷೆ ನಿಮಗೆ ಖಚಿತ."

ರಾಜನ ದೃಷ್ಟಿಗೆ ದೃಷ್ಟಿಯಿಟ್ಟು ಸಾವಿತ್ರಿದೇವಿ ನುಡಿದಳು.

"ಮಹಾರಾಜ, ನಾನೂ ಊರ ಪಾಟೀಲತಿ, ವತನದಾರಳು. ಯಾವ ಉಚ್ಚಕುಲದ ಸ್ತ್ರೀ ಈ ರೀತಿ ಸುಳ್ಳು ಹೇಳಬಹುದು? ಬೇಕಾದರೆ ನೀವು ಸಖೂಜಿಯನ್ನೇ ಕೇಳಿರಿ."

ಮಹಾರಾಜರ ಹಣೆಯಲ್ಲಿ ಬೆವರು ಹನಿಗಳು ಮೂಡಿದವು. ಮುಷ್ಟಿ ಬಿಗಿದುಕೊಂಡವು. ಆಜ್ಞೆಯಾದೊಡನೆ ಎಲ್ಲರೂ ಸಭಾಗೃಹದಲ್ಲಿ ಬಂದರು. ಕಣ್ಣೀರು ಸುರಿಸುತ್ತ ಮೂಕಳಾಗಿ ನಿಂತ ಸಾವಿತ್ರಿಯ ಕಡೆಗೆ ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. ತಮ್ಮ ತೀಕ್ಷ್ಣ ದೃಷ್ಟಿಯನ್ನು ಸಖೂಜಿಯ ಮೇಲೆ ಕೇಂದ್ರಿಕರಿಸಿ ಮಹಾರಾಜರು ಕೇಳಿದರು:

"ಸಖೂಜಿ, ಇವರು ಏನನ್ನುತ್ತಾರೆ?"

"ಎಲ್ಲ ಸುಳ್ಳು. ಮಹಾರಾಜರೇ, ಅದೆಲ್ಲ ಕಟ್ಟು ಕಥೆ" ಸಖೂಜಿ ಕೂಗಿದನು.

"ಏನು ಸುಳ್ಳು? ಯಾವುದು ಕಟ್ಟು ಕಥೆ?" ಮಹಾರಾಜರು ಮೇಲೆದ್ದರು. "ಸಖೂಜಿರಾವ್, ನಾವು ಕೇಳುವ ಮೊದಲೇ ಉತ್ತರ ಕೊಡುತ್ತೀರಲ್ಲ?"

ಸಖೂಜಿರಾವ್ ಗಾಬರಿಯಾದನು.

"ಸಖೂಜಿರಾವ್, ನೀವು ಇವರೊಂದಿಗೆ ದುರ್ವರ್ತನೆಯಿಂದ ನಡೆದುಕೊಂಡಿರೇನು?"

"ಮಹಾರಾಜ, ಕ್ಷಮೆ..." ಎನ್ನುತ್ತ ಸಖೂಜಿ ಮಹಾರಾಜರ ಪಾದಗಳ ಮೇಲೆ ಕುಸಿದನು.

ಮಹಾರಾಜರು ಕಣ್ಣಲ್ಲಿ ನೀರು ತಂದರು. ಸಖೂಜಿಯ ಅಪ್ಪುಗೆಯಿಂದ ಕಾಲುಗಳನ್ನು

ಬಿಡಿಸಿಕೊಂಡು ಹಿಂದೆ ಸರಿದರು. ಸಂತಾಪದಿಂದ ಕಂಪಿಸತೊಡಗಿದರು. ಮುಖ ಉಗ್ರವಾಗತೊಡಗಿತು. ಒಂದು ಆಳವಾದ ಬಾವಿಯಿಂದ ದನಿ ಬರುವಂತೆ ಅವರು ಮಾತನಾಡತೊಡಗಿದರು.

ಏನು ಮಾಡಿದಿರಿ ?

"ಸಖೂಜಿ, ಏನು ಮಾಡಿದಿರಿ? ಮೊಗಲರ ಜುಲುಮೆಯ ಅಧಿಕಾರದಿಂದ ಪ್ರಜೆಗಳನ್ನು ಬಿಡಿಸಲು, ಧರ್ಮ–ಮಾನಗಳ ರಕ್ಷಣೆಗಾಗಿ ಎಂದು ನಾವು ಸ್ವರಾಜ್ಯದ ತೋರಣ ಕಟ್ಟಿದೆವು. ಆದರೆ ನೀವು…ತಾಯಿಯ ಮೇಲೆ ಕೈಹಾಕುವ ಪ್ರಯತ್ನ ಮಾಡಿದಿರಾ?"

"ಕ್ಷಮೆ, ಮಹಾರಾಜ" ಎನ್ನುತ್ತ ಸಖೂಜಿ ಮುಂದೆ ಸರಿದನು.

"ಮುಂದೆ ಬರಬೇಡಿರಿ, ಸಖೂಜಿ. ಆ ಅಮಂಗಲ ಹಸ್ತಗಳ ಸ್ಪರ್ಶ ನಮಗೆ ಬೇಡ. ಈ ತಪ್ಪಿಗೆ ಕ್ಷಮೆಯಿಲ್ಲ. ಒಂದು ವೇಳೆ ನಾವು ಸೋಲನ್ನು ಸಹಿಸಬಹುದಿತ್ತು….ಇಲ್ಲ ಸಖೂಜಿ, ನಾವು ಕ್ಷಮೆ ನೀಡುವದು ಸಾಧ್ಯವಿಲ್ಲ."

ಜಾಧವರಾವ್ ಧೈರ್ಯಮಾಡಿ ಮುಂದೆ ಬಂದರು.

"ಮಹಾರಾಜ……"

"ಖಾಮೋಷ್" ಮಹಾರಾಜರು ಗರ್ಜಿಸಿದರು. ಇಡೀ ಸಭೆಯ ಎದೆ ಅದುರುತ್ತಿತ್ತು. ಎಲ್ಲರ ಉಸಿರುಗಟ್ಟಿತ್ತು. ಶಾಂತ ರೀತಿಯಿಂದ ಸಖೂಜಿಯ ಕಡೆಗೆ ಬೊಟ್ಟು ಮಾಡಿ ಮಹಾರಾಜರೆಂದರು:

"ಈ ಸಖೂಜಿಯ ಪಾಪಿ ಕಣ್ಣುಗಳನ್ನು ಕಾದ ಸರಳುಗಳಿಂದ ಕಿತ್ತು ತೆಗೆಯಿರಿ. ಯಾವ ಪಾಪಿ ಕೈಗಳು ಪರಸ್ತ್ರೀಯರನ್ನು ಸ್ಪರ್ಶಿಸಿದವೋ ಆ ಕೈಗಳನ್ನು ತುಂಡರಿಸಿರಿ. ಈ ಶಿಕ್ಷೆ ನಮ್ಮ ಕಣ್ಣೆದುರಿಗೇ ಆಗಬೇಕು."

ಸಖೂಜಿ ಕುಸಿದು ಕುಳಿತನು.

ಸಾವಿತ್ರಿದೇವಿ ಆಶ್ಚರ್ಯಚಕಿತಳಾಗಿ ನೋಡುತ್ತಿದ್ದಳು. ತುಸು ವೇಳೆಯಲ್ಲಿಯೇ ಸರಳುಗಳನ್ನು ತೆಗೆದುಕೊಂಡು ಪಂಜು ಹಿಡಿದವರು ಒಳಗೆ ಬಂದರು. ಸಖೂಜಿಯನ್ನು ಹಿಡಿದಿಡಲಾಯಿತು. ಬಿಸಿಯಾದ ಸರಳುಗಳನ್ನು ಪಂಜಿನ ಮೇಲೆ ಕಾಸಲಾಯಿತು. ಆಕ್ರೋಶದೊಂದಿಗೆಯೇ ಸಖೂಜಿಯ ಕಣ್ಣುಗಳು ಕೀಳಲ್ಪಟ್ಟವು. ಆ ದೃಶ್ಯ ಅಸಹ್ಯವಾಗಿ ಸಾವಿತ್ರಿದೇವಿ ಸಹ ಕಣ್ಣು ಮುಚ್ಚಿಕೊಂಡಳು.

ತಮ್ಮ ಸಂತಪ್ತ ದೃಷ್ಟಿಯನ್ನು ಸಖೂಜಿಯ ಮೇಲೆಯೇ ನೆಟ್ಟು ಮಹಾರಾಜರು ನುಡಿದರು:

"ಈ ಪಾಪಿಯನ್ನು ಪನ್ಹಾಳಾ ಕೋಟೆಯ ಕತ್ತಲು ಕೋಣೆಯಲ್ಲಿ ಚೆಲ್ಲಿಬಿಡಿರಿ."

ಸಖೂಜಿಯನ್ನು ಹೊರಗೊಯ್ಯಲಾಯಿತು. ಮಹಾರಾಜರ ದೃಷ್ಟಿ ಸಾವಿತ್ರಿದೇವಿಯ ಕಡೆಗೆ ಹೊರಳಿತು. ಎಲ್ಲ ಸಿಟ್ಟು ಒಂದೇ ಕ್ಷಣದಲ್ಲಿ ಜರ್ರನೆ ಕೆಳಗಿಳಿಯಿತು. ದೃಷ್ಟಿಯಲ್ಲಿ ಅಸಹಾಯಕತೆ ಮೂಡಿ ಬಂತು. ಅವರೆಂದರು:

"ದೇವಿ, ಈ ಶಿಕ್ಷೆಯಿಂದ ಅಪರಾಧ ತುಂಬಿ ಬರಲಾರದು. ಅದು ನಮಗೆ ಗೊತ್ತು. ನಮಗೆ ಅತೀವ ದುಃಖವಾಗಿದೆ. ನಾವು ನಿಮ್ಮನ್ನು ಮರ್ಯಾದೆಯಿಂದ ಬಿಡುಗಡೆ ಮಾಡುತ್ತೇವೆ. ಬೆಳವಡಿ ನಿಮ್ಮದೇ ಆಗಿದೆ. ಅಲ್ಲದೆ ಇನ್ನೆರಡು ಊರುಗಳನ್ನು ನಿಮಗೆ ಇನಾಮಾಗಿ ಕೊಡ ಮಾಡಿದ್ದೇವೆ."



ಆಫೀಸರ್: ಟೈಪ್‌ರೈಟಿಂಗ್‌ನಲ್ಲಿ ಫಸ್ಟ್ ಕ್ಲಾಸ್ ಬಂದೆ ಅಂತೀರಿ…

ಅಭ್ಯರ್ಥಿ: ಅದನ್ನು ಈ ಶಾರ್ಟ್‌ಹ್ಯಾಂಡ್ ಆಗುವ ಮೊದಲು ಮಾಡಿಕೊಂಡಿದ್ದು ಸಾರ್.

ಆಶೀರ್ವಾದ

ಸಾವಿತ್ರಿದೇವಿ ಕಣ್ಣೊರಸಿಕೊಂಡಳು. ಮಹಾರಾಜರ ಕಾಲಿಗೆರಗಲು ಮುಂದುವರೆದಳು. ಮಹಾರಾಜರು ಕೈ ಜೋಡಿಸಿ ನಿಂತರು. ಗದ್ಗದಿತ ಕಂಠದಿಂದ ನುಡಿದರು.

"ತಾಯಿ ಬೇಡ. ನಮಗೆ ನಾಚಿಕೆಯಾಗುತ್ತದೆ. ಕೊಡುವಂತಿದ್ದರೆ ಒಂದೇ ಆಶೀರ್ವಾದ ಕೊಡಬೇಕು."

ಸಾವಿತ್ರಿದೇವಿ ಮೇಲೆ ನೋಡಿದಳು. ಮಹಾರಾಜರ ಕಣ್ಣುಗಳಲ್ಲಿ ನೀರು ತುಂಬಿ ಬಂದಿದ್ದವು. ದೃಷ್ಟಿ ಗಾಯಗೊಂಡಿತ್ತು. ಶಬ್ದ ಹೊರಡುತ್ತಿರಲಿಲ್ಲ. ಅವರು ನುಡಿದರು:

"ತಾಯಿ, ಒಂದೇ ಆಶೀರ್ವಾದ ಕೊಡಿರಿ. ನಮ್ಮ ಸ್ವರಾಜ್ಯಕ್ಕೆ ತಮ್ಮ ಶಾಪ ತಟ್ಟದಿರಲಿ. ನಮ್ಮ ಸ್ವರಾಜ್ಯಕ್ಕೆ ಇಂಥ ದುರ್ದೈವಿ ಕಲಂಕ ಇನ್ನೊಮ್ಮೆ ಸೋಕಂದಿರಲಿ. ಇದೊಂದೇ ಆಶೀರ್ವಾದ ನೀಡಿದರೆ ನಾವು ಕೃತಾರ್ಥರಾಗುತ್ತೇವೆ."

ಸಾವಿತ್ರಿದೇವಿಗೆ ಮಹಾರಾಜರ ಕಣ್ಣಲ್ಲಿ ಕಣ್ಣೀರು ಕಂಡವು. ಆ ಧಾರಾಕಾರವಾಗಿ ಸುರಿಯುತ್ತಿರುವ ಕಣ್ಣೀರುಗಳಿಂದ ಸ್ವತಃ ಪರಿಶುದ್ಧಳಾದ ಭಾಸ ಅವಳಿಗಾಯಿತು......

ಮೇಲಿನ ಅವತರಣಿಕೆಗಳ ಅನುವಾದಗಳನ್ನು ಪರಿಶೀಲಿಸುವಾಗ ಕೆಲ ವಿಸಂಗತಿಗಳು ಕಂಡುಬಾರದೆ ಇರವು. ಬೆಳವಡಿಯ ಮೇಲಿನ ಶಿವಾಜಿಯ ದಾಳಿ ಕೆಲವೆಡೆಗಳಲ್ಲಿ ೧೬೭೭ರ ಕೊನೆಗೆ ಎಂದಿದ್ದರೆ ಇನ್ನುಳಿದ ಕಡೆಗೆ ೧೬೭೮ರ ಪ್ರಾರಂಭದಲ್ಲಿ ಎಂದು ಉಲ್ಲೇಖಿಸಲಾಗಿದೆ. ಹಾಗೆಯೇ ಕೋಟೆಯನ್ನು ಗೆದೆಯಲು ಬೇಕಾದ ಅವಧಿ ೨೭ ದಿವಸಗಳಿಂದ ೧ ತಿಂಗಳ ವರೆಗೆ ಬೇರೆ ಬೇರೆಯಾಗಿದೆ. ಕೆಲವರು ಬೆಳವಡಿಯ ಒಡೆಯರನ್ನು 'ಪಾಟೀಲ'ರೆಂದು ಸಂಭೋಧಿಸಿದ್ದರೆ ಇನ್ನುಳಿದವರು 'ದೇಸಾಯಿ' ಎಂದಿದ್ದಾರೆ. ಅಲ್ಲದೆ ಸಂಪಗಾವಿಯ ಬಳಿಯಲ್ಲಿ ಬೀಡು ಬಿಟ್ಟ ಶಿವಾಜಿಗೆ ಬೆಳವಡಿಯ ಕೋಟೆ ಕಾಣುತ್ತಿತ್ತೆಂದು ಕೆಲವೆಡೆಗೆ ಉಲ್ಲೇಖಿಸಿದೆ. ಆದರೆ ಇದು ಅಸಂಭವ. ಏಕೆಂದರೆ ಸಂಪಗಾವಿ ಬೆಳವಡಿಯಿಂದ ೧೦–೧೨ ಮೈಲು ದೂರದಲ್ಲಿದೆ. ಸ್ಥಳೀಯ ಜ್ಞಾನವಿಲ್ಲದ್ದರಿಂದ ವಿಷಯವನ್ನು ವಿಸ್ತರಿಸಿ ಬರೆದ ಲೇಖಕರು ಹಾಗೆ ಬರೆದಿರಬಹುದು. 'ಬೆಳವಡಿಯ ಸಾವಿತ್ರಿಯ ಮಾನಹಾನಿಯನ್ನು ಮಾಡಲು ಸಖೋಜಿ ಪ್ರಯತ್ನಿಸಿದನು' ಎಂದು ಬಹು ತೂಕದಿಂದ ಬರೆದ ವಾಕ್ಯಗಳ ಮೂಲಕ ಅವರು ಮಲ್ಲಮ್ಮನ ಮಾನ ವುಳಿಸಿದ್ದಾರೆ. ಈ ಮಾನಹಾನಿಯ ಪ್ರಯತ್ನ ಪ್ರಕರಣ ಕೆಲವು ಲೇಖಕರಿಂದ ನಮೂದಿಸದೆಯೂ ಉಳಿದಿದೆ.

ಅಸ್ಪಷ್ಟ

ಮರಾಠಿಯಲ್ಲಿ ದೊರೆಯುತ್ತಿದ್ದ ಉಲ್ಲೇಖನಗಳಿಂದ ಸಾವಿತ್ರಿ ಅಥವಾ ಮಲ್ಲಮ್ಮನ ಮತ್ತು ಅವಳ ಗಂಡನ ಬಗ್ಗೆ ವಿಶೇಷ ಮಾಹಿತಿ ದೊರೆಯುವದಿಲ್ಲ. ಅವಳ ಮೂಲ ಊರು ಯಾವುದು? ಅವಳು ದೇಸಾಯಿತಿಯೋ, ಪಾಟೀಲತಿಯೋ? ಅವಳ ಪತಿಯ ಹೆಸರೇನಿತ್ತು? ಅವನು ಸ್ವತಂತ್ರ ರಾಜನಾಗಿದ್ದನೋ, ವಿಜಾಪುರ ಅಥವಾ ಮತ್ತಾವುದಾದರೂ ದೊಡ್ಡ ಅರಸರ ಮಾಂಡಲಿಕನಾಗಿದ್ದನೋ? ಮುಂತಾದವುಗಳ ಬಗ್ಗೆ ಮಾಹಿತಿ ಸಿಗುವದಿಲ್ಲ. ಅವನೇಕೆ ಶಿವಾಜಿಯನ್ನು ಎದುರಿಸಿದನು? ಅವನ ವಂಶಜರೇನಾದರು? ಗದಗು ಆಗ ಯಾವ ರಾಜ್ಯದ ಪ್ರಾಂತವಾಗಿತ್ತು? ಈ ಪ್ರಶ್ನೆಗಳಿಗೂ ಉತ್ತರ ದೊರೆಯುವದಿಲ್ಲ. ಕರ್ನಾಟಕದಲ್ಲಿ ಎಲ್ಲರ ಬಾಯಲ್ಲಿ 'ಬೆಳವಡಿ ಮಲ್ಲಮ್ಮ' ಎಂಬ ನಾಮಧೇಯ ರೂಢವಾಗಿದ್ದರೆ 'ಸಾವಿತ್ರಿ' ಎಂಬ ಹೆಸರು ಸಾಮಾನ್ಯವಾಗಿ ಮರಾಠಿ ಬರೆಹಗಳಲ್ಲಿ ಏಕೆ ಕಾಣಿಸಿಗುತ್ತದೆ ಎಂಬುದೂ ಸ್ಪಷ್ಟವಾಗಿಲ್ಲ. ಭಾರತದ ಕೆಲವೇ ಶೂರ ಮಹಿಳೆಯರಲ್ಲಿ ಒಬ್ಬಳಾದ ಬೆಳವಡಿ ಮಲ್ಲಮ್ಮನ ಬಗ್ಗೆ ಸಂಶೋಧನೆ ನಡೆಸಲು ಕನ್ನಡ ಇತಿಹಾಸ ಸಂಶೋಧಕರಿಗೆ ಕರೆ ನೀಡುವದು ಇಲ್ಲಿ ಅಪ್ರಸ್ತುತವಾಗಲಾರದು.

ತಪ್ಪು ಮಾಡುವುದು ಮಾನವಸಹಜ ಗುಣ; ಅದನ್ನು ಇನ್ನೊಬ್ಬರ ಮೇಲೆ

ಹದಿನೆಂಟರ ಹೊಸಲಲ್ಲಿ

(೪೮ ನೇ ಪುಟದಿಂದ)

ಕಲ್ಲುಸಾಲಹೇ ತಟಕ್ಕನೆ ತಟಸ್ಥಗೊಂಡಿತು. "ಏನೋ ಅದು" ಎನ್ನುತ್ತಾ ತಿರುಗಿ ನೋಡಿದ. "ನೋಡೋ ಇಲ್ಲಿ" ಎಂದು ಗೋಪಿ ಪಠ್ಯಪುಸ್ತಕದಲ್ಲಿನ ಒಂದು ಪದದತ್ತ ಬೆಟ್ಟು ಮಾಡಿ ತೋರಿಸಿದ. 'ಘಟಿಕ್ ಚಕ್ರವರ್ತಿ' ಅಚ್ಚಿನ ದೋಷದಿಂದಾಗಿ 'ಫಿಕಿಟ್ ಚಕ್ರವರ್ತಿ'ಯಾಗಿತ್ತು. 'ಹಿ ಹಿ' ಎಂದು ಹಲ್ಕಿರಿದ ಗೋಪಿ. ಇಂತಹ ಸ್ವಾರಸ್ಯವಾದ ತಪ್ಪೊಂದನ್ನು ಕಂಡುಹಿಡಿದೆನೆಲ್ಲಾ ಎಂಬ ಖುಷಿಯಿಂದ ಚೆಂದ್ರು ಮೃದವಾಗಿ ನಕ್ಕು ಈ ಬಡ್ಡಿಮಗನ ಬುದ್ಧಿ ಇಂತಹದರಲ್ಲೆಲ್ಲಾ ಬಲು ಚುರುಕಾಗಿ ಕೆಲಸಮಾಡುತ್ತೆ ಅಂದುಕೊಂಡು ಪಾಠದ ಕಡೆಗೆ ತನ್ನ ಮನವನ್ನು ಹರಿಯಬಿಟ್ಟ.

ನಳಿನಿ ಮತ್ತೆ ಹಿಂತಿರುಗಿ ನೋಡಿದಳು. ಆದರೆ ಈಗಾಗಲೇ ಚೆಂದ್ರು ಆವಳನ್ನು ನಿರ್ಲಕ್ಷಿಸುವುವಾಗಿ ನಿರ್ಧರಿಸಿದ್ದರಿಂದ ಈ ಸರ್ತಿ ಅವನ ಗಮನ ಅವಳತ್ತ ಸರಿಯಲಿಲ್ಲ. ಇನ್ನೊಂದೆರಡು ನಿಮಿಷ ಕಳೆಯಿತು. ಘಟಿಕ್‌ನ ಕತೆಯಲ್ಲಿ ತಲ್ಲೀನನಾಗಿದ್ದ ಚೆಂದ್ರುವಿಗೆ ಇದ್ದಕ್ಕಿದ್ದಂತೆ ಗೋಪಿ ಡೆಸ್ಕಿನ ಮೇಲೆ ಏನೊ ಗೀಚುತ್ತಿರುವುದು ಓರೆಗಣ್ಣಿನಿಂದ ಗೋಚರವಾಯಿತು. ಏನಿರಬಹುದೆಂಬ ಕುತೂಹಲದಿಂದ ಕಣ್ಣು ತಿರುಗಿಸಿ ನೋಡಿದರೆ ಡೆಸ್ಕಿನ ಮೇಲೆ ಗೋಪಿ ಒಂದು ಹೆಣ್ಣು ಚಿತ್ರವನ್ನು ಬಿಡಿಸಿ ಅದರ ಪಕ್ಕದಲ್ಲಿ "A thing of beauty is a joy for ever" ಎಂದು ಬರೆಯುತ್ತಿದ್ದಾನೆ. 'ಯಾರ ಫಿಗರೋ ಅದು?' ಚೆಂದ್ರು ಪಿಸುದನಿಯಲ್ಲಿ ಕೇಳಿದ. ಗೋಪಿ ಏನೂ ಹೇಳದೆ, ಸ್ವಲ್ಪ ಇರು ಗೊತ್ತಾಗುತ್ತದೆ ಎಂಬಂತೆ ತಲೆಯಲ್ಲಾಡಿಸಿ ಕೀಟ್ಸ್‌ನ ಸಾಲನ್ನು ಬರೆದು ಮುಗಿಸಿದ ನಂತರ ಅದರ ಕೆಳಗೆ "Fuck Nalini" ಎಂಬ ಪದಗಳನ್ನೂ ಸೇರಿಸಿದ. 'ಥೂ ಹಲ್ಕ ನನ್ಮಗನೇ' ಅಂದ ಚೆಂದ್ರು. ತನ್ನ ಗೆಳೆಯನ ಈ ಬೈಗಳಿಂದ ಗೋಪಿಗೆ ತುಂಬಾ ಖುಷಿಯಾಗಿ 'ಹ ಹ ಹ' ಎಂದು ಭುಜ ಕುಣಿಸುತ್ತಾ ಸ್ವಲ್ಪ ಜೋರಾಗಿಯೇ ನಕ್ಕು ಬಿಟ್ಟ—ಕ್ಲಾಸಿನಲ್ಲಿ ಕೇಳಿಸುವಂತೆ.

ಗೋಪಿಯ ಈ ಆಕಸ್ಮಿಕ ನಗುವಿನಿಂದ ಮೊದಲಿಯಾರರ ಏಕಾಗ್ರತೆ ಭಂಗವಾಗಿ ಅವರಿಗೆ ರೇಗಿತು. ತಮ್ಮ ಲೆಕ್ಚರನ್ನು ತಟ್ಟನೆ ನಿಲ್ಲಿಸಿ, "You get-up" ಎಂದು ಕೋಪದಲ್ಲಿ, ಅವಸರದಲ್ಲಿ ಅರಚಿಬಿಟ್ಟರು. ಅಷ್ಟೆ. ಕ್ಲಾಸಿಗೆ ಕ್ಲಾಸೇ ಹೋ ಎಂದು ನಕ್ಕಿತು. ತಕ್ಷಣ ಪಂಡಿತರಿಗೆ ತಮ್ಮ ತಪ್ಪಿನ ಅರಿವಾಗಿ, 'ಥೂ ಅವಸರದಲ್ಲಿ ಏನೋ ತಪ್ಪು ಗಳಹಿಬಿಟ್ಟೆನಲ್ಲಾ' ಎನಿಸಿ ಕಸಿವಿಸಿಯಾಯಿತು. ಆದರೂ ಒಡನೆಯೇ ಸಾವರಿಸಿಕೊಂಡು ತಾನೇನೊ ತಪ್ಪೇ ಉಸುರಲಿಲ್ಲ ಎಂಬಂತೆ, ಇನ್ನೂ ಏನೂ ತಿಳಿಯದವನಂತೆ ನಟಿಸುತ್ತಾ ಕೂತೇ ಇದ್ದ ಗೋಪಿಯ ಕಡೆ ಬೆರಳು ಮಾಡಿ "Yes, you Gopal get-up, get-up" ಅಂದರು.

ಗೋಪಿ ಅಚ್ಚರಿಗೊಂಡವನಂತೆ ನಿಧಾನವಾಗಿ ಎದ್ದು ನಿಂತ.

"ಗೆಟ್ಔಟ್ ಆಫ್ ದಿ ಕ್ಲಾಸ್" ಗಡಸು ಧ್ವನಿಯಲ್ಲಿ ಪಂಡಿತರು ಆಜ್ಞಾಪಿಸಿದರು, ತೋರು ಬೆರಳಿನಿಂದ ಕೋಣೆಯ ಬಾಗಿಲನ್ನು ಸೂಚಿಸುತ್ತಾ.

"Why Sir?"

ಪಂಡಿತರು ಒಂದು ಕ್ಷಣ ಯೋಚಿಸಿ, "ಬಿಕಾಸ್ ಯು ಆಲ್ವೇಸ್ ಟಾಕಿಂಗ್ ಅಂಡ್ ಲಾಫಿಂಗ್ ಮೇಕಿಂಗ್ ನಾಯ್ಸ್ ಇನ್ ದ ಕ್ಲಾಸ್" ಅಂದರು.

"What about my attendance Sir ?"

"ನೋ ಅಟೆಂಡೆನ್ಸ್ ನಥಿಂಗ್. ಗೆಟ್ಔಟ್. ಗೋ ಟು ದ ಪ್ರಿನ್ಸಿಪಲ್ ಅಂಡ್ ಗೆಟ್ ಹಿಸ್ ಪರ್ಮಿಶನ್. ವಿತೌಟ್ ಹಿಸ್ ಪರ್ಮಿಶನ್ ಆಯ್ ವೋಂಟ್ ಅಲೌ ಯು ಇನ್ ದ ಕ್ಲಾಸ್" ಎಂದು ಖಂಡಿತವಾಗಿ ಅಬ್ಬರಿಸಿದರು ಪಂಡಿತರು.

ಗೋಪಿ ಹೊರಗೆ ಹೋಗುತ್ತಿದ್ದಂತೆ ಕ್ಲಾಸಿನಲ್ಲಿ ಮತ್ತೆ ಗೊಳ್ಳೆಂದು ನಗೆ ಬೀರಿಯಲು ಪಂಡಿತರಿಗೆ ಆಶ್ಚರ್ಯವಾಗಿ 'ಯಾಕೆ ಪದೇ ಪದೇ ನಗ್ತಿದಾರೆ ಇವರು! ಈ ಸಲ ತಪ್ಪಿಲ್ಲದೆ ಎಲ್ಲಾ ಸರಿಯಾಗಿ ಹೇಳಿದೆನೆಲ್ಲಾ' ಎಂದು ಒಂದು ಕ್ಷಣ ತಲೆ ಕೆಡಿಸಿಕೊಂಡು ಹಿಂದೆಯೇ 'ಏನೋಪ್ಪ ಇವರ ವರ್ತನೆ ನನಗೆ ಅರ್ಥವೇ ಆಗೊಲ್ಲ. ನಾನು ಏನು ಹೇಳಿದರು ನಗುತ್ತವೆ ಶುದ್ಧ ಹುಡುಗು ಮುಂಡೇವು'

ಅಂದುಕೊಂಡು ತಮ್ಮ ವಿದ್ಯಾರ್ಥಿಗಳ ಗೇಲಿಯ ನಗೆಯನ್ನು ಹಾರಿಸಿಬಿಟ್ಟರು.

•

ಆ ದಿನ ಕೊನೆಯ ಪೀರಿಯಡ್ ಕ್ಲಾಸ್ ಇರಲಿಲ್ಲವಾದ್ದರಿಂದ ಚಂದ್ರು ಮನೆಗೆ ವಾಪಸ್ಸು ಹೋಗುವ ಮುನ್ನ ಟೀ ಕುಡಿದು ಹೋಗೋಣವೆಂದುಕೊಂಡು ಕಾಲೇಜ್ ಕ್ಯಾಂಟೀನ್‌ಗೆ ಹೋದ. ವಿರಾಮ ವೇಳೆ ಅಲ್ಲವಾದ್ದರಿಂದಲೋ ಏನೋ ಒಂದೋ ಎರಡೋ ಬಿಟ್ಟು ಬಾಕಿ ಎಲ್ಲಾ ಟೇಬಲ್ಲುಗಳು ಖಾಲಿಯಾಗಿದ್ದವು. ಮೂಲೆಯ ಟೇಬಲ್ ಒಂದನ್ನು ಆರಿಸಿಕೊಂಡು ಕುಳಿತ, ಟೀ ಆರ್ಡರ್ ಮಾಡಿದ. ಟೀಗೋಸ್ಕರ ಕಾಯುತ್ತಾ ಕುಳಿತ ಚಂದ್ರುವಿಗೆ, 'ಈಗ ಗೋಪಿಯು ಇಲ್ಲಿಗೆ ಬಂದರೆ ಎಷ್ಟು ಚೆನ್ನಾಗಿರುತ್ತೆ, ತಮಾಷೆಯಾಗಿ ಒಂದಿಷ್ಟು ಹೊತ್ತು ಹರಟೆಹೊಡೆಯಬಹುದು.' ಎನಿಸಿತು. ಮರುಕ್ಷಣವೇ ಗೋಪಿ ಕ್ಯಾಂಟೀನಿನಲ್ಲಿ ಖುದ್ದಾಗಿ ಪ್ರತ್ಯಕ್ಷನಾದ. ಚಂದ್ರುವಿಗೆ ಖುಷಿಯಾಯಿತು. "Think of the devil and there he is! ಬಾರೋ ನಿನ್ನ ಬಗ್ಗೆಯೇ ಯೋಚನೆ ಮಾಡುತ್ತಿದ್ದೆ. ಕ್ಲಾಸಿಲ್ಲವಾ!" ಅಂದ. ಗೋಪಿ ಇವನೆದುರಿಗಿದ್ದ ಕುರ್ಚಿಯಲ್ಲಿ ಕುಳಿತು, "ಇಲ್ವೋ, ನಮ್ಮ ಮುದುಕ (ಪ್ರೊಫೆಸರ್) ಬೇರೆ ಯಾವುದೋ ಕಾಲೇಜಿನ ಹುಡುಗರಿಗೆ ಕೊರೆಯಾಕೆ ಹೋಗಬೇಕಂತೆ. ಕ್ಲಾಸ್ cancel ಮಾಡಿಬಿಟ್ಟ. ಸರಿ ನೀನು ?"

"ನಮಗೂ ಅಷ್ಟೆ. ಈ ಪೀರಿಯಡ್ ಕ್ಲಾಸಿಲ್ಲ."

ಅಷ್ಟರಲ್ಲಿ ಚಂದ್ರುವಿನ ಟೀ ಬಂತು. ಗೋಪಿ ಮಾಣಿಯೊಡನೆ "ನನಗೂ ಒಂದು ಕಪ್ ಟೀ" ಎಂದ.

ಟೀ ಕುಡಿಯುತ್ತಾ ಅದೂ ಇದೂ ಹರಟಿದ ನಂತರ ಮಾತುಕತೆ ಸಹಜವಾಗಿ ಬೆಳಿಗ್ಗೆ ಹಿಂದಿ ಕ್ಲಾಸಿನಲ್ಲಿ ನಡೆದ ಘಟನೆಯ ಕಡೆ ತಿರುಗಿತು. ಅದನ್ನು ನೆನೆಸಿ ಇಬ್ಬರಿಗೂ ಒಂದು ಕ್ಷಣ ನಗು ಬಂತು. ಚಂದ್ರು, "ಯಾಕೋ ಗೋಪಿ, ನೀನು ಬರ್‍ತಾ ಬರ್‍ತಾ ಇಷ್ಟು ಪೋಲಿಯಾಗ್ತಾ ಇದೀಯಾ? You are obsessed with sex I say. ಮೂರು ಹೊತ್ತು ಇದೇ ಯೋಚನೆ ನಿನಗೆ. ಬೆಳಿಗ್ಗೆ ಹಿಂದಿ ಕ್ಲಾಸಿನಲ್ಲಿ ನೀನು ಡೆಸ್ಕಿನ ಮೇಲೆ ಬರೆದದ್ದು ಥೂ disgusting ಕಣೋ" ಎಂದು ಮುಖ ಕಿವಿಚಿದ.

"ಬರೆದರೆ ಏನೋ ತಪ್ಪು ಅದರಲ್ಲಿ? ಅವಳು ಆ ತರಹ ಇರುವುದೇ ಉಂಟಂತೆ."

"ಅಂದ್ರೆ?"

"ಅಂದ್ರೆ?" ಚಂದ್ರುವಿನ ಧ್ವನಿಯನ್ನು ಅಣಕಿಸಿ ಗೋಪಿ ಹೇಳಿದ. "ಒಳ್ಳೆ ಗುಗ್ಗು ತರಹ ಕೇಳ್ತಿಯಲ್ಲ. ಅವಳಿಗೆ ತುಂಬಾ ಅನುಭವ ಇದೆ ಅಂತ. ನನ್ನ ಮಾತಿನ ಅರ್ಥ ಈಗಲಾದರೂ ಗೊತ್ತಾಯಿತೋ?"

"ಅದು ಹ್ಯಾಗೆ ಹೇಳ್ತಿಯಾ ನೀನು? ನೀನು ನೋಡಿದಿಯೇನೋ ಅವಳು…"

"ಅದಾ ತುಂಬಾ ಸಿಂಪಲ್ ಕಣಮ್ಮ. ಅವಳ hip movements ಗಮನಿಸಿಯೇ ಹೇಳಬಹುದು, ಅವಳು ಬಹಳ ಏಟು ತಿಂದವಳು ಅಂತ."

"ಅದೆಲ್ಲಾ ಹ್ಯಾಗೋ ಗೊತ್ತಾಗುತ್ತೆ ನಿಂಗೆ?"

"ಅದು ಹಾಗೇ, ಕೆಲವರಿಗೆ ಮಾತ್ರ ಗೊತ್ತಾಗುತ್ತೆ ಅದೆಲ್ಲಾ" ಎಂದು ಗೋಪಿ ಕಣ್ಣು ಮಿಟುಕಿಸಿದ.

ಗೋಪಿಯ ಈ ಅಸಾಧಾರಣ ಸೆಕ್ಸ್ ಜ್ಞಾನ ಚಂದ್ರುವನ್ನು ವಿಸ್ಮಯಗೊಳಿಸಿತು. 'ಒಳ್ಳೆ expert ಆಗಿದಾನಲ್ಲ ಇವನು. ನನಗ್ಯಾಕೆ ಇಂತವೆಲ್ಲಾ ಹೊಳೆಯೋದೆ ಇಲ್ಲ' ಎನಿಸಿ ಮನಸ್ಸಿಗೆ ಒಂದು ಕ್ಷಣ ಬೇಜಾರಾಯಿತು.

ಒಂದು ನಿಮಿಷ ಕೇಳಿದನಂತರ ಚಂದ್ರು ಮತ್ತೆ ಕೇಳಿದ: "ಸರಿ ಹಾಗಾದರೆ, ನಿನಗೆ ನಳಿನಿ ಅಂತಹವಳು ಅಂತ ಖಚಿತವಾಗಿ ಗೊತ್ತಿದ್ದರೆ, ನೀನೂ ಯಾಕೆ ಒಂದು ಛಾನ್ಸ್ ನೋಡಬಾರದು?"

"ನೋಡದೆ ಇರ್‍ತೀನಾ? ಒಂದಲ್ಲ ಒಂದಿನ ಸಿಕ್ತಾಳೆ ಅನ್ನೊ ಭರವಸೆ ಇದೆ ನಂಗೆ. ಆದರೆ ಅಲ್ಲಿಯವರೆಗೆ ಹೇಗೆ ತಡೆದುಕೊಳ್ಳೋದು ಅವಳು ಕೊಡುತ್ತಿರುವ ಕಾಟವಾ? ಈಗ ಅದೇ ನನ್ನ ಪ್ರಾಬ್ಲಂ…"

"ಇವೆಲ್ಲಾ ನಿನ್ನ ಮಾಮೂಲು ದಾರಿಗಳು… ಅಂಗೈ ದಿಂಬು ಪೋಲಿ ಪುಸ್ತಕ ಇತ್ಯಾದಿ."

"ಥತ್ ಬರ್‍ತಾ ಬರ್‍ತಾ ಅವೆಲ್ಲಾ ಬೋರ್ ಆಗುತ್ತಿವೆ ಕಣೊ. No thrill left in them. ಬೇರೆ ಯಾವುದಾದರೂ substitute

ಹುಡುಕಬೇಕು." ಎಂದು ಒಂದು ಕ್ಷಣ ಯೋಚಿಸಿದವನಂತೆ ನಟಿಸಿ, "ಹಾಂ ನನ್ನದೊಂದು suggestion. ನೀನೆ ಯಾಕೆ ಆಗಬಾರದು ಆ substitute ?" ಎಂದು ಚಂದ್ರುವಿನತ್ತ ಒಂದು ತುಂಟ ನಗೆ ಚೆಲ್ಲಿದ ಗೋಪಿ. "ಥತ್ ಶುರು ಮಾಡಿಬಿಟ್ಯಾ ನಿನ್ನ ಈ ಹೊಲಸು ಜೋಕನ್ನು" ಎಂದು ಚಂದ್ರು ಮುಖ ಕಿವಿಚಿದ.

"ಲೋ ನಿಜವಾಗಿ ನೀನು ನೋಡೋಕೆ ತುಂಬಾ ಚೆನ್ನಾಗಿದ್ದೀಯಾ ಕಣೋ. ಕೆಂಪಗೆ. ಮುದ್ದು ಮುದ್ದಾಗಿ ಹುಡುಗಿಯರ ತರಹ" ಎಂದು ಹೇಳಿ ಗೋಪಿ ಚಂದ್ರುವಿನ ಗಲ್ಲವನ್ನು ಸವರಿದ.

ಒಡನೆ ಚಂದ್ರು ಅವನ ಕೈಯನ್ನು ಕಿತ್ತೊಗೆದು ಮುಖ ಸಿಂಡರಿಸಿ, "ಥೂ ಸಾಕು ನಿಲ್ಲಿಸೊ. ನಾನು ನಿನಗೆ ಎಷ್ಟು ಸಲ ಹೇಳಿದೀನಿ. ನನಗೆ ಈ ತರಹ ಚೇಷ್ಟೆಗಳೆಲ್ಲಾ ಹಿಡಿಸುವುದಿಲ್ಲ ಅಂತ" ಅಂದ ನಿಷ್ಠುರವಾಗಿ.

ಗೋಪಿ ಬಿಡಲಿಲ್ಲ. ಕುಳಿತಲ್ಲಿಂದಲೇ ಚಂದ್ರುವಿನ ಸಮೀಪಕ್ಕೆ ಬಾಗಿ ಪಿಸುಧ್ವನಿಯಲ್ಲಿ "ನಾನೂ ನಿನಗೆ ಎಷ್ಟು ಸಲ ಹೇಳಿದೀನಿ. ನಿನ್ನ ಮೇಲೆ ಆಸೇನೊ ಅಂತ" ಅಂದ. ಚಂದ್ರುವಿಗೆ ಅವಮಾನವಾದಂತಾಗಿ ಗಲ್ಲ ಕೆಂಪೇರಿತು. "ಥೂ ಹಲ್ಕ pervert ನನ್ಮಗನೇ" ಎಂದು ಗೋಪಿಯನ್ನು ತೆಗಳಿ ದಡಕ್ಕನೆ ಎದ್ದು ದಡದಡನೆ ಬಾಗಿಲಿನತ್ತ ಹೆಜ್ಜೆ ಹಾಕಿದ.

ಗೋಪಿ ಅವನ ಬೆನ್ನ ಹಿಂದೆಯೇ ನಗುತ್ತಾ "ಲೋ ಯಾಕೊ ಎದ್ದು ಹೋಗ್ತೀಯಾ? ತಮಾಷೆಗೆ, ಸುಮ್ಮನೆ ರೇಗಿಸೋಕೆ ಹೇಳಿದೆ ಅಷ್ಟೆ. ಬಾರೊ" ಎಂದು ಅರಚಿದರೂ ಚಂದ್ರು ಹಿಂತಿರುಗಿ ನೋಡಲಿಲ್ಲ.

ಗೆಲುವು ಮನೋಭಾವದಲ್ಲಿ ಕ್ಯಾಂಟೀನ್ ಒಳಗೆ ಬಂದಿದ್ದ ಚಂದ್ರು ಈಗ ಸಿಡಿಮಿಡಿಗೊಳ್ಳುತ್ತಾ ಹೊರಗೆ ಬಂದು ಸೀದಾ ಬಸ್ ಸ್ಟಾಪಿನತ್ತ ಹೆಜ್ಜೆ ಹಾಕಿದ. ನಾಚಿಕೆ, ಅವಮಾನ, ತಿರಸ್ಕಾರ, ಕೋಪಗಳಿಂದ ಅವನ ಗಲ್ಲಗಳು ಕೆಂಪೇರಿ ಉರಿಯುತ್ತಿದ್ದವು. ಚಂದ್ರು ಈ ರೀತಿಯ ಕುಚೇಷ್ಟೆಗೆ ಈಡಾದುದು ಇದೇ ಮೊದಲ ಸಲವೇನಲ್ಲ. ಗೋಪಿಯೇ ಅಲ್ಲದೆ ಅವನ ಕಾಲೇಜಿನ ಇನ್ನೂ ಕೆಲವು 'ಧಾಂಡಿಗ' ಹುಡುಗರು ಆಗಾಗ್ಗೆ ಅವನೊಡನೆ ಈ ರೀತಿ ತಮಾಷೆಮಾಡಿ ರೇಗಿಸುವುದುಂಟು. ಒಬ್ಬರೋ ಇಬ್ಬರೋ ಬರೀ ಮಾತಿನಿಂದಲೇ ಅಲ್ಲದೆ ಅವನ ತೊಡೆಯನ್ನು ಹಿಸುಕಿಯೋ, ಅಥವಾ ಅವನ ಗಲ್ಲವನ್ನು ಸವರಿಯೋ ಮಿತಿ ಮೀರಿ ಚೆಲ್ಲಾಟವಾಡುವುದುಂಟು. ಅಂತಹ ಸಮಯಗಳಲ್ಲಿ ಅವನಿಗೆ ವಿಪರೀತ ಅವಮಾನವಾದಂತಾಗಿ ತನ್ನನ್ನು ಹೀಯಾಳಿಸಿದವನ ಮೇಲೆ ಅಸಾಧ್ಯ ರೋಷ ಉಕ್ಕಿ ಬಂದು ಅವನನ್ನು ಹಿಡಿದು ಚೆನ್ನಾಗಿ ತದಕಿಬಿಡೋಣ ಅನ್ನಿಸುತ್ತದೆ. ಆದರೆ ಅವನಿಗೆ ಗೊತ್ತು. ತಾನು ಅಂತಹವರನ್ನು ಮಾಡಲಾರ ಎಂದು, ಎಷ್ಟೋ ಸಲ ತನ್ನ ರೊಚ್ಚನ್ನು ಕೈಗಳಿಂದ ಇರಲಿ, ಬಾಯಿಯಿಂದ ಬೈಗಳಿಂದಲೂ ತೀರಿಸಿಕೊಳ್ಳಲಾರ ಎಂದು, ತಾನು ಸಿಟ್ಟಿಗೆದ್ದಷ್ಟೂ ಈ ಸೂಳೆಮಕ್ಕಳಿಗೆ ಖುಷಿ. ತನ್ನನ್ನು ಇನ್ನೂ ಜಾಸ್ತಿ ಗೋಳು ಹುಯಿದುಕೊಳ್ತಾರೆ. ದಿಟ. ಗೋಪಿ ಎಷ್ಟೋ ಬಾರಿ ಹೇಳಿದ್ದಾನೆ 'ಇದೆಲ್ಲಾ ಬರಿ ಹುಡುಗಾಟಿಕೆ ಕಣೊ. ಯಾಕೋ ಸೀರಿಯಸ್ಸಾಗಿ ತೆಗೆದುಕೊಂಡು ಸಿಟ್ಟಾಗ್ತೀಯೆ?' ಎಂದು. ಆದರೆ ಚಂದ್ರುವಿಗೆ ಅದು ಸಾಧ್ಯವಿಲ್ಲ. ಇಂತಹ ಹೊಲಸು ಆಟಗಳನ್ನು ತಮಾಷೆಯಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಅತ್ತ ತನ್ನ ರೊಚ್ಚನ್ನು ತೀರಿಸಿಕೊಳ್ಳಲು ತಾಕತ್ತು ಇಲ್ಲದೆ, ಇತ್ತ ಇದೆಲ್ಲಾ ಬರಿ ತಮಾಷೆ ಎಂದುಕೊಂಡು ನಡೆದಿದ್ದನ್ನು ನಗೆಯಿಂದ ಹಾರಿಸಿಬಿಡುವ ಮನೋಭಾವವೂ ಇಲ್ಲದೆ ನಿಸ್ಸಹಾಯಕನಾಗಿ ತನ್ನ ಚಿಪ್ಪಿನೊಳಗೆ ಸೇರಿಕೊಂಡು ಬಿಡುತ್ತಾನೆ ಚಂದ್ರು. ಚಿಪ್ಪಿನ ಏಕಾಂತದಲ್ಲಿ ನಡೆದಿದ್ದನ್ನೆಲ್ಲಾ ಪದೇ ಪದೇ ನೆನಪಿಗೆ ತಂದುಕೊಳ್ಳುತ್ತಾ, ಕೋಪ ಅವಮಾನಗಳಿಂದ ಕುದಿಯುತ್ತಾ, ತನ್ನನ್ನು ಗೇಲಿ ಮಾಡಿದವರನ್ನು ದ್ವೇಷಿಸುತ್ತಾ, ಅವರೊಡನೆ ಕಾಲ್ಪನಿಕ ಹೋರಾಟವನ್ನು ನಡೆಸುತ್ತಾ ತನ್ನ ಘಾಸಿಗೊಂಡ ಆತ್ಮವನ್ನು ಸಂತೈಸುತ್ತಾನೆ.

ಚಂದ್ರು ಹುಡುಗರ ಗುಂಪಿನಲ್ಲಿ ಕಂಡು ಬರವುದು ಅಪರೂಪ. ಅವರು ತನ್ನೊಡನೆ ಚೆಲ್ಲಾಟವಾಡುವರೇನೋ ಎಂಬ ಭಯದಿಂದ ಅವನು

ಆದಷ್ಟು ಅವರಿಂದ ದೂರವೇ ಇರುತ್ತಾನೆ. ಅವನಿಗೆ ಸ್ನೇಹಿತರು ಬಹಳ ಕಡಿಮೆ. ಆಪ್ತಮಿತ್ರರಂತೂ ಒಬ್ಬನೇ ಒಬ್ಬ-ಗೋಪಿ. ಕೆಲವೊಮ್ಮೆ ಚಂದ್ರುವಿಗೆ ಗೋಪಿಯೂ ಬೇಡ, ಯಾರೂ ಬೇಡ ಎನ್ನಿಸಿ ಈ ಜಗತ್ತಿನ ಬಗ್ಗೆ, ಬಾಳಿನ ಬಗ್ಗೆ ಜುಗುಪ್ಸೆಯುಂಟಾಗಿಬಿಡುತ್ತದೆ.

*

ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಹದಿನೈದನೇ ಕ್ರಾಸಿನ ಬಸ್ ಸ್ಟಾಪ್‌ಸಿಂದ ಸ್ವಲ್ಪ ಮುಂದೆ ನಡೆದರೆ ಎಡಕ್ಕೆ ಒಂದು ಎರಡು ಅಂತಸ್ತಿನ ಹಳೇ ಕಾಲದ ಕಟ್ಟಡ ಕಾಣುತ್ತದೆ. ಮನೆಯ ಕಾಂಪೌಂಡ್ ಗೋಡೆಗೆ Jai Hind Exports & Imports Company ಎಂಬ ಹೆಸರುಳ್ಳ ಸ್ಟ್ಯಾಂಡ್ ಬೋರ್ಡ್ ತಗಲಿ ಹಾಕಿದೆ. ಅಲ್ಲೇ ಚಂದ್ರು ವಾಸವಾಗಿರುವುದು. ಅಂದರೆ ಅದು ಅವನ ಮನೆಯೂ ಹೌದು. ಅವನ ತಂದೆಯ ಆಫೀಸೂ ಕೂಡ. ಮನೆ ಹಳೆಯದಾದರೂ ಸುಮಾರಾಗಿ ದೊಡ್ಡದು. ಕೆಳಗೆ ವರಾಂಡದಲ್ಲಿ ಎದುರು ಬದುರು ಎರಡು ಕೋಣೆಗಳು. ಒಳಗೆ ನಡೆದರೆ ವಿಶಾಲವಾದ ಒಂದು ಹಜಾರ. ಇನ್ನೂ ಒಳಗೆ ಮತ್ತೆ ಎರಡು ಚಿಕ್ಕ ಕೋಣೆಗಳು, ಅಡಿಗೆ ಮನೆ, ದೇವರ ಮನೆ ಇತ್ಯಾದಿ. ಮಹಡಿಯ ಮೇಲೆ ಎರಡು ಮಲಗುವ ಕೊಠಡಿಗಳು. ಬಿಸಿಲು ಮಚ್ಚು ಇಷ್ಟೂ ಇವೆ. ಕೆಳಗಿನ ಹಜಾರದ ಅರ್ಧಭಾಗವನ್ನು "Jai Hind" ಆಫೀಸ್ ಆಗಿ ಮಾರ್ಪಡಿಸಲಾಗಿದೆ. ಮೂರೋ ನಾಲ್ಕೋ ಮೇಜುಗಳು ಎರಡು ಟೈಪರೈಟರುಗಳು. ಮೂರು ಗೋದ್ರೇಜ್ ಕಪಾಟುಗಳು ಒಂದು ಸೋಫ ಸೆಟ್ಟು ಇದೇ ಶ್ರೀನಿವಾಸರಾಯರ ಆಫೀಸ್. ಮತ್ತು ಆಫೀಸ್‌ವೇಳೆ ಅಲ್ಲದ ಸಮಯದಲ್ಲಿ ಡ್ರಾಯಿಂಗ್

ರೂಂ ಕೂಡ. ರಾಯರು ಈ ಮನೆಯಲ್ಲಿ ಸುಮಾರು ಇಪ್ಪತ್ತು ಮೂವತ್ತು ವರ್ಷಗಳಿಂದಲೂ ವಾಸವಾಗಿದ್ದಾರೆ. ಚಂದ್ರುವಿಗೆ ಈ ಮನೆ ಸ್ವಲ್ಪವೂ ಇಷ್ಟವಿಲ್ಲ. 'ಹಿರೀರಾಯನ ಕಾಲದ್ದು. ಇದನ್ನು ಕಟ್ಟಿದವನು ಒಂದು ಚೂರು ಯೋಚನೆ ಮಾಡದೆ, ತಲೆಯೇ ಉಪಯೋಗಿಸದೆ ಕಟ್ಟಿದ್ದಾನೆ' ಎನ್ನುತ್ತಾನೆ. ಈ ಮಧ್ಯೆ ರಾಯರು ನಗರದ ಜಯನಗರ ಬಡಾವಣೆಯಲ್ಲಿ ಸ್ವಂತ ಮನೆಯೊಂದನ್ನು ಕಟ್ಟಿಸಿದ್ದಾರೆ. ತಮ್ಮಗಳ ವಾಸಸ್ಥಾನವನ್ನು ಆ ಹೊಸ ಮನೆಗೆ ಬದಲಾಯಿಸಬೇಕೆಂದು ಚಂದ್ರುವಿನ ಅಪೇಕ್ಷೆ. ಆದರೆ ರಾಯರು 'ನಾನು ಈ ಜಾಗ ಬಿಟ್ಟು ಕದಲುವುದಿಲ್ಲ. ಇಲ್ಲಿ ನನಗೆ ಲಕ್ಷ್ಮಿ ಒಲಿದಿದ್ದಾಳೆ.' ಎಂದು ಖಡಾಖಂಡಿತವಾಗಿ ಎಲ್ಲರೊಡನೆ ಹೇಳಿಬಿಟ್ಟಿದ್ದಾರೆ.

ಚಂದ್ರು ಹಜಾರದೊಳಗೆ ಕಾಲಿಡುತ್ತಿದ್ದಂತೆಯೇ ಆಫೀಸಿನ ಫೈಲುಗಳಲ್ಲಿ ಮಗ್ನರಾಗಿದ್ದ ರಾಯರು ಒಂದು ಕ್ಷಣ ತಲೆ ಎತ್ತಿ "ಇದೇನು ಇವತ್ತು ಬೇಗ ಬಂದ್ಬಿಟ್ಟೆ?" ಎಂದು ಇಂಗ್ಲೀಷಿನಲ್ಲಿ ಕೇಳಿದರು. (ಅವರು ಮಗನನ್ನು ಹೆಚ್ಚಾಗಿ ಇಂಗ್ಲೀಷಿನಲ್ಲೇ ಮಾತನಾಡಿಸುತ್ತಾರೆ) ಕೊನೆಯ ಪೀರಿಯಡ್ ಕ್ಲಾಸಿರಲಿಲ್ಲ" ಎಂದು ಮೊಟಕಾಗಿ ಉತ್ತರ ಕೊಟ್ಟು ಚಂದ್ರು ಒಳಗೆ ನಡೆದ. ಮೆಟ್ಟಲು ಹತ್ತಿ ಮಹಡಿಯ ಮೇಲಿದ್ದ ತನ್ನ ರೂಮಿಗೆ ಹೋಗಿ ಬಟ್ಟೆ ಬದಲಾಯಿಸಿ ಪುನಃ ಕೆಳಗಿಳಿದು ಬಂದು ಕೈಕಾಲು ತೊಳೆದು "ಅಮ್ಮ ತಿಂಡಿ" ಎನ್ನುತ್ತಾ, ಊಟದ ಮನೆಯಲ್ಲಿ ಕುಳಿತ. "ಬಂದು ಬಿಟ್ಟೇನೋ ಅವಾಗ್ಲೇ. ಒಂದು ನಿಮಿಷ ಇರು ತಂದ್ಬಿಟ್ಟೆ" ಎಂದರು ಶಾರದಮ್ಮ. ಅಡಿಗೆ ಕೋಣೆಯೊಳಗಿಂದಲೇ "ನನಗೇನಾದರೂ Post ಬಂತಾ?"

"ಏನೂ ಬಂದ ಹಾಗೆ ಕಾಣೆ,"

ಚಂದ್ರುವಿನ ನಿರಾಸೆಯಾಯಿತು. ಈಗೊಂದು ಹತ್ತು ದಿನಗಳಿಂದ ಅವನು ಒಂದು ಮುಖ್ಯವಾದ–ತನ್ನ ಜೀವನಕ್ಕೊಂದು ಹೊಸ ತಿರುವು ಕೊಡಬಹುದಾದ ಪತ್ರವನ್ನು ಆತುರದಲ್ಲಿ, ತವಕದಲ್ಲಿ ನಿರೀಕ್ಷಿಸುತ್ತಿದ್ದಾನೆ. ಮೂರು ವಾರಗಳ ಹಿಂದೆ ಇಂಗ್ಲೀಷಿನಲ್ಲಿ ಒಂದು ಕತೆ ಬರೆದು "Illustrated Weekly" ಗೆ ಕಳಿಸಿದ್ದ. ತನ್ನ ಕತೆಯ ಹಣೆಯ ಬರಹ ಏನಾಗಿದೆಯೋ ಎಂಬುದನ್ನು ತಿಳಿಯುವ ಕಾತುರ. 'ಥತ್ ಇನ್ನೂ ಎಷ್ಟು ದಿನ suspence ನಲ್ಲಿ ಇಡುತ್ತಾರೋ' ಎಂದುಕೊಳ್ಳುತ್ತಾ ತಾಯಿ ತಂದಿಟ್ಟ ದೋಸೆ ತಟ್ಟೆಗೆ ಕೈ ಹಾಕಿದ. ಅವನು ತಿಂಡಿ ತಿನ್ನುತ್ತಿರಬೇಕಾದರೆ ರಾಯರು, "ಲೋ ಚಂದ್ರು" ಎನ್ನುತ್ತಾ ಅಲ್ಲಿಗೆ ಬಂದು "ನಾಳೆ ಶನಿವಾರ ಸ್ಟೇಷನ್ನಿಗೆ ಹೋಗಬೇಕು. ರಾಮನಾಥ ಫ್ಯಾಮಿಲಿಯೊಡನೆ ಡೆಲ್ಲಿಯಿಂದ ಬರ್‍ತಾನೆ. ಅವರೆಲ್ಲರನ್ನು ರಿಸೀವ್ ಮಾಡಿ ಮನೆಗೆ ಕರೆದುಕೊಂಡು ಬರಬೇಕು. ಕಾರ್ ತೆಗೆದುಕೊಂಡು ಹೋಗು" ಎಂದು ಪಟಪಟನೆ ತಮ್ಮ ಮಾಮೂಲಿ ಅಧಿಕಾರವಾಣಿಯಲ್ಲಿ ಹೇಳಿದರು.

ಚಂದ್ರುವಿಗೆ ಕಿರಿಕಿರಿಯಾಗಿ ಮುಖ ಗಂಟಿಕ್ಕಿತು. "ನನಗೆ ಅವತ್ತು ಟೈಮಿಲ್ಲ. ಓದ್ಕೋಬೇಕು" ಅಂದ. "Dont talk nonsence. ಒಂದು ಗಂಟೆ ಹೊತ್ತು ಸ್ಟೇಷನ್ನಿಗೆ ಹೋಗಿ ಬಂದ್ರೆ ನಿನ್ನ ಓದೇನೂ ಹಾಳಾಗುವುದಿಲ್ಲ." ರಾಯರು ತಮ್ಮ ಉತ್ತರದ ಕಂಚಿನ ಧ್ವನಿಯಲ್ಲಿ ಕೂಗಾಡಿದರು.

ಶಾರದಮ್ಮ ಮಧ್ಯೆ ಬಂದು, "ಹೋಗ್ತಾನೆ ಬಿಡಿ. ಯಾಕೆ ಹೀಗೆ ಅನಾವಶ್ಯಕವಾಗಿ ಕೂಗಾಡ್ತೀರಿ" ಎಂದರು. ರಾಯರು ಇನ್ನೂ ಅಸಮಾಧಾನದಿಂದಲೇ "ಯಾಕೋ ಬರ್‍ತಾ ಬರ್‍ತಾ ಎಡವಟ್ಟಾಗಿದಾನೆ ಇವನು" ಎಂದು ಗೊಣಗಾಡುತ್ತ ತಮ್ಮ ಆಫೀಸಿಗೆ ಹಿಂತಿರುಗಿದರು. ಇನ್ನೂ ಮೂತಿ ದಪ್ಪ ಮಾಡಿಕೊಂಡೇ ಕೂತಿದ್ದ ಮಗನನ್ನು ನೋಡಿ ತಾಯಿ ಹೇಳಿದಳು. "ಯಾಕಪ್ಪ ಚಂದ್ರು, ಅವರನ್ನು ಸದಾ ಎದುರು ಹಾಕಿಕೊಳ್ತೀಯಾ? ಮುಂದಿನ ಶನಿವಾರ ಹೋಗಿದ್ದರೂ ರಜ ತಾನೇ. ಒಂದು ಗಂಟೆ ಕಾಲ ಸ್ಟೇಷನ್ನಿಗೆ ಹೋಗಿ ಬಂದ್ರೆ ಆಯ್ತು. ನಿನ್ನ ಓದೇನು ಮುಳುಗಿಹೋಗುತ್ತಾ ಹೇಳು."

"ಅದಕ್ಕಲ್ಲಮ್ಮ" ಚಂದ್ರು ಹೇಳಿದ. "ಅವತ್ತೊಂದು ದಿವಸ ನನ್ನ ಫ್ರೆಂಡ್ ಒಬ್ಬನನ್ನು ಬೀಳ್ಕೊಡಲು ಸ್ಟೇಷನ್ನಿಗೆ ಹೋಗಿ ರಾತ್ರಿ ಒಂದರ್ಧಗಂಟೆ ಲೇಟಾಗಿ ಮನೆಗೆ ಬಂದಾಗ, ಮನೆಯಲ್ಲಿ ಕೂತು ಓದಿಕೊಳ್ಳದೆ ಅಲ್ಲಿ ಇಲ್ಲಿ ಅಲೀತಿಯಾ ಎಂದು ಏನೇನೋ ಕೂಗಾಡಿದರಲ್ಲಾ ಅವತ್ತು. ಈಗ ಮಾತ್ರ ನನ್ನ ಟೈಮ್ ವೇಸ್ಟ್

ಆಗುತ್ತೆ ಅಂತ ಅನ್ಸಲ್ಲವೇನೂ ಅವರಿಗೆ."

"ಏನೋಪ್ಪ ನನಗೆ ಏನೂ ಹೇಳೋಕೂ ತೋಚಲ್ಲ. ಇಬ್ಬರೂ ಸರಿಯಾಗೇ ಇದೀರಿ" ಎಂದು ಹೇಳಿ ಒಳಗೆ ಹೊರಟು ಹೋದರು ಶಾರದಮ್ಮ.

ತಿಂಡಿ, ಕಾಫಿ ಮುಗಿಸಿದವನೇ ಚಂದ್ರು ತನ್ನ ರೂಮಿಗೆ ಮರಳಿ ಸಾಮರ್‌ಸೆಟ್ ಮೊಮನ 'Of Human Bondage' ಕಾದಂಬರಿಯನ್ನು ಓದುತ್ತಾ ಕುಳಿತ. ಮನಸ್ಸು ವ್ಯಗ್ರಗೊಂಡಿದ್ದರಿಂದ ಗಮನವಿಟ್ಟು ಓದಲಾಗಲಿಲ್ಲ. ಅಕ್ಷರಗಳ ಮೇಲೆ ಯಾಂತ್ರಿಕವಾಗಿ ಕಣ್ಣಾಡಿಸುತ್ತಾ ಹಾಗೂ ಹೀಗೂ ಒಂದು ಗಂಟೆ ಕಾಲ ಕಳೆದ ನಂತರ ಆರು ಘಂಟೆ ಹೊತ್ತಿಗೆ ಎದ್ದು ಮುಖ ತೊಳೆದು ಡ್ರೆಸ್ ಮಾಡಿ ಹೊರಗಡೆ ಹೊರಟ.

ಚಂದ್ರು ಯಾವ ಆಟವನ್ನೂ ಆಡುವುದಿಲ್ಲ. ಸಂಜೆ ಸಮಯ ಹೊತ್ತು ಕಳೆಯಲು ಒಂದು ಗಂಟೆಯ ಕಾಲ ವಾಕಿಂಗ್ ಹೋಗಿ ಬರುತ್ತಾನೆ. ಸಾಮಾನ್ಯವಾಗಿ ಒಬ್ಬನೆ ಹೋಗುತ್ತಾನೆ. ಮಲ್ಲೇಶ್ವರದಲ್ಲೇ ಅವನಿಗೆ ಪರಿಚಯವಿರುವ ಮೂರು ನಾಲ್ಕು ಹುಡುಗರಿದ್ದಾರೆ. ಆದರೆ ಅವರ ಸಂಗ ಬೇಕಿಲ್ಲ. ಒಂಟಿಯಾಗಿ ಹೋಗುವುದೇ ಹೆಚ್ಚು ಇಷ್ಟ. ಗೋಪಿ ಜೊತೆ ತಿರುಗಾಡಲು ಅಭ್ಯಂತರವಿಲ್ಲ. ಆದರೆ ಗೋಪಿ ವಾಸವಾಗಿರುವುದು ಚಾಮರಾಜಪೇಟೆಯಲ್ಲಿ. ಮಲ್ಲೇಶ್ವರಕ್ಕೆ ದೂರ. ರಜಾ ದಿನಗಳಲ್ಲಿ ಚಂದ್ರು ಅವನ ಜೊತೆ ಬೀದಿ ಅಲೆಯುವುದು ಉಂಟು.

ರಸ್ತೆಗಳಲ್ಲಿ ಒಬ್ಬನೇ ನಡೆಯುತ್ತಿರಬೇಕಾದರೆ ಚಂದ್ರುವಿಗೆ ತನ್ನ ಸುತ್ತ ಮುತ್ತಲಿನ ಪ್ರಜ್ಞೆ ಇರುವುದು ಬಹಳ ಕಡಿಮೆ. ಅವನ ದೃಷ್ಟಿ ಹೆಚ್ಚಾಗಿ ಆಕಾಶದಲ್ಲೇ ನೆಟ್ಟಿರುತ್ತದೆ. (ಮೈ ಮೇಲೆ ಪ್ರಜ್ಞೆ ಇಲ್ಲದೆ ಆಗಾಗ್ಗೆ ಎಡವಿ ಬೀಳುವುದೂ ಉಂಟು) ಅವನ ಮನಸ್ಸು ತನ್ನದೇ ಆದ ಒಂದು ಲೋಕವನ್ನು ಕಲ್ಪಿಸಿಕೊಂಡು ಅದರಲ್ಲೇ ವಿಹರಿಸುತ್ತಿರುತ್ತದೆ. ಒಮ್ಮೊಮ್ಮೆ ಗತಿಸಿದ ಜೀವನವನ್ನು ಸ್ಮರಿಸಿದರೆ ಇನ್ನೊಮ್ಮೆ ಮುಂದೆ ನಡೆಯಬಹುದಾದ ಘಟನೆಗಳ ಹಗಲುಗನಸುಗಳನ್ನು ನೇಯುತ್ತದೆ. ಪ್ರೇಮದ ಬಗ್ಗೆ, ಜೀವನದ ಬಗ್ಗೆ, ಸಾಹಿತ್ಯದ ಬಗ್ಗೆ ವಿಜ್ಞಾನದ ಬಗ್ಗೆ ತಾನು ಪುಸ್ತಕಗಳಲ್ಲಿ ಓದಿದ್ದನ್ನು ವಿಶ್ಲೇಷಿಸುತ್ತಿರುತ್ತಾನೆ ಚಂದ್ರು. ಕೆಲವೊಮ್ಮೆ ಈ ವಿಷಯಗಳ ಬಗ್ಗೆ ಮನಸ್ಸಿಗೆ 'ಒರಿಜಿನಲ್' ಎನಿಸುವ ವಿಚಾರಗಳು ಹೊಳೆಯುತ್ತವೆ. ಆ ಒಂದು ಕ್ಷಣ ಏನೋ ಹೊಸದನ್ನು ಕಂಡುಹಿಡಿದವನಂತೆ ಸಂಭ್ರಮ ಪಡುತ್ತಾನೆ. ಆದರೆ ಮರುಕ್ಷಣವೇ ನನ್ನ ಈ ವಿಚಾರಗಳಿಗೆಲ್ಲ ಏನಾದರೂ ನಿಜವಾದ ಸತ್ವ ಇದೆಯೇ, ಮಹತ್ವವಿದೆಯೇ? ಅಥವಾ ಇವೆಲ್ಲಾ ಬರೀ ಅರ್ಥವಿಲ್ಲದ ಮನಸ್ಸಿನ ಹುಚ್ಚಾಟವೋ, ಪೊಳ್ಳು ಆಲೋಚನೆಗಳೋ ಎಂಬ ಸಂದೇಹ ಮನಸ್ಸಿನಲ್ಲಿ ಮೂಡಿ ಅವನ ಅರಳಿದ ಮುಖ ಒಮ್ಮೆಲೇ ಕಂದುತ್ತದೆ.

ಇತ್ತೀಚೆಗೆ ಅವನನ್ನು ಬಹಳವಾಗಿ ಕಾಡುತ್ತಿರುವ ಪ್ರಶ್ನೆ ಎಂದರೆ– ತನ್ನ ಜೀವನದ ಗುರಿ ಏನು ಎಂಬುದನ್ನು ನಿರ್ಧರಿಸುವುದು. ತಾನು ಜೀವನದಲ್ಲಿ ಏನಾದರೂ ಮಹತ್ಕಾರ್ಯವನ್ನು ಸಾಧಿಸಬೇಕೆಂಬ ಹಂಬಲ ಚಿಕ್ಕ ಹುಡುಗನಾಗಿದ್ದ ಕಾಲದಿಂದಲೇ ಅವನ ಮನಸ್ಸಿನಲ್ಲಿ ಬೇರೂರಿದೆ. ಆದರೆ ಏನು ಸಾಧಿಸಬೇಕು, ತನ್ನ ಕ್ಷೇತ್ರ ಯಾವುದಾಗಿರಬೇಕು ಎಂಬುದನ್ನು ನಿರ್ಧರಿಸುವುದೇ ಜಟಿಲ ಸಮಸ್ಯೆಯಾಗಿದೆ. ಏಕೆಂದರೆ ಮನಸ್ಸಿಗೆ ಒಮ್ಮೊಮ್ಮೆ ಒಂದೊಂದು ತೋಚುತ್ತದೆ. ಮೇಡಂ ಕ್ಯೂರಿ, ಎಡಿಸನ್, ಸಿ.ವಿ.ರಾಮನ್ ಮುಂತಾದ ಮಹಾವಿಜ್ಞಾನಿಗಳ ಜೀವನ ಚರಿತ್ರೆಗಳನ್ನು ಓದುವಾಗ ತಾನೂ ಅವರಂತೆಯೇ ಸಂಶೋಧನೆಗಳನ್ನು ನಡೆಸಿ ಏನಾದರೂ ಮಹತ್ವವಾದದ್ದನ್ನು ಕಂಡುಹಿಡಿದು ನೋಬೆಲ್ ಪುರಸ್ಕಾರವನ್ನು ಪಡೆಯಬೇಕು ಅನ್ನಿಸುತ್ತದೆ. ಕೀಟ್ಸ್, ಶೆಲ್ಲಿಯರ ಕವನಗಳನ್ನು, ಡಿಕನ್ಸ್, ಮಾಮ್, ನಾರಾಯಣ್ ಮುಂತಾದವರ ಕಾದಂಬರಿಗಳನ್ನು ಓದುವಾಗ ತಾನೂ ಒಬ್ಬ ಕವಿಯೋ ಬರಹಗಾರನೋ ಆಗಬೇಕು ಅನಿಸುತ್ತದೆ. ಸಿನಿಮಾಗಳನ್ನು ನೋಡುತ್ತಿರುವಾಗ ದೊಡ್ಡ ನಟನೋ ಡೈರೆಕ್ಟರೋ ಆಗಬೇಕು ಎನಿಸುತ್ತದೆ. ನೆಹರೂ ಬಗ್ಗೆ ಓದಿದಾಗ ತಾನು ಒಬ್ಬ ಜನಪ್ರಿಯ ರಾಷ್ಟ್ರನಾಯಕನಾಗಲು ಪ್ರಯತ್ನಿಸಬೇಕು ಅನಿಸುತ್ತದೆ. ಹಾಗೇ ಗಾಂಧೀಜಿಯ ಆತ್ಮಚರಿತ್ರೆ ಓದುತ್ತಿದ್ದಾಗ ತಾನು ಅವರಂತೆಯೇ ಆದರ್ಶ ಬಾಳನ್ನು ನಡೆಸಿ ಮಹಾಪುರುಷನಾಗ

ಬೇಕೆಂದು ಅನಿಸದೆ ಇರಲಿಲ್ಲ. ವಿಜ್ಞಾನವೇ? ಸಾಹಿತ್ಯವೇ? ರಾಜಕೀಯವೇ? ದೇಶಸೇವೆಯೇ? ಸಿನಿಮಾರಂಗವೇ? ಯಾವುದನ್ನು ತನ್ನ ಕ್ಷೇತ್ರ ರಂಗವನ್ನಾಗಿ ಆರಿಸಿಕೊಳ್ಳುವುದು? ಯಾವ ದಿಕ್ಕಿನಲ್ಲಿದೆ ತನ್ನ ನೈಜ ಪ್ರತಿಭೆ? ಚಂದ್ರುವಿಗೆ ಖಚಿತವಾಗಿ ಗೊತ್ತಿಲ್ಲ. ಇದರ ಬಗ್ಗೆ ಅವನ ಮನಸ್ಸಿನಲ್ಲಿ ಸದಾ ಗೊಂದಲ. ಹೇಗೋ ಏನೋ ಬದುಕಿನಲ್ಲಿ ತಾನೂ ಒಬ್ಬ ಅಸಾಧಾರಣ ವ್ಯಕ್ತಿ ಎನಿಸಿಕೊಳ್ಳಬೇಕು. ತನ್ನ ಹೆಸರು ಮತ್ತು ಫೋಟೋ ಪತ್ರಿಕೆಗಳಲ್ಲಿ ಆಗಾಗ್ಗೆ ಅಚ್ಚಾಗಿ ತಾನು ಪ್ರಸಿದ್ಧನಾಗಬೇಕೆಂಬ ಮಹತ್ವಾಕಾಂಕ್ಷೆ. ಚಂದ್ರುವಿನ ಮನಸ್ಸನ್ನು ಹಗಲೂ ಇರುಳೂ ಬಾಧಿಸುತ್ತದೆ. ಇದರ ಸಲುವಾಗಿಯೇ "Make the Most Your of Life," "Discover Your Personality," "A Guide to Successful Living," ಮುಂತಾದ ಹಲವಾರು ಪುಸ್ತಕಗಳನ್ನು ಪದೇ ಪದೇ ಓದುತ್ತಾನೆ. ತನ್ನ ಸಮಸ್ಯೆ ಬಗೆಹರಿಯಬಹುದೇನೋ ಎಂಬ ಆಸೆಯಿಂದ. ಆದರೆ ಏನೂ ಪ್ರಯೋಜನವಿಲ್ಲ.

ಶ್ರೀನಿವಾಸರಾಯರಿಗೆ ಮಗ ತಮ್ಮ ವೃತ್ತಿಯನ್ನೇ ಅವಲಂಬಿಸಲಿ ಎಂಬ ಇಚ್ಛೆ. 'ಇದರಲ್ಲಿರುವದಕ್ಕಿಂತ ಒಳ್ಳೆಯ ಭವಿಷ್ಯ ಬೇರೆ ಯಾವ ವೃತ್ತಿಯಲ್ಲೂ ಇಲ್ಲ' ಎನ್ನುತ್ತಾರೆ. ಆದರೆ ಚಂದ್ರುವಿಗೆ ಅಪ್ಪನ ಕಸುಬು ಸ್ವಲ್ಪವೂ ಇಷ್ಟವಿಲ್ಲ. ಅದರ ಬಗ್ಗೆ ಅವನು ಎಷ್ಟು ನಿರಾಸಕ್ತಿ ತಾಳಿದ್ದಾನೆಂದರೆ ಅಪ್ಪನ ಕಂಪನಿ ಏನೇನು ರಫ್ತು ಮಾಡುತ್ತದೆ, ಆಮದು ಮಾಡುತ್ತದೆ ಎಂಬ ವಿವರಗಳನ್ನು ಸರಿಯಾಗಿ ತಿಳಿದುಕೊಳ್ಳುವ ಗೋಜಿಗೇ ಹೋಗಿಲ್ಲ. ಬಿಸಿನೆಸ್ ಎಂದರೇನೇ ಚಂದ್ರುವಿಗೆ ತಿರಸ್ಕಾರ. ಅದರಲ್ಲಿ ಹಣ ಬೆಳೆಸುವುದನ್ನು ಬಿಟ್ಟರೆ ಇನ್ನೇನಿದೆ ಮಣ್ಣು ಎಂಬುದೇ ಅವನ ವಿಚಾರ. ಚಂದ್ರು ಅಪೇಕ್ಷಿಸುವುದು ಸಿರಿಯನ್ನಲ್ಲ, ಕೀರ್ತಿಯನ್ನು.

ಮಲ್ಲೇಶ್ವರದಿಂದ ಹೊರಟು ಟಾಟಾ ಇನ್ಸ್ಟಿಟ್ಯೂಟ್ ಮಾರ್ಗ ಯಶವಂತಪುರದವರೆಗೂ ನಡೆದು ಅಲ್ಲೇ ಕಾಫಿ ಬಾರ್ ಒಂದರಲ್ಲಿ ಒಂದು ಕಪ್ ಕಾಫಿ ಹೀರಿ ಪುನಃ ಬಂದ ದಾರಿಯಲ್ಲೇ ಮನೆಗೆ ಮರಳಿ ಬರುವ ವೇಳೆಗೆ ಎಂಟು ಗಂಟೆಯಾಗಿತ್ತು. ಮಹಡಿಯಲ್ಲಿ ಊಟಗಳು ಮುಗಿದುಹೋಗಿದ್ದುವು. ರಾಯರು ಅದಾಗಲೇ ಒಳಗೆ ಮಲಗಿದ್ದರು. ಬಹುಶಃ ತನ್ನ ಫ್ರೆಂಡ್ ಮನೆಯಲ್ಲಿ ಕುಳಿತು 'ಬ್ರಿಡ್ಜ್' ಆಡುತ್ತಿರಬಹುದು ಎಂದುಕೊಂಡ ಚಂದ್ರು. ಮನೆಯಲ್ಲಿ ಅಡಿಗೆಯ ರಂಗ ಒಬ್ಬನೇ ಇದ್ದ. ಬಂದದ್ದಕ್ಕೆ ಅವನ ಉತ್ತರ ಬಂದಿತು. 'ಊಟ?' 'ಇಷ್ಟು ಸ್ವಲ್ಪ ಹಾಲಿದೆ' ಎಂದು ಬಡಿಸಿದ. ಚಿಕ್ಕದೆ ಒಂದು ಲೋಟ ಹಾಲು ತಂದು ಬಡಿಸಿದ. ಇದನ್ನೇ ಕುಡಿದ. ಎದೆ ಗಟಗಟ ಎಂದ. ಕೈ ತೊಳೆದ. ಮಹಡಿ ಮೆಟ್ಟಿಲು ಹತ್ತಿದ. ತನ್ನ ಕೊಠಡಿ ಸೇರಿಕೊಂಡನು.

ಬರೆಯುವ ಮೇಜಿನ ಮುಂದೆ ಕುಳಿತು ಪ್ರಾಜೆಕ್ಟ್ ರಿಪೋರ್ಟ್ ಬರೆಯತೊಡಗಿದ. ಕಳೆದ ವಾರದ್ದು ಈ ವಾರದ್ದು ಸೇರಿ ಒಟ್ಟು ನಾಲ್ಕು ಪ್ರಯೋಗಗಳನ್ನು ಸಮರ್ಥಿಸಬೇಕಾಗಿತ್ತು. ಲೆಕ್ಚರರನ್ನು ಮೆಚ್ಚಿಸಬೇಕಾದರೆ ರಿಪೋರ್ಟ್ ಚೆಂದ ಬರೆಯಬೇಕು. ಅಂದರೆ ನಿಧಾನವಾಗಿ ತಾಳ್ಮೆಯಿಂದ ಬರೆಯಬೇಕು. ಬಲು ಬೇಸರದ ಕೆಲಸ. ಎರಡು ಪ್ರಯೋಗಗಳನ್ನು ವಿವರಿಸುವಷ್ಟರಲ್ಲೇ ಜೋರಾಗಿ ಬೆರಳುಗಳಲ್ಲಿ ನೋವು ಶುರುವಾಯಿತು. ಪೆನ್ನು ಕೆಳಗಿಟ್ಟು ಆಕಳಿಸಿ ಮೈ ಮುರಿದ. ವಾಚ್ ನೋಡಿದ. ಒಂಬತ್ತೂಕಾಲು. ಕೆಳಗಿನಿಂದ ಸದ್ದೇ ಇಲ್ಲ. ಅಪ್ಪ ಇನ್ನೂ ಬಂದಿಲ್ಲ. ಅಮ್ಮ ಏನು ಮಾಡುತ್ತಿರುವಳೋ? ಯಾವುದಾದರೂ ವಾರಪತ್ರಿಕೆಯನ್ನೋ ಕಾದಂಬರಿಯನ್ನೋ ಓದುತ್ತಿರಬಹುದು. ಅಥವಾ ಅಪ್ಪನಿಗಾಗಿ ಕಾದು ಕಾದು ಹಸಿವಿನಿಂದ, ಬೇಸರದಿಂದ ಬಳಲಿ ಕುರ್ಚಿಯಲ್ಲೇ ತೂಕಡಿಸುತ್ತಿರಬಹುದು. ಅಬ್ಬಾ! ಎಷ್ಟು ನಿಶ್ಶಬ್ದವಾಗಿದೆ ಈ ಮನೆ? ಸ್ಮಶಾನದಂತೆ. ಈ ಮನೆಗೆ ಜೀವಂತ ಕಳೆ ಅನ್ನುವುದು ಏನಾದರೂ ಇದ್ದರೆ ಅದು ಅಪ್ಪನ ಆರ್ಭಟ ಇರುವುದರಿಂದಲೇ ಅಲ್ಲವೇ ಎಂಬ ವಿಚಾರ ಚಂದ್ರುವಿನ ಮನಸ್ಸಿನಲ್ಲಿ ಸುಳಿದು ಅವನ ತುಟಿಯಂಚಿನಲ್ಲಿ ವಿಷಾದದ ನಗುವಿನ ಛಾಯೆ ಮೂಡಿಸಿತು. ಪ್ರತಿ ದಿನ ಸಂಜೆ ಏಳು ಗಂಟೆಯ ಹೊತ್ತಿಗೆ ಫೋನ್

ರೈಟರುಗಳ ಟಕಟಕ ಸದ್ದು, ಆಫೀಸ್ ವ್ಯವಹಾರದ ಗಜಿಬಿಜಿ ನಿಂತರೆ ಸಾಕು. ಈ ಮನೆಯನ್ನು ಒಂದು ಬಗೆಯ ಭೀಕರ ಮೌನ ಆವರಿಸಿಬಿಡುತ್ತದೆ. ನಾವು ಮೂರು ಜನ ಮನೆಯಲ್ಲಿ ಇದ್ದರೂ ಇದ್ದಂತಿಲ್ಲ. ಅಪ್ಪನ ಪಾಡು ಅಪ್ಪನಿಗೆ, ಅಮ್ಮನ ಪಾಡು ಅಮ್ಮನಿಗೆ. ತನ್ನ ಪಾಡು ತನಗೆ. ಅಪರಿಚಿತರಂತೆ ಇದ್ದು ಬಿಡುತ್ತೇವೆ. ಒಂದು ಹರಟೆ, ತಮಾಷೆ, ಮಾತುಕತೆ ಏನೂ ಇಲ್ಲ. ಕೊನೆಗೆ ಒಟ್ಟಿಗೆ ಕುಳಿತು ಊಟ ಮಾಡುವುದು ಯಾವಾಗಲೋ ಒಮ್ಮೊಮ್ಮೆ... ಹಬ್ಬದ ದಿನಗಳಲ್ಲೋ ಅಥವಾ ಯಾರಾದರೂ ನೆಂಟರಿಷ್ಟರು ಮನೆಗೆ ಬಂದಾಗ ಮಾತ್ರ.

ಚಿಕ್ಕಂದಿನಿಂದಲೂ ತನಗೆ ಈ ಮನೆಯೆಂದರೆ ಏಕೋ ಬೇಸರ. ಇತ್ತೀಚೆಗಂತೂ ಇಲ್ಲಿನ ಬಿಗಿ ವಾತಾವರಣ, ಭಯಂಕರ ಒಂಟಿತನ, ಅಪ್ಪನ ಶಿಸ್ತು, ದಬ್ಬಾಳಿಕೆ, ಅಮ್ಮನ ಮೂಕ ವೇದನೆ ಎಲ್ಲಾ ಅಸಹನೀಯವಾಗತೊಡಗಿದೆ. ಎಷ್ಟೋ ಸಲ ಇಲ್ಲಿಂದ ಹೊರಟುಹೋಗಿಬಿಡಬೇಕು ಅನ್ನಿಸಿಬಿಡುತ್ತದೆ. ಆದರೆ ಸದ್ಯದಲ್ಲಂತೂ ಅದು ಸಾಧ್ಯವಿಲ್ಲ. ತಾನೊಬ್ಬ ಪದವೀಧರನಾಗಿ ಒಂದು ಉದ್ಯೋಗ ಗಿಟ್ಟಿಸಿಕೊಳ್ಳುವವರೆಗಾದರೂ ತಾನು ಇಲ್ಲಿ ಇರಲೇಬೇಕು. ಆ ನಂತರ ಖಂಡಿತ ಇಲ್ಲಿ ನಿಲ್ಲಬಾರದು. ಅಪ್ಪನ ಮಾತಿಗೆ ಕಟ್ಟುಬಿದ್ದು ಅವನ ವಿಧೇಯ ಪುತ್ರ ಎನ್ನಿಸಿಕೊಂಡು ಅವನ ನೆರಳಿನಲ್ಲೇ ಕೊಳೆಯುತ್ತಾ ತನ್ನ ಜೀವನವನ್ನು ಹಾಳುಮಾಡಿಕೊಳ್ಳಬಾರದು. ಎಲ್ಲಿಯಾದರೂ ದೂರದ ಜಾಗದಲ್ಲಿ ಹೋಗಿ ನೆಲಸಿಬಿಡಬೇಕು. ಜೊತೆಯಲ್ಲಿ ಶಾರದಳನ್ನು ಕೊಂಡೊಯ್ದರೆ ಎಷ್ಟು ಚೆನ್ನ! ತಾನು ಮದುವೆಯಾದರೆ ಅವಳನ್ನೇ ಅಥವಾ ಅಂತಹವಳನ್ನೇ. ತಾನು, ಶಾರದ ಮದುವೆಯಾಗಿ ಸಂಸಾರ ಹೂಡಿದಂತೆ, ತಾನು ಬೆಳಗ್ಗೆ ಅರೆನಿದ್ದೆಯಲ್ಲಿರಬೇಕಾದರೆ ಅವಳು ಸ್ನಾನಮಾಡಿ ಶುಭ್ರವಾಗಿ ತನ್ನ ಒದ್ದೆ ಕೂದಲನ್ನು ಬೆನ್ನ ಮೇಲೆ ಚೆಲ್ಲಿ 'ಜ್ಯೋತಿ ಕಲಶ ಜಲಕೆ...' ಎಂಬ ಉದಯರಾಗ ಹಾಡುತ್ತಾ ಬಂದು ತನ್ನನ್ನು ಎಬ್ಬಿಸುವ ಆದರ್ಶ ದಾಂಪತ್ಯ ಜೀವನದ ದೃಶ್ಯವನ್ನು ಸಿನಿಮಾಗಳಲ್ಲಿ ತೋರಿಸುತ್ತಾರಲ್ಲ ಅದೇ ತರಹ—ತಾನು ಎಷ್ಟು ಬಾರಿ ಹಗಲುಗನಸು ಕಂಡಿಲ್ಲ. ಆಹ್! ಎಷ್ಟು ಉಲ್ಲಾಸವಾಗಿರಬಹುದು. ಆ ಜೀವನ! ಶಾರದ ತನ್ನೊಡನೆ ಬರಲು ಒಪ್ಪುವಳೇ? ಅವಳ ಮೈತ್ರಿ ಬೆಳಸಿ ಅವಳನ್ನೇ ಕೇಳಬೇಕು...

ಎಂದು ಯೋಚಿಸುತ್ತಾ ಚಂದ್ರು ಮತ್ತೊಮ್ಮೆ ವಾಚು ನೋಡಿ ರೇಡಿಯೋವನ್ನು ವಿವಿಧ ಭಾರತಿಗೆ ಟ್ಯೂನ್ ಮಾಡಿದ. ಬೆಳಿಗ್ಗೆ ಸಿಲೋನ್‌ನಿಂದ ಕೇಳಿಬಂದ ಹಾಡೇ ಈಗ ಮತ್ತೆ ಕೇಳಿಬಂದಿತು... 'ತೇರೆ ಮೇರೆ ಸಪನೆ.'

ಹಾಡನ್ನು ಆಲಿಸುತ್ತಾ ಚಂದ್ರು ಕುರ್ಚಿಯಿಂದ ಎದ್ದು ಹಾಸಿಗೆಯಲ್ಲಿ ಅಡ್ಡಲಾಗಿ ಹಾಗೇ ಕಣ್ಮುಚ್ಚಿದ. ✡

ಡೈವೋರ್ಸ್ ಕೇಸಿನ ಪ್ರೊಸೀಡಿಂಗ್ಸ್ ನಡೆಯುತ್ತಿತ್ತು.

''ನಿನಗೆ ವಿವಾಹ ವಿಚ್ಛೇದನ ಏಕೆ ಬೇಕಮ್ಮ?" ನ್ಯಾಯಾಧೀಶರು ಫಿರ್ಯಾದಿಯನ್ನು ಪ್ರಶ್ನಿಸಿದರು.

"ಆರು ವರ್ಷಗಳಿಂದ ನಾನೇ—ಪ್ರತಿ ಶನಿವಾರ—ಅವರ ಬೆನ್ನನ್ನು ತುರಿ—ಕಲ್ಲಿನಿಂದ ಉಜ್ಜಿ ಸ್ವಚ್ಛ ಮಾಡುತ್ತಿದ್ದೇನೆ..."

ನ್ಯಾಯಾಧೀಶರು ಮಧ್ಯೆ ಬಾಯಿ ಹಾಕಿ ಹುಬ್ಬೇರಿಸುತ್ತಾ, "ಅದಕ್ಕೆ?...?" ಎಂದು ಆಕೆಯನ್ನು ಪ್ರಶ್ನಿಸಿದರು.

"...ಆದರೆ ಹೋದ ಶನಿವಾರ ಅವರ ಬೆನ್ನನ್ನು ಸ್ವಚ್ಛ ಮಾಡಲು ಹೋದಾಗ, ಅವರ ಬೆನ್ನು ನಾನು ಉಜ್ಜುವ ಮೊದಲೇ ಸ್ವಚ್ಛವಾಗಿತ್ತು," ಎಂದು ಉತ್ತರಿಸಿದಳು.

—ಎಸ್. ವಿಶ್ವನಾಥ

ಏರುಸಿರು ಮತ್ತು ಎದೆಹಾರುವಿಕೆ

ಡಾ. ಕೆ. ಎಂ. ಧ್ರುವಕುಮಾರ

ಅನಿಸಿಕೆಯನ್ನು ದಮನ ಮಾಡಿದರೆ ಆಗುವ ಅವಪ್ರಜ್ಞೆಯ ಅವಾಂತರವಿದು.
ಹೊರನೋಟಕ್ಕೇನೂ ಕಾಣದು, ಒಳಗೊಳಗೇ ಕೊರೆಯದೇ ಇರದು.

ಅದೊಂದು ಶನಿವಾರದ ದಿನ. ವಾರದ ಕೊನೆಯ ದಿನವಾದುದರಿಂದ ಸಾಮಾನ್ಯವಾಗಿ ಶನಿವಾರದ ದಿನ ಕ್ಲಿನಿಕ್‌ನಲ್ಲಿ ಹೆಚ್ಚು ಕೆಲಸವಿರುತ್ತದೆ, ಮತ್ತು ಕ್ಲಿನಿಕ್ಕನ್ನು ಮುಚ್ಚುವುದು ಒಂದೆರಡು ತಾಸುಗಳು ನಿಧಾನವಾಗುವುದು ಸರ್ವೇಸಾಮಾನ್ಯ. ಆದರೆ ಆ ಶನಿವಾರದ ದಿನ ಕ್ಲಿನಿಕ್ ಮುಚ್ಚಲು ವಿಳಂಬವಾಗುವುದಿಲ್ಲವೆಂದು ತಿಳಿದು ಒಂದು ರೀತಿಯಲ್ಲಿ ನನಗೆ ಸಂತೋಷವಾಯಿತು. ಆ ದಿನವಾದರೂ ನನ್ನ ಅರ್ಧಾಂಗಿ ಮತ್ತು ಮಕ್ಕಳನ್ನು ಎಲ್ಲಿಯಾದರೂ ಕರೆದುಕೊಂಡು ಹೋಗಬಹುದೆಂದು ಯೋಚಿಸುತ್ತಲೇ ಹೊರಡಲನುವಾದೆ. ಅಷ್ಟರಲ್ಲೇ ನನ್ನ ರಿಸೆಪ್ಷನಿಸ್ಟ್, ಡಾ. ಥಾಮಸ್‌ರವರು ಫೋನ್ ಮಾಡಿದ್ದಾರೆ ಎಂದು ತಿಳಿಸಿದಳು. ಡಾ. ಥಾಮಸ್‌ರವರು ಫಿಜಿ ದ್ವೀಪದಿಂದ ಯಾರೋ ಬಂದಿರುವರೆಂದೂ ಮತ್ತು ಅವರು ಅಲ್ಲಿಗೆ ಸದ್ಯದಲ್ಲೇ ಹಿಂತಿರುಗುವವರಾಗಿದ್ದಾರೆಂದೂ ತಿಳಿಸಿ ಆ ದಿನವೇ ಅವರನ್ನು ಪರೀಕ್ಷಿಸಿ ನನ್ನ ಸಲಹೆ ನೀಡಲು ಸಾಧ್ಯವೇ ಎಂದು ಕೇಳಿದರು.

ಮನೆಗೆ ಹೋಗುವ ಬದಲು ಡಾ. ಥಾಮಸ್‌ರವರ ನರ್ಸಿಂಗ್ ಹೋಮ್ ಕಡೆ ಹೊರಟೆ. ಡಾ. ಥಾಮಸ್‌ರವರು ೪೬ ವರ್ಷದ ಪಾದ್ರಿ ಜಾನ್‌ರವರನ್ನು ಪರಿಚಯ ಮಾಡಿಕೊಟ್ಟರು. ಜಾನ್‌ರವರಿಗೆ ಸುಮಾರು ಒಂದು ವರ್ಷದಿಂದ ಏರುಸಿರು ಮತ್ತು ಎದೆ ಹಾರುವಿಕೆ. ಈಗ ಒಂದು ತಿಂಗಳಿನಿಂದ ಅದು ಅತಿ ಹೆಚ್ಚಾಗಿತ್ತು. ಡಾ. ಥಾಮಸ್‌ರವರು ಅವರನ್ನು ಸಂಪೂರ್ಣವಾಗಿ ಪರೀಕ್ಷಿಸಿದ್ದರು. ಎದೆಯ ಎಕ್ಸ್‌ರೇ, ರಕ್ತಪರೀಕ್ಷೆ, ಮೂತ್ರಪರೀಕ್ಷೆ, ಎಲೆಕ್ಟ್ರೋಕಾರ್ಡಿಯೋಗ್ರಾಂ ಮುಂತಾದುವುಗಳನ್ನೆಲ್ಲಾ ಮಾಡಿದರೂ ಯಾವುದರಲ್ಲೂ ದೈಹಿಕ ಕಾಯಿಲೆಗಳಿರುವ ಸೂಚನೆ ಕಂಡುಬರಲಿಲ್ಲ. ಆಗ ಸಂದಿಗ್ಧಕ್ಕೊಳಗಾದ ಅವರು ಇದು ಮಾನಸಿಕವಾಗಿರಬಹುದೇ ಎಂದು ನನ್ನನ್ನು ಕರೆಸಿದ್ದರು.

'ಏನು ತೊಂದರೆ?'

ಜಾನ್‌ರವರು ಸುಮಾರು ೫॥ ಅಡಿ ಎತ್ತರ ಮತ್ತು ೧೨೫ ಪೌಂಡ್ ತೂಕದ ಮನುಷ್ಯ. ಪರಿ

(ನೈಜ ಘಟನೆ. ರೋಗಿ ಯಾರೆಂಬುದನ್ನು ರಹಸ್ಯವಾಗಿಡಲೋಸುಗ ಕಾಲ್ಪನಿಕ ಹೆಸರು ನೀಡಲಾಗಿದೆ.)

ಚಯ ಮಾಡಿಕೊಟ್ಟ ಸಮಯದಲ್ಲಿ ಕೈ ಕುಲುಕಿದಾಗ ಅವರ ಕೈ ಬೆವರಿತ್ತು. ಅವರನ್ನು ಕರೆಯುವಾಗ ಧ್ವನಿ ಮತ್ತು ಮಾತನಾಡುವಾಗ ಕೆಲವು ಬಾರಿ ತೊದಲುತ್ತಿದ್ದರು. ಕೈಗಳಲ್ಲಿ ನಡುಕ ಮತ್ತು ಮನಸ್ಸಿನಲ್ಲಿ ಏನೋ ಆತಂಕವುಳ್ಳವರಾಗಿದ್ದರು. ಏನೋ ಹೆದರಿಕೆಯೂ ಇದ್ದಂತೆ ಕಂಡಿತು. ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿ ಅವರ ತೊಂದರೆಯ ಬಗ್ಗೆ ವಿಚಾರಿಸಲು ಮೊದಲು ಮಾಡಿದೆ. ಸುಮಾರು ಒಂದು ವರ್ಷದ ಹಿಂದೆ ನಿದ್ರೆಯ ತೊಂದರೆ ಪ್ರಾರಂಭವಾಯಿತು. ಒಂದು ದಿನ ನಿದ್ರೆ ಬಂದರೆ ಇನ್ನೊಂದು ದಿನ ಕಷ್ಟವಾಗುತ್ತಿತ್ತು. ಈಚೀಚೆಗಂತೂ ಪ್ರತಿದಿನವೂ ಈ ತೊಂದರೆಯಿರುತ್ತಿತ್ತು. ಆಕಸ್ಮಾತ್ ನಿದ್ರೆ ಬಂದರೆ ನಿದ್ರೆಯೇ ಬಂದಿಲ್ಲವೇನೊ ಎಂಬ ಅತೃಪ್ತಿಯಿರುತ್ತಿತ್ತು. ನಿದ್ರೆಯ ತೊಂದರೆ ಪ್ರಾರಂಭವಾದ ಒಂದು ತಿಂಗಳ ನಂತರ ಇದ್ದಕ್ಕಿದ್ದಂತೆ ಒಂದು ರಾತ್ರಿ ಎಚ್ಚರವಾಗಿ ಉಸಿರಾಡಿಸಲು ಕಷ್ಟವಾಯಿತು. ಉಸಿರಾಡುವ ತೊಂದರೆ ಈಚೀಚೆಗಂತೂ ಪ್ರತಿ ರಾತ್ರಿಯೂ ಆಗುತ್ತಿತ್ತು. ಉಸಿರು ಸಿಕ್ಕಿಕೊಂಡಂತಾಗಿ ಕತ್ತಿನ ಮತ್ತು ಎದೆಯ ಮಾಂಸ ಖಂಡಗಳು ಸೆಳೆಯುವುವು. ಆಗ ಶರೀರವೆಲ್ಲಾ ಬೆವರುವುದು, ಉಸಿರಾಡಲು ಬಹಳ ಕಷ್ಟವಾದಾಗ ಎಲ್ಲಿ ಸತ್ತೇ ಹೋಗುವೆನೋ ಎಂಬ ಭಯವಾಗುವುದೆಂದರು. ಇಂತಹ ಸಂದರ್ಭಗಳಲ್ಲಿ ಎದೆಹಾರುವಿಕೆ ಕೂಡ ಆಗುವುದೆಂದರು. ಎದೆಹಾರಿಕೆ ಮತ್ತು ರಭಸವಾಗಿ ತ್ತೆಂದರೆ ಜಾನ್‌ರವರಿಗೆ ಬಹುಶಃ ಹೃದಯ ರೋಗವಿದ್ದರೂ ಇರಬಹುದೆಂಬ ಅನುಮಾನ ಕೂಡ ಉಂಟಾಗಿತ್ತು. ಫಿಜಿ ದ್ವೀಪದಲ್ಲಿ ಒಳ್ಳೆಯ ವೈದ್ಯರು ಅವರನ್ನು ಪರೀಕ್ಷಿಸಿ, ದೈಹಿಕ ಕಾಯಿಲೆಗಳಾವುವೂ ಇಲ್ಲವೆಂದು ತಿಳಿಸಿದ್ದರು. ಇದು ನಿಶ್ಶಕ್ತಿಯಿಂದುಂಟಾಗಿರಬಹುದೆಂದು ಕೆಲವು ಟಾನಿಕ್‌ಗಳನ್ನು ತೆಗೆದುಕೊಳ್ಳಲು ಹೇಳಿದ್ದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಒಂದು ತಿಂಗಳಿನಿಂದ ತಮ್ಮ ತೊಂದರೆ ಸಹಿಸಲು ಸಾಧ್ಯವಾಗದಷ್ಟು ಹೆಚ್ಚಿದೆಯೆಂದು ಹೇಳಿದರು.

ಇದ್ದೂ 'ಇಲ್ಲ'ದ ಕೊರಗು

ಜಾನ್‌ರವರು ಕೇರಳದಲ್ಲಿ ಹುಟ್ಟಿ ಬೆಳೆದವರು. ಅವರ ತಂದೆ–ತಾಯಿಗಳಿಗೆ ಕ್ರೈಸ್ತ ಧರ್ಮದಲ್ಲಿ ಬಹು ಆಸಕ್ತಿಯಿದ್ದು ತಮ್ಮ ಮಗ ದೊಡ್ಡ ಪಾದ್ರಿಯಾಗಿ ಹಲವಾರು ಜನರಿಗೆ ಸಹಾಯ ಮಾಡುವಂತಾಗಬೇಕೆಂಬ ಕನಸುಳ್ಳವರಾಗಿದ್ದರು. ಮಾತಾ–ಪಿತೃಗಳಿಗೆ ವಿಧೇಯರಾಗಿದ್ದ ಜಾನ್ ಅವರ ಕನಸನ್ನು ನನಸುಗೊಳಿಸಿದ್ದರು. ದೇವರ ಮತ್ತು ಜನರ ಸೇವೆಯಲ್ಲಿ ನಿರತರಾಗಿದ್ದು ಮದುವೆಯನ್ನು ಸಹ ಮಾಡಿಕೊಳ್ಳಲಿಲ್ಲ. ಮಾತಾ–ಪಿತೃಗಳು ತಮ್ಮ ಮೆಚ್ಚಿನ ಮಗನ ಏಳಿಗೆಯನ್ನು ನೋಡಿ ಹೆಮ್ಮೆಪಡಲು ಬಹುಕಾಲ ಉಳಿಯಲಿಲ್ಲ. ಜಾನ್‌ರವರಿಗೆ ಸಹೋದರ ಸಹೋದರಿಯರೂ ಇಲ್ಲವಾಗಿದ್ದು ಮಾತಾ–ಪಿತೃಗಳ ನಿಧನದ ನಂತರ ಧರ್ಮಕಾರ್ಯಗಳಲ್ಲಿ ಇನ್ನೂ ಹೆಚ್ಚಾಗಿ ನಿರತರಾದರು. ಅವರ ನಿಸ್ಪೃಹ ಸೇವೆಯನ್ನು ಮೆಚ್ಚಿ ಕೆಲವು ಕ್ರೈಸ್ತ ಧರ್ಮಾಧಿಕಾರಿಗಳು ಅವರನ್ನು ಐದು ವರ್ಷಗಳ ಹಿಂದೆ ಫಿಜಿ ದ್ವೀಪಕ್ಕೆ ಕಳುಹಿಸಿದರು. ಸೇವೆಯೇ ತಮ್ಮ ಗುರಿ ಎಂದು ತಿಳಿದಿದ್ದ ಜಾನ್‌ರವರು ಸ್ಥಳೀಯರಿಗೆ ಬಹುಬೇಗ ಅಚ್ಚುಮೆಚ್ಚಿನವರಾದರು. ಸುಮಾರು ಆರು ತಿಂಗಳ ಹಿಂದೆ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ್ದನ್ನು ಇನ್ನೂ ಹೆಚ್ಚಾಗಿ ಅಭ್ಯಸಿಸಲು ಭಾರತಕ್ಕೆ ಬಂದಿದ್ದರು. ಅಭ್ಯಾಸ ಮುಗಿದಿದ್ದು ಇನ್ನು ಆರು ದಿನಗಳಲ್ಲಿ ಅವರು ಫಿಜಿಗೆ ವಾಪಸ್ಸಾಗಬೇಕಾಗಿದ್ದ ಸಮಯವದು. ಜಾನ್‌ರವರು ತಮಗೆ ಯಾವ ರೀತಿಯ ಕೊರಗೂ ಇಲ್ಲವೆಂದರು. ಇಂತಹ ಸಂದರ್ಭಗಳಲ್ಲಿ ಕನಸುಗಳ ವಿವರಗಳಿಂದ ತೊಂದರೆಯ ಮೂಲವನ್ನು ತಿಳಿಯಲು ಸಾಧ್ಯವಾಗುವುದು. ಆದರೆ ಜಾನ್‌ರವರಿಗೆ ಬೀಳುವ ಕನಸುಗಳ ಜ್ಞಾಪಕವಿರಲಿಲ್ಲ. ಫಿಜಿ ದ್ವೀಪಕ್ಕೆ ಹಿಂತಿರುಗುವ ಬಗ್ಗೆ ಆತಂಕವೇನಾದರೂ ಇರಬಹುದೇ ಎಂದು ವಿಚಾರಿಸಿದೆ. ತಮಗೆ ಅಂತಹ ಆತಂಕವೇನೂ ಇಲ್ಲವೆಂದೂ, ಮತ್ತು ಫಿಜಿಗೆ ಹೋಗಲು ತಮಗೆ ಬಹಳ ಇಷ್ಟವಿದೆಯೆಂದೂ ಹೇಳಿದರು.

ಜಾನ್‌ರವರನ್ನು ಮಂಚದ ಮೇಲೆ ಮಲಗಿಸಿ ಅವರ ಶರೀರವನ್ನು ಪರೀಕ್ಷಿಸಿ ಯಾವ ಶಾರೀರಿಕ ಕಾಯಿಲೆಯೂ ಇಲ್ಲವೆಂದು ನಾನೇ ಸ್ವತಃ ಖಚಿತ ಮಾಡಿಕೊಂಡೆ. ನರರೋಗಗಳ ಚಿಹ್ನೆಗಳು ಕೂಡ ಕೆಲವು ಸಮಯ ಇದೇ ರೀತಿಯಿರುವುದ

ರಿಂದ ನರರೋಗಗಳ್ಯಾವೂ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಜಾನ್‌ರವರಲ್ಲಿ ಇದನ್ನು ಸಹ ಖಚಿತಪಡಿಸಿಕೊಂಡ ನಂತರ ಅವರ ತೊಂದರೆಯನ್ನು ಯಾವ ರೀತಿ ಬಗೆಹರಿಸಬೇಕು ಎಂಬುದು ಒಂದು ಸಮಸ್ಯೆಯಾಗಿಯೇ ಉಳಿಯಿತು. ಮಾನವನಲ್ಲಿ ಯಾವ ದೈಹಿಕ ಬೇನೆಯೇ ಆಗಿರಲಿ, ಅದು ಎರಡು ಕಾರಣಗಳಿಂದಾಗಲು ಮಾತ್ರ ಸಾಧ್ಯ. ದೈಹಿಕ ಬೇನೆಗಳು ಶಾರೀರಿಕ ಕಾಯಿಲೆಯಿಂದುಂಟಾಗಿರಬಹುದು ಅಥವಾ ಮಾನಸಿಕ ಅಸ್ವಸ್ಥತೆಯಿಂದುಂಟಾಗಿರಬಹುದು. ಜಾನ್‌ರವರಲ್ಲಿ ಶಾರೀರಿಕ ಕಾಯಿಲೆಗಳಿಲ್ಲವೆಂಬುದು ಹದೇ ಹದೇ ಖಚಿತವಾಗಿತ್ತು. ಇನ್ನುಳಿದ ಕಾರಣ ಮಾನಸಿಕ ಅಸ್ವಸ್ಥತೆಯೊಂದೇ. ಅವರಿಗೆ ನಿದ್ರೆ ಬಾರದಿರುವುದು, ಮಾನಸಿಕ ದುಗುಡ, ಕೈ-ನಡುಕ ಮುಂತಾದುವುಗಳೆಲ್ಲಾ ಮಾನಸಿಕ ಅಸ್ವಾಸ್ಥ್ಯವಿದೆ ಎಂಬುದಕ್ಕೆ ಮತ್ತಷ್ಟು ಸಮರ್ಥನೆ ನೀಡಿತು. ಆದರೆ ಜಾನ್‌ರವರು ತಮಗೆ ಯಾವ ತರಹದ ಕೊರಗೂ ಇಲ್ಲವೆನ್ನುವರು. ಆದರೆ ಈ ರೀತಿ ಮಾನಸಿಕ ತೊಂದರೆಗಳಾಗಬೇಕಾಗಿದ್ದರೆ ಮನಸ್ಸಿನಲ್ಲಿ ಏನೋ ಕೊರೆಯುತ್ತಿರಲೇಬೇಕು. ಅದನ್ನು ಹೇಗೆ ಹೊರಗೆಳೆಯಬೇಕೆಂಬುದೇ ಒಂದು ಸಮಸ್ಯೆಯಾಯಿತು.

ಜಾನ್‌ರವರನ್ನು ಒಂದು ಮಾನಸಿಕ ಪರೀಕ್ಷೆಗೊಳಪಡಿಸಲು ನಿರ್ಧರಿಸಿದೆ. ಇದಕ್ಕೆ ಥೀಮ್ಯಾಟಿಕ್ ಅಪರ್ಸೆಪ್ಶನ್ ಟೆಸ್ಟ್ (Thematic apperception test) ಎಂದು ಕರೆಯುತ್ತೇವೆ. ಇಲ್ಲಿ ರೋಗಿಗೆ ಹಲವಾರು ಚಿತ್ರಗಳನ್ನು ತೋರಿಸಿ ಅವನ ಮನಸ್ಸಿಗೇನು ತೋಚುತ್ತದೆಯೆಂಬುದನ್ನು ತಿಳಿಸಬೇಕೆಂದು ಹೇಳುತ್ತೇವೆ. ರೋಗಿ ವಿವರಣೆ ಕೊಟ್ಟಂತೆಯೂ ನಾವು ಕೆಲವು ಪ್ರಶ್ನೆಗಳನ್ನು ಹಾಕುತ್ತೇವೆ. ರೋಗಿ ಆ ಪ್ರಶ್ನೆಗಳಿಗೆ ಊಹೆ ಮಾಡಿ ಜೀವನ ಸಂದರ್ಭಗಳ ಕತೆಗಳನ್ನು ಕಲ್ಪನೆ ಮಾಡಬೇಕು. ರೋಗಿಯ ಕತೆಗಳ ಕಲ್ಪನೆಯ ರೀತಿಯನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ಅವನ ಮನಸ್ಸಿನಲ್ಲಿ ಏನೋ ಕೊರಗಿದೆಯೆಂಬುದನ್ನು ಅರಿತುಕೊಳ್ಳಬಹುದು. ಈ ಪರೀಕ್ಷೆಯಲ್ಲಿ ಜಾನ್‌ರವರಿಗೆ ಲೈಂಗಿಕ ವಿಷಯದಲ್ಲಿ ಏನೋ ತೊಂದರೆಯಿದೆಯೆಂದು ತಿಳಿದುಬಂದಿತು. ಯಾವ ರೀತಿಯ ಲೈಂಗಿಕ ತೊಂದರೆಯಿರಬಹುದೆಂದು ಸ್ಪಷ್ಟವಾಗಿ ತಿಳಿಯಲಿಲ್ಲ. ರೋಗಿಯನ್ನೂ ಈ ವಿಷಯದ ಬಗ್ಗೆ ನೇರವಾಗಿ ಪ್ರಶ್ನಿಸಲು ಅವರು ತಮಗೆ ಅಂತಹ ಸಮಸ್ಯೆಗಳೇನೂ ಇಲ್ಲವೆನ್ನುತ್ತಿದ್ದರು.

ಪಾಪ-ಪ್ರಜ್ಞೆ

ರೋಗಿಯ ಅಪಪ್ರಜ್ಞೆ(ಸುಪ್ತ ಮನಸ್ಸು ಅಥವಾ ಒಳ ಮನಸ್ಸು)ಯನ್ನು ಶೀಘ್ರವಾಗಿ ಅರಿಯಲು ವಶೀಕರಣ (Hypnosis) ಮತ್ತು ನಾರ್ಕೋ ಪರೀಕ್ಷೆಯೆಂಬ (Narco interview) ಇನ್ನೆರಡು ವಿಧಾನಗಳಿವೆ. ವಶೀಕರಣದಲ್ಲಿ ರೋಗಿ ಒಂದು ಪದಾರ್ಥ ಅಥವಾ ವಿಷಯದ ಮೇಲೆ ತನ್ನ ಚಿತ್ತವನ್ನು ಏಕಾಗ್ರಗೊಳಿಸಿ ದೊಡ್ಡುಸಿರು ತೆಗೆದುಕೊಳ್ಳುತ್ತಿರಬೇಕು. ಚಿಕಿತ್ಸಕರು ಸಲಹೆ ಕೊಟ್ಟು ರೋಗಿಯ ಪ್ರಜ್ಞೆ(ಹೊರ ಮನಸ್ಸು)ಯನ್ನು ನಿದ್ದೆ ಮಾಡುವಂತೆ ಮಾಡುವರು. ಆಗ ರೋಗಿಯ ಅಪಪ್ರಜ್ಞೆಯಲ್ಲಿರುವುದು ತಡೆಯಿಲ್ಲದೇ ಹೊರಗೆ ಬರುತ್ತದೆ. ಇದು ಅತಿ ಸೂಕ್ಷ್ಮ ವಿಧಾನ. ರೋಗಿಯು ಏಕಾಗ್ರತೆಯಿಲ್ಲದೇ ಚಿಕಿತ್ಸಕರ ಸಲಹೆಯನ್ನು ಸರಿಯಾಗಿ ಅನುಕರಿಸದಿದ್ದರೆ ವಶೀಕರಣ ಯಶಸ್ವಿಯಾಗದೇ ಇರಬಹುದು. ಜಾನ್‌ರವರು ಫಿಜಿಗೆ ಇನ್ನು ಆರು ದಿನಗಳಲ್ಲಿ ಹಿಂತಿರುಗುವರಾಗಿದ್ದರಿಂದ ಕಾಲವನ್ನು ವಿಳಂಬ ಮಾಡಲು ಸಾಧ್ಯವಿರಲಿಲ್ಲ. ಆದುದರಿಂದ ಮಾರನೆಯ ದಿನ ಭಾನುವಾರವಾದರೂ ಕೂಡ ನಾರ್ಕೋ ಪರೀಕ್ಷೆ ನಡೆಸಲು ನಿರ್ಧರಿಸಿದೆ. ವಿಜ್ಞಾನ ಮುಂದುವರೆದಷ್ಟೂ ಹೊಸ ಬಗೆಯ ಮತ್ತು ಹೆಚ್ಚು ಯಶಸ್ವಿಯಾದ ವಿಧಾನಗಳು ಬಳಕೆಗೆ ಬರುತ್ತವೆ. ಈ ಪರೀಕ್ಷೆಯಲ್ಲಿ ರೋಗಿಗೆ ಪೆಂಟೊಥಾಲ್ (Pentothal) ಎಂಬ ಔಷಧಿಯನ್ನು ರಕ್ತನಾಳದ ಮೂಲಕ ಕೊಟ್ಟು ಅವನ ಪ್ರಜ್ಞೆಯನ್ನು ನಿದ್ರೆ ಮಾಡುವಂತೆ ಮಾಡಿ ಪ್ರಶ್ನೆಗಳನ್ನು ಹಾಕುತ್ತೇವೆ. ಆಗ ಅವನ ಅಪಪ್ರಜ್ಞೆಯಲ್ಲಿ ಹುದುಗಿರುವುದೆಲ್ಲಾ ಹೊರಬರುತ್ತದೆ. ಜಾನ್‌ರವರನ್ನು ಈ ಪರೀಕ್ಷೆಗೆ ಒಳಪಡಿಸಿದಾಗ ಒಂದು ಬಹು ಮುಖ್ಯ ವಿಷಯ ತಿಳಿದುಬಂದಿತು. ಜಾನ್‌ರವರು ಸುಮಾರು ಒಂದೂವರೆ ವರ್ಷಗಳ ಹಿಂದೆ 'ನನ್'ಗಳ (ಕ್ರೈಸ್ತ ಮತದ ಸಂನ್ಯಾಸಿನಿಯರು) ಜೊತೆ ಹರಟೆ ಹೊಡೆಯಲು ಮೊದಲು ಮಾಡಿದರು. ಈಗ ಒಂದು ವರ್ಷ

ದಿಂದ ಈ ರೀತಿಯ ಹರಟೆ ಅತಿ ಹೆಚ್ಚಾಗುತ್ತಿತ್ತು. ಈ ರೀತಿಯ ಹರಟೆಯಿಂದ ಏನೋ ಒಂದು ರೀತಿಯ ತೃಪ್ತಿ ದೊರೆಯುತ್ತಿತ್ತು. ಅವರು ಲೈಂಗಿಕ ವಾಗಿ ಆಕರ್ಷಿಸಲ್ಪಟ್ಟಿದ್ದಾರೆಂದು ತಿಳಿಯಿತು. ಈ ರೀತಿಯ ಲೈಂಗಿಕ ಆಕರ್ಷಣೆ ಪಾದ್ರಿಯಾದ ತನಗೆ ಪಾಪಕರವೆಂದವರು ತಿಳಿದಿದ್ದರು. ಒಂದು ರೀತಿಯಲ್ಲಿ ಆಕರ್ಷಿತರಾಗಿದ್ದು ಇನ್ನೊಂದು ರೀತಿಯಲ್ಲಿ ಅದನ್ನು ಪಾಪಕರವೆಂದು ತಿಳಿದಾಗ ಮಾನಸಿಕ ತುಮುಲವೇರ್ಪಟ್ಟು ಈ ರೀತಿಯ ತೊಂದರೆಗಳಾಯಿತು ಎಂದು ನಾರ್ಕೋ ಪರೀಕ್ಷೆಯಲ್ಲಿ ತಿಳಿದುಬಂದಿತು. ನಾರ್ಕೋ ಪರೀಕ್ಷೆ ಮುಗಿಸಿ ಸೋಮವಾರ ನನ್ನನ್ನು ಕ್ಲಿನಿಕ್‌ನಲ್ಲಿ ನೋಡಲು ಹೇಳಿ ಕಳುಹಿಸಿದೆ.

ಬರಿ ಕನಸು

ಜಾನ್‌ರವರು ಕ್ಲಿನಿಕ್‌ಗೆ ತಾವು ನಾರ್ಕೋ ಪರೀಕ್ಷೆಯಲ್ಲಿ ಏನು ಹೇಳಿದ್ದೇವೆಂದು ತಿಳಿಯಲು ಬಹಳ ಕಾತರರಾಗಿ ಬಂದರು. ಎಲ್ಲಾ ವಿಷಯಗಳು ತಿಳಿದ ಮೇಲೆ ಅದು ಸರಿಯೆಂದು ಒಪ್ಪಿಕೊಂಡರು. ಅವರು ನನ್‌ಗಳ ಜೊತೆ ಹೆಚ್ಚು ಹೆಚ್ಚಾಗಿ ಹರಟೆ ಕೊಚ್ಚುತ್ತಿದ್ದುದು ಅವರಿಗೆ ತಿಳಿದಿತ್ತೇ ಹೊರತು ತಾವು ಲೈಂಗಿಕವಾಗಿ ಅವರಿಂದ ಆಕರ್ಷಿಸಲ್ಪಟ್ಟಿದ್ದೇನೆಂಬುದು ತಿಳಿದಿರಲಿಲ್ಲವೆಂದರು. ಆ ಹರಟೆಯಲ್ಲಿ ತಮಗೆ ಏನೋ ಒಂದು ಬಗೆಯ ತೃಪ್ತಿ ಇರುತ್ತಿತ್ತೆಂಬುದನ್ನೂ ಅವರು ಮನಗಂಡಿದ್ದರು. ಎರಡು ಬಾರಿ ಒಬ್ಬ ನನ್‌ಳ ಜೊತೆ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿರುವಂತೆ ಕನಸು ಸಹ ಬಿದ್ದಿತ್ತೆಂದು ಆಗ ಅವರ ಜ್ಞಾಪಕಕ್ಕೆ ಬಂದಿತು. ಆ ರೀತಿ ಕನಸು ಬಿದ್ದಾಗ ಇದೆಂತಹ ಕೆಟ್ಟ ಕನಸು ಎಂದು ಅದನ್ನು ಹಾಗೆಯೇ ದಮನ ಮಾಡಿದರು. ಅದು ಇದುವರೆವಿಗೂ ಮರೆತೇ ಹೋಗಿತ್ತು. ಲೈಂಗಿಕ ಆಕರ್ಷಣೆ ಹೆಚ್ಚಿದಷ್ಟೂ ಎದೆ ಹಾರುವಿಕೆ ಮತ್ತು ಏರುಸಿರು ಹೆಚ್ಚಿತ್ತು. ಲೈಂಗಿಕ ಆಕರ್ಷಣೆಯಿದೆಯೆಂದು ಒಪ್ಪಿಕೊಂಡ ನಂತರ ಜಾನ್‌ರವರು ತಮ್ಮ ಮನಸ್ಸು ಕೆಟ್ಟದ್ದು ಮತ್ತು ತಾವು ಕೆಟ್ಟವರು ಎಂದು ಬಹಳ ಪೇಚಾಡಿದರು.ಅವರು ವಾಸ್ತವವಾಗಿ ಲೈಂಗಿಕ ಕ್ರಿಯೆಗಳಲ್ಲಿ ಯಾವಾಗಲೂ ತೊಡಗಿರಲಿಲ್ಲ. ತಾವು ಪಾದ್ರಿಯಾಗಿ ಬಹಳ ಪಾಪ ಮಾಡಿರುವರೆಂದು ಬೇಸರಪಟ್ಟರು. ಅವರು ಪಾದ್ರಿಗಳಾದರೂ ಕೂಡ ಮಾನವರಲ್ಲವೇ ? ಹಾಗಾದರೆ ಸಾಧಾರಣ ಮಾನವನಿಗೂ ಮತ್ತು ಪಾದ್ರಿಯಂತಹ ಅಸಾಧಾರಣ ಮಾನವನಿಗೂ ವ್ಯತ್ಯಾಸವೇ ಇಲ್ಲವೇ ? ಮಾನವಸಹಜವಾದ ದೌರ್ಬಲ್ಯಗಳು ಸಾಧಾರಣ ಮನುಷ್ಯನಿಗೂ ಮತ್ತು ಅಸಾಧಾರಣ ಮನುಷ್ಯನಿಗೂ ಒಂದೇ ರೀತಿಯಲ್ಲಿರುತ್ತವೆ. ಸಾಧಾರಣ ಮನುಷ್ಯ ದೌರ್ಬಲ್ಯಗಳಿಗೀಡಾಗುತ್ತಾನೆ ಮತ್ತು ಅಸಾಧಾರಣ ಪುರುಷ ದೌರ್ಬಲ್ಯಗಳಿದ್ದರೂ ಅವು ಕ್ರಿಯೆಗಳಲ್ಲಿ ರೂಪುಗೊಳ್ಳದಂತೆ ತನ್ನ ಹತೋಟಿಯಲ್ಲಿಡುತ್ತಾನೆ. ಇಲ್ಲಿ ಜಾನ್‌ರವರ ಲೈಂಗಿಕ ಆಕರ್ಷಣೆ ಕೇವಲ ಮಾನಸಿಕವೇ ಹೊರತು ಅವರು ಲೈಂಗಿಕ ಕ್ರಿಯೆಯಲ್ಲಿ ತೊಡಗಿರಲಿಲ್ಲ. ನಾನು ಹೇಳಿದುದನ್ನೆಲ್ಲಾ ಜಾನ್‌ರವರು ಒಂದು ರೀತಿಯಲ್ಲಿ ಒಪ್ಪಿಕೊಂಡರೂ ಇನ್ನೊಂದು ರೀತಿಯಲ್ಲಿ ಒಪ್ಪಿಕೊಳ್ಳಲಿಲ್ಲ. ಅವರ ಮತದ ಪ್ರಕಾರ ಕೆಟ್ಟದ್ದನ್ನು ಯೋಚಿಸುವುದು ಕ್ರಿಯೆಯಲ್ಲಿ ತೊಡಗುವಷ್ಟೇ ಪಾಪಕರ. ಅವರಿಗೆ ನಾನು ಹೇಳಿದುದು ಸರಿಯೇ ಅಥವಾ ತಮ್ಮ ಮತ ಹೇಳಿದುದು ಸರಿಯೇ ಎಂಬುದೇ ಬಗೆಹರಿಯದ ಸಮಸ್ಯೆಯಾಯಿತು. ಇದು ಒಂದು ಮತದ ವಿಷಯವಾದುದರಿಂದ ನಾನು ಅದನ್ನು ಹೆಚ್ಚಾಗಿ ಚರ್ಚಿಸದೆ ಜಾನ್‌ರವರಿಗೆ ಈ ವಿಷಯದ ಬಗ್ಗೆ ತಮ್ಮ ಸಹೋದ್ಯೋಗಿ ಪಾದ್ರಿಗಳಲ್ಲಿ ಚರ್ಚಿಸಲು ಸೂಚಿಸಿದೆ.

ಮಂಗಳವಾರ ಮತ್ತೆ ನನ್ನ ಕ್ಲಿನಿಕ್‌ಗೆ ಜಾನ್‌ರವರು ಬಂದರು. ತಮ್ಮ ಎದೆ ಹಾರುವಿಕೆ, ಏರುಸಿರು, ನಡುಕ ಮುಂತಾದವುಗಳೆಲ್ಲಾ ಮುಕ್ಕಾಲು ಭಾಗ ಕಡಿಮೆಯಾಗಿದೆಂದರು. ಅವರ ಒಬ್ಬ ಸಹೋದ್ಯೋಗಿ ಕೂಡ ಯೋಚನೆ ಮತ್ತು ಕ್ರಿಯೆಗಳ ಬಗ್ಗೆ ನಾನು ಹೇಳಿದುದನ್ನೇ ಸಮರ್ಥಿಸಿದರೆಂದು ತಿಳಿಸಿದರು. ಅವರಿಗೆ ಕ್ರಿಯೆಯನ್ನು ಮತ್ತು ಯೋಚನೆಯನ್ನು ಒಂದೇ ಮಟ್ಟದಲ್ಲಿ ನೋಡುವುದು ತಪ್ಪು ಎಂಬ ಭಾವನೆ ಮೂಡಿತ್ತು. ಆಗ ಜಾನ್‌ರವರಿಗೆ ಇನ್ನೊಂದು ಆತಂಕವಾಯಿತು. ಯೋಚನೆ ಮಾಡಿದ್ದೆಲ್ಲಾ ಎಲ್ಲಿ ಕ್ರಿಯೆಗಳಲ್ಲಿ ರೂಪುಗೊಳ್ಳುತ್ತದೋ ಎಂಬ ಭಯ ಉಂಟಾಯಿತು. ನನ್ನ ಅನುಭವದಲ್ಲಿ ಈ ರೀತಿಯ ಭಯ ಬಹಳ ಜನಕ್ಕಿದೆಯೆಂದು ಕಂಡುಬಂದಿದೆ. ಇದು ಕೇವಲ

ಭಯವೇ ಹೊರತು ನೈಜವಲ್ಲ. ಇವಕ್ಕೆ ಪರಸ್ಪರ ವಿಮುಖ ಅಭಿಪ್ರಾಯವಿರುವುದು ದಿಟ. ನಾವು ಯೋಚನೆ ಮಾಡಿದ್ದು ಕ್ರಿಯೆಗಳಲ್ಲಿ ರೂಪುಗೊಂಡದ್ದನ್ನೆಲ್ಲಾ ಒಂದು ಪಟ್ಟಿ ಮಾಡಿ ಮತ್ತು ಯೋಚನೆ ಮಾಡಿದ್ದು ಕ್ರಿಯೆಯಲ್ಲಿ ರೂಪುಗೊಂಡಿರದ್ದನ್ನು ಇನ್ನೊಂದು ಪಟ್ಟಿ ಮಾಡಿ ಹೋಲಿಸಿದರೆ ಎರಡನೇ ಪಟ್ಟಿ ಮೊದಲನೆಯದಕ್ಕಿಂತ ಬಹು ದೊಡ್ಡದು ಎಂದು ಕಂಡುಹಿಡಿಯಲು ಹೆಚ್ಚು ಸಮಯವಾಗಲಾರದು. ನಮ್ಮ ಮನಸ್ಸು ಏನು ಯೋಚಿಸುವುದರಲ್ಲೂ ತಪ್ಪಿಲ್ಲ. ನಾವು ಯೋಚನೆಗಳನ್ನು ಯಾವಾಗ ದಮನ ಮಾಡುತ್ತೇವೆಯೋ ಅದು ಅವಪ್ರಜ್ಞೆಯಲ್ಲಿ ಹೊಕ್ಕು ಯಾವಾಗಲಾದರೂ ಸ್ಫೋಟವಾಗಿ ಕ್ರಿಯೆಯಲ್ಲಿ ಹೊರಬರುವ ಸಾಧ್ಯತೆ ಹೆಚ್ಚು.

ಸುಸೂತ್ರ

ಮೂರನೆಯ ದಿನ (ಬುಧವಾರ) ಜಾನ್‌ರವರ ಮುಖದಲ್ಲಿ ಕಳೆ ಮೂಡಿತ್ತು. ತಮಗಿಂತ ಒಬ್ಬ ದೊಡ್ಡ ಪಾದ್ರಿಯ ಜೊತೆ ಚರ್ಚಿಸಿದಾಗ ಅವರು ಕೂಡ ಯೋಚನೆ ಮತ್ತು ಕ್ರಿಯೆಗಳನ್ನು ಒಂದೇ ಮಟ್ಟದಲ್ಲಿ ಕಾಣುವುದು ತಪ್ಪು ಎಂದು ಹೇಳಿದರೆಂದು ಜಾನ್‌ರವರು ತಿಳಿಸಿದರು. ಇದು ತಮಗಿಂತ ಮೇಲಿನ ಪಾದ್ರಿಗಳಿಂದ ಬಂದಿದ್ದರಿಂದ ಜಾನ್‌ರವರಿಗೆ ಪೂರ್ಣ ಸಮಾಧಾನವಾಗಿತ್ತು. ಅವರ ತೊಂದರೆಗಳೆಲ್ಲಾ ಸಂಪೂರ್ಣವಾಗಿ ನಿಂತುಹೋಗಿದ್ದು ಅವರ ಮನಸ್ಸಿನಲ್ಲಿ ಶಾಂತಿ ಮೂಡಿತ್ತು. ಇನ್ನು ಜಾನ್‌ರವರು ನನ್ನಲ್ಲಿಗೆ ಬರುವ ಅವಶ್ಯಕತೆ ಕಾಣದ್ದರಿಂದ ಅವರಿಗೆ ಸುಖಕರ ಪ್ರಯಾಣ ಮತ್ತು ಖುಷಿಯಲ್ಲಿ ತಮ್ಮ ಕೆಲಸಗಳೆಲ್ಲವೂ ಸುಸೂತ್ರವಾಗಿ ನಡೆಯಲಿ ಎಂದು ಹಾರೈಸಿ ಕಳುಹಿಸಿಕೊಟ್ಟೆ. ಒಂದು ತಿಂಗಳ ನಂತರ ಅವರಿಂದ ನನಗೆ ಕ್ರಿಸ್‌ಮಸ್ ಅಭಿನಂದನೆ ಬಂದಿತು. ಅದರಲ್ಲಿ ತಮಗೇನೂ ತೊಂದರೆಯಿಲ್ಲದೇ ಎಲ್ಲಾ ಕೆಲಸಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿರುವರೆಂದು ತಿಳಿಸಿ ನನಗೆ ವಂದನೆಗಳನ್ನು ಅರ್ಪಿಸಿದ್ದರು.

ವಾಚಕರಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸುವುದು ಸಹಜವೇ. ಜಾನ್‌ರವರು ಸುಳ್ಳುಕೋರರಿರಬಹುದೇ? ಅವರು ನನ್‌ಗಳ ಬಗ್ಗೆ ಆಕರ್ಷಣೆಯನ್ನು ಬಚ್ಚಿಟ್ಟದ್ದುದು ಏಕೆ? ಮಾನಸಿಕ ಪರೀಕ್ಷೆಯಲ್ಲಿ ಲೈಂಗಿಕ ವಿಷಯಗಳ ಬಗ್ಗೆ ತೊಂದರೆಯಿರಬಹುದೆಂದು ತಿಳಿದು ಪ್ರಶ್ನಿಸಿದಾಗಲೂ ಅವರು ಈ ವಿಷಯವನ್ನು ಏಕೆ ತಿಳಿಸಲಿಲ್ಲ? ಜಾನ್‌ರವರು ಖಂಡಿತವಾಗಿ ಸುಳ್ಳುಕೋರರಂತೂ ಅಲ್ಲ. ಸುಳ್ಳು ಹೇಳಿ ಅವರಿಗೇನು ಪ್ರಯೋಜನವಾಗಬೇಕು? ನಾವು ಹೇಳಿದ ಪರೀಕ್ಷೆ ಮತ್ತು ಚಿಕಿತ್ಸೆಗಳಲ್ಲಿ ಚಾಚೂ ತಪ್ಪದೆ ಅನುಸರಿಸಿ, ಅಷ್ಟೆಲ್ಲಾ ಖರ್ಚು ಮಾಡಿ ಏತಕ್ಕೋಸ್ಕರ ಸುಳ್ಳು ಹೇಳಬೇಕು? ಅವರು ನಾವು ಹೇಳಿದ್ದಕ್ಕೆಲ್ಲಾ ಸಹಕರಿಸಿದುದನ್ನು ನೋಡಿದರೆ ಅವರಿಗೆ ಕಾಯಿಲೆ ಗುಣವಾಗಬೇಕೆಂಬ ಆಸೆ ಪ್ರಬಲವಾಗಿತ್ತೆಂದು ಯಾರಾದರೂ ಹೇಳಬಹುದಿತ್ತು. ಜಾನ್‌ರವರಿಗೆ ಅವರ ತೊಂದರೆಗೂ ನನ್‌ಗಳ ಜೊತೆ ಹರಟೆಹೊಡೆಯುತ್ತಿದ್ದುದಕ್ಕೂ ಲೈಂಗಿಕ ಆಕರ್ಷಣೆಗೂ ಇರುವ ಸಂಬಂಧ ತಿಳಿದಿರಲಿಲ್ಲ. ಇದು ಹೇಗೆ ಸಾಧ್ಯವೆಂದು ತಿಳಿಯಲು ಪ್ರಯತ್ನಿಸೋಣ, ಪ್ರಜ್ಞೆ ತನಗೆ ಒಪ್ಪಿಗೆಯಾಗದಿದ್ದುದನ್ನು ಅವಪ್ರಜ್ಞೆಗೆ ನೂಕಲು ಪ್ರಯತ್ನಿಸುತ್ತದೆ. ಈ ಮಾನಸಿಕ ಕೌಶಲಕ್ಕೆ ನಾವು "ಮನತಟ್ಟದ ದಮನ" (Repression) ಎಂದು ಕರೆಯುತ್ತೇವೆ. ಈ ರೀತಿಯ ದಮನ ಪರಿಪೂರ್ಣವಾಗಿದ್ದರೆ ಅವಪ್ರಜ್ಞೆಗೆ ನೂಕಿದ ವಿಷಯ ಹೊರಬರುವುದು ಸಾಧ್ಯವೇ ಇಲ್ಲ. ಇದು ಪರಿಪೂರ್ಣವಾಗಿ ಆಗದಿದ್ದಲ್ಲಿ ಆಗಾಗ ತೊಂದರೆಗಳಾಗಬಹುದು. ಜಾನ್‌ರವರ ಪ್ರಜ್ಞೆ ಲೈಂಗಿಕ ಆಕರ್ಷಣೆ ಪಾಪಕರವೆಂದು ಮನಗಂಡು ಅದನ್ನು ಅವಪ್ರಜ್ಞೆಗೆ ಸಂಪೂರ್ಣವಾಗಿ ನೂಕಲು ಪ್ರಯತ್ನಿಸಿತು. ಆದರೆ ಲೈಂಗಿಕ ಆಕರ್ಷಣೆ ಸಹಜ ಪ್ರವೃತ್ತಿಯಾಗಿದ್ದು ಅದನ್ನು ಸಂಪೂರ್ಣವಾಗಿ ಅವಪ್ರಜ್ಞೆಗೆ ನೂಕಲು ಸಾಧ್ಯವಿಲ್ಲವೆಂದು ಕೂಡಲೇ ಮನಗಂಡಿತು. ಜಾನ್‌ರವರ ಪ್ರಜ್ಞೆ ಇದನ್ನು ಪಾಪಕರವೆಂದು ಪರಿಗಣಿಸಿ ಅದನ್ನು ಅವಪ್ರಜ್ಞೆಗೆ ನೂಕುವ ತನ್ನ ಪ್ರಯತ್ನ ವಿಫಲವಾಗುವುದನ್ನು ಸಹಿಸಲಾರದಾಯಿತು. ಆಗಲೇ ಮಾನಸಿಕ ತುಮುಲವುಂಟಾಯಿತು. ಒಂದು ಕೌಶಲ ವಿಫಲವಾದರೆ ನಮ್ಮ ಮನಸ್ಸು ಇನ್ನೊಂದು ಕೌಶಲದಿಂದ ತನ್ನ ಗುರಿಯನ್ನು ಸಾಧಿಸಲು ಪ್ರಯತ್ನಿಸುವುದು. ಜಾನ್‌ರವರ ಎರಡನೇ ಮಾನಸಿಕ ಕೌಶಲಕ್ಕೆ "ನಿರಾಕರಿಸುವುದು"

(Denial) ಎಂದು ಕರೆಯುತ್ತೇವೆ. ಇಷ್ಟೆಲ್ಲಾ ತೊಂದರೆಯಾಗುವುದು ತನಗೆ ಲೈಂಗಿಕ ಆಕರ್ಷಣೆ ಯಿದ್ದೆಯೆಂದು ಹೇಳಿದರೆ ತಾನೆ. ಜಾನ್‌ರವರ ಮನಸ್ಸು ತಮಗೆ ಲೈಂಗಿಕ ಆಕರ್ಷಣೆಯೇ ಇಲ್ಲ ಎಂದು ಹೇಳಿತು. ಮಾನವ ಬುದ್ಧಿಜೀವಿ. ಯಾವು ದನ್ನೇ ಆಗಲಿ ಪ್ರಶ್ನಿಸದೇ ಸುಲಭವಾಗಿ ಒಪ್ಪಿ ಕೊಳ್ಳುವುದಿಲ್ಲ. ಲೈಂಗಿಕ ಆಕರ್ಷಣೆಯಿದ್ದು ಅದನ್ನು ಇಲ್ಲವೆಂದು ನಿರಾಕರಿಸಿದಾಕ್ಷಣ ಅವರ ಮನಸ್ಸು ಒಪ್ಪಿಕೊಳ್ಳಬೇಕಲ್ಲ. ಅವರ ಮನಸ್ಸಿಗೆ ತನಗೆ ಒಪ್ಪಿಗೆ ಯಾಗುವಂತೆ ಮಾಡಲು ಇನ್ನೊಂದು ಮಾನಸಿಕ ಕೌಶಲ ಬೇಕಾಯಿತು. ಇದಕ್ಕೆ "ಸೀಳುವಿಕೆ" (Splitting) ಎಂದು ಕರೆಯುತ್ತೇವೆ. ತಮಗೆ ಮೇಲೆ ಹೇಳಿದಂತೆ (ನಿರಾಕರಿಸುವುದು) ಲೈಂಗಿಕ ಆಕರ್ಷಣೆಯಿಲ್ಲವಾದ್ದರಿಂದ ತಾವು ನನ್‌ಗಳ ಜೊತೆ ಹರಟುವುದು ಕೇವಲ ಹರಟೆ. ಲೈಂಗಿಕ ಆಕರ್ಷಣೆ ಮತ್ತು ಹರಟೆ ಎರಡೂ ಬೇರೆ ಬೇರೆ ಎಂದು ಹೇಳಲು ಪ್ರಾರಂಭಿಸಿದರು. ಈ ರೀತಿ ಸೀಳು ವಿಕೆಯಿಂದ ಹರಟೆ ತಪ್ಪಲ್ಲ ಮತ್ತು ಲೈಂಗಿಕ ಆಕ ರ್ಷಣೆ ಮಾತ್ರ ತಪ್ಪು ಎಂದಂತಾಯಿತು. ಆದರೆ ಹರಟೆಯ ಮೂಲದಲ್ಲಿ ಸುಪ್ತ ಲೈಂಗಿಕ ಆಕರ್ಷಣೆ ಯಿದೆ ಎನ್ನುವದನ್ನು ನಿರಾಕರಿಸಿದಂತಾಯಿತು. ಆದರೆ ನಿಜವನ್ನು ಮರೆಮಾಚಲು ಎಷ್ಟು ದಿನ ಸಾಧ್ಯ? ಅವರ ಸುಪ್ತ ಬಯಕೆ ಹೆಚ್ಚುತ್ತಿದ್ದು ಮಾನಸಿಕ ಕೌಶಲಗಳು ವಿಫಲವಾಗಲು ಪ್ರಾರಂಭ ವಾದಾಗ ಮೇಲೆ ಹೇಳಿದ ತೊಂದರೆಗಳು ಪ್ರಾರಂ ಭವಾದವು. ಮೇಲೆ ಹೇಳಿದ ಮಾನಸಿಕ ಕೌಶಲ ಗಳೆಲ್ಲಾ ಅವರಿಗರಿವಿಲ್ಲದಂತೆಯೇ ಅವರ ಮಾನ ಸಿಕ ಸಮತೋಲನವನ್ನು (Psychological homeostasis) ಕಾಪಾಡಲು ನಡೆದ ಪ್ರಯತ್ನ. ನಾವು ನಮಗೆ ತಿಳಿದಿದ್ದು (ಪ್ರಜ್ಞೆ) ಹೇಳುವುದನ್ನು ಮಾತ್ರ ಸುಳ್ಳು ಎಂದು ಕರೆಯುತ್ತೇವೆ. ನಮಗೆ ತಿಳಿಯದೇ (ಅಪಪ್ರಜ್ಞೆ) ಹೇಳುವ ವಿಷಯಗಳನ್ನು ಸುಳ್ಳೆಂದು ಹೇಳುವುದಿಲ್ಲ. ಏಕೆಂದರೆ ಆ ರೀತಿ ಮಾಡುತ್ತಿರುವುದು ಆ ವ್ಯಕ್ತಿಗೇ ತಿಳಿದಿರುವುದಿಲ್ಲ.

ಆಸಕ್ತಿ ?

ಒಂದು ತಿಂಗಳಿನಿಂದೀಚೆಗೆ ಅವರ ತೊಂದರೆ ಏಕೆ ಬಹಳ ಹೆಚ್ಚಾಯಿತೆಂಬ ಪ್ರಶ್ನೆಯೇಳಬಹುದು. ಜಾನ್‌ರವರಿಗೆ ಲೈಂಗಿಕ ಆಕರ್ಷಣೆಯಿದ್ದುದು ಫಿಜಿನ ಜೋಗತಿಯರಲ್ಲಿ. ಜಾನ್‌ರವರು ಆರು ತಿಂಗಳ ಹಿಂದೆ ಭಾರತಕ್ಕೆ ಬಂದಿದ್ದು ಫಿಜಿಯ ಕ್ರೈಸ್ತ ಸಂನ್ಯಾಸಿನಿಯರಿಂದ ದೂರವಾದದ್ದರಿಂದ ಅವರಿಗೆ ತೊಂದರೆ ಅಷ್ಟಾಗಿರಲಿಲ್ಲ. ಫೀಜಿಗೆ ಹಿಂತಿರುಗುವ ದಿನ ಹತ್ತಿರವಾದಷ್ಟು ಅವರ ಮಾನಸಿಕ ತುಮುಲ ಹೆಚ್ಚಾಯಿತು. ಲೈಂಗಿಕ ಆಕರ್ಷಣೆಯಿದ್ದು ಆ ನನ್‌ಗಳೆ ಹತ್ತಿರವಿದ್ದರೆ ತಾನೆ ಕಷ್ಟವಾಗು ವುದು. ಜಾನ್‌ರವರ ತೊಂದರೆ ನಿವಾರಣೆಯಾಗಲು ಕಾರಣಗಳಾವವು ಎಂಬುದನ್ನು ಪರಿಶೀಲಿಸೋಣ. ಮೊದಲನೆಯದಾಗಿ ತಮ್ಮ ತೊಂದರೆಯ ಮೂಲ ಯಾವುದು ಎಂಬುದನ್ನು ಖಚಿತವಾಗಿ ಅರಿತು ಕೊಂಡುದು. ಎರಡನೆಯದಾಗಿ ತಾವು ಪಾದ್ರಿ ಗಳಾದರು ಕೂಡ ಮಾನವರು ಮತ್ತು ಎಲ್ಲ ರಂತೆಯೇ ಲೈಂಗಿಕ ಆಕರ್ಷಣೆಗೊಳಗಾಗಿರುವವರು ಎಂಬ ಅರಿವು ಮೂಡಿದಾಗ, ಮೂರನೆಯದಾಗಿ ಕೇವಲ ಯೋಚಿಸುವುದು ಕ್ರಿಯೆಯಲ್ಲಿ ತೊಡ ಗಿದಷ್ಟೇ ಪಾಪಕರ ಎಂದು ತಿಳಿದಿದ್ದು ತಪ್ಪು ಎಂಬ ಅರಿವು ಮೂಡಿದುದು. ನಾಲ್ಕನೆಯದಾಗಿ ಕೇವಲ ಯೋಚನೆ ಮೂಡಿದರೆ ಅದು ಕಾರ್ಯಗತ ವಾಗುವುದು ವಾಸ್ತವವಲ್ಲ ಎಂಬ ಅರಿವು ಮೂಡಿ ದುದು. ಐದನೆಯದಾಗಿ, ನಮ್ಮ ಹತೋಟಿಯಲ್ಲಿರ ಬೇಕಾದುದು ಕ್ರಿಯೆಗಳೇ ಹೊರತು ಮನಸ್ಸಲ್ಲ ವೆಂಬುದು ತಿಳಿದಿದ್ದು. ಈ ರೀತಿ ಅರಿವು ಮೂಡಲು ನಡೆಸಿದ ಮಾತಿನ ಚಿಕಿತ್ಸೆಗೆ ಮನೋವಿಶ್ಲೇಷಣೆ (Psycho-analysis) ಎಂದು ಕರೆಯುತ್ತೇವೆ. ಫಿಜಿಯಲ್ಲಿ ಮನೋರೋಗ ಚಿಕಿತ್ಸಕರಿಲ್ಲವೆಂದೂ ಅಲ್ಲಿಗೆ ಹಿಂದಿರುಗುವ ಮೊದಲೇ ತಮ್ಮ ತೊಂದರೆ ಗುಣಪಡಿಸಿಕೊಳ್ಳಬೇಕೆಂದೂ ಜಾನ್‌ರವರು ಬಹಳ ಆಸಕ್ತಿ ವಹಿಸಿದ್ದರು. ಒಟ್ಟಿನಲ್ಲಿ ನನ್ನ ಶ್ರಮ ಒಳ್ಳೆಯ ಫಲವನ್ನು ಕೊಟ್ಟಿತು. ✡

ಶೇಟ್ ಸೂಕನ್‌ಮಲ್ ದೂಕನ್‌ಮಲ್ ಅಮ್ಮದಾಬಾದಿಗೆ ಟ್ರಂಕಾಲು ಬುಕ್ ಮಾಡಿದರು. ಐದಾರು ತಾಸಾದರೂ ಲೈನು ಸಿಗದಾದಾಗ 'ಕ್ಯಾನ್ಸಲ್ ಮಾಡಿಬಿಡಿ' ಎಂದರು ಅತ್ತಲಿಂದ ಧ್ವನಿ ಬಂತು: 'ಹಾಗೆ ಕ್ಯಾನ್ಸಲ್ ಮಾಡಲಾಗುವುದಿಲ್ಲ. ನಿಮ್ಮ ಸರತಿ ಬರಬೇಕು. ಅಂದಾಗ ಮಾತ್ರ ಸಾಧ್ಯ."

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಕಾರಕ

(ಅ) ಕಪ್ಪಗಿನ (ಆ) ಬಲು ಒಗರು (ಇ) ಮಳೆಗಾಲ (ಈ) ಮಾಡಿಸುವ

೨. ಅತುಲ

(ಅ) ರೀತಿ (ಆ) ಸಮಾನವಿಲ್ಲದ (ಇ) ಹಾಸಿಗೆ (ಈ) ತೂಕದಲ್ಲಿ ಮೋಸ

೩. ಆಸ್ಪದ

(ಅ) ಕಾಲಿಲ್ಲದ (ಆ) ವಿಸ್ತಾರ (ಇ) ಅವಕಾಶ (ಈ) ಸಮೀಪದ

೪. ಗಿಡಿ

(ಅ) ತುರುಕು (ಆ) ಮೋರೆ (ಇ) ಓಡಿಸು (ಈ) ಕೊಡ

೫. ಆಹ್ವಾನ

(ಅ) ಕರೆ (ಆ) ನಾಯಿಮರಿ (ಇ) ಬೊಬ್ಬಾಟ (ಈ) ಯಜ್ಞ

೬. ಕೈಚೆಲ್ಲು

(ಅ) ಪ್ರತಿಜ್ಞೆಮಾಡು (ಆ) ಸನ್ನೆಮಾಡು (ಇ) ಮೋಸಮಾಡು (ಈ) ಕೈಲಾಗದವನಂತೆ ಇರು

೭. ಹುರುಸು

(ಅ) ನವೆ (ಆ) ಬಿರುಸು (ಇ) ಒತ್ತು (ಈ) ಮುಸ್ಲಿಮರ ಉತ್ಸವ

೮. ಛೀಮಾರಿ

(ಅ) ಕ್ರೂರ ದೇವತೆ (ಆ) ರೋಗ (ಇ) ಧಿಕ್ಕಾರ (ಈ) ಅವಲಕ್ಕಿ

೯. ಗೋಜು

(ಅ) ಗದ್ದಲ (ಆ) ಕಸಿದುಕೊಳ್ಳು (ಇ) ಜಟ್ಟಿ (ಈ) ಗೊಡವೆ

೧೦. ಟಳಾಯಿಸು

(ಅ) ನಿಶ್ಚಯ ಮಾಡು (ಆ) ವಿಲಂಬಿಸು (ಇ) ಅತ್ತಿತ್ತ ನಡೆ (ಈ) ಬುಡಮೇಲು ಮಾಡು

೧೧. ಜಂಗಳ

(ಅ) ಕೊಳೆನೀರು (ಆ) ಸಡಿಲ (ಇ) ತೆಪ್ಪ (ಈ) ಅಡವಿ

೧೨. ಕಾರುಕ

(ಅ) ಶಿಲ್ಪಿ (ಆ) ವಾಂತಿ ಮಾಡುವವ (ಇ) ಕೆಂಬಣ್ಣ (ಈ) ಎಳೆಯ ತೆಂಗಿನ-ಕಾಯಿ

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. **ಕಾರಕ** (ಈ) ಮಾಡಿಸುವ, ಕಾರಣವಾದ. ಉದಾ:— ಕಾರಕ ಶಕ್ತಿ [ಸಂ. ಕೃ=ಮಾಡು.]

೨. **ಅತುಲ** [ಅ] ಸಮಾನವಿಲ್ಲದ, ಸಾಟಿಯಿಲ್ಲದ, ಹೋಲಿಕೆಗೆ ಸಿಗದ. ಉದಾ:— ಅತುಲ ಪರಾಕ್ರಮಿ. [ಸಂ. ಅ=ಇಲ್ಲ, ತುಲಾ=ತೂಕ, ಹೋಲಿಕೆ.]

೩. **ಆಸ್ಪದ** (ಇ) ಅವಕಾಶ, ಸಂದರ್ಭ, ಆಶ್ರಯ, ಎಡೆ, ನೆಲೆ. ಉದಾ:— ಮಾತಾಡಲು ಆಸ್ಪದವೇ ಸಿಗಲಿಲ್ಲ; ಅವನ ಸ್ಥಿತಿ ಕರುಣಾಸ್ಪದವಾಗಿತ್ತು. [ಸಂ.]

೪. **ಗಿಡಿ** (ಅ) ತುರುಕು, ಜಡಿದು ತುಂಬು, ಒತ್ತೊತ್ತಾಗಿ ಸೇರಿಸು. ಉದಾ:— ಬಾಯಿತುಂಬಾ ಅನ್ನ ಗಿಡಿದುಕೊಂಡ. [ಕನ್ನಡ.]

೫. **ಆಹ್ವಾನ** (ಅ) ಕರೆ, ಆಮಂತ್ರಣ; ಜಗಳಕ್ಕೆ ಕೆಣಕುವುದು. ಉದಾ:— ಮನೆಗೆ ಆಹ್ವಾನ ಕೊಟ್ಟ; ಸುಳ್ಳೆಂದು ತೋರಿಸಿಕೊಡಲು ಆಹ್ವಾನವಿತ್ತ. [ಸಂ. ಆ=ಹತ್ತಿರ, ಹ್ವಾನ=ಕರೆ.]

೬. **ಕೈಚೆಲ್ಲು** (ಈ) ಕೈಲಾಗದಂತಿರು, ನಿಷ್ಕ್ರಿಯನಾಗು, ನಿರಾಶನಾಗು, ಉದಾ:— ಒಮ್ಮೆ ಸೋತೆಯೆಂದು ಕೈಚೆಲ್ಲಬೇಡ [ಕನ್ನಡ]

೭. **ತುರುಸು** (ಅ) ಬಿರುಸು; ಸ್ಪರ್ಧೆ, ಮೇಲಾಟ. ಉದಾ:— ತುರುಸಿನ ಚುನಾವಣೆ; ತುರುಸಿನ ಕಾಳಗ. [ಸಂ. ತ್ವರೆ—ಇಂದ.]

೮. **ಛೀಮಾರಿ** (ಇ) ಧಿಕ್ಕಾರ, ತಿರಸ್ಕಾರ; ಮಾತಿನಿಂದ ಶಿಕ್ಷೆ; ಗದರಿಸುವಿಕೆ. ಉದಾ:— ಉಪಾಧ್ಯಾಯರು ಛೀಮಾರಿ ಹಾಕಿದರು. [ಕನ್ನಡ, ಛೀ! ಮಾರಿ! ಎಂದು ನಿಂದಿಸುವುದು.]

೯. **ಗೋಜು** (ಈ) ಗೊಡವೆ, ತಳ್ಳಿ, ತಂಟೆ; ತೊಡಕು. ಉದಾ:— ಅವನ ಗೋಜು ನಿನಗೆ ಬೇಡ. [ಉರ್ದು=ಗೌಜ್?]

೧೦. **ಟಳಾಯಿಸು** (ಇ) ಅತ್ತಿತ್ತ ನಡೆ, ಅತ್ತಿತ್ತ ನಡೆಸು, ವಿರಾಮವಾಗಿ ಶತಪಥ ಹಾಕು. ಉದಾ:— ಕೋಣೆಯಲ್ಲಿ ಟಳಾಯಿಸುತ್ತಿದ್ದ, ಕುದುರೆಯನ್ನು ಟಳಾಯಿಸಿದ. [ಹಿಂದಿ, ಟಹಲಾನಾ.]

೧೧. **ಜಂಗಳ** (ಅ) ಸಡಿಲು, ಬಿಗಿಯಲ್ಲದ್ದು. ಉದಾ:— ಜಂಗಳವಾದ ಅಂಗಿ ತೊಟ್ಟಿದ್ದ. [?]

೧೨. **ಕಾರುಕ** (ಅ) ಶಿಲ್ಪಿ, ಕೆಲಸಗಾರ. [ಸಂ. ಕಾರು.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ



ವೈ. ಕೆ. ಸಂಧ್ಯಾ ಶರ್ಮ

ಬೆಳಗಾಗಲಿಲ್ಲ, ಆಗಲೇ ಎದುರು ಮನೆಯ ಕಡೆಯಿಂದ ಯಾರೋ ಬೊಬ್ಬೆ ಹೊಡೆಯುವುದು ಕೇಳುತ್ತದೆ. ಎಂದಿನ ಜೋರು ಗಲಭೆ ಎಬ್ಬಿಸಿ ಕೂಗಿಕೊಳ್ಳುವ ಮಾಯಕ್ಕನ ದನಿಯಲ್ಲ. ಅದೇ ಕಡೆಯಿಂದ ಬರುತ್ತಿದೆ, ಪ್ರಾಯದ ಹೆಣ್ಣು–ಗಂಡಿನ ದನಿ. ಐದ್ಹತ್ತು ನಿಮಿಷಗಳಲ್ಲಿ ಸುತ್ತಮುತ್ತಲ ಮನೆಯ ಬಾಗಿಲುಗಳ ಬಾಯಿ ತೆರೆಯುವುದರ ಜೊತೆಗೆ 'ಏನಾಯ್ತು? ಏನಾಯ್ತು?' ಹಲವಾರು ಬಾಯಿಗಳು ದನಿ ಬಂದತ್ತ ಹಾರಿದವು. ಗದ್ದಲ ನಿದ್ದೆಯನ್ನು ಕಲಕಿದಾಗ ಗಾಬರಿಯಾಗಿ ಎದ್ದು ಕುಳಿತಳು ಯಮುನಾಬಾಯಿ. ಸುತ್ತ ಆತುರವಾಗಿ ಕತ್ತನ್ನು ಗರಗರ ತಿರುಗಿಸಿ ನೋಡಿ ಗಂಡ, ಮಕ್ಕಳು ಹಿಂದಿನ ರಾತ್ರಿ ಹೇಗೆ, ಎಲ್ಲಿ ಮಲಗಿದ್ದರೋ ಹಾಗೇ ಮಲಗಿರುವುದನ್ನು ಕಂಡು ಸಮಾಧಾನದ ಉಸಿರು ಚೆಲ್ಲಿ, ಕಾರಣ ತಿಳಿಯದೆ ಬಡಿದುಕೊಳ್ಳುತ್ತಿರುವ ಎದೆಯನ್ನು ನೀವಿಕೊಂಡಳು. ಮತ್ತೆ ಮಲಗಿ ಬಲಗಡೆಯ ಮಗ್ಗುಲಾಗೆದ್ದು ಕೈ ಜೋಡಿಸಿ ಮುಂಬಾಗಿಲು ತೆರೆದಳು. ಮಾಯಕ್ಕನ ಮನೆ ಮುಂದೆ ಹೊರೆ ಜನ. ಕೈಯಲ್ಲಿದ್ದ ಪೊರಕೆ, ನೀರಿನ ಬಕೇಟನ್ನು ಅಲ್ಲೇ ಕುಕ್ಕಿ ತಾನೂ ಗುಂಪಿನೊಳಗೆ ತೂರಿದಳು.

ನಿತ್ಯ ಬೆಳಗ್ಗೆ ಎದುರು ಬದುರು ಮನೆಯ ಬಾಗಿ

ಲುಗಳು ಹೆಚ್ಚು ಕಡಿಮೆ ಒಟ್ಟಿಗೆ ತೆರೆಯುತ್ತವೆ. ಮೊದಲು ಎರಡು ಪೊರಕೆಗಳು ಹೊರಗೆ ತಲೆ ಹಾಕುತ್ತವೆ. ಹಿಂದೆ ಮಾಯಕ್ಕ, ಯಮುನಾಬಾಯಿ ಕಾಣಿಸಿಕೊಳ್ಳುತ್ತಾರೆ. ಎಲೆಯಡಿಕೆಯಿಂದ ಬಣ್ಣ ಗಟ್ಟಿದ್ದ ಕೆಂಪು ಹಲ್ಲುಗಳನ್ನು ಫಕ್ಕನೆ ಬಿಟ್ಟು 'ಬೆಳಗಾತಲ್ಲ ಅಕ್ಕ' ಎಂದು ಮಾಯಕ್ಕ ಬಾಗಿಲ ಮುಂದೆ ನೀರು ಸುರಿದು ಪೊರಕೆ ಬಡಿಯುತ್ತಾಳೆ. ಉತ್ತರವಾಗಿ ಯಮುನಾಬಾಯಿಯದು 'ಹೂಂನ್ರೀ' ತೆಳು ನಗೆ.

'ಸರಿ ಬುಡು... ಸುರುವಾತು ಇನ್ ಚಾಕ್ರಿಗೆ... ತಡಿ, ಒಲೆಗೊಂದೀಟ್ ಬೆಂಕಿ ಮುಟ್ಟಿಸ್ಬರ್ತೀನಿ' ಎಂದು ಒಳನಡೆಯುತ್ತಾಳೆ ಮಾಯಕ್ಕ. ಯಾವಾಗಲೂ ಎಲ್ಲ ಮಾತೂ, ಕೆಲಸಗಳಿಗೂ 'ತಡೀ' ಎಂದೇ ಅವಳು ಮಾತನ್ನು ಆರಂಭಿಸುವುದು. ಆದರೆ ಯಮುನಾಬಾಯಿ ಅವಳಿಗಾಗಿ ಕಾಯುವುದಿಲ್ಲ. ಒಳಗೆ ಅವಳಿಗೆ ಕೆಲಸದ ಬಂಡಿಯೇ ಕಾದಿರುತ್ತದೆ.

ದಿನಾ ಪೊರಕಾ-ಪೊರಕೀ ದರ್ಶಿಸುವ ಮಾಯಕ್ಕ-ಯಮುನಾಬಾಯಿಯ ಭೇಟಿ ಇಂದು ನಡೆಯಲಿಲ್ಲ. ಎಂದೂ ಮಲಗುವುದೇ ಇಲ್ಲವೆಂದು ಪದೇ ಪದೇ ಹೇಳುತ್ತಲೇ ಇರುತ್ತಿದ್ದ ಮಾಯಕ್ಕ ಹಾಯಾಗಿ ಚಾಪೆಯ ಮೇಲೆ ಕಾಲು ಚಾಚಿ ಮಲಗಿದ್ದಾಳೆ. ಕಾಲ್ಬದಿಯಲ್ಲಿ ಮಗ, ತಲೆಯ ಬಳಿ ಮಗಳು ಇಬ್ಬರೂ ತಮ್ಮ ತಲೆಗಳನ್ನು ತಾಯಿಯ ಕಾಲು, ತಲೆಗಳಿಗೆ ಒರಳ ಮೇಲೆ ತೆಂಗಿನಕಾಯಿ ಒಡೆಯುವಂತೆ ಚಚ್ಚಿಕೊಳ್ಳುತ್ತಿದ್ದಾರೆ. ಒಂದಿಬ್ಬರು ತಡೆಯುತ್ತಿದ್ದಾರೆ.

'ಅವ್ವಾ... ನಮ್ಮುನ್ಬಿಟ್ ಓಗಾಕೆ ನಿಂಗ್ ಎಂಗವ್ವ ಮನಸ್ಬಂತು?' 'ಅವ್ವಾ ನೀ ಇಲ್ದೆ ನಾ ಎಂಗ್ ಬದುಕಿರ್ಲಿ? ನಾನೂ ಸತ್ತೋಯ್ತೀನಿ...ಊಂ...'

ಯಮುನಾಬಾಯಿ, ಸರಕ್ಕನೆ ಬಗ್ಗಿ ತಲೆ ಬಡಿದುಕೊಳ್ಳುತ್ತಿದ್ದ ನೀಲಳನ್ನು ಪಕ್ಕಕ್ಕೆ ಎಳೆದುಕೊಂಡು ಮೌನವಾಗಿ ಸಮಾಧಾನಪಡಿಸಿದಳು. ನೀಲಾ ಅವಳನ್ನು ತಬ್ಬಿಕೊಂಡು ತಕಪಕ ಹೊಯ್ದಾಡಿ, ಜೋರು ದನಿ ತೆಗೆದು ಅತ್ತಳು. ಗಂಭೀರ ವಾತಾವರಣದಲ್ಲಿ ದುಃಖಿಯಾಗಿದ್ದ ನೀಲಳನ್ನು ಸಂತೈಸಬೇಕೆಂದು ಯಮುನಾಬಾಯಿಗೆ ಅನ್ನಿಸುತ್ತಿದ್ದರೂ ಮನಸ್ಸಿನ ತುಂಬ ಆಶ್ಚರ್ಯ ಭರ್ತಿ! ಈ ಮಕ್ಕಳು ತಾಯಿಯನ್ನು ಇಷ್ಟು ಬಲವಾಗಿ ಪ್ರೀತಿಸುತ್ತಿದ್ದರೆಂದು ಅವಳಿಗೆ ಗೊತ್ತಿರಲೇ ಇಲ್ಲ.

ಅಡಿಗೆ ಶುರುಮಾಡುವಷ್ಟರಲ್ಲಿಯೇ ಮಾಯಕ್ಕನ ಮೊದಲನೇ ಸುತ್ತಿನ ಸವಾರಿ ದಯಮಾಡಿಸುತ್ತಿತ್ತು. 'ಎಂಥಾ ಮಾಡ್ತೀಯೆ ಅಕ್ಕ ಅಡಿಗೆ?'- ಕೊಬ್ಬರಿ ತುರಿಯುವುದನ್ನು ಕಂಡು 'ಹಾ ನಾನೂ ಚಟ್ನೀನೇ ಅರೀಬೇಕಂತ ಮಾಡೀನಿ... ತುಂಬ ಕಾಯಿ ಬೇಕಾಗ್ತಾವೇನು?... ಕಲ್ಲೇ ಅರಿದ್ರೂ ನಡೀತದಲ್ಲೇನು?' ಹೀಗೇ ಮುಂದಕ್ಕೇನೇನೋ ಮಾತನಾಡುತ್ತಲೇ ಇರುತ್ತಾಳೆ ಮಾಯಕ್ಕ. ಅವಳ ಮಾತಿನ ಸೂಕ್ಷ್ಮ ಯಮುನಾಬಾಯಿಗೆ ಕೂಡಲೇ ತಟ್ಟುತ್ತದೆ. ಇಂಥ ಸಂದರ್ಭಗಳಲ್ಲಿ ಅವಳು ಆ ಬೀದಿಯ ಉಳಿದ ಹೆಂಗಸರಂತೆ ಮಾಯಕ್ಕನನ್ನು ಹೀನವಾಗಿ ಕಂಡು ಮುಖ ಸಿಂಡರಿಸುವುದಿಲ್ಲ. ಒಂದಿಷ್ಟು ಚಟ್ನಿಯನ್ನೋ ಅಥವಾ ಕೊಬ್ಬರಿ ಹೋಳನ್ನೋ ಅವಳ ಕೈಯಲ್ಲಿಟ್ಟು ಮಾತಾಡದೇ ಅವಳಿಗೂ ಮಾತಾಡಲು ಅವಕಾಶ ಕೊಡದೆ ಕೆಲಸದಲ್ಲಿ ಮೈಮರೆಸಿಕೊಳ್ಳುತ್ತಾಳೆ. ಆದರೆ ಮನಸ್ಸಿನ ತುಂಬ ಮಾಯಕ್ಕನ ದೈನ್ಯಾವಸ್ಥೆಯೇ ಆವರಿಸಿರುತ್ತದೆ.

ಬೆಳಗ್ಗೆ ಎದ್ದ ತತ್‌ಕ್ಷಣ ಮಾಯಕ್ಕ ಆ ಬೀದಿಯ ಎಲ್ಲ ಮನೆಗಳಿಗೂ ಎರಡೆರಡು ನಿಮಿಷವಾದರೂ ಹೋಗಿ ನಗುಮುಖ ತೋರಿಸುತ್ತ 'ಬೆಳಗಾತು... ನಿಮ್ಗ ಕೆಲ್ಸ ಅದೇನೋ ಬರ್ತೀನಿ' ಎಂದು ಕುಶಲ ಕೇಳುವುದು ಅಭ್ಯಾಸ. ಕಡೆಯಲ್ಲಿ ಯಮುನಾಬಾಯಿಯ ಮನೆಯಲ್ಲಿ ಬಂದು ಕೂರುವುದು, ಅದೂ ಇದೂ ಹರಟುವುದು. ಆಕೆಯನ್ನು ಕಂಡರೆ ಮಾಯಕ್ಕನಿಗೇನೋ ಒಂದು ಬಗೆಯ ಅಕ್ಕರೆ. ಮೃದು ಮನಸ್ಸಿನ ಯಮುನಾಬಾಯಿಗೂ ಅಷ್ಟೆ, ಮಾಯಕ್ಕನ ಮೇಲೆ ಅವ್ಯಕ್ತ ಮಮತೆ. ಕರುಣೆಯ ಜಿನುಗು. ಮಾಯಕ್ಕ ತನ್ನ ಕತೆಯನ್ನು ಅವಳ ಮುಂದೆ ಕಡಿಮೆಯೆಂದರೆ ಹತ್ತು ಬಾರಿಯಾದರೂ ಹೇಳಿರಬೇಕು. ಮಾಯಕ್ಕನದು ಹುಟ್ಟಿದಂದಿನಿಂದ ಕಷ್ಟದಲ್ಲೇ ಹೊರಳಾಡಿದ ಜೀವ. ಅನಾಥ ಜೀವನ. ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡು ಮಲತಾಯಿಯ ಕ್ರೂರ ಬೊಗಸೆಯಲ್ಲಿ ಮೈ ಬೆಳೆಸಬೇಕಾಯಿತು. ಸಮಾಧಾನ ಹೇಳಲು ಜೊತೆಗೆ ಬಂಧುವರಾರೂ ಇರಲಿಲ್ಲ. ವಯಸ್ಸಿಗೆ ಮೀರಿದ ದುಡಿತ. ಬೆಳೆಯುವ ವಯಸ್ಸಿನಿಂದ ಅರೆಹೊಟ್ಟೆಯಾದ

ಕಾರಣ ಮಾಯಕ್ಕನ ದೇಹ ಇಂದಿಗೂ ಮುಮುರಿಕೊಂಡೇ ಇದೆ. ತನ್ನ ಹೊರೆ ನೀಗಿಸಿಕೊಳ್ಳಲು ಮಲತಾಯಿ ಹದಿನೈದರ ಮಾಯಕ್ಕನನ್ನು ನಂಜಪ್ಪನಿಗೆ ಕಟ್ಟಿದಳು. ಗುಡಸನ ಮನೆಗಿಂತ ತಾನು ಹಿಂದಿದ್ದ ಸ್ಥಳವೇ ಎಷ್ಟೋ ಮೇಲಾಗಿತ್ತು, ಎನ್ನುವಾಗ 'ಆ ಸನಿ ನಂಗ್ಯಾಕಾರೋ ಲಗ್ನ ಅಂತ ಮಾಡಾಕಿದಳೊ' ಎಂದು ನೆಟಿಕೆ ತೆಗೆಯುತ್ತಿದ್ದುದೂ ಉಂಟು ಮಾಯಕ್ಕ.

'ಅವ್ವ ಬಡಿಯೋ ಏಟ್ಗಳೀ ಸಾಯೋಗಂಟ ಇದ್ದಿದ್ರೂ ನಾ ಸ್ವಂತೋಷಪಡ್ತಿದ್ನಿ… ಆದ್ರೆ ಈಯಪ್ಪನ ಕಾಟ. ಮೈಯೆಲ್ಲ ಉಂಡೀ ಮಾಡಿ ತೊಳಸ್‌ಬಿಡ್ತಿದ್ದ… ನಾ ಬಾಯ್ ಬಡ್ಕಂಡ್ ಬೀದ್ಯಾಗ್ ಬಿದ್ರೂ ಬಿಡ್ತಿರ್ಲಿಲ್ಲ.. ಪಾಪ್ ಸೂಳೀಮಗ ಹಾಳಾಗ…"

ಮಾಯಕ್ಕನ ದಾಂಪತ್ಯ ವಿಚಾರ, ಗಂಡ–ಹೆಂಡತಿಯರ ಸಂಬಂಧ, ಅವನ ಕಾಮ–ಕ್ರೌರ್ಯಗಳನ್ನು ಕುರಿತು ಕೇಳುವಾಗ ಯಮುನಾಬಾಯಿಗೆ ಬಾಯಿ ಅರಳುವ ಆಶ್ಚರ್ಯ. ಇವರ ಜೀವನವೆಲ್ಲ ಇಷ್ಟು ಸಣ್ಣ ವೃತ್ತದಲ್ಲೇ ಮುಗಿದುಹೋಗುತ್ತದೆಯೋ ಎಂಬ ಭಾರಿ ವಿಸ್ಮಯ!

ಮಾಯಕ್ಕನ ಜೀವನದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಅವಳ ಮೈ ತುಂಬ ಬರೆದಿತ್ತು. ಒಂದಿನದನ್ನು ಉಸುರುವಾಗ ಅವಳು ಗಾಯ, ಕಲೆಗಳನ್ನು ಮುಟ್ಟಿ ತೋರಿಸುತ್ತ ನೋವನ್ನನುಭವಿಸುತ್ತಿರುವಂತೆ ತನ್ನ ಕಣ್ಣಲ್ಲಿ ನೀರು ತುಂಬಿಸುತ್ತಾಳೆ. ನೋವಿಗಿಂತ, ಕ್ರೂರ ಬಾಳಿನ ಜುಗುಪ್ಸೆಯನ್ನು ಅವಳ ಕಣ್ಣೀರು ಹೊರಹೊಮ್ಮುತ್ತಿತ್ತು. ಅವಳ ಮಲತಾಯಿ, ಗಂಡ–ಮಕ್ಕಳು ಸೇರಿ ಅವಳ ಮನಸ್ಸನ್ನು ಹೊಸಕಿಬಿಟ್ಟಿದ್ದರು. ಜೀವನದಲ್ಲಿ ಸುಖ ಎಂದರೇನು ಎಂದು ಅವಳು ಕಂಡೇ ಇರಲಿಲ್ಲ. ಸಮಾಧಾನದ ಮಾತುಗಳೂ ಇಲ್ಲ. ಅಬ್ಬರ, ಬಡಿತ ಎರಡೇ ಅವಳಿಗೆ ಪರಿಚಿತ, ಬಳುವಳಿ.

ಮನೆ ಮನೆ ತಿರುಗುವ ತಾಯಿ ಎಲ್ಲಿ ತಮ್ಮ ಮನೆಯ ಕತೆಯನ್ನೆಲ್ಲ ಇದ್ದ ಹಾಗೆ ಹೇಳಿಕೊಂಡು ಬಿಟ್ಟಿದ್ದಾಳೋ ಎಂದು ಮಕ್ಕಳಿಗೆ ಅವಳ ಮೇಲೆ ಕೋಪ, ರೋಷ. ಇಬ್ಬರೂ ಸೇರಿ ತಾಯಿಯನ್ನು ಹಣ್ಣು ಮಾಡುತ್ತಾರೆ. ಆದರೂ ಮರುದಿನ ಏನಾದರೂ ಸಾಮಾನು ಕಡ ಕೇಳಲು ಅವಳು ಮನೆಯಿಂದ ಹೊರಗೆ ಹೊರಡಲೇಬೇಕಾಗುತ್ತದೆ. ಹೇಗಾದರೂ ಕುದುರಿಸಿ ಹನ್ನೆರಡರ ಹೊತ್ತಿಗೆ ಉಣ್ಣಲು ಏನಾದರೂ ಬೇಯಿಸಲೇಬೇಕಿತ್ತು. ಇಲ್ಲದಿದ್ದರೆ ಅವಳ ಎಲುಬುಗಳಿಂದ ನೆಟಿಕೆ ಹೊರಬರುತ್ತಿತ್ತು. ಪ್ರತಿದಿನ ಅವಳ ಮನೆಯ ವಿಚಿತ್ರ ಪರಿಯನ್ನು ಕಾಣುತ್ತ, ಮಾಯಕ್ಕನದು ಜೀವನವಿಡೀ ಮುಳ್ಳಿನ ಹಾಸಿಗೆಯಲ್ಲೇ ಹೊರಳಾಟವೆಂದು ಚಿಂತಿಸಿದಾಗ ಯಮುನಾಬಾಯಿಯ ಜೀವ ಹಿಂಡುತ್ತದೆ; ಅಸಹಾಯಕಳಾಗಿ ಪರಿತಪಿಸುತ್ತಾಳೆ.

ಯಮುನಾಬಾಯಿಯ ಗಂಡ ಕೆಲಸದ ಮೇಲೆ ನಾಲ್ಕಾರು ದಿನ ಟೂರ್ ಹೊರಟಾಗ ಅವಳಿಗೆ ಮಾಯಕ್ಕನ ಸಹಾಯ ಬೇಕೇ ಬೇಕು. ರಾತ್ರಿ ಮಲಗಲು ಬರುತ್ತಾಳೆ, ಮಾಯಕ್ಕ. ಸುತ್ತಲೂ ಮಕ್ಕಳನ್ನು ಕೂಡಿಸಿಕೊಂಡು ಅವಳು ನಗೆಸಾರದ ಕತೆಗಳನ್ನು ಹೇಳಲು ತೊಡಗಿದರೆ, ಬಿಟ್ಟ ಕೆಲಸ ಬಿಟ್ಟಂತೆ ಕೂತು ದುಮುದುಮು ನಗುವ ಯಮುನಾಬಾಯಿಗೆ, ನಗು ತುಳುಕಿಸುತ್ತಿರುವ ಮಾಯಕ್ಕನ ಡಿಂಬದಲ್ಲಿ ದುಃಖದ ಲಾವಾರಸ ಕುದಿಯುತ್ತಿದೆ ಎಂಬ ಅರಿವುಂಟು.

ಮಕ್ಕಳಿಬ್ಬರೂ ಲಬೊಲಬೊ ಬಾಯಿ ಬಡಿದುಕೊಂಡರು. ಬುಡಬುಡನೆ ಹೊರಳಾಡಿದರು. 'ಅವ್ವಾ… ಅವ್ವಾ' ಎಂದರಚಿಕೊಂಡರು. ಹೆಣವನ್ನು ಎತ್ತಿದರು. ಹೆಣವನ್ನೇ ದಿಟ್ಟಿಸುತ್ತ ಮರಗಟ್ಟಿ ಕುಳಿತಿದ್ದ ಯಮುನಾಬಾಯಿಯ ಕಣ್ಣಿಂದ ನೀರು ಮೆಲ್ಲನೆ ತೊಟ್ಟಿಕ್ಕುತ್ತಿತ್ತು. ಕೆಂಪಗೆ ಊದಿಕೊಂಡ ನೀಲಾ, ರಾಮಯ್ಯನ ಕಣ್ಣುಗಳಿಂದ ದಬದಬ ನೀರು ಸುರಿಯುತ್ತಿತ್ತು. ಕಣ್ಣೀರು ಕೂಗು, ರಂಪಾಟಗಳಿಂದ ತಾಯಿಯ ಋಣವನ್ನು ತೀರಿಸಿಬಿಟ್ಟೆವೆಂಬಂತೆ ಅವಳ ಮಕ್ಕಳು ದುಃಖಪ್ರದರ್ಶನ ಮಾಡುತ್ತಿರುವುದನ್ನು ಕಂಡು ಯಮುನಾಬಾಯಿಯ ಬಾಯಿ ಬಂಧಿಸಿತ್ತು. 'ಇದು ಕೇವಲ ಸಾಂಪ್ರದಾಯಿಕ… ಕೃತಕ… ಖಂಡಿತ ಭಾವನೆಯ ವ್ಯಾಪಾರವಲ್ಲ… ಭಾವೋದ್ವೇಗ… ಸಾವು ತೆರೆಯುವ ಮಹಾಮೂಲೀ ನಾಟಕ' ಎಂದವಳಿಗೆ ಮನವರಿಕೆಯಾಗತೊಡಗಿತು. ನಾಲ್ಕು ಜನರ ಹೆಗಲ ಮೇಲಿದ್ದ ಹೆಣ ಗೇಟು

ದಾಟುವಾಗ ನೀಲಾ, ರಾಮಯ್ಯ ವಿಕಾರವಾಗಿ ಕಿರುಚಿ ಬೊಬ್ಬಿರಿದು ನೆಲಕ್ಕೆ ಬಿದ್ದರು.

ಯಮುನಾಬಾಯಿಯ ನೆನಪಲ್ಲಿ ಇನ್ನೊಂದು ಪೆಣ ಮೆಟ್ಟಲಿಳಿಯಿತು. ಅಂದು–ನಂಜಪ್ಪನ ಪೆಣವನ್ನು ಮಧ್ಯದಲ್ಲಿಟ್ಟುಕೊಂಡು ಮಾಯಕ್ಕ ಹಾಗೂ ಮಕ್ಕಳು ಗೋಳಿಡುತ್ತಿದ್ದರು. 'ಅಯ್ಯೋ ಸಿವನೆ, ನನ್ ಕುಂಕ್ಮ ಅಳಿಸಾಕ್ ಬಿಟ್ಯಾ? ಇವರದ್ ಬದ್ಲು ನೆನ್ನ ಪಿರ್‍ಯಾಣನಾದ್ರೂ ತೊಗೊಂಡೋಗ್ಬಾರ್ದಿತ್ತಾ?...' ಮಾಯಕ್ಕನ ದುಃಖಕ್ಕೆ ಈಡಾಗುವಂತೆ ಮಕ್ಕಳ ರೋದನ ಎಲ್ಲರ ಮನೆಯ ಕದ ತಟ್ಟಿತ್ತು. ಯಮುನಾಬಾಯಿ ಮೂಕ ಸಾಕ್ಷಿಯಾಗಿ ದಿಟ್ಟಿಸುತ್ತಿದ್ದಳು. 'ಅಪ್ಪಾ ನವ್ಜೊತೆ ನಿಂಗಿರೋದು ಸಾಕಾಯ್ತೇನಪ್ಪೋ' –ರಾಮಯ್ಯ ಎದೆ ಎದೆ ಬಡಿದುಕೊಂಡರೆ, ನೀಲಾ ಮೂಲೆಯಲ್ಲಿ ಮುದುರಿ ಬಿದ್ದಿದ್ದ ಕಂಬಳಿಯ ಕುಪ್ಪೆ ಕಂಡು 'ಎತ್ಲಾಗ್ ತಿರುಗಿದ್ರೂ ನಿನ್ ನೆಪ್ಪೇ ಬರ್‍ತದಲ್ಲ ಪ್ಪೋಯ್' ಎಂದು ಬಾಯಿ ಹುಯ್ದುಕೊಂಡಳು.

ಹಿಂದೆ ಮೈಮೇಲಿನ ಗಾಯದ ಗುರುತುಗಳನ್ನು ತೋರಿಸುತ್ತ ಮಾಯಕ್ಕ ಒಮ್ಮೊಮ್ಮೆ ಯಮುನಾಬಾಯಿಯ ಬಾಗಿಲಿಗೆ ಓಡಿಬರುತ್ತಿದ್ದಳು. ಕಣ್ಣಿಂದ ನೀರು ತೊಟ್ಟಿಕ್ಕಿಸುತ್ತ ನೆಟಿಕೆ ಲಟಲಟಾಯಿಸುತ್ತ ದಿನಾ ಒಂದೇ ರೀತಿಯ ವರದಿ. ಅಳೋದು, ಕರೆಯೋದು, ತನ್ನನ್ನು ಗೋಳಾಡಿಸುವ ಹಾಳು ಗಂಡ ಸತ್ತಾದರೂ ಹೋಗಬಾರದೆ ಎಂದು ದೇವರಲ್ಲಿ ಮಾಯಕ್ಕನ [illegible]ಪದ ಮೊರೆ.

ನಂಜಪ್ಪನ ಹೆಣದ ಮೇಲೆ ಪ್ರೀತಿಯ ಪ್ರವಾಹ ನುಗ್ಗಿಸಿದಂತೆ ಮಾಯಕ್ಕ ಮತ್ತು ಮಕ್ಕಳು ಕಣ್ಣೀರ ಕೋಡಿ ಹರಿಸಿದ್ದರು. ನಂಜಪ್ಪ ಸತ್ತದ್ದನ್ನು ಕಂಡು ಇನ್ನಾದರೂ ಮಾಯಕ್ಕನ ಮೈಮೇಲಿನ ಗಾಯಗಳು ಮಾಯುತ್ತವೆ ಎಂಬ ಯಮುನಾಬಾಯಿಯ ಎಣಿಕೆ ಸುಳ್ಳಾಯಿತು. ಮಾಯಕ್ಕನ ಮೈಮೇಲೆ ಹೊಸ ಹೊಸ ಬರೆ, ಗುರುತುಗಳು ಏಳುತ್ತಿದ್ದವು. ಮಾಗುತ್ತಿದ್ದವು. ಬೀದಿಯ ಜನಗಳಿಗೆಲ್ಲ ಇದೊಂದು ಅರ್ಥವಾಗದ ಸಂಸಾರ. ರಾಮಯ್ಯನಿಗೆ ಆಫೀಸಿನಲ್ಲಿ ಸಣ್ಣ ಗುಮಾಸ್ತೆಯ



ಕೆಲಸ. ಬಂದ ದುಡ್ಡನ್ನೆಲ್ಲ ಉಡಾಯಿಸಿ ಮೋಜು ಮಾಡುವ ಗೆಳೆಯರನ್ನು ಕಂಡಾಗ ಅವನಿಗೆ ಹೆತ್ತವರ ಮೇಲೆ ಕೋಪ ಸೆಗೆಯುತ್ತದೆ. 'ನಾ ಸಂಪಾದ್ಸಿದ್ದನ್ನೆಲ್ಲ ನಿಮ್ಗೇ ಮಡಗ್ಬೇನಂತ ಬರ್ಕೊಟ್ಟಿವ್ನಾ?' ಎಂದು ಸಿಟ್ಟಾಗಿ ಒಮ್ಮೊಮ್ಮೆ ಸಂಬಳವನ್ನೆಲ್ಲ ಹೊರಗೇ ಖರ್ಚು ಮಾಡಿ ಬಿಡುತ್ತಾನೆ. ಆದರೆ ಊಟದ ಹೊತ್ತಿಗೆ ಅವನು ಬಂದಾಗ ಮಾತ್ರ ತಾಯಿ ತಟ್ಟೆ ತುಂಬ ಏನಾದರೂ ಇಕ್ಕಲೇಬೇಕು. ಇಲ್ಲದಿದ್ದರೆ ಅವಳ ಮುಡಿ ಸೆಳೆದು ಈಡಾಡಿ ಬಿಡುತ್ತಾನೆ. ತಂದೆಗೂ ನಾಲ್ಕಾರು ಬಾರಿ ಬೆನ್ನಿಗೆ ಕೈ ತಾಗಿಸಿದ್ದ. ಮನೆಯ ಬಡತನ, ಮದುವೆಯಾಗಿ ಸುಖಪಡದೇ ಇರುವಂಥ ಪರಿಸ್ಥಿತಿ, ದುಡಿತ ಅವನ ಪಿತ್ತವನ್ನು ಕೆರಳಿಸಿ ಹುಚ್ಚನನ್ನಾಗಿಸಿ ತನ್ನೆಲ್ಲ ಕಷ್ಟಕ್ಕೂ ತಂದೆ ತಾಯಿಯರೇ ಹೊಣೆ ಎಂಬ ಕೋಪ. ನೀಲಾ ಮಾತ್ರ ಅಣ್ಣನ ಕೋಪದ ವೇಳೆಯಲ್ಲಿ ಹೊರಗೆ ಜಾರಿದ್ದು ಅವನು ಖುಷಿಯಾಗಿರುವಾಗ ಅವನ ಕೆಲಸಗಳನ್ನು ಮಾಡಿಕೊಟ್ಟು ತಿಂಡಿಗಾಗಿ ಪೈಸಾ ಗಿಟ್ಟಿಸುತ್ತಾಳೆ. ಬರುಬರುತ್ತ ತಂದೆ ತಾಯಿಯ ಮೇಲೆ ದಿನಕ್ಕೆ ನಾಲ್ಕು ಚಾಡಿ ಮಾತು ಹೇಳಿದಾಗಲೇ ಅಣ್ಣನಿಂದ ತಂಗಿಗೆ ಶಹಭಾಸ್‌ಗಿರಿ, ಬಹುಮಾನ.

ಮನೆಯವರನ್ನೆಲ್ಲ ನಡುಗಿಸಿಟ್ಟಿದ್ದರೂ ರಾಮಯ್ಯನಿಗೆ ಸಂಪಾದಿಸುವವನೆಂದು ಅತಿ ಉಪಚಾರ, ಗೌರವ. ಅವನ ಪಾಲಿಗೆ ದೊಡ್ಡ ಮುದ್ದೆ, ಕಾಫಿ, ಮನೆಯಲ್ಲಿದ್ದ ಒಂದೇ ಹಾಸಿಗೆಯನ್ನು ಅವನಿಗೆ ಹಾಸಿಕೊಟ್ಟು ಉಳಿದ ಮೂವರು ಚಾಪೆಯ ಮೇಲೆ ಮಲಗುತ್ತಿದ್ದರು. ಇಕ್ಕಟ್ಟು ಜಾಗ. ಸೀರೆಯನ್ನು ಎರಡು ಮಡಿಕೆಯಾಗಿ ಮಡಿಸಿದರೆ ಸಾಕು ತಾಯಿ ಮಗಳಿಗೆ ಹೊದಿಕೆಯಾಗುತ್ತಿತ್ತು. ಚಳಿಗಾಲದ ದಿನಗಳಲ್ಲಿ ನೀಲಳಿಗೆ ಅಣ್ಣ ಹೊದ್ದುಕೊಳ್ಳುವ ದಪ್ಪ ಕಂಬಳಿಯಲ್ಲಿ ನುಸುಳುವ ಆಸೆ. ಮಧ್ಯರಾತ್ರಿಯ ಹೊತ್ತಿಗೆ ಚಾಪೆಯ ಒತ್ತುವಿಕೆ ಅತಿಯಾಯಿತೆನಿಸಿ ಮೆಲ್ಲಗೆ ಹಾಸಿಗೆಯ ಅಂಚಿಗೆ ಮೈ ಸರಿಸಿದವಳು ಸ್ವಲ್ಪ ಹೊತ್ತಿನಲ್ಲಿ ಅರ್ಧ ಹಾಸಿಗೆಗೆ ಜರುಗಿರುತ್ತಿದ್ದಳು. ಚಳಿಯ ಕೊರೆತದಿಂದಲೋ, ತಂಗಿಯ ಮೇಲಿನ ಕರುಣೆಯಿಂದಲೋ ರಾಮಯ್ಯ ಅವಳನ್ನು ಮುಸುಕಿನಲ್ಲಿ ಸೇರಿಸಿಕೊಂಡು ಅಪ್ಪಿ ಬೆಚ್ಚಗಾಗುತ್ತಿದ್ದ. ಹೀಗೆ ಹತ್ತು ಹಲವು ತಿಂಗಳುಗಳು ಉರುಳಿದರೂ ತಂದೆ ತಾಯಿಯರಿಗೆ ಇದು ತಿಳಿದಿಲ್ಲವೆಂದೇ ಅವರಿಬ್ಬರ ಭಾವನೆ. ನಂಜಪ್ಪನೇನೋ ಉಂಡು ಮಲಗಿದನೆಂದರೆ ಬೆಳಗಾಗುವವರೆಗೂ ತೊಲೆಯಂತೆ ಬಿದ್ದಲ್ಲೇ ಬಿದ್ದಿರುತ್ತಿದ್ದ. ಆದರೆ ಮಾಯಕ್ಕನ ಕಣ್ಣುಗಳಾದರೋ ಬೆಳಕಿನಲ್ಲಾಗಲಿ, ಕತ್ತಲಿನಲ್ಲಾಗಲೀ, ಸದಾ ಬಿಚ್ಚೇ ಇರುತ್ತಿತ್ತು. ನಿದ್ರಿಸಲು ಪ್ರಯತ್ನಿಸಿದರೂ ಇಂದಿನ, ಹಿಂದಿನ ಗಾಯದ ನೆನಪುಗಳೇ. ಬೆಚ್ಚಿ ಬೆಚ್ಚಿ ಬೀಳುತ್ತಾಳೆ. ಜೊತೆಗೆ ಮಗ–ಮಗಳ ಸಂಬಂಧ ಈ ರೀತಿ ತಿರುಗಿದ್ದನ್ನು ಕಂಡು ಅವಳ ಹೃದಯ ರಿವ್ವನೆ ಹಾರಿತು. ಇನ್ನೇನು ಗತಿ? ಎಂದು ಕಂಗಾಲಾಗಿ ಯಾರಲ್ಲೂ ಹೇಳಿಕೊಳ್ಳಲಾರದೆ, ಅವರಿಗೆ ಬುದ್ಧಿ ಹೇಳಲಾರದೆ ಒಳಗೇ ಕುದ್ದುಕುದ್ದು ಮೆತ್ತಗಾದಳು. 'ಯಾರಿಗಾದ್ರೂ ಏಳಿದೇಂದ್ರೆ ನಿನ್ನ ಮುಗುಸ್ಬುಡ್ತೀನಿ'–ರಾಮಯ್ಯ ಬೆದರಿಸಿದಾಗ ಮಾಯಕ್ಕ ಸಾವು ಮುಕ್ಕರಿಸಿದಂತೆ ಗರ ಬಡಿದು ಮಂಕಾದಳು. ಜೊತೆಗೆ ಅವಳು ಆಚೀಚೆ ಕದಲದಂತೆ ನೀಲಳ ಬಲವಾದ ಕಾವಲು. ತನ್ನ ಮಕ್ಕಳ ಕ್ರೌರ್ಯ, ಅನೈತಿಕ ಸಂಬಂಧವನ್ನು ದುಃಖ ಧುಮ್ಮಿಕ್ಕಿ ಎಲ್ಲಿ ಎಲ್ಲರ ಬಳಿಯೂ ತೋಡಿಕೊಂಡುಬಿಡುತ್ತಾಳೋ ಎಂದು ತಾಯಿಯ ಪ್ರಾಮಾಣಿಕ ಮುಗ್ಧ ನಡವಳಿಕೆಯ ಬಗ್ಗೆ ನೀಲಳಿಗೆ ರೋಷ, ಗುಮಾನಿ.

ದಿನಗಳು ಉರುಳುತ್ತಿದ್ದರೂ ಈ ಪಾಪಿ ಸಂಗತಿಯನ್ನು ಯಮುನಾಬಾಯಿಯ ಬಳಿ ಉಸುರಲು ಹೇಸಿ, ಮಾಯಕ್ಕನ ನಾಲಗೆ ಸಂಕೋಚದಿಂದ ಒಳಗೇ ಮುಚ್ಚಿಟ್ಟುಕೊಂಡಿತ್ತು. ಇದಕ್ಕೆ ಮಕ್ಕಳ ಬೆದರಿಕೆಯ ರಭಸವೂ ಕಾರಣವಿರಬಹುದು. ನಂಜಪ್ಪ ಸತ್ತ ಮೇಲೆ ಇಬ್ಬರಿಗೆ ಪಾಲಾಗುತ್ತಿದ್ದ ಏಟುಗಳು ಮಾಯಕ್ಕಳೊಬ್ಬಳ ಪಾಲಾಯಿತು. 'ಅವನೊಬ್ಬ ದರಿದ್ರದೋನು ತೊಲಗಿದ, ಕಾಟ ಕಳೀತೂಂದ್ರೆ ನೀ ಇದ್ದೀಯಲ್ಲ ಪ್ರಾಣ ತಿನ್ನಾಕೆ' ರಾಮಯ್ಯ ಗುಡುಗಿ ಮನೆ ಬಿಟ್ಟಾಗ, ನೀಲಾ ಮನೆಯಲ್ಲಿಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ಯಮುನಾಬಾಯಿಯಲ್ಲಿಗೆ ಮೆಲ್ಲನೆ ಅಂಜುತ್ತ ಬರುತ್ತಿ

ದ್ದಳು ಮಾಯಕ್ಕ.

ಮಾಯಕ್ಕನ ಹೆಣ ಮುಂದೆ ಮುಂದೆ ಹೊರಟಾಗ ನೀಲಾ ಅದರ ಹಿಂದೆಯೇ ಓಡಿ ಎಡವಿಬಿದ್ದಳು. ಅವಳ ಸೀರೆಯ ಅಂಚು ಹರಿದು, ಹೆಬ್ಬೆರಳು ತರಚಿ ರಕ್ತ ಕಾಣಿಸಿಕೊಂಡಿತ್ತು. ಯಮುನಾಬಾಯಿ ಅವಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದಳು.

ಹಿಂದೊಂದು ದಿನ–ಯಮುನಾಬಾಯಿ ಕೆಲಸವನ್ನೆಲ್ಲ ಮುಗಿಸಿ, ಮಕ್ಕಳು ಬರುವವರೆಗೂ ಮಾಯಕ್ಕನ ಮನೆಗಾದರೂ ಹೋಗಿ ಬರೋಣವೆಂದುಕೊಂಡು ಎದುರು ಮನೆಯ ಗೇಟನ್ನು ತೆರೆದಳು. ಇದ್ದಕ್ಕಿದ್ದ ಹಾಗೆ ಮಾಯಕ್ಕನ ಕಿಟ್ಟನೆ ಕಿರುಚಿದ ದನಿ. ಯಮುನಾಬಾಯಿಗಾಗಿಯೇ ಬಾಗಿಲು ತೆರೆದಂತೆ ಬಾಗಿಲು ಹೋಳಾಯಿತು. ಮಾಯಕ್ಕ ಬಿರುಗಾಳಿಯಂತೆ ಹೊರಗೋಡಿ ಬಂದಳು. ಬಾಯಿ ಬಿರುಕಿಸಿ ಅಪ್ರತಿಭಳಾದ ಯಮುನಾಬಾಯಿ ಮಾಯಕ್ಕನ



"ನನಗೆ ಈಗೀಗ ಜಗವೆಲ್ಲ ಅಂಧಕಾರಮಯವಾಗಿ ಕಾಣುತ್ತಲಿದೆ ಗುರುವರ್ಯಾ..."

ಅವಸ್ಥೆಯನ್ನು ಕಂಡು ಒಳಗೆ ನಡೆದಿರಬಹುದಾದ ಘಟನೆಯನ್ನು ತತ್‌ಕ್ಷಣ ಊಹಿಸಿದಳು. ಮಾಯಕ್ಕ ಸೀರೆಯನ್ನು ಹಾಗ್ಹಾಗೇ ಅಡ್ಡಾದಿಡ್ಡಿ ಸುತ್ತಿದ್ದಾಳೆ. ಅರ್ಧ ಮೈ ತೆರೆದಿದೆ. ಎದೆಯ ಮೇಲೆ ಕುಬುಸವಿಲ್ಲ. ತೊಡೆಯ ಮೇಲಿಂದ, ಸೊಂಟ ಎದೆಯ ಮೇಲೆ ಹಾಗೇ ಉಂಡೆಯಾಗಿ ಸೀರೆಯ ಕುಪ್ಪೆ ಅವುಚಿಕೊಂಡು ಏಟು ತಪ್ಪಿಸಿಕೊಳ್ಳಲು ಹೊರನುಗ್ಗಿ ಬಂದಿದ್ದಳು. ಉಸಿರಾಟ ತಿದಿ. ಮೈಯಲ್ಲಿ ಎದ್ದು ತೋರುವ ನಡುಕ, ಯಮುನಾಬಾಯಿಯನ್ನು ಕಂಡದ್ದೇ ತಡ ಮಾಯಕ್ಕ ಕಣ್ತುಂಬ ನೀರು ತುಂಬಿಸಿಕೊಂಡು ಬಿಕ್ಕಳಿಸಿದಳು. ಉಗ್ಗು ಉಗ್ಗು ಮಾತು. 'ನೋಡ್ರಿ ಯಮುನಕ್ಕ, ನನ್ನ ಶಾಲೀ ತೆಗೆದಿಟ್ಕೊಂಡು ಅದೇಗೆ ಒರಕ್ಕೋಗ್ತೀಯೋ ಓಗು ನೋಡೋಣ ಅಂತಾಳಲ್ಲ... ಹಗ್ಗದ ಮ್ಯಾಗಿರೋದನ್ನ ಎಳ್ಕೋಳಕ್ಕೆ ಹ್ವಾದ್ರೆ ಹುಲಿಯಂಗೆ ಮೇಲೆ ಹಾರಿ ಬಿದಿರು ತೆಗ್ದು ಬಡಿದು ಬಿಟ್ಳು, ನೋಡಕ್ಕ. ಹೀಗ್ಯಾರಾರೂ ಮಗ್ಳು ಹೆತ್ತವ್ವನ್ನೇ ಬಡೀತಾರಾ? ಅವಳಿಗೆ ನಾ ತಾಯಲ್ಲಂತೆ... ಪಿಶಾಚಿಯಂತೆ...' ಕಂಠ ಬಡಕಲಾಗಿ, ಮುಖ ದುಃಖದ ಕಡಲಾಗಿತ್ತು. ಕೈಗಳು ಜೋತ ಮೊಲೆಯನ್ನು ಮುಚ್ಚುವ ಪ್ರಯತ್ನದಲ್ಲಿ ತೊಡಗಿದ್ದವು.

ಯಮುನಾಬಾಯಿ ನೊಂದುಕೊಂಡು ಮೌನವಾಗಿ ಮನೆಯ ಕಡೆ ಸಾಗಿದಾಗ ಮಾಯಕ್ಕ ಓಡುತ್ತ ಅವಳನ್ನು ಹಿಂಬಾಲಿಸಿದಳು. 'ಯಮುನಕ್ಕ... ನಾ ಇವತ್ ಎಂಗ್ ಮನೆಗೋಗ್ಲೀ?... ನೆಂಗ್ ಭಯ... ಅವನ್ ಬರತ್ಲೂ ಇಬ್ರೂ ಸೇರ್ಕೊಂಡ್ ನನ್ನ ಚಟ್ಣಿ ಅರೆದು ಬಿಡ್ತಾರೆ... ನಾ ಎಂಗೋಗ್ಲೆ?' ಭಯದ ಗುಹೆಗಳಂತೆ ಅವಳ ಕಂಗಳು ಅರಳಿದವು. ಆಳವಾದವು, ಮುಖ ಪೊಗ್ಗಾಯಿತು. ಭೋರೆಂದು ಅತ್ತಳು. ಅಸಹಾಯಕತೆಯ ಝಳದಿಂದ ಯಮುನಾಬಾಯಿಯ ಗಂಟಲು ಕಟ್ಟಿತ್ತು. 'ನಾ ಓಗಾದಿಲ್ಲ... ಓಗಾದಿಲ್ಲ... ಎಲ್ಲಾರೋಗಿ ಜೀವಾ ತೆಕ್ಕೊಳ್ತೀನಕ್ಕ, ಮನೇಗೋದ್ರೂ ಅಷ್ಟೇ ಅವ್ರು ಪ್ರಾಣ ತೆಗೀತಾರೆ... ನಾ ಏನ್ ಮಾಡ್ಲಕ್ಕ?' ಅವಳ ದನಿ ಬಡಕಲಾಗಿ ಕಂಪಿಸಿತು. ಸರಿಯಾಗಿ ಉಂಡಿರದ ಕೃಶ ದೇಹ, ಮೈ ತುಂಬ ನೆರಿಗೆಗಳ ಹುರಿಗಳಿಂದ ಬಂಧಿತ

ವಾಗಿ ಸೆರೆಮನೆಗೆಂಬಂತೆ ಮೆಲ್ಲನೆ ಕಾಲು ಎಳೆಯಿತು. ಯಮುನಾಬಾಯಿಯ ಕಣ್ಣಲ್ಲಿ ಫಳಕ್ಕನೆ ನೀರು ಚಿಮ್ಮಿತು. ಮಾಯಕ್ಕನ ದೈನ್ಯಾವಸ್ಥೆ, ದುಃಖಿತ ಮುದುಕರು ಮುಖ – ಮೈಗಳನ್ನು ಕಂಡಾಗ ಅನುಕಂಪ ಉಕ್ಕಿ ಬರುವುದರೊಡನೆ ತನಗೇ ಏಟು ಆದಿರುವಷ್ಟು ಭಯದ ತಲ್ಲಣ.

ಸಂಜೆಯಾಯಿತು. ರಾತ್ರಿಯಾಯಿತು. ಎದುರು ಮನೆಯಿಂದ ಕಿರುಚಾಟ, ಬಡಿತ, ಬೈಗಳು, ರೋದನ.

ಬೆಳಗ್ಗೆ ಬಾಗಿಲಿಗೆ ನೀರು ಹಾಕಲು ಬಂದಿದ್ದ ಮಾಯಕ್ಕ ಯಾರೋ ಎನ್ನುವಂತಾಗಿದ್ದಳು. ಅವಳ ಮಕ್ಕಳ ಕ್ರೌರ್ಯ, ರಾಕ್ಷಸೀ ಪ್ರವೃತ್ತಿ ಹೆತ್ತ ತಾಯಿ ಎಂಬ ವಾತ್ಸಲ್ಯಭಾವ ಕಿಂಚಿತ್ತೂ ಇಲ್ಲದ್ದನ್ನು ಕಂಡು ಯಮುನಾಬಾಯಿಗೆ ಮತ್ತೆ ಮತ್ತೆ ಅಚ್ಚರಿ ಕಬಳಿಸಿಬರುತ್ತದೆ. ಅನಾದಿ ಕಾಲದಿಂದಲೂ 'ಮಾತೃದೇವೋ ಭವ' ಇತ್ಯಾದಿ ಪವಿತ್ರ ಅನುಪಮ ಸಂಬಂಧವೆಂದು ಸಾರಿಕೊಂಡು ಬಂದ ಈ ಅನ್ಯೋನ್ಯ ಬಂಧ ಅರ್ಥಹೀನವಾಗಿ ಹೀನ ಸುಳಿಯ ಕವಲುಗಳಲ್ಲಿ ಸೇರಿ ಹೋಗುತ್ತಿರುವಂತೆ ಅವಳಿಗೆ ದಿಗ್ಭ್ರಮೆ. ಎಂದೂ ಖಾಯಿಲೆಯಿಂದ ಮಲಗಿರದಿದ್ದ ಮಾಯಕ್ಕನಿಗೆ ಸಾವು ಖಂಡಿತಬಂದಿತೆಂದರೆ ಖಂಡಿತ ದೇವನಿಗೇ ಅವಳ ಮೇಲೆ ಕರುಣೆಯುಕ್ಕಿ ಬಂದಿರಬೇಕೆಂದುಕೊಂಡಳು. ಆತ್ಮೀಯ ಮಾಯಕ್ಕನ ಮರಣದ ಬಗ್ಗೆ ದುಃಖವೆನಿಸಿದರೂ ಏನೋ ಅವ್ಯಕ್ತ ಸಮಾಧಾನ, 'ದೇವರು ಕರುಣಾಮಯಿ' ಎಂಬ ನಿಟ್ಟುಸಿರು. ಮಾಯಕ್ಕನ ಹೆಣ ಸಾಗಿದ ದಿಕ್ಕಿನತ್ತ ಶೂನ್ಯ ನೋಟ ಬೆರೆಸಿ ಒಳಬಂದ ಯಮುನಾಬಾಯಿ ಮನೆಯ ಕೆಲಸಗಳತ್ತ ಗಮನಕೊಟ್ಟಳು.

ಮೌನ ಗಿಜಿಗುಡುತ್ತಿದ್ದ ಆ ರಾತ್ರಿಯಲ್ಲಿ ನಿದ್ದೆ ಬಾರದೆ ಹೊರಳಾಡುತ್ತಿದ್ದ ಅವಳು ಕಿವಿಯನ್ನು ಹರವಾಗಿ ಎದುರು ಮನೆಯ ಕಡೆ ತೆರೆದಾಗ ನಿಶ್ಶಬ್ದ, ನಿಷ್ಪಂದ. ಎಂದಿನ ಗದ್ದಲ ಕಿವಿಯನ್ನು ಕುಲುಕದಿದ್ದಾಗ ಮಾಯಕ್ಕ ಸತ್ತಿರುವುದು ಅವಳಿಗೆ ಖಾತ್ರಿಯಾಗತೊಡಗಿತು. ಬೆಳಗಿನ ದೃಶ್ಯಗಳೆಲ್ಲ ಕಣ್ಮುಂದೆ ಹೊರಳಿದಂತಾಗಿ ಮೆಲ್ಲನೆದ್ದು ಕಿಟಕಿಯ ಬಳಿ ಬಂದು ನಿಂತು ಎದುರು ಮನೆಯತ್ತ ದೃಷ್ಟಿ ಹಾಯಿಸಿದಳು. ಸದ್ದಿಲ್ಲದ ಕತ್ತಲೆಗೂಡು, 'ಪಾಪ, ಹುಡುಗ್ರು ತಾಯಿಯನ್ನು ನೆನೆಸಿಕೊಳ್ತಾ ಪಶ್ಚಾತ್ತಾಪದಿಂದ ದುಃಖಿಸ್ತಿರಬಹುದು' ಎಂದು ಲೊಚಗುಟ್ಟಿಕೊಳ್ಳುತ್ತ ಹಾಸಿಗೆಗೆ ಬಂದ ಯಮುನಾಬಾಯಿಗೆ ಎದುರು ಮನೆಯ ಕತ್ತಲಾಳದೊಳಗೆ ಬಿಸಿ ದೇಹಗಳೆರಡು ಪರಸ್ಪರ ಬೆಸೆದುಕೊಂಡು ಹೊರಳಾಡುತ್ತಿರುವುದು ಅರಿವಾಗಲಿಲ್ಲ.

✡

ಸಾಹಿತ್ಯಪ್ರೇಮಿ ಶ್ರೀಮಂತರ ಮನೆಗೊಬ್ಬ ಕವಿ ತನ್ನ ಕವನ ಸಂಗ್ರಹವೊಂದನ್ನು ತೆಗೆದುಕೊಂಡು ಹೋದರು. ಶ್ರೀಮಂತರು ಒಳಗಿದ್ದುದರಿಂದ ಆಳಿನ ಜತೆ ಕವನ ಸಂಗ್ರಹವನ್ನು ಒಳಗೆ ಕಳುಹಿಸಿ ಹೊರಗೆ ಕಾದು ಕುಳಿತರು. ಹತ್ತು ನಿಮಿಷವಾಗಿರಬೇಕು, ಬಂತು ಒಳಗಿನಿಂದ ಧ್ವನಿ:

"ಕವಿಗೆ ನೂರು ರೂ. ಕೊಟ್ಟು ಕಳಿಸಲು ಕಾರಕೂನರಿಗೆ ಹೇಳು."

ಹತ್ತು ನಿಮಿಷದ ನಂತರ ಆ ಕಾವ್ಯ ತನ್ನ ಪ್ರಭಾವ ಬೀರಿ ಕೊಡಬೇಕಾದ ಹಣವನ್ನು ನೂರರಿಂದ ಇನ್ನೂರು, ಮುನ್ನೂರು, ಐನೂರು, ಸಾವಿರಕ್ಕೆ ತಲುಪಿಸಿತು. ಆದರೆ ಸಾವಿರ ಮೀರಿದ ಮೇಲೆ ಒಳಗಿನ ಧ್ವನಿ: "ಹೂಂ-ಸಿಪಾಯಿಗಳಿಂದ ಕವಿಯನ್ನು ಹೊಡೆದೋಡಿಸಲು ಕಾರಕೂನರಿಗೆ ಹೇಳು, ಈ ಕವಿತೆ ಓದಿದರೆ ನನ್ನ ಸಂತೋಷ ಉಕ್ಕೇರಿ ಖಜಾನೆ ಬರಿದಾದೀತು."


ಹೆಂಡತಿ

ವಿಸ್ಕಿ – ಬೀರುಗಳ ಸಮ್ಮಿಶ್ರದ ದುರ್ನಾತದ ಬಾಯೊಮ್ಮೆ
ಉಪಾಚರಿಸಿತ್ತು: 'ಕನ್ನಿಯೂ ಮೂಸದ ಹಳಸಿದನ್ನ
ನಿನ್ನ ಹೆಂಡತಿ'ಯೆಂದು
ಮದ್ಯದ ಮತ್ತುಗೂಳಿಸಿದ್ದೇ ಈ ಮಾತು ?
ಅಲ್ಲ –

ಎಂದೋ ಒಮ್ಮೆ ಹಳೆಯ ಟ್ರಂಕಿನೊಳಗಿಟ್ಟು ಮರೆತಂತಿದ್ದುದು,
ಆಗಾಗ ಮರೆಯಲ್ಲಿ ನೆನಪಿಸಿಕೊಂಡುದು,
ಅರಿವಿನ ಪೊರೆಯುರುಚಿದ ಸುಪ್ತದ ಬೀಗ ತೆರೆದುಕೊಂಡದ್ದು.
ವ್ಯಕ್ತಿಯಾದರೂ ಯಾವುದೋ ಹೇಳಕೇಳದ ಊರಿನದ್ದೇ ?
ಅಲ್ಲ –

ಆತ್ಮದ ಗುರುತ್ವದಾಚೆಗೆಂದೂ ದಾಟಿ ಜಿಗಿಯಲಾರದ್ದು.
ಹಾಗಾದರೆ ಪರಿಣಾಮವೆಂತಾಗಬೇಕು ?
ರಾಮಚಂದ್ರನ ಮೂರ್ಖತ್ವಕ್ಕಿಪ್ಪತ್ತನೇ ಶತಮಾನ
ದ ಸಂಸಾರ – ಸರಕಾರ ಸಂಹಿತೆಯಲ್ಲಿಲ್ಲ ತಾಪು.
ಮೇಲಾಗಿ ಪದರು ಪದರು ತೆಗೆದು ನಾನೋದಿರುವ
ಹೆಂಡತಿ :

ಸುಳಿಯಾಗಿ ಸುತ್ತುವುದಿಲ್ಲ, ಹೊಳೆಯಾಗಿ ಹರಿವವಳು;
ಸ್ಟೇಜಿನ ದೇವತೆಯೂ ಅಲ್ಲ, ಗ್ರೀನ್‌ರೂಮಿನ ದೆವ್ವವೂ ಅಲ್ಲ;
ಬೊಗಳುವುದಿಲ್ಲ, ಕಚ್ಚುವುದೂ ಇಲ್ಲ,
ತಾನು ಬೆಳೆದದ್ದೇ ಪುಷ್ಪ, ಪರರದ್ದು ಕಾಗದ
ವೆಂಬ ಹಮ್ಮಿನವಳಲ್ಲ;
ಹೆಸರ ಮುಂದೆ ಹರಿವ ಘೋಟುಗಳುದ್ದ ವರ್ಣಮಾಲೆ



ಯಲಂಕಾರ ಗಳಿಸಿಲ್ಲ:
ಧರ್ಮ – ಧರ್ಮಗ್ರಂಥಗಳರಿವಿಲ್ಲ;
ಬಾಬಾಗಳ ಬೂದಿ – ಭಸ್ಮಗಳ ಪೂಸಿಕೊಂಡಿಲ್ಲ;
ಬದುಕಿನ ಪಾಠಶಾಲೆಗೆ ಹೊಸದಾಗಿ ಅರ್ಜಿ ಸಲ್ಲಿಸಿರುವ
ನಮ್ರ ವಿದ್ಯಾರ್ಥಿನಿ.

ಪೆಟ್ಟಿಯಲಿ ಮಿರಗುಟ್ಟುವ ಕಂತೆ ಸಾಲುಗಳನೊಟ್ಟುವ,
ಮೈಮೇಲೆ ಥಳಥಳಿಸುವ ವಸ್ತುಪ್ರದರ್ಶನದ
ಭೀಮಭಾರ ಹೇರಿಕೊಳ್ಳುವ,
ತಾಜಮಹಲಂಥ ಢೋಂಗಿ ಪ್ರೇಮಸೌಧ ಕಟ್ಟುವ,
ಗೀಳುಗಳ ಗೀರಿಲ್ಲ ಇವಳಲ್ಲಿ ತಲೆಮಾರುಗಳಪ್ಪಂದಿರ
'ಜೀನು'ಗಳು.
ತಂತಿ ಮಿಡಿದರೆ ಸುಶ್ರಾವ್ಯ ನಾದ ಹೊಮ್ಮಿಸಿದಂತಿರಬೇಕು
ಬದುಕೆಂಬುದಷ್ಟೇ ತಿಳಿದ
ಗಡಿಯಾರದ ಮುಳ್ಳಿನ ಗಮನಿ.

ಮತ್ತು,
ನಲವತ್ತೈದರ ವಿಸ್ಕಿ – ಬೀರುಗಳ ವ್ಯಕ್ತಿ
ತಿಳಿದ 'ಪುರುಷ'ನಿಗಿಂತಲೂ
ಇಂಡಿಯಾದ 'ಹೆಂಡತಿ'
ಯರ್ಥವನು ಹದಿಹರೆಯದಲೇ
ಪ್ರೌಢ ಕಲೆಯಾಗಿ ಬಿಡಿಸುವ ಕನಸು ಕಂಡು
ಕುಂಚ ಹಿಡಿದವಳು,
ಬಿಡಿಸುತ್ತ ನಡೆದಿರುವವಳು !

ಅರಕಲಗೂಡು ನೀಲಕಂಠಮೂರ್ತಿ

ಮೂರು ಚಿಂತನೆಗಳು

ಜಿ. ಟಿ. ನಾರಾಯಣರಾವ್

೧. ಶಿಸ್ತು

ಭಾರತದ ದರಿದ್ರನಾರಾಯಣರಿಗೆ ದರ್ಶನ ನೀಡಲೆಂದು ಶ್ರೀಮನ್ನಾರಾಯಣ ಏನಾದರೂ ಬರುವುದಾದಲ್ಲಿ ಅನ್ನರೂಪದಲ್ಲೇ ಬರಬೇಕಾದೀತು ಎಂದು ಹೇಳಿರುವ ಸ್ವಾಮಿ ವಿವೇಕಾನಂದರು ಅನ್ನಸಮೃದ್ಧವಾಗಿರುವ ಇಂದಿನ ಭಾರತವನ್ನು ಕುರಿತಂತೆ ಪ್ರಾಯಶಃ ಈ ಮಾತನ್ನು ಹೇಳಿಯಾರು: ಭಾರತದ ಹೊಟ್ಟೆ ತುಂಬಿದ ಮಂದಿಗೆ ಭಗವಂತ ಶಿಸ್ತಿನ ರೂಪದಲ್ಲಿಯೇ ಬಂದು ದರ್ಶನ ನೀಡತಕ್ಕದ್ದು.

ಶಿಸ್ತು ಎಂದರೆ ನಿಸರ್ಗದ ಬಲಗಳಿಗೆ ಅನುವರ್ತಿಯಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳುವ ವಿಧಾನ, ಸಮಷ್ಟಿಯ ನಿಯಮಗಳಿಗೆ ಬದ್ಧವಾಗಿ ವ್ಯಷ್ಟಿ ವರ್ತಿಸಬೇಕಾದ ಬಗೆ, ಉದ್ದಿಷ್ಟ ಕಾರ್ಯವನ್ನು ನಿರ್ವಹಿಸುವಲ್ಲಿ ವ್ಯಕ್ತಿ ಅನುಸರಿಸಬೇಕಾದ ಕ್ರಮ.

ಮನುಷ್ಯ ನಿಸರ್ಗದ ಕೂಸು, ಅದರ ಅವಿಭಾಜ್ಯ ಅಂಶ. ಮನುಷ್ಯ ಇಲ್ಲದಿದ್ದರೂ ನಿಸರ್ಗ ಉಳಿದೀತು, ಇನ್ನೂ ಚೆನ್ನಾಗಿಯೇ! ಆದರೆ ನಿಸರ್ಗ ಇಲ್ಲದಿದ್ದರೆ ಮನುಷ್ಯ ಉಳಿಯಲಾರ. ಅವನಿಗೆ ಉಸಿರು ಉಣಿಸು ನೆಲೆ ಎಲ್ಲವನ್ನು ಒದಗಿಸುವುದು ನಿಸರ್ಗ.

ನಿಸರ್ಗದ ಬಲಗಳು ಯಾವುವು? ಅವು ಹೇಗೆ ಪ್ರಕಟವಾಗುತ್ತವೆ? ಹಗಲು ರಾತ್ರಿಗಳ ಎಡೆಬಿಡದ ಮುನ್ನಡೆ, ಋತುಗಳ ಕ್ರಮಬದ್ಧ ಪುನರಾವರ್ತನೆ, ಮೇಲೆಸೆದ ಕಲ್ಲು ಕೆಳಕ್ಕೆ ಬೀಳುವುದು, ಜೀವಿಗಳು ಹುಟ್ಟಿ ಬೆಳೆದು ಸಾಯುವುದು ಮುಂತಾದವು ನಿಸರ್ಗಬಲಗಳ ವಿವಿಧ ವ್ಯಾಪಾರಗಳು. ಇವುಗಳಿಗೆ ಅನುವರ್ತಿಯಾಗಿ ಮನುಷ್ಯ ತನ್ನ ಬದುಕನ್ನು ರೂಪಿಸಿಕೊಂಡಾಗ ನಿಸರ್ಗದ ನಡೆಗೂ ಅವನ ನಡೆಗೂ ನಡುವೆ ಸಾಂಗತ್ಯ ಏರ್ಪಟ್ಟು ಬಾಳು ಹಸನಾಗುತ್ತದೆ. ಹೀಗಲ್ಲದೇ, ಬುದ್ಧಿವಂತನಾದ ಮನುಷ್ಯ ನಿಸರ್ಗ ಬಲಗಳನ್ನು ವಿರೋಧಿಸಿ ತಾನು ಯಶಸ್ಸು ಸಾಧಿಸುತ್ತೇನೆ ಎಂದು ಹೊರಟರೆ, ಅಂದರೆ ನಿಸರ್ಗ ಅವನ ಮೇಲೆ ವಿಧಿಸುವ ಶಿಸ್ತನ್ನು ಮುರಿದು ಬದುಕನ್ನು ಸಾಗಿಸತೊಡಗಿದರೆ, ಅವನ ಸರ್ವನಾಶ ಒಂದಲ್ಲ ಒಂದು ದಿವಸ ಆಗುವುದು ಖರೆ. ಹಿರಿ ನಗರಗಳಲ್ಲಿ ಇಂದು ಮನುಷ್ಯನ ಉಳಿವಿಗೆ

ಕಠೋರ ಸವಾಲಾಗಿ ಪರಿಣಮಿಸಿರುವ ಪರಿಸರ ಮಾಲಿನ್ಯ ಇದಕ್ಕೆ ಸ್ಪಷ್ಟ ನಿದರ್ಶನ. ವಿಜ್ಞಾನ ಮತ್ತು ತಂತ್ರವಿದ್ಯೆಯ ಫಲವಾಗಿ ಇಂದು ಸ್ವಯಂಚಲಿಗಳು, ಬೃಹದ್ಯಂತ್ರ ಸ್ಥಾವರಗಳು, ಕರ್ಮಾಗಾರಗಳು, ಪರಮಾಣು ಶಿಲಾಸ್ತ್ರಗಳು ಮುಂತಾದವು ದೈನಂದಿನ ಜೀವನದ ಆವಶ್ಯಕ ಮತ್ತು ಅನಿವಾರ್ಯ ಅಂಗಳಾಗಿವೆ. ಈ ದೈತ್ಯ ಉದ್ಯಮಗಳು ನಿಸರ್ಗದ ಪರಿಮಿತ ಸಂಪನ್ಮೂಲಗಳ ನಿರಂತರ ವಿನಿಯೋಗದಿಂದ– ಸೂರೆಯಿಂದಲೆ ಎನ್ನಬಹುದು– ಬೆಳೆದು ಇಂದು ತ್ರಿವಿಕ್ರಮಾವತಾರವನ್ನು ತಾಳಿವೆ. ಮನುಷ್ಯ ಬಲಿ ಚಕ್ರವರ್ತಿಯಂತೆ ತನ್ನ ತಲೆಯನ್ನೇ ಇವುಗಳಿಗೆ ಒಪ್ಪಿಸಬೇಕಾಗಿದೆ. ಈ ಸಮಸ್ತ ತೋರ್ಕೆ ಪ್ರಗತಿಗಳಲ್ಲಿಯೂ ಮನುಷ್ಯ ನಿಸರ್ಗಬಲಗಳಿಗೆ ಅನುವರ್ತಿ ಆಗದೆ, ಬಲುವೇಳೆ ಅವುಗಳಿಗೆ ವಿರುದ್ಧವಾಗಿ, ವರ್ತಿಸುತ್ತ ಬಂದಿರುವುದರಿಂದ ಪರಿಸರಮಾಲಿನ್ಯ ಎಂಬ ಭೀಕರ ಪಿಡುಗನ್ನು ಇಂದಿನ ಜನಾಂಗ ಎದುರಿಸಬೇಕಾಗಿ ಬಂದಿದೆ. ಇದರ ಕಾರಣ ನಿಸರ್ಗ ವಿಧಿಸುವ ಶಿಸ್ತಿನ ಉಲ್ಲಂಘನೆ. ಮಂಕುತಿಮ್ಮನ ಮಾತಿನಲ್ಲಿ "ಪ್ರಕೃತಿ ಅನವರತ ಮನುಜನ ತಿದ್ದುತಿರುವಂತೆ ವಿಕೃತಿಗೊಳಿಸುವನ್ ಅವನುಮ್ ಆಕೆಯ ಅಂಗಗಳ."

ನಮ್ಮ ವರ್ತಮಾನ ಜೀವನ ಹಸನಾಗಲು ಮತ್ತು ನಮ್ಮ ಪೀಳಿಗೆ ಚೆನ್ನಾಗಿ ಬಾಳಿ ವಿಕಸಿಸಲು ಪ್ರತಿಯೊಬ್ಬನ ಬದುಕಿನ ಪ್ರತಿ ಮುಹೂರ್ತದ ವರ್ತನೆಯಲ್ಲಿಯೂ ಶಿಸ್ತು ಅಗತ್ಯ. ಅಂದರೆ ವಿವೇಚನ. ಸಚ್ಚಾರಿತ್ರ್ಯ, ಕರ್ತವ್ಯಪ್ರಜ್ಞೆಯು ಮತ್ತು ಕಾಲನಿಷ್ಠೆಯು ಪ್ರಕಟಿತ ರೂಪವೇ ಶಿಸ್ತು. ಸಾಮಾಜಿಕ ಪ್ರಾಣಿಯಾದ ಮನುಷ್ಯ ತನ್ನ ಹಿತವನ್ನು ಸಾಮಾಜಿಕ ಹಿತಕ್ಕೆ ಧಕ್ಕೆ ಬಾರದಂತೆ ಸಾಧಿಸಲು ಸ್ವಂತ ಇಚ್ಛೆಯಿಂದ ಬಗ್ಗಿ ನಡೆಯಬೇಕಾದ ವಿವೇಕದ ಲಗಾಮೇ ಶಿಸ್ತು. ಬದುಕಿನಲ್ಲಿ ಒಳ್ಳೆಯದರೆಡೆಗೆ ನಮ್ಮನ್ನು ಒಯ್ಯುವ ಹಾದಿಯೇ ಶಿಸ್ತು. ಇಂಥ ಶಿಸ್ತಿನ ಸಸಿ[illegible] ಮನೆ ಮನೆಯಲ್ಲಿಯೂ ಮನ ಮನದಲ್ಲಿಯೂ ಆಳವಾಗಿ ಬೇರೂರಿ ಬೆಳೆಯಬೇಕು. ನಾವು ಸದಾ ನೇರ ನಡೆಯನ್ನು ಮಾತ್ರ ಪಾಲಿಸುತ್ತಿದ್ದರೆ ಮತ್ತು ಎಂದೂ ಡೊಂಕು ನಡೆಯನ್ನು ಅನುಸರಿಸದಿದ್ದರೆ ಆಗ ಶಿಸ್ತು ನಮ್ಮ ಅರಿವಿಲ್ಲದೆ ನಮ್ಮ ಬದುಕಿನಲ್ಲಿ ಬೆರೆತು ಹೋಗಿರುತ್ತದೆ. ಇದರಿಂದ ಮೂಲತಃ ನಮಗೆ ಸಂತೃಪ್ತಿ ಉಂಟು. ಆನುಷಂಗಿಕವಾಗಿ ಸಾಮಾಜಿಕ ಜೀವನದಲ್ಲಿ ಇತರರ ಮೇಲೆಯೂ ಇದರ ಸತ್ಪ್ರಭಾವ ಆಗಿಯೇ ಆಗುತ್ತದೆ.

ಬ್ಲೇರ್ ಎಂಬಾತ ಹೇಳಿರುವ ಮಾತು ಮನನೀಯವಾಗಿದೆ "ಪ್ರಾಪಂಚಿಕ ರಾಗ ದ್ವೇಷಗಳ ಅಲ್ಪತ್ವವನ್ನು ನಿವಾರಿಸಿ, ಹೃದಯದಲ್ಲಿ ಉತ್ತಮ ಗುಣಗಳನ್ನು ಸಂಸ್ಥಾಪಿಸುವ, ಮನಸ್ಸನ್ನು ಉಪಯುಕ್ತ ಜ್ಞಾನದಿಂದ ಬೆಳಗುವ ಮತ್ತು ಅದಕ್ಕೆ ಒಳಗಿನಿಂದಲೇ ನೆಮ್ಮದಿಯನ್ನು ಹೊಮ್ಮಿಸುವ ಶಿಸ್ತು, ನಿಜಸಂತೃಪ್ತಿ ಒದಗಿಸುವಲ್ಲಿ, ಹೊರಗಿನಿಂದ ಒದಗಬಹುದಾದ ಎಲ್ಲ ಸುಖಸೌಕರ್ಯಗಳಿಗಿಂತಲೂ ಅಧಿಕ ಪರಿಣಾಮಕಾರಿ ಆದದ್ದು."

೨. ಕಾಲನಿಷ್ಠೆ

ಕಾಲನಿಷ್ಠೆ ಎಂದರೆ ನಿಗದಿ ಆದ ಕರ್ತವ್ಯವನ್ನು ಗೊತ್ತಾದ ಮುಹೂರ್ತದಲ್ಲಿ ನಿರ್ವಹಿಸುವುದು ಎಂದರ್ಥ. ನಮ್ಮ ದೈನಂದಿನ ವ್ಯವಹಾರಗಳಲ್ಲಿ ನಾವು ಇತರರನ್ನೂ ಇತರರು ನಮ್ಮನ್ನೂ ನಾವೆಲ್ಲರೂ ಒಟ್ಟಾಗಿ ನಿಸರ್ಗವನ್ನೂ ಅವಲಂಬಿಸಿರುವುದು ಜೀವನಧರ್ಮ. ಕೂಡುಗೆಲಸಗಳ ಮೊತ್ತದಿಂದ ನಡೆಯುವ ಈ ಬದುಕಿನಲ್ಲಿ ಶಿಸ್ತಿಗೆ ಪ್ರಥಮ ಸ್ಥಾನವಿದ್ದರೆ ಕಾಲನಿಷ್ಠೆಗೆ ದ್ವಿತೀಯ ಸ್ಥಾನವಿದೆ.

ಇತರರ ಕಾಲದ ಅಪವ್ಯಯಕ್ಕೆ ಕಾರಣರಾಗದಿರುವುದು ನಾವು ಅವರ ಭಾವನೆಗಳಿಗೆ ಕೊಡಬಹುದಾದ ಪರಮ ಗೌರವ. ನಮ್ಮ ಕಾಲವನ್ನೇ ಆದರೂ ಅಪವ್ಯಯ ಮಾಡದಿರುವುದು ಬಿದ್ದು ನಮ್ಮ ಏಳ್ಗೆಯನ್ನು ಸಾಧಿಸುವತ್ತ ಇಡಬೇಕಾದ ಮೊದಲ ಹೆಜ್ಜೆ. "ಕಾಲ ಕಳೆವುದಲ್ಲ, ನಾವು ಕಳೆದೆವು" ಎಂಬ ಮಾತು ಸದಾ ನಮ್ಮ ನೆನಪಿನಲ್ಲಿರಬೇಕು; ಉರಿಯುತ್ತಿರುವ ಮೇಣದ ಬತ್ತಿ, ಹಸಿ ಮಡಕೆಯಲ್ಲಿ ತುಂಬಿಟ್ಟ ನೀರು, ಗುಡ್ಡದ ಕೋಡಿ ಮೇಲೆ ಬಿದ್ದ

ಮಳೆ ಕಾಲದೊಡನೆ ಕಳೆದು ಹೋಗುತ್ತದೆ ಹೇಗೋ ಹಾಗೆ ನಮ್ಮ ಆಯುಷ್ಯ ಕೂಡ.

ಕಾಲನಿಷ್ಠೆ ಶಿಸ್ತುಗಾರನ ಬದುಕಿನ ಉಸಿರು. ನಮ್ಮ ಯಾವ ಪ್ರಯತ್ನವೂ ಇಲ್ಲದೆ ಒಂದೇ ವೇಗದಿಂದ ಸದಾ ವೆಚ್ಚವಾಗಿ ಹೋಗುತ್ತಿರುವ ಮತ್ತು ಎಂದೆಂದೂ ಮರಳದಿರುವ ಏಕೈಕ ಪರಿಣಾಮವೆಂದರೆ ಕಾಲ. ಸರ್ವಕಾಲಗಳಲ್ಲಿಯೂ ಸರ್ವವಸ್ತುಗಳಿಗೂ ಸಮವಾಗಿಯೇ ಅನ್ವಯಿಸುವ ವಿಶ್ವನಿಯಮವಿದು. ಆದ್ದರಿಂದ ನಾವು ಏನಾದರೂ –ಲೋಕದ ಮಾತಂತಿರಲಿ, ಕನಿಷ್ಠ ಪಕ್ಷ ನಮ್ಮ ಒಳಿತಿಗಾಗಿ ಆದರೂ– ಸಾಧಿಸಬೇಕೆಂದಿದ್ದರೆ ಅದು ವರ್ತಮಾನಕಾಲದ ಸದುಪಯೋಗವೊಂದರಿಂದಲೇ ಸಾಧ್ಯ. ಗತಕಾಲದಿಂದ ಪಡೆದ ಅನುಭವದಿಂದ ಉತ್ತಮ ಭವಿಷ್ಯಕಾಲ ರೂಪಿಸುವುದಕ್ಕೋಸ್ಕರ ವರ್ತಮಾನ ಕಾಲದಲ್ಲಿ ತೀವ್ರವಾಗಿ ಬಾಳುತ್ತಿರಬೇಕು. ಶಿಸ್ತುಬದ್ಧವಾದ ಕಾಲನಿಷ್ಠೆಯನ್ನು ಪಾಲಿಸುವುದರಿಂದ ಮಾತ್ರ ಇದು ಸಿದ್ಧಿಸೀತು.



“ಕಾಯಿಲೆ ಎಂಥದ್ದೂಂತ ಕೆಲವು ಬಾರಿ ನಾವು ರಹಸ್ಯವಾಗಿಡಬೇಕು, ನಿಮಗೆ ಕ್ಯಾನ್ಸರ್ ಬರೋ ಸೂಚನೆ ಇದೇಂತ ನಾನು ಹೇಳಿದ್ನೇ? ಹಾಗೆ...”

ಯಾವುದೇ ಯಶಸ್ವೀ ಸಾಹಸಕಾರ್ಯದ ಅಡಿಪಾಯದಲ್ಲಿ ಶಿಸ್ತು ಮತ್ತು ಕಾಲನಿಷ್ಠೆ ಪರಸ್ಪರ ಪೂರಕ ಮತ್ತು ಪೋಷಕಗಳಾಗಿ ಬೆಸೆದುಕೊಂಡಿರುತ್ತವೆ. ಕಾಳಿಗದಲ್ಲಿ ಎದುರಾದ ಸೋಲನ್ನು, ಯೋಜನೆಯ ನಿರ್ವಹಣೆಯಲ್ಲಿ ಒದಗಿದ ವೈಫಲ್ಯವನ್ನು, ಬಾಳಿನ ಹೋರಾಟದಲ್ಲಿ ಮತ್ತೆ ಮತ್ತೆ ಬಂದು ಬಡಿಯುವ ಹತಾಶೆಯನ್ನು, ಇತ್ಯಾದಿ, ವಿಶ್ಲೇಷಿಸಿ ನೋಡಿದಾಗ ಪ್ರತಿ ಸಲವೂ ಕಂಡುಬಂದದ್ದು ಒಂದೇ ಕಾರಣ: ಶಿಸ್ತಿನ ಗೈರುಹಾಜರಿ, ಕಾಲನಿಷ್ಠೆಯನ್ನು ಕುರಿತಂತೆ ದಿವ್ಯ ನಿರ್ಲಕ್ಷ್ಯ. ಉನ್ನತ ಸ್ಥಾನಗಳಲ್ಲಿ ಉದಾಹರಣೆಗೆ ಸೇನಾನಾಯಕರ ಇಲ್ಲವೇ ರಾಷ್ಟ್ರನಾಯಕರ ಮಟ್ಟಗಳಲ್ಲಿ, ಕಾಲನಿಷ್ಠೆಯ ಬಗ್ಗೆ ಅಲ್ಪ ತಾತ್ಸಾರ ಮಾಡಿದ್ದರಿಂದ ಜನಾಂಗಗಳ ಭವಿಷ್ಯವೇ ಬುಡಮೇಲಾಗಿದೆ, ಅಸಂಖ್ಯಾತ ಮೂಕ ಜನರಿಗೆ ಸಾವು ನೋವು ಉಂಟಾಗಿದೆ.

ಸೀತಾನ್ವೇಷಣೆಗೋಸ್ಕರ ಸಾಗರೋಲ್ಲಂಘನ ಮಾಡುತ್ತಿದ್ದ ಹನುಮಂತನ ಹಾದಿಗೆ ಎದುರಾಗಿ ಮೈನಾಕ ಪರ್ವತರಾಜ ಜಲರಾಶಿಯಿಂದ ಮೇಲೆದ್ದು, ವಾಯುಸುತ ತನ್ನ ಆತಿಥ್ಯವನ್ನು ಸ್ವೀಕರಿಸಿ ಮಾರ್ಗಕ್ರಮಣ ಶ್ರಮವನ್ನು ನೀಗಿ ಮುಂದೆ ಸಾಗಬೇಕೆಂದು ಬಿನ್ನವಿಸಿಕೊಂಡ. ಆಗ ಹನುಮಂತ ನೀಡಿದ ಉತ್ತರ ಮಾರ್ಮಿಕವಾಗಿದೆ: “ಕಾರ್ಯಸಾಧನೆ ಆಗಬೇಕಾದ ಕಾಲ ನನ್ನನ್ನು ತ್ವರೆಪಡಿಸುತ್ತಿದೆ. ಎಲ್ಲಿಯೂ ಮಾರ್ಗದಲ್ಲಿ ನಿಲ್ಲುವುದಿಲ್ಲವೆಂದು ಭಾಷೆ ಕೊಟ್ಟಿರುವೆ.” ಮೈನಾಕನ ಆದರದ ಆಹ್ವಾನವನ್ನು ಹನುಮಂತ ವಿನಯಪೂರ್ವಕವಾಗಿ ಬದಿಗೊತ್ತಿ ಮುಂದೆ ಸಾಗಿದ. ಕಾಲನಿಷ್ಠೆಗೆ ಎಂತೊ ಕರ್ತವ್ಯಪ್ರಜ್ಞೆಗೆ ಅಂತೆ ಹನುಮಂತ ಶಾಶ್ವತ ಪ್ರತೀಕ.

ನಮ್ಮ ಬದುಕು ಜಟಕಾಬಂಡಿ ಉದ್ದ, ಅಗಲ, ಎತ್ತರ ಮತ್ತು ಕಾಲ ಎಂಬ ನಾಲ್ಕು ಆಯಾಮಗಳಲ್ಲಿ ಉರುಳುತ್ತಿದೆ. ಮೊದಲ ಮೂರು ಆಯಾಮಗಳಲ್ಲಿ ಬಂಡಿ ಹಿಂದೆ ಮುಂದೆ, ಎಡ, ಬಲ, ಮೇಲೆ ಕೆಳಗೆ ಬೇಕಾದಂತೆ ಚಲಿಸಬಲ್ಲದು.

ಆದರೆ ನಾಲ್ಕನೆಯ ಆಯಾಮವಾದ ಕಾಲದಲ್ಲಿ ಇಂಥ ಯಾವ ದೊಂಬರಾಟವನ್ನೂ ಅದು ಪ್ರದರ್ಶಿಸುವಂತಿಲ್ಲ. ಆದ್ದರಿಂದ ಬದುಕು ಜಟಕಾಬಂಡಿಯು ಸಾಹೇಬನಾದ ವಿಧಿ ಎಂದರೆ ಸಾಕ್ಷಾತ್ ಕಾಲವೇ.

ಕಾಲಬಾಣದ ಚಲನೆ ಒಂದೇ ದಿಶೆಯದು. ಒಂದೇ ಗತಿಯದು. ನಮ್ಮ ದೇಹದೊಳಗೂ ಹೊರಗೂ ಎಡೆಬಿಡದೆ ಜರುಗುತ್ತಿರುವ ಬದಲಾವಣೆಗಳನ್ನು ಎಚ್ಚರಿಕೆಯಿಂದ ನೋಡಿದ್ದಾದರೆ ಕಾಲಪ್ರವಾಹದ ಏಕಮುಖ ಚಲನೆಯ ಅರಿವುಂಟಾಗುತ್ತದೆ. ಈ ಪ್ರವಾಹದಲ್ಲಿ ನಾವು ಮುಳುಗಿ ಹೋಗಬಾರದು, ಈಸಬೇಕು, ಇದ್ದು ಜೈಸಬೇಕು. ಲೋಕೋಪಕಾರಿಗಳಾಗುವುದು ನಮ್ಮ ಅಳವಿಗೆ ಮೀರಿದ್ದಾದರೆ, ಕನಿಷ್ಠ ಪಕ್ಷ, ಲೋಕಕಂಟಕರಾದರೂ ಆಗಲಾರದು. "ಯುಗಯುಗಗಳ ಹಣೆಬರಹವ ಒರಸಿ ಮನ್ವಂತರಗಳ ಭಾಗ್ಯವ ತೆರೆಸಿ ರೆಕ್ಕೆಯ ಬೀಸುತ ಚೇತನಗೊಳಿಸಿ ಹೊಸಗಾಲದ ಹಸುಮಕ್ಕಳ ಹರಸಿ" ಸಾಗುತ್ತಿರುವ ಕಾಲಕ್ಕೆ ನಿಷ್ಠರಾಗುವುದರಿಂದ ಮಾತ್ರ ಈ ಆಶೋತ್ತರಗಳು ಈಡೇರಿಯಾವು.

೩. ಶ್ರದ್ಧೆ

ನಾವು ಆಯ್ದುಕೊಂಡಿರುವ ಇಲ್ಲವೇ ನಿಯೋಜಿತರಾಗಿರುವ ಕರ್ತವ್ಯವನ್ನು ನಿರ್ವಹಿಸುವಾಗ ಅದಕ್ಕೆ ನಮ್ಮ ಪೂರ್ಣ ವ್ಯಕ್ತಿತ್ವವನ್ನು ಸಮರ್ಪಿಸಿಕೊಂಡು ದುಡಿಯುವ ಮನೋಭಾವ ಅಥವಾ ಗುಣವೇ ಶ್ರದ್ಧೆ. ಕಾರ್ಯದಲ್ಲಿ ತಾದಾತ್ಮ್ಯ ಸಾಧಿಸುವ ಏಕಾಗ್ರತೆಯೇ ಶ್ರದ್ಧೆ. ಉದ್ದಿಷ್ಟ ಗುರಿಯತ್ತ ನಡೆಯುವಾಗ ಹಾದಿಯಲ್ಲಿ ಎದುರಾಗುವ ಎಡರು ತೊಡರು ಯಾವುದರಿಂದಲೂ ವಿಚಲಿತರಾಗದೆ ಮುಂದೆ ಸಾಗುವ ಛಲವಂತಿಕೆಯೇ ಶ್ರದ್ಧೆ.

ಎವರಿಸ್ಟ್ ಗ್ಯಾಲ್ವ ಎಂಬಾತ ಫ್ರಾನ್ಸಿನ ಪ್ರಸಿದ್ಧ ಗಣಿತಜ್ಞ, ಪ್ರಪಂಚದ ಮಹಾಗಣಿತವಿದ್ವಾಂಸರ ಪೈಕಿ ಒಬ್ಬ. ಕೇವಲ ಇಪ್ಪತ್ತೆರಡು ವರ್ಷಕಾಲ, ಕ್ರಿಸ್ತಶಕ ೧೮೧೧ರಿಂದ ೧೮೩೨ರ ತನಕ, ಬಾಳಿದ ಈತ ಗಣಿತಪ್ರಪಂಚಕ್ಕೆ ಮಹತ್ತರವಾದ ಕೊಡುಗೆ ನೀಡಿದ್ದಾನೆ. ಗ್ರೂಪ್ ಸಿದ್ಧಾಂತವೆಂಬ ಹೆಸರಿನ ನೂತನ ಗಣಿತಶಾಖೆಯ ಪ್ರವರ್ತಕನೇ ಈತ. ಇಂಥ ಮೇಧಾವಿಯ ಬದುಕು ಮಾತ್ರ ದುರಂತಗಳ ಸರಮಾಲೆ. ರಾಜಕೀಯವಾಗಿ, ಬೌದ್ಧಿಕವಾಗಿ ಮತ್ತು ನೈತಿಕವಾಗಿ ಅತ್ಯಂತ ಕಲುಷಿತವಾಗಿದ್ದ ಅಂದಿನ ಫ್ರಾನ್ಸಿನ ವಾತಾವರಣದಲ್ಲಿ ಈ ಹುಡುಗ ಅರಸುತ್ತಿದ್ದುದು ಶಾಶ್ವತ ಗಣಿತ ಸತ್ಯವನ್ನು. ಅದರತ್ತ ಈತ ಏಕಾಂಗಿಯಾಗಿ, ವೈರಿಗಳ ಕುಹಕಗಳನ್ನು ಎದುರಿಸುತ್ತ ನಡೆಯಬೇಕಾಗಿತ್ತು. ಪ್ರಾಪಂಚಿಕ ವ್ಯವಹಾರಗಳಲ್ಲಿ ಮುಗ್ಧನಾಗಿದ್ದ ಈ ದೃಪ್ತ ಪ್ರತಿಭೆ ವಿರೋಧಿಗಳು ಒಡ್ಡಿದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಕ್ರೂರಿಯಾದ ಸ್ಪರ್ಧಿಯೊಬ್ಬನೊಡನೆ ತುಪಾಕಿ ದ್ವಂದ್ವಯುದ್ಧಕ್ಕೆ ಇಳಿಯುವುದು ಅನಿವಾರ್ಯವಾಯಿತು. ಸರಿ, ನಾಳೆ ಬೆಳಿಗ್ಗೆ ಈ ಕಾಳಗ ನಡೆಯುತ್ತದೆ, ಅದರಲ್ಲಿ ತಾನು ಹತನಾಗುತ್ತೇನೆ ಎಂದು ಚೆನ್ನಾಗಿ ಅರಿತಿದ್ದ ಇಪ್ಪತ್ತೆರಡರ ತರುಣ ಗ್ಯಾಲ್ವ ಆ ರಾತ್ರಿ ಇಡೀ ಎಚ್ಚರವಾಗಿದ್ದು ತನ್ನ ಗಣಿತ ಸಿದ್ಧಾಂತದ ಸರ್ವಸ್ವವನ್ನು–ತನ್ನ ಜೀವನಸತ್ತ್ವವನ್ನು ಅಡಕವಾಗಿಯೂ ಸ್ಪಷ್ಟವಾಗಿಯೂ ಬರೆದಿಟ್ಟ. ಈ ಸಂಕ್ಷೇಪ ನಿರೂಪಣೆಯಲ್ಲಿ ಪದೇಪದೇ ಪಲ್ಲವಿಯಂತೆ ಮರುಕಳಿಸುತ್ತಿದ್ದ ವಾಕ್ಯವಿದು "ನನಗೆ ವೇಳೆ ಸಾಲದು, ನಾಳೆ ಬೆಳಗ್ಗೆ ಸಾಯಬೇಕು." ಮರುಮುಂಜಾನೆ ಗ್ಯಾಲ್ವನ ಕೊನೆ ಮುಂಜಾನೆಯೂ ಆಯಿತು. ತಾನು ಕಂಡ ಇಲ್ಲವೇ ನಂಬಿದ ಸತ್ಯವನ್ನು ಅನ್ವೇಷಿಸುವ ಪ್ರಯತ್ನದಲ್ಲಿ ತನ್ನ ಪೂರ್ಣ ವ್ಯಕ್ತಿತ್ವವನ್ನೂ ಅದಕ್ಕೆ ಧಾರೆ ಎರೆದು ಸಾವಿನ ಮೊನೆಯಲ್ಲಿಯೂ ಬದುಕಿನ ಕೆನೆಯನ್ನೇ ಒಪ್ಪಿಸಿ ಹೊರಟುಹೋದ ಗ್ಯಾಲ್ವ ಶ್ರದ್ಧೆಯ ಸಾಕಾರಮೂರ್ತಿ.

ಪ್ರಪಂಚದ ಮೂವರು ಸರ್ವಕಾಲಿಕ ಸರ್ವಶ್ರೇಷ್ಠ ಗಣಿತ ವಿದ್ವಾಂಸರ ಯಾದಿಯನ್ನು ಯಾವ ಅಳತೆಗೋಲಿನ ಆಧಾರದಿಂದ ರಚಿಸಿದರೂ ಅದರಲ್ಲಿ ಸದಾ ಇರುವ ಒಂದು ಅನಿವಾರ್ಯ ಹೆಸರು ಆರ್ಕಿಮಿಡೀಸನದು ಎಂಬ ಹೇಳಿಕೆ ಉಂಟು. ಕ್ರಿಸ್ತಪೂರ್ವ ೨೮೭ರಿಂದ ೨೧೨ರ ತನಕ ಬಾಳಿದ ಈ ಗ್ರೀಕ್ ಗಣಿತವಿದ ಕಾರ್ಯ

ತಾದಾತ್ಮ್ಯಕ್ಕೆ – ಅಂದರೆ ತಾನು ಆಯ್ದುಕೊಂಡ ಕೆಲಸವನ್ನು ಮಾಡುವಾಗ ಬಾಹ್ಯಪ್ರಪಂಚವನ್ನು ಪೂರ್ತಿ ಮರೆತು ಆ ಕೆಲಸದೊಂದಿಗೆ ಅಖಂಡವಾಗಿ ಏಕಗೊಳ್ಳುವ ಮನೋಭಾವಕ್ಕೆ ಹೆಸರಾಂತವನಾಗಿದ್ದಾನೆ. ಆರ್ಕಿಮಿಡೀಸನ ನಗರವಾದ ಸಿರಕ್ಯೂಸಿನ ಮೇಲೆ ವೈರಿ ರೋಮನ್ನರು ದಾಳಿ ಹೂಡಿದರು. ಆಗ ಸಿರಕ್ಯೂಸಿನ ರಾಜ ಆರ್ಕಿಮಿಡೀಸನ ಸಿದ್ಧಾಂತಗಳ ಪ್ರಕಾರ ಹೊಸ ಯಂತ್ರಗಳನ್ನು ನಿರ್ಮಿಸಿ ಅವುಗಳ ನೆರವಿನಿಂದ ಶತ್ರುಗಳನ್ನು ಸದೆಬಡಿದು ಹಿಮ್ಮೆಟ್ಟಿಸಿದ. ಮತ್ತೊಮ್ಮೆ ರೋಮನ್ನರು ಅಧಿಕ ಸೇನಾಬಲಗಳಿಂದ ಸುಸಜ್ಜಿತರಾಗಿ ಬಂದು ಸಿರಕ್ಯೂಸ್ ನಗರಕ್ಕೆ ಮುತ್ತಿಗೆ ಹಾಕಿದರು; ವಾಮತಂತ್ರದಿಂದ ನಗರಪ್ರವೇಶ ಮಾಡಿದರು. ರೋಮನ್ ಸೇನಾಧಿಪತಿ ತನ್ನ ವಿಜಯೀಸೈನಿಕರಿಗೆ ಖಚಿತ ಆಜ್ಞೆ ನೀಡಿದ್ದ: ಆರ್ಕಿಮಿಡೀಸನ ಬಗ್ಗೆ ತನಗೆ ಅಪಾರ ಗೌರವವಿರುವುದರಿಂದ ಆತನ ಕೂದಲು ಕೂಡ ಕೊಂಕತಕ್ಕದ್ದಲ್ಲ, ಸೈನಿಕರು ಆತನನ್ನು ಮರ್ಯಾದೆಯಿಂದ ನಡೆಸಿಕೊಳ್ಳತಕ್ಕದ್ದು ಎಂಬುದಾಗಿ ಯುದ್ಧದಲ್ಲಿ ಸಿರಕ್ಯೂಸ್ ನಗರ ಪತನವಾದದ್ದಾಗಲೀ ಶತ್ರು ಸೈನಿಕರು ಒಳನುಗ್ಗಿ ಕೊಳ್ಳೆ ಹೊಡೆಯುತ್ತಿದ್ದುದಾಗಲೀ ಆರ್ಕಿಮಿಡೀಸನ ಪ್ರಪಂಚಕ್ಕೆ ಇನ್ನೂ ತಿಳಿದಿರಲಿಲ್ಲ. ಅವನು ತನ್ನ ಕೊಠಡಿಯಲ್ಲಿ ಗಣಿತಾಕೃತಿಯೊಂದರ ಎದುರು ಕುಳಿತು ತದೇಕಚಿತ್ತನಾಗಿ ಯೋಚಿಸುತ್ತಿದ್ದ. ಹಠಾತ್ತಾಗಿ ಆ ಕೊಠಡಿಗೆ ನುಗ್ಗಿದ ಯೋಧ ಅವನೆದುರು ಕತ್ತಿ ಹಿರಿದು ನಿಂತ. ಆರ್ಕಿಮಿಡಿಸ್ ಅವನನ್ನು ಕಡೆಗಣ್ಣಿನಿಂದ ಕೂಡ ನೋಡದೆ, "ನನ್ನ ಚಿಂತನೆಗೆ ಅಡ್ಡಿ ಬರಬೇಡ ತೊಲಗಾಚೆ" ಎಂದ. ಯೋಧ ಹೇಳಿದ "ನಮ್ಮ ಸೇನಾಧಿಪತಿಯ ಕಡೆ ಈ ಕ್ಷಣ ಹೊರಟು ನಡೆ" ಎಂದು. ವೃದ್ಧ ಆರ್ಕಿಮಿಡೀಸ್ ಗೋಣು ಆಡಿಸಿ ತನ್ನ ತಿರಸ್ಕಾರವನ್ನು – ಅದೂ, ಆ ಸೈನಿಕ ತನ್ನ ಚಿಂತನೆಗೆ ಅಡ್ಡಿ ಬಂದುದಕ್ಕಾಗಿ – ವ್ಯಕ್ತಪಡಿಸಿದ. ಕ್ರುದ್ಧ ಯೋಧ ಮರುಕ್ಷಣ ಖಡ್ಗ ಝಳಪಿಸಿ ಆರ್ಕಿಮಿಡೀಸನ ಶಿರಚ್ಛೇದ ಮಾಡಿದ. ಕಾರ್ಯತನ್ಮಯತೆಗೆ ಉತ್ಕೃಷ್ಟ ನಿದರ್ಶನ ಆರ್ಕಿಮಿಡೀಸ್. ಕಾಲನ ಕರಾಳ ದಂಷ್ಟ್ರದೊಳಗೆ ಸಿಕ್ಕಿ ಹಾಕಿಕೊಂಡಿದ್ದಾಗಲೂ ವಿಚಲಿತವಾಗದ ಶ್ರದ್ಧೆಯ ಜಂಗಮ ರೂಪ ಆರ್ಕಿಮಿಡೀಸ್.

ನಮ್ಮ ಯಾವುದೇ ಕಾರ್ಯದಲ್ಲಿಯೂ ನಮ್ಮ–ತನ ಎದ್ದು ಕಾಣುವಂತೆ ನಮ್ಮದೇ ಆದ ಮೊಹರನ್ನು ಒತ್ತುವ ವಿಶೇಷ ಗುಣವೇ ಶ್ರದ್ಧೆ. ನಮ್ಮ ಬದುಕನ್ನು ಸಾರ್ಥಕಗೊಳಿಸಬಲ್ಲ ಹಲವಾರು ಸದ್ಗುಣಗಳ ಪೈಕಿ ಶ್ರದ್ಧೆಗೆ ಮುಖ್ಯ ಸ್ಥಾನ ಉಂಟು. "ಶ್ರದ್ಧೆ ಇಲ್ಲದೆ ಮಾಡಿದ ಹೋಮವೂ ದಾನವೂ ತಪಸ್ಸೂ ಅಸತ್ ಅಥವಾ ಅಯೋಗ್ಯ ಎನಿಸುವುವು. ಅಂಥ ಕರ್ಮ ಸತ್ತ ಮೇಲಿನ ಫಲವನ್ನೂ ಕೊಡುವುದಿಲ್ಲ, ಈಗಿನ ಫಲವನ್ನೂ ಕೊಡುವುದಿಲ್ಲ" ಎಂಬ ಗೀತೋಕ್ತಿ ಮನನೀಯವಾಗಿದೆ. ✡

ಏನಿದು ಮಾತೆಂದಿರಿ? ಸುಮ್ಮನಿರಿ—
ಎಲ್ಲ ಕಾವ್ಯಕೂ ಸಂಸಾರವೇ ಗುರಿ:
ಅಲ್ಲೇನಾಯಿತು ಇಲ್ಲೇನಾಯಿತು
ಅಂದೆಂತಾಯಿತು ಇಂದೆಂತಾಯಿತು
ಅವ ಗೆದ್ದಿವಬಿದ್ದವನೆದ್ದೆದ್ದ—
ಇದ ಬಣ್ಣಿಸೆ ಮಾತುಗಳುದ್ದುದ್ದ.
....................ಬೇಡಿವರಿಗೆ
ತಮ್ಮಯ ಮನೆ ಮಾತುಗಳು

—ಪುತಿನ ('ಕವಿ' ಗೀತನಾಟಕದಲ್ಲಿ)


మూలం: లు

ಖಡ್ಗ ಮಾಡಿದ್ದು

ಈ ಶತಮಾನದ ಪೂರ್ವಾರ್ಧದಲ್ಲಿ ಆಗಿ ಹೋದ ಹೆಸರಾಂತ ಚೀನಿ ಕತೆಗಾರ ಲೂ ಶೂನ್ ಅವರ Forging of the Swordನ ನೇರ ಕನ್ನಡ ಅನುವಾದವಿದು. ಕಳೆದ ಡಿಸೆಂಬರ್ ಸಂಚಿಕೆಯಲ್ಲಿ ಬಂದ 'ಒಬ್ಬ ಹುಚ್ಚನ ದಿನಚರಿ'ಯ ಮೂಲಕ 'ಕಸ್ತೂರಿ'ಯ ಓದುಗರಿಗೆ ಪರಿಚಿತರಾಗಿದ್ದಾರೆ ಲೂ ಶೂನ್.

ಮಿಯ್ ಜಿಯನ್ ಚಿಪ್ ತನ್ನ ತಾಯಿಯ ಪಕ್ಕದಲ್ಲಿ ಮಲಗಿಕೊಂಡ ಸ್ವಲ್ಪ ಹೊತ್ತಿನಲ್ಲಿಯೇ ಬಿಲದಿಂದ ಹೊರಬಿದ್ದ ಇಲಿಗಳು ಹರಿವಾಣದ ಮೇಲಿನ ಕಟ್ಟಿಗೆಯ ಮುಚ್ಚಳವನ್ನು ಕಟಕಟನೆ ಕಚ್ಚುತ್ತ ಸಪ್ಪಳ ಮಾಡಿ ಅವನನ್ನು ಸಿಟ್ಟಿಗೆಬ್ಬಿಸಿದವು. ಅವನು ಹಶ್ ಹುಶ್ ಎಂದು ಮೆಲ್ಲಗೆ ಕೂಗಿ ಅವುಗಳನ್ನು ಓಡಿಸಲು ಪ್ರಯತ್ನಿಸಿದ. ಮೊದಮೊದಲು ಅದರಿಂದ ಸ್ವಲ್ಪ ಪ್ರಯೋಜನವಾಯಿತಾದರೂ ಆಮೇಲೆ ಕ್ರಮೇಣವಾಗಿ ಅವನ ಹಶ್ ಹುಶ್‌ಗಳ ಕಡೆಗೆ ಗಮನ ಹರಿಸದೇ, ಮನಬಂದಂತೆ ಕಚ್ಚುತ್ತ, ಚಿಂಪ್‌ಗುಡುತ್ತ ನಿರಾಂತಕವಾಗಿ ಅವು ತಮ್ಮ ಕಾಯಕವನ್ನು ಮುಂದುವರಿಸಿದವು. ಇನ್ನೂ ಹೆಚ್ಚು ಜೋರಿನಿಂದ ಕೂಗಾಡಿ ಗದ್ದಲಮಾಡಿ ಅವುಗಳನ್ನು ಓಡಿಸಲು ಪ್ರಯತ್ನಿಸಿದರೆ ತನ್ನ ತಾಯಿಯ ನಿದ್ದೆಯನ್ನು ಹಾಳು ಮಾಡಿದಂತಾದೀತೆಂದು ಹೆದರಿ ಅವನು ಸುಮ್ಮನಾದ. ಅಂದು ದಿನವಿಡೀ ಅವಳು ಅದೆಷ್ಟು ದುಡಿದು ದಣಿದು ಮಲಗಿಕೊಂಡಿದ್ದಳೆಂದರೆ ದಿಂಬಿನ ಮೇಲೆ ತಲೆಯೊರಗಿಸಿದ್ದೇ ತಡ, ಅವಳಿಗೆ ನಿದ್ದೆ ಹತ್ತಿಬಿಟ್ಟಿತ್ತು.

ಎಷ್ಟೋ ಹೊತ್ತಿನ ನಂತರ ಗದ್ದಲ ಕ್ರಮೇಣ ಕಡಿಮೆಯಾಗಿ ಶಾಂತವಾಯಿತು. ಅವನಿಗೆ ಜೊಂಪು ಹತ್ತುವುದರಲ್ಲಿತ್ತು. ಅಷ್ಟರಲ್ಲಿ ಒಮ್ಮಿಂದೊಮ್ಮೆಲೆ ನೀರಿನಲ್ಲಿ ಏನೋ 'ಧಬಕ್!' ಎಂದು ಬಿದ್ದ ಸಪ್ಪಳವಾಗಿ ಅವನು ಕಣ್ಣು ತೆರೆದ. ಸಂಗಡವೇ ರಂಜಣಿಗೆಯ ಒಳಮೈಯನ್ನು ಪರಪರನೆ ಪರಚುವ ಶಬ್ದ ಕೇಳಬಂದಿತು.

“ಬರೊಬ್ಬರಿ ಆಯ್ತು! ನಿನ್ನ ದೆವ್ವ ಹೊತ್ತುಕೊಂಡು ಹೋಗಲಿ!” ಎಂದು ಆತ ಮನಸ್ಸಿನಲ್ಲಿಯೇ ಅಂದುಕೊಂಡ. ಖುಷಿಯೆನಿಸಿ ಎದ್ದು ಕುಳಿತ.

ಮಂಚದಿಂದ ಕೆಳಗಿಳಿದು ಬೆಳದಿಂಗಳಿನ ಮಂದ ಬೆಳಕಿನಲ್ಲಿ ದಾರಿಮಾಡಿಕೊಳ್ಳುತ್ತ, ಆತ ಬಾಗಿಲಿನ ಹಿಂದುಗಡೆ ಹೋದ. ಅಲ್ಲಿ ಬೆಂಕಿಯ ಕಡ್ಡಿಗಾಗಿ ತಡಕಾಡಿ, ದೇವದಾರಿನ ಪಂಜೊಂದನ್ನು ಹೊತ್ತಿಸಿ ರಂಜಣಿಗೆಯೊಳಗೆ ಬೆಳಕು ಬಿಟ್ಟು ನೋಡಿದ. ಅವನು ಅಂದುಕೊಂಡ ಹಾಗೆಯೇ ಒಂದು ದೊಡ್ಡ ಇಲಿಯೇ ಅದರಲ್ಲಿ ಬಿದ್ದಿತ್ತು. ತಳದಲ್ಲಿ ಮಾತ್ರ ಸ್ವಲ್ಪ ನೀರು ಉಳಿದಿದ್ದರಿಂದ ಅಲ್ಲಿಂದ ಪಾರಾಗಿ ಮೇಲೇರಿ ಬರುವುದು ಅದಕ್ಕೆ ಶಕ್ಯವಾಗಲಿಲ್ಲ. ರಂಜಣಿಗೆಯ ಒಳಮೈಯನ್ನು ಪರಪರನೆ ಪರಚುತ್ತ ಅದು ಅಲ್ಲಿಯೇ ಸುತ್ತಲೂ ಸುತ್ತತೊಡಗಿತ್ತು.

ದಿನಾಲು ರಾತ್ರಿ ಇದೇ ಇಲಿಗಳು ಕಟ್ಟಿಗೆಯ ಪಿಠೋಪಕರಣಗಳನ್ನು ಕಟಕಟನೆ ಕಚ್ಚುತ್ತ ಗದ್ದಲ ಮಾಡಿ ತನ್ನ ನಿದ್ದೆಯನ್ನು ಹಾಳು ಮಾಡುತ್ತಿವೆಯೆಂಬ ಯೋಚನೆ ಮೂಡಿ ಇಲಿಗೊದಗಿದ ದುರ

ವಸ್ಥೆಯಿಂದ ಅವನಿಗೆ ಬಹಳ ಸಂತೋಷವೆನಿಸಿತು.

"ನಿನಗೆ ಇದೇ ಸರಿಯಾದ ಶಿಕ್ಷೆ!" ಎಂದ ಆತ. ಇಲಿಯ ಒದ್ದಾಟವನ್ನು ನೋಡಿ ಮತ್ತಷ್ಟು ಖುಷಿಪಡಲೆಂದು ಪಂಜನ್ನು ಅಲ್ಲಿಯೇ ಗೋಡೆಯಲ್ಲಿ ಸಿಕ್ಕ ತೂತೊಂದರಲ್ಲಿ ಚುಚ್ಚಿ ನಿಲ್ಲಿಸಿದ. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅದರ ಗುಳ್ಳೆಯಂಥ ಕಣ್ಣುಗಳು ಅವನನ್ನು ಅದೆಷ್ಟು ರೊಚ್ಚಿಗೆಬ್ಬಿಸಿದವೆಂದರೆ ಕೋಲೊಂದನ್ನು ತೆಗೆದುಕೊಂಡು ಅವನು ಇಲಿಯನ್ನು ನೀರಿನೊಳಕ್ಕೆ ತಳ್ಳಿ ಹತ್ತಿಕ್ಕಿ ಹಿಡಿದ. ಸ್ವಲ್ಪ ಹೊತ್ತಿನ ನಂತರ ಕೋಲನ್ನು ಮೇಲೆತ್ತಿಕೊಂಡ; ಇಲಿ ತೇಲುತ್ತ ನೀರಿನ ಮೇಲ್ಗಡೆಗೆ ಬಂದು ಮತ್ತೆ ರಂಜಣಿಗೆಯ ಒಳಮೈಯನ್ನು ಪರಪರನೆ ಪರಚುತ್ತ ಸುತ್ತತೊಡಗಿತು. ಆದರೆ ಮೊದಲಿನಷ್ಟು ಬಲವಾಗಿ ಕಾಲೂರುವುದು ಮಾತ್ರ ಅದಕ್ಕೆ ಶಕ್ಯವಾಗಲಿಲ್ಲ. ಅದರ ಕಣ್ಣುಗಳು ಕೂಡ ನೀರಿನಲ್ಲಿ ಮುಳುಗಿ ಹೋಗಿದ್ದವು. ಉಸಿರಿಗಾಗಿ ಪರದಾಡುತ್ತಿದ್ದ ಅದರ ಮೂಗಿನ ಕೆಂಪು ತುದಿ ಮಾತ್ರ ನೀರಿನ ಮೇಲ್ಗಡೆಗೆ ಕಾಣಿಸುತ್ತಿತ್ತು.

ಇತ್ತಿತ್ತಲಾಗಿ ಕೆಂಪು ಮೂಗಿನ ಜನರ ಬಗೆಗೆ ಅವನಿಗೆ ಸಾಕಷ್ಟು ತಿರಸ್ಕಾರ ಹುಟ್ಟಿತ್ತು. ಆದರೂ ಆ ಕೆಂಪು ತುದಿಯ ಪುಟ್ಟ ಮೂಗಿನ ಪರದಾಟದ ದೃಶ್ಯ ಅವನಲ್ಲಿ ಮರುಕ ಹುಟ್ಟಿಸಿತು. ಮತ್ತೆ ಕೋಲನ್ನೆತ್ತಿಕೊಂಡು ಅವನು ಇಲಿಯ ಹೊಟ್ಟೆಯ ಕೆಳಗೆ ಸರಿಸಿ ಹಿಡಿದ. ಅದು ಕೋಲನ್ನು ಬಾಚಿ ಹಿಡಿದುಕೊಂಡಿತು. ಹಾಯಾಗಿ ಉಸಿರಾಡುವಂತಾದ ನಂತರ ಅದು ಅದರ ಮೇಲೇರತೊಡಗಿತು. ಇಲಿಯ ದೇಹ ಸಂಪೂರ್ಣವಾಗಿ ಅವನ ಕಣ್ಣಿಗೆ ಬಿದ್ದ ಕೂಡಲೇ ತೊಯ್ದು ತಪ್ಪಡೆಯಾಗಿದ್ದ ವಿರೂಪ ಕೂದಲಿನ ಅದರ ಕಪ್ಪು ತೊಗಲು, ಉಬ್ಬಿದ ಹೊಟ್ಟೆ, ಹುಳುವಿನಂಥ ಬಾಲ ಇವೆಲ್ಲ ವಿರೂಪವಾಗಿ ಕಂಡು ಅವನಲ್ಲಿ ಅಸಹ್ಯವನ್ನು ಹುಟ್ಟಿಸಿದವು. ಅವನು ಕೂಡಲೇ ಕೋಲನ್ನು ಸರಕ್ಕನೇ ಝಾಡಿಸಿದ. 'ಥಬಕ್!' ಎಂಬ ಸದ್ದಿನೊಡನೆ ಇಲಿ ಮತ್ತೆ ರಂಜಣಿಗೆಯೊಳಗೆ ಬಿದ್ದಿತು. ಕೋಲಿನಿಂದ ಆತ ಹಲವಾರು ಸಲ ಹೊಡೆದು ಅದನ್ನು ಮುಳುಗಿಸಲು ಪ್ರಯತ್ನಿಸಿದ.

ಪಂಜನ್ನು ಆಗಲೇ ಆರು ಸಲ ಬದಲಿಸಿಯಾಗಿತ್ತು. ಅಷ್ಟು ಹೊತ್ತಿಗಾಗಲೇ ಇಲಿ ನೀರಿನೊಳಗೆ ಮುಳುಗಿ ರಂಜಣಿಗೆಯ ನಡು ಮಧ್ಯದಲ್ಲಿ ತೇಲುತ್ತಿತ್ತು. ಆಗೀಗ ದಂಡೆಯ ಕಡೆಗೆ ಹೋಗಲೆಂದು ಸುತ್ತ ಒಂದಿಷ್ಟು ಕಾಲಾಡಿಸುವುದನ್ನು ಬಿಟ್ಟರೆ ಹೆಚ್ಚು ಮಿಸುಕಾಡುತ್ತಿರಲಿಲ್ಲ. ಮಿಯ್ ಚಿಯನ್ ಚಿಹ್‌ಗೆ ಮತ್ತೆ ಅದರ ಬಗ್ಗೆ ಕನಿಕರ ಮೂಡಿತು. ಕೋಲನ್ನು ಮುರಿದು ಎರಡು ತುಂಡು ಮಾಡಿ ಇಕ್ಕಳದಂತೆ ಹಿಡಿದು ಸಾಕಷ್ಟು ಪ್ರಯಾಸಪಟ್ಟು ಇಲಿಯನ್ನು ನೀರಿನಿಂದ ಮೇಲೆತ್ತಿ ನೆಲದ ಮೇಲೆ ಇರಿಸಿದ. ಮೊದಮೊದಲು ಅದು ಮಿಸುಕಾಡಲಿಲ್ಲ. ನಂತರ ಒಮ್ಮೆ ಉಸಿರೆಳೆದುಕೊಂಡಿತು. ಎಷ್ಟೋ ಹೊತ್ತಿನ ನಂತರ ಎದ್ದು ನಿಂತುಕೊಳ್ಳಲು ಹಾಗು ಮುಂದೆ ಹೋಗಲು ಆತುರಗೊಂಡ ಹಾಗೆ ಅದು ತನ್ನ ನಾಲ್ಕು ಕಾಲುಗಳನ್ನು ಅಪ್ಪಚಿ ಎಳೆದುಕೊಂಡು ಮಗ್ಗಲು ಹೊರಳಿತು. ಅದನ್ನು ಕಂಡ ಕೂಡಲೇ ಮಿಯ್ ಚಿಯನ್ ಚಿಹ್‌ನ ತಲೆ ತಿರುಗಿದಂತಾಗಿ ತಾನೇನು ಮಾಡುತ್ತಿರುವನೆಂಬ ಅರಿವೂ ಇಲ್ಲದಂತೆ ಅವನು ತನ್ನ ಎಡಗಾಲನ್ನು ಮೇಲಕ್ಕೆತ್ತಿ ರಭಸದಿಂದ ಕೆಳಕ್ಕೆ ಅಪ್ಪಳಿಸಿದ. 'ಚಿಂವ್ ಚಿವ್!' ಎಂಬ ಸದ್ದು ಹೊರಟಿತು. ಏನಾಯಿತೆಂದು ಅವನು ಮಂಡೆಯೂರಿ ಕೆಳಗೆ ಕುಳಿತುಕೊಂಡು ನೋಡಿದಾಗ ಅದರ ಬಾಯಂಚಿನಿಂದ ಅದೇ ಸುರಿದ ಕೆನ್ನೆತ್ತರು ಕಾಣಿಸಿತು. ಬಹುಶಃ ಅದು ಸತ್ತುಹೋಗಿತ್ತು.

ಮತ್ತೆ ಅವನಿಗೆ ಅದರ ಬಗ್ಗೆ ವಿಷಾದ ಮೂಡತೊಡಗಿತು. ಏನೋ ದೊಡ್ಡ ಅಪರಾಧವೊಂದನ್ನು ಮಾಡಿದವನ ಹಾಗೆ ಅವನು ಅಲ್ಲಿಯೇ ಮಂಡೆಯೂರಿ, ಇಲಿಯ ದೇಹವನ್ನೇ ದಿಟ್ಟಿಸುತ್ತ, ಮಿಸುಕಾಡದಂತೆ ಕುಳಿತುಬಿಟ್ಟ.

ಅಷ್ಟೊತ್ತಿಗೆ ಅವನ ತಾಯಿಗೆ ಎಚ್ಚರವಾಗಿತ್ತು. "ಏನು ಮಾಡುತ್ತಿರುವೆ ಮಗು?" ಎಂದು ಅವಳು ಹಾಸಿಗೆಯ ಮೇಲಿಂದಲೇ ಕೇಳಿದಳು.

ಗಬಕ್ಕನೇ ಮೇಲೆದ್ದು, ಸರಕ್ಕನೇ ಅವಳತ್ತ ಹೊರಳುತ್ತ ಅವನು ಸಂಕ್ಷಿಪ್ತದಲ್ಲಿಯೇ ಉತ್ತರಿಸಿದ: "ಇಲಿ..."

"ಹೌದು, ಇಲಿ ಅನ್ನೋದು ನನಗೂ ಗೊತ್ತು.

ಯ್ತು; ಆದರೆ ನೀನೇನು ಅದನ್ನು ಕೊಲ್ಲುತ್ತೀರು ವೆಯೋ ಅಥವಾ ಉಳಿಸುತ್ತಿರುವೆಯೋ?"

ಅವನು ಉತ್ತರಿಸಲಿಲ್ಲ. ಪಂಜು ಆಗಲೇ ಉರಿದು ಆರಿ ಹೋಗಿತ್ತು. ಕತ್ತಲಿನಲ್ಲಿ ಅವನು ತನ್ನ ದೃಷ್ಟಿಯನ್ನು ಬೆಳದಿಂಗಳಿನ ಮಂದ ಬೆಳಕಿಗೆ ಹೊಂದಿಸಿಕೊಳ್ಳುತ್ತ ಮೌನವಾಗಿ ನಿಂತುಕೊಂಡಿದ್ದ.

"ಇಂದು ಮಧ್ಯರಾತ್ರಿ ಸರಿಯಿತೆಂದರೆ ನಿನಗೆ ಹದಿನಾರು ವರ್ಷ ವಯಸ್ಸು. ಆದರೆ ನೀನಿನ್ನೂ ತುಂಬ ಮೆತ್ತಗೆ ಇರುವೆ. ನೀನು ಬದಲಾಗುವುದೇ ಇಲ್ಲ. ಅಂತೂ ನಿನ್ನ ತಂದೆಗೆ ಅವರ ಸೇಡು ತೀರಿಸಿಕೊಳ್ಳಲು ಯಾರೂ ದಿಕ್ಕಿಲ್ಲದಂತಾಯಿತು."

ಬೆಳದಿಂಗಳಿನ ಮಂದ ಬೆಳಕಿನಲ್ಲಿ ಕುಳಿತಿದ್ದ ಅವನ ತಾಯಿ ಮೈಯೆಲ್ಲ ಕಂಪಿಸುತ್ತಿರುವಂತೆ ಕಂಡಳು. ಕುಗ್ಗಿದ ಧ್ವನಿಯ ಅವಳ ಮಾತುಗಳ ತುಂಬ ಅದೆಷ್ಟು ಅಪಾರವಾದ ದುಃಖ ಅಡ ಗಿತ್ತೆಂದರೆ ಅದನ್ನು ಕೇಳಿದ ಕೂಡಲೇ ಅವನ ಮೈಯೆಲ್ಲ ನಡುಗತೊಡಗಿತು.

"ಅಪ್ಪನ ಸೇಡು? ಅಪ್ಪನ ಸೇಡು ತೀರಿಸಿ ಕೊಳ್ಳಬೇಕಾಗಿದೆಯೆ?" ಎಂದು ವಿಸ್ಮಯಾಶ್ಚರ್ಯ ಗಳಿಂದ ಅವನು ತನ್ನ ತಾಯಿಯ ಕಡೆಗೆ ಮುನ್ನ ಡೆಯುತ್ತ ಕೇಳಿದ.

"ಹೌದು. ಅವರ ಸೇಡು ತೀರಿಸಿಕೊಳ್ಳಲೇ ಬೇಕು. ನೀನೇ ಆ ಕೆಲಸ ಮಾಡಬೇಕು. ಬಹಳ ದಿವಸಗಳ ಹಿಂದೆಯೇ ನಿನಗದನ್ನು ಹೇಳಬೇಕೆಂದು ಮಾಡಿದ್ದೆ. ಆದರೆ ಆಗ ನೀನಿನ್ನೂ ತುಂಬ ಚಿಕ್ಕ ಮಗು. ಅಂತೆಯೇ ನಾನು ಏನನ್ನೂ ಹೇಳಲಿಲ್ಲ. ಈಗ ನೀನೇನೂ ಮಗುವಲ್ಲ. ಆದರೆ, ಈಗಲೂ ಕೂಡ ನೀನು ಮಗುವಿನ ಹಾಗೆಯೇ ವರ್ತಿಸು ತ್ತಿರುವೆ. ಏನು ಮಾಡಬೇಕೆಂಬುದೇ ನನಗೆ ತೋಚ ಲೊಲ್ಲದಾಗಿದೆ. ಒಬ್ಬ ನಿಜವಾದ ಗಂಡಸಿಗೆ ಮಾತ್ರ ಶಕ್ಯವಾಗುವಂಥ ಕೆಲಸವನ್ನು ನಿನ್ನಂಥ ಹುಡುಗ ಹೇಗೆ ನಿರ್ವಹಿಸಬಲ್ಲ ಎಂಬುದೇ ನನ್ನ ಚಿಂತೆ ಯಾಗಿದೆ."

"ನಾನು ನಿರ್ವಹಿಸಬಲ್ಲೆ; ಅವ್ವ ನನಗೆ ಹೇಳು; ನಾನು ಖಂಡಿತವಾಗಿಯೂ ಬದಲಾಗುತ್ತೇನೆ."

"ಆಗಲಿ, ನಾನು ಅದನ್ನು ನಿನಗೆ ಹೇಳಬಲ್ಲೆ ಮಾತ್ರ. ಆದರೆ ನೀನು ಖಂಡಿತವಾಗಿಯೂ ಬದ ಲಾಗಲೇಬೇಕು. ಬಾ, ಇಲ್ಲಿಯೇ ಕುಳಿತುಕೊ."

ಯಾವುದೋ ಬಲವಾದ ಸಂಕಲ್ಪವೊಂದನ್ನು ಮಾಡಿಕೊಂಡವಳ ಹಾಗೆ ಅವನ ತಾಯಿ ಮಂಚದ ಮೇಲೆ ಅಚಲವಾಗಿ ಕುಳಿತುಕೊಂಡಿದ್ದಳು. ಬೆಳದಿಂ- ಗಳಿನ ಮಂದ ಬೆಳಕಿನಲ್ಲಿ ಅವಳ ಕಣ್ಣುಗಳು ಹೊಳೆ ಯುತ್ತಿದ್ದವು. ಅವಳು ಗಂಭೀರ ಸ್ವರದಲ್ಲಿ ಹೇಳ ತೊಡಗಿದಳು:

"ಕೇಳು! ನಿನ್ನ ತಂದೆ ಇಡಿ ರಾಜ್ಯದಲ್ಲಿಯೇ ಅತ್ಯಂತ ಶ್ರೇಷ್ಠ ಕಮ್ಮಾರ. ಅವರು ತಯಾರಿಸಿದ ಖಡ್ಗಗಳಿಂದಾಗಿ ಅವರು ಹೆಸರುವಾಸಿಯಾಗಿದ್ದರು. ನಮಗೆ ಹೊಟ್ಟೆಗಿಲ್ಲದಂತಾದ ಸಮಯಗಳಲ್ಲಿ ನಾನು ಅವರ ಎಲ್ಲ ಉಪಕರಣಗಳನ್ನು ಮಾರಿಬಿಟ್ಟಿದ್ದೇನೆ. ಈಗ ನಿನಗೆ ನೋಡಲು ಕೂಡ ಏನೂ ಉಳಿದಿಲ್ಲ. [illegible] ಶ್ರೇಷ್ಠ ಖಡ್ಗ ತಯಾರಕರಾಗಿದ್ದರು. ಇಪ್ಪತ್ತು ವರ್ಷಗಳ ಹಿಂದಿನ ಮಾತು. ರಾಜನ ಉಪಪತ್ನಿ, ಒಂದು ಕಬ್ಬಿಣದ ತುಂಡನ್ನು ಹಡೆದಳು. ಕಬ್ಬಿಣದ ಕಂಬವೊಂದನ್ನು ಅಪ್ಪಿಕೊಂಡು ಅವಳು ಬಸಿರಾಗಿ ದ್ದಳಂತೆ. ಅದೊಂದು ಶುದ್ಧವಾದ, ಪಾರದರ್ಶಕ ಕಬ್ಬಿಣದ ತುಂಡು. ರಾಜನಿಗೆ ಅದೊಂದು ಅಪ ರೂಪದ ವಸ್ತುವೆನ್ನಿಸಿತು. ತನ್ನ ಸಾಮ್ರಾಜ್ಯ ಸಂರಕ್ಷಣೆಗಾಗಿ, ವೈರಿಗಳನ್ನು ಕೊಲ್ಲುವುದಕ್ಕಾಗಿ, ಆತ್ಮರಕ್ಷಣೆಗಾಗಿ ತಾನು ಅದರಿಂದ ಒಂದು ಖಡ್ಗ ತಯಾರಿಸಿಕೊಳ್ಳಬೇಕೆಂದು ಅವನು ನಿರ್ಧರಿಸಿದ. ದುರ್ದೈವವೋ ಎನ್ನುವ ಹಾಗೆ ಆ ಕೆಲಸಕ್ಕೆ ನಿನ್ನ ತಂದೆಯನ್ನೇ ಆರಿಸಿದರು. ನಿನ್ನ ತಂದೆ ಆ ಕಬ್ಬಿಣದ ತುಂಡನ್ನು ಮನೆಗೆ ತೆಗೆದುಕೊಂಡು ಬಂದು ಬಿಟ್ಟೂ ಬಿಡದೆ, ಹಗಲು-ರಾತ್ರಿ, ಮೂರು ವರ್ಷಗಳ ವರೆಗೆ ಕಾಯಿಸಿ, ಹದಮಾಡಿ ಕೊನೆಗೆ ಎರಡು ಖಡ್ಗಗಳನ್ನು ತಯಾರಿಸಿದರು.

"ಕೊನೆಯ ಸಲ ಅವರು ಕುಲುಮೆಯನ್ನು ಹೊತ್ತಿಸಿದ ದಿವಸ ಒಂದು ಭಯಂಕರವಾದ ಘಟನೆ ನಡೆಯಿತು. ಕುಲುಮೆಯೊಳಗಿಂದ ಬೆಳ್ಳಗಿನ ಉಗಿ ಕಂಬದಾಕಾರದಲ್ಲಿ ರಭಸದಿಂದ ಮೇಲೇರಿ ರಾಶಿ ರಾಶಿಯಾಗಿ ಗಾಳಿಯಲ್ಲಿ ಹರಡಿಕೊಂಡಿತು; ಭೂಮಿ ನಡುಗತೊಡಗಿತು. ಕ್ರಮೇಣ ಬೆಳ್ಳಗಿನ ಉಗಿ [illegible]



ನಿಮ್ಮ ನಿತ್ಯದ ಕೆಲಸಗಳನ್ನು ಪುನಃ
ಉತ್ಸುಕರಾಗಿದ್ದೀರಾ?
ನಿಮಗೆ ತಕ್ಷಣ
ದಣಿವನ್ನು ನಿವಾರಿಸುತ್ತದೆ.
ನೀವು ಮನೆಗೆಲಸಗಳನ್ನು ಮಾಡಲು
ಬಹಳ ಉಚ್ಚ ದರ್ಜೆಯ
ಆಗಿದ್ದು, ವಿಟಮಿನ್ 'ಡಿ',
—ಇವುಗಳನ್ನು ಒಳಗೊಂಡಿದೆ.
ನಿಮಗೆ ದಣಿವಾಗಲು ಬಿಡುವುದಿಲ್ಲ,
ನೀವು ಮನೆಗೆಲಸಗಳನ್ನು ಉಲ್ಲಾಸದಿಂದ
ಇರಲು ಬೇಕಾದಂತಹ ಶಕ್ತಿಯನ್ನು
ಸಾಧನ

ಕೊಂಡಿತು. ನಂತರ ಅದು ಸಾವಕಾಶವಾಗಿ ಚೆಂಗೆಂಪು ಬಣ್ಣಕ್ಕೆ ತಿರುಗಿ ಅದರ ಛಾಯೆಯಲ್ಲಿ ಎಲ್ಲ ವಸ್ತುಗಳು ಗುಲಾಬಿ ವರ್ಣಕ್ಕೆ ತಿರುಗಿದವು. ಆರಿ ಅಂಗಾರಾಗಿದ್ದ ನಮ್ಮ ಕುಲುಮೆಯಲ್ಲಿ ಕಾಯ್ದು ಕೆಂಪಾಗಿದ್ದ ಎರಡು ಖಡ್ಗಗಳಿದ್ದವು. ನಿನ್ನ ತಂದೆ ಭಾವಿಯ ತಿಳಿ ನೀರನ್ನು ಅವಕ್ಕೆ ಚಿಮು ಕಿಸಿದ ಕೂಡಲೇ ಅವು ಕಿಡಿ ಕಾರುತ್ತ ಛುಯ್ ಗುಟ್ಟಿದವು. ಕ್ರಮೇಣವಾಗಿ ಅವು ನಸುಗಪ್ಪು ಬಣ್ಣಕ್ಕೆ ತಿರುಗಿದವು. ಸತತವಾಗಿ ಏಳು ಹಗಲು, ರಾತ್ರಿಗಳ ವರೆಗೆ ಹೀಗೇ ನಡೆದ ನಂತರ ಖಡ್ಗ ಗಳು ಅದೃಶ್ಯವಾಗಿಬಿಟ್ಟವು. ದಿಟ್ಟಿಸಿ ನೋಡಿ ದಾಗ ಮಾತ್ರ ಪಾರದರ್ಶಕವಾಗಿ, ಎರಡು ಹಿಮದ ಚೂರಿಗಳ ಹಾಗೆ ಹೊಳೆಯುತ್ತ ಅವು ಇನ್ನೂ ನಮ್ಮ ಕುಲುಮೆಯಲ್ಲೇ ಇರುವುದು ಕಾಣಿಸುತ್ತಿತ್ತು.

“ನಿನ್ನ ತಂದೆಯ ಕಣ್ಣುಗಳು, ಅಪೂರ್ವವಾದ ಸಂತೋಷದ ಕಾಂತಿಯಿಂದ ಬೆಳಗತೊಡಗಿದವು. ಖಡ್ಗಗಳನ್ನು ಮೇಲೆತ್ತಿಕೊಂಡು ಅವರು ಮೇಲಿಂದ ಮೇಲೆ ಅವುಗಳ ಅಲುಗಿನ ಮೇಲೆ ಬೆರಳಾಡಿಸಿ ಪರೀಕ್ಷಿಸಿದರು. ಒಡನೆಯೇ ಅವರ ತುಟಿಯ ಅಂಚು ಗಳಲ್ಲಿ, ಹಾಗೂ ಹಣೆಯ ಮೇಲೆ ಖಿನ್ನತೆಯ ಗೆರೆ ಗಳು ಮೂಡಿನಿಂತವು. ಕಟ್ಟಿಗೆಯ ಎರಡು ಸಂಪುಟ ಗಳಲ್ಲಿ ಅವರು ಆ ಖಡ್ಗಗಳನ್ನು ಇರಿಸಿದರು.

“‘ಕಳೆದ ಕೆಲವು ದಿವಸಗಳಲ್ಲಿ ಘಟಿಸಿದ ಶಕುನ ಗಳನ್ನು ನೀನು ಗಮನಿಸಿದರೇ ಸಾಕು, ಖಡ್ಗಗಳು ತಯಾರಾಗಿವೆ ಎಂಬುದನ್ನು ಎಲ್ಲರಿಗೂ ತಿಳಿಸು ವುದೇ ಅವುಗಳ ಉದ್ದೇಶ. ನಾಳೆ ನಾನು ಅರಸನಿಗೆ ಒಂದು ಖಡ್ಗವನ್ನು ಅರ್ಪಿಸಲು ಹೋಗಲೇಬೇಕು. ಆದರೆ ಅದನ್ನು ಅರ್ಪಿಸುವ ದಿವಸವೇ ನನ್ನ ಜೀವಿ ತದ ಕೊನೆಯ ದಿವಸವೂ ಹೌದು. ನಾವಿಬ್ಬರೂ ಮತ್ತೆ ಎಂದೆಂದಿಗೂ ಭೆಟ್ಟಿಯಾಗಲಿಕ್ಕಿಲ್ಲ’ ಎಂದು ಅವರು ನನಗೆ ಕುಗ್ಗಿದ ಸ್ವರದಲ್ಲಿ ಹೇಳಿದರು.

“ಸಿಡಿಲೆರಗಿದಂತಾದ ನನಗೆ ಅವರ ಮಾತಿನ ಇಂಗಿತವೇನೆಂಬುದೇ ಅರ್ಥವಾಗಲಿಲ್ಲ. ತಿರುಗಿ ಏನೂ ಹೇಳಬೇಕೆಂಬುದೂ ತೋಚದಂತಾಯಿತು.

“‘ನೀವು ಈ ಕೆಲಸವನ್ನು ಇಷ್ಟು ಚೆನ್ನಾಗಿ ಮಾಡಿ ದ್ದೀರಿ’ ಎಂದು ಉಸುರುವುದು ಮಾತ್ರ ನನ್ನಿಂದ ಶಕ್ಯವಾಯಿತು.

“‘ಏಯ್ ನಿನಗೆ ಇಷ್ಟೂ ಅರ್ಥವಾಗುವುದಿ ದಿಲ್ಲವೆ!’ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತ ನಿನ್ನ ತಂದೆ ‘ರಾಜ ಎಂದಿನಿಂದಲೂ ಒಬ್ಬ ಸಂಶಯ ಪಿಶಾಚಿ. ಮೇಲಾಗಿ ಕ್ರೂರ. ಈಗ ನಾನು ಅವನಿಗಾಗಿ ಇದುವರೆಗೆ ಯಾರೂ ಕಂಡಿರಲಾರದಂಥ ಒಂದು ಖಡ್ಗವನ್ನು ತಯಾರಿಸಿದ್ದೇನೆ. ಇನ್ನು ಮುಂದೆ ಅವನ ಎದುರಾಳಿಯಾಗಿ ನಿಲ್ಲಲು, ಹಾಗೂ ಅವನನ್ನು ಸೋಲಿಸಲು ಅನುಕೂಲವಾಗುವಂತೆ ಬೇರೆ ಯಾ ರಿಗೂ ಎಂದೆಂದಿಗೂ ಅಂಥ ಇನ್ನೊಂದು ಖಡ್ಗವನ್ನು ನಾನು ತಯಾರಿಸಿಕೊಟ್ಟಿರಬಾರದು. ಅದಕ್ಕಾಗಿ ಅವನು ನನ್ನನ್ನು ಕೊಲ್ಲುವದಂತೂ ಖಂಡಿತ’ ಎಂದು ಗಟ್ಟಿಯಾದ ಸ್ವರದಲ್ಲಿ ಹೇಳಿದರು.

“ನಾನು ಕಣ್ಣೀರು ಸುರಿಸತೊಡಗಿದೆ.

“‘ನೀನು ಕಣ್ಣೀರು ಸುರಿಸಬೇಡ; ಇದರಿಂದ ಪಾರಾಗಲು ಹಾದಿಯೇ ಇಲ್ಲ. ಕಣ್ಣೀರು ನನ್ನ ನಸೀಬವನ್ನು ಬದಲಿಸಲಾರವು. ಬಹಳ ದಿವಸ ಗಳಿಂದ ನಾನು ಇದಕ್ಕೆ ಸಿದ್ಧನಾಗುತ್ತಲೇ ಬಂದಿ ದ್ದೇನೆ.’ ಎಂದು ಹೇಳುತ್ತ ಅವರು ಆ ಖಡ್ಗಗಳ ಲ್ಲೊಂದನ್ನು ಇರಿಸಿದ ಸಂಪುಟವನ್ನು ನನ್ನ ತೊಡೆಯ ಮೇಲೆ ಇಟ್ಟರು. ಅವರ ಕಣ್ಣುಗಳು ಮಿಂಚಿನ ಕುಡಿಗಳ ಹಾಗೆ ಥಳಥಳಿಸತೊಡಗಿದ್ದವು.

“‘ಇದು ಆ ಜೋಡಿ ಖಡ್ಗಗಳಲ್ಲೊಂದು. ನಾಳೆ ನಾನು ಇದರ ಸಂಗಾತಿಯನ್ನು ರಾಜನಿಗೆ ಅರ್ಪಿಸಲು ಹೋಗುತ್ತೇನೆ. ತಿರುಗಿ ಬರದಿದ್ದರೆ ನಾನು ಸತ್ತಿರುವೆನೆಂದೇ ತಿಳಿದುಕೊ. ಇನ್ನೂ ನಾಲ್ಕೈದು ತಿಂಗಳುಗಳಲ್ಲೇ ನೀನು ಹೊರಸು ಏರುವ ಕಾಲವಲ್ಲವೆ? ನನಗಾಗಿ ಕೊರಗಬೇಡ. ನಮ್ಮ ಮಗುವಿಗೆ ಜನ್ಮಕೊಟ್ಟು ಅವನನ್ನು ಚೆನ್ನಾಗಿ ಜೋಪಾನಮಾಡು. ಅವನು ಬೆಳೆದು ವಯಸ್ಸಿಗೆ ಬಂದಕೂಡಲೇ ಅವನಿಗೆ ಈ ಖಡ್ಗವನ್ನು ಕೊಟ್ಟು ಇದರಿಂದ ರಾಜನ ತಲೆಯನ್ನು ಕತ್ತರಿಸಿ ನನ್ನ ಸೇಡ ನ್ನು ತೀರಿಸಿಕೋ ಎಂದು ಅವನಿಗೆ ಹೇಳು’ ಎಂದು ಅವರು ಹೇಳಿದರು.”

“ಅಂದು ನನ್ನ ತಂದೆ ತಿರುಗಿ ಬಂದನೆ?” ಹುಡುಗ ಆತುರದಿಂದ ಕೇಳಿದ.

“ಇಲ್ಲ; ಅವರು ತಿರುಗಿ ಬರಲೇ ಇಲ್ಲ. ಅವ ರಿಗಾಗಿ ಎಲ್ಲ ಕಡೆಗೂ ಕೇಳಿದೆ. ಎಲ್ಲಿಯೂ ಅವರ

ಸುಳಿವು ಸಿಗಲಿಲ್ಲ. ಎಷ್ಟೋ ದಿವಸಗಳಾದಮೇಲೆ ಯಾರೋ ಒಬ್ಬರು, ನಿನ್ನ ತಂದೆ ತಯಾರಿಸಿದ ಖಡ್ಗ ಮೊಟ್ಟ ಮೊದಲು ನಿನ್ನ ತಂದೆಯ ನೆತ್ತರಿನಿಂದಲೇ ಕೆಂಪಾಯಿತು. ಎಂದು ಹೇಳಿದರು. ಅವರ ದೆವ್ವ ಅರಮನೆಯಲ್ಲಿ ಸುಳಿದಾಡೀತೆಂಬ ಭಯದಿಂದ ಅವರ ಮುಂಡವನ್ನು ಮುಂದಿನ ದ್ವಾರದ ಬಳಿಯಲ್ಲಿಯೂ, ರುಂಡವನ್ನು ಹಿಂಭಾಗದ ತೋಟದಲ್ಲಿಯೂ ಹುಗಿದರಂತೆ!"

ಮಿಯ್ ಚಿಯುನ್ ಚಿಪ್‌ನ ಮೈಯಲ್ಲಿ ಪ್ರಚಂಡವಾದ ಬೆಂಕಿಯೊಂದು ಹೊತ್ತಿ ಭಗಭಗನೆ ಉರಿಯತೊಡಗಿತು. ತನ್ನ ತಲೆಯ ಪ್ರತಿ ಕೂದಲಿನಿಂದಲೂ ಬೆಂಕಿಯ ಕಿಡಿಗಳು ಹೊರಚಿಮ್ಮುತ್ತಿರುವಂತೆ ಅವನಿಗೆ ಅನಿಸಿತು. ಕತ್ತಲಿನಲ್ಲಿ ಅವನು ತನ್ನ ಮುಷ್ಟಿಗಳನ್ನು ಬಿಗಿಗೊಳಿಸಿ ಜೋರಾಗಿ ಅದುಮಿದ, ರಭಸಕ್ಕೆ ಬೆರಳಿನ ಗೆಣ್ಣುಗಳು ಲಟಕ್ ಎಂದವು.

ಅವನ ತಾಯಿ ಹಾಸಿಗೆಯಿಂದ ಮೇಲೆದ್ದು ಮಂಚದ ತುದಿಯಲ್ಲಿರುವ ಹಲಗೆಯನ್ನು ಎತ್ತಿ ಪಕ್ಕದಲ್ಲಿರಿಸಿದಳು. ಪಂಜು ಹೊತ್ತಿಸಿ, ಹಿತ್ತಲಿನಿಂದ ಒಂದು ದೊಡ್ಡ ಹಾರೆಯನ್ನು ತಂದು ತನ್ನ ಮಗನ ಕೈಯಲ್ಲಿ ಕೊಟ್ಟು, "ಈ ನೆಲವನ್ನು ಅಗೆ!" ಎಂದು ಹೇಳಿದಳು.

ಹುಡುಗನ ಹೃದಯ ಜೋರಾಗಿ ಹೊಡೆದುಕೊಳ್ಳತೊಡಗಿತಾದರೂ ಅವನು ಶಾಂತಚಿತ್ತನಾಗಿ ಅಗೆಯತೊಡಗಿದ. ಏಟಿನ ನಂತರ ಏಟು ಹಾಕುತ್ತ ಕಂದು ಬಣ್ಣದ ಮಣ್ಣನ್ನು ಮೊಗೆದು ಹೊರಚೆಲ್ಲುತ್ತ, ಐದು ಫೂಟಿನಷ್ಟು ಆಳದ ವರೆಗೆ ಅವನು ತಗ್ಗು ತೋಡಿದ. ನಂತರ ಅಲ್ಲಿ ಕೊಳೆತು ಲಡ್ಡು ಹಿಡಿದ ಒಂದಿಷ್ಟು ಕಟ್ಟಿಗೆ ಇರುವ ಹಾಗೆ ಮಣ್ಣಿನ ಬಣ್ಣ ಬೇರೆಯಾಯಿತು.

"ಅಲ್ಲಿ ನೋಡು! ಇನ್ನು ಜೋಕೆ!" ಎಂದು ತಾಯಿ ಕೂಗಿ ಹೇಳಿದಳು.

ತಾನು ತೋಡಿದ ತಗ್ಗಿನಲ್ಲಿ ಮಿಯ್ ಚಿಯುನ್ ಚಿಪ್ ಬಾಗಿ ನಿಂತುಕೊಂಡು ತನ್ನೆರಡೂ ಕೈಗಳನ್ನು ಕೆಳಚಾಚಿ ಲಡ್ಡು ಹಿಡಿದ ಕಟ್ಟಿಗೆಯ ತುಂಡುಗಳನ್ನು ಅತ್ಯಂತ ಎಚ್ಚರಿಕೆಯಿಂದ ಆರಿಸಿ ಮೇಲೆತ್ತಿ ಇಡತೊಡಗಿದ. ಅವನ ತುದಿ ಬೆರಳಿಗೆ ಬರ್ಫದಂತೆ ತಣ್ಣಗಿನದೇನೋ ವಸ್ತುವೊಂದು ತಾಕಿತು; ಒಡನೆಯೇ ಹೊಳೆ ಹೊಳೆಯುವ ಪಾರದರ್ಶಕವಾದ ಖಡ್ಗ ಅವನ ಕಣ್ಣಿಗೆ ಬಿತ್ತು. ಅದರ ಹಿಡಿಯನ್ನು ಹುಡುಕಿ ಹಿಡಿದು ಅವನು ಅದನ್ನು ಮೇಲೆತ್ತಿಕೊಂಡ.

ಕಿಡಕಿಯ ಹೊರಗೆ ಆಕಾಶದಲ್ಲಿ ಬೆಳಗುತ್ತಿರುವ ಚಂದ್ರ. ತಾರೆಗಳು, ಕೋಣೆಯೊಳಗಡೆ ಉರಿಯುತ್ತಿರುವ ದೇವದಾರಿನ ಪಂಜು, ಎಲ್ಲವೂ ಒಮ್ಮಿಂದೊಮ್ಮೆಗೆ ತಮ್ಮ ಪ್ರತಿಭೆಯನ್ನು ಕಳೆದುಕೊಂಡು

ಕ್ಷೀಣವಾಗಿ ತೋರತೊಡಗಿದವು. ಇಡೀ ಜಗತ್ತಿನ ತುಂಬ ಪ್ರಖರವಾದ ಬೆಳಕೊಂದು ವ್ಯಾಪಿಸಿಕೊಂಡಂತಾಯಿತು. ಈ ಪ್ರಖರ ಬೆಳಕಿನಲ್ಲಿ ಲೀನವಾಗಿ ಖಡ್ಗ ಕಣ್ಣಿಗೆ ಕಾಣಿಸದಂತೆ ಅದೃಶ್ಯವಾಯಿತು. ಆದರೆ ಹುಡುಗ ಸೂಕ್ಷ್ಮವಾಗಿ ದಿಟ್ಟಿಸಿ ನೋಡಿದಾಗ ಮಾತ್ರ, ಸುಮಾರು ಐದು ಫೂಟಿಗಿಂತಲೂ ಉದ್ದವಾದದ್ದೇನೋ ಕಂಡ ಹಾಗೆ ಅದು ಗೋಚರಿಸಿತು. ಅದು ಅಷ್ಟೊಂದು ಹರಿತವಾಗಿದ್ದಂತೆ ತೋರಲಿಲ್ಲ–ತುದಿಯಲಗು ಗಲಗಿನ ಹಾಗೆ ದುಂಡಗೆ ಮಡಚಿಕೊಂಡಿತ್ತು.

"ಇನ್ನು ಮುಂದೆ ನೀನು ಮೆತ್ತಗಿರಕೂಡದು. ಅದನ್ನು ಈಗಿನಿಂದಲೇ ನಿಲ್ಲಿಸಿಬಿಡು. ಈ ಖಡ್ಗವನ್ನು ತೆಗೆದುಕೊಂಡು ಹೋಗಿ ರಾಜನ ತಲೆಯನ್ನು ಕತ್ತರಿಸಿ ನಿನ್ನ ತಂದೆಯ ಸೇಡು ತೀರಿಸಿಕೋ!" ಎಂದು ಅವನ ತಾಯಿ ಹೇಳಿದಳು.

"ನನ್ನ ಮೃದುತ್ವವನ್ನು ನಾನಾಗಲೇ ಬಿಟ್ಟುಬಿಟ್ಟಿದ್ದೇನೆ. ಈ ಖಡ್ಗವನ್ನು ತೆಗೆದುಕೊಂಡು ಹೋಗಿ ನನ್ನ ತಂದೆಯ ಸೇಡನ್ನು ತೀರಿಸಿಕೊಳ್ಳುತ್ತೇನೆ!"

"ನಾನೂ ಅದನ್ನೇ ಹಾರೈಸುವೆ. ನೀನು ನಸುಗಪ್ಪು ಬಣ್ಣದ ಕೋಟು ತೊಟ್ಟುಕೊಂಡು ಬೆನ್ನಿಗೆ ಖಡ್ಗವನ್ನು ಕಟ್ಟಿಕೋ. ಕೋಟು ಹಾಗೂ ಖಡ್ಗಗಳು ಒಂದೇ ಬಣ್ಣವಾಗುವುದರಿಂದ ಅದು ಯಾರಿಗೂ ಕಾಣಿಸುವುದಿಲ್ಲ. ನಿನಗಾಗಿ ಕೋಟನ್ನು ಆಗಲೇ ಸಿದ್ಧಪಡಿಸಿ ಇಲ್ಲಿ ಇಟ್ಟಿದ್ದೇನೆ" ಎಂದು ಅವಳು ಮಂಚದ ಹಿಂದುಗಡೆ ಇರುವ ಮುರುಕು ಪೆಠಾರಿಯ ಕಡೆಗೆ ಕೈ ಮಾಡಿ ತೋರಿಸಿ ಹೇಳಿದಳು. "ನಾಳೆ ನೀನು ಇಲ್ಲಿಂದ ಹೊರಡಬಹುದು; ನನಗಾಗಿ ಚಿಂತಿಸಬೇಡ."

ಮಿಯ್ ಚಿಯನ್ ಚಿಹ್ ಪೆಟ್ಟಿಗೆಯಿಂದ ಹೊಸ ಕೋಟನ್ನು ಹೊರತೆಗೆದು ತೊಟ್ಟುಕೊಂಡು ನೋಡಿದ. ಅದು ಅವನ ಮೈಯಳತೆಗೆ ತುಂಬ ಸರಿಯಾಗಿ ಹೊಂದಿಕೊಂಡಿತು. ನಂತರ ಮತ್ತೆ, ಅದನ್ನು ಬಿಚ್ಚಿ, ಖಡ್ಗವನ್ನು ಅದರಲ್ಲಿಯೇ ಇಟ್ಟು ಮಡಿಚಿ ತಲೆದಿಂಬಿನ ಬುಡದಲ್ಲಿ ಇರಿಸಿ ಶಾಂತಚಿತ್ತನಾಗಿ ಮಲಗಿಕೊಂಡ. ತನ್ನ ಮೃದುತ್ವವನ್ನು ತಾನಾಗಲೇ ತ್ಯಜಿಸಿಬಿಟ್ಟಿರುವೆನೆಂಬ ವಿಶ್ವಾಸ ಅವನಲ್ಲಿ ಮೂಡಿತು. ತನ್ನ ಮನಸ್ಸಿನಲ್ಲಿ ಈಗ ಏನೂ ಇಲ್ಲವೆನ್ನುವ ಹಾಗೆ ಹಾಯಾಗಿ ಇದ್ದು ನಿಶ್ಚಿಂತೆಯಾಗಿ ನಿದ್ರೆಮಾಡಿ, ಮರುದಿವಸ ಬೆಳಿಗ್ಗೆ ಎಂದಿನಂತೆ ಸಹಜವಾಗಿ ಎದ್ದು ತನ್ನ ಹುಟ್ಟು ವೈರಿಯನ್ನು ಹುಡುಕಿಕೊಂಡು ಹೊರಡಬೇಕೆಂದು ಅವನ ಸಂಕಲ್ಪಿಸಿದ.

ಅವರ ನಿದ್ರೆ ಅವನ ಬಳಿಗೆ ಸುಳಿಯಲೇ ಇಲ್ಲ. ಹಾಸಿಗೆಯಲ್ಲಿ ಹಾಗೇ ಹೊರಳಾಡುತ್ತ ಮಲಗಿಕೊಂಡಿದ್ದ. ಎದ್ದು ಕುಳಿತುಕೊಳ್ಳಬೇಕೆನಿಸುತ್ತಿತ್ತು. ತಗ್ಗಿದ ಧ್ವನಿಯಲ್ಲಿ ತಾಯಿ ಬಿಡುತ್ತಿದ್ದ ನಿರಾಸೆಯ ದೀರ್ಘ ನಿಟ್ಟುಸಿರುಗಳನ್ನು ಅವನು ಆಲಿಸಿದ. ಸ್ವಲ್ಪ ಹೊತ್ತಿನಲ್ಲಿಯೇ ಬೆಳಗಿನ ಮೊದಲ ಕೋಳಿಯ ಕೂಗು ಕೇಳಿಸಿ, ಹೊಸ ದಿನವೊಂದರ ಆರಂಭದ ಅರಿವು ಮೂಡುತ್ತಿದ್ದಂತೆಯೇ ಅವನಿಗೆ ಹದಿನಾರು ತುಂಬಿತು.

೨

ಮಿಯ್ ಚಿಯನ್ ಚಿಹ್ ಹೊಸಿಲು ದಾಟಿ ಒಂದಿರುಗಿ ನೋಡದೇ ಪಟ್ಟಣದ ದಾರಿಯಲ್ಲಿ ಮುನ್ನಡೆಯತೊಡಗಿದಾಗ ಪೂರ್ವದಲ್ಲಿ ಇನ್ನೂ ನಸುಕು ಹರಿದಿರಲಿಲ್ಲ. ಅವನ ಕಣ್ಣುಗಳು ಉಬ್ಬಿಕೊಂಡಿದ್ದವು. ನಸುಗಪ್ಪು ಬಣ್ಣದ ಕೋಟು ತೊಟ್ಟುಕೊಂಡು ಬೆನ್ನಿಗೆ ಖಡ್ಗವನ್ನು ಕಟ್ಟಿಕೊಂಡ ಅವನು ಕಾಡಿನ ದಾರಿಯಲ್ಲಿ ವೇಗವಾಗಿ ನಡೆಯತೊಡಗಿದ. ತುದಿಯಲ್ಲಿ ಇಬ್ಬನಿಯ ಹನಿಗಳನ್ನು ಪೋಣಿಸಿಕೊಂಡು ನಿಂತ ದೇವದಾರು ವೃಕ್ಷಗಳ ಎಲೆ ಎಲೆಗಳಡಿಯಲ್ಲಿ ಇನ್ನೂ ಕತ್ತಲೆ ಅಡಗಿಕೊಂಡಿತ್ತು. ಆದರೆ ಅವನು ಕಾಡಿನ ಮತ್ತೊಂದು ಅಂಚನ್ನು ದಾಟಿ ಬರುವಷ್ಟರಲ್ಲಿ ಬೆಳಕು ಹರಿದು ಇಬ್ಬನಿಯ ಹನಿಗಳು ಲಕಲಕನೆ ಮಿಂಚತೊಡಗಿದ್ದವು. ಅನತಿ ದೂರದಲ್ಲಿ ಮಸುಕು ಮಸುಕಾಗಿ ಕಾಣಿಸುತ್ತಿರುವುದೆಲ್ಲ ಪಟ್ಟಣದ ಕೋಟೆಯ ಕಪ್ಪು ಗೋಡೆಗಳಿರಬಹುದೆಂದು ಅವನು ಅಂದುಕೊಂಡ.

ಕಾಯಿಪಲ್ಲೆ ಹೊತ್ತು ಮಾರುವವರ ಗುಂಪಿನಲ್ಲಿ ಸೇರಿಕೊಂಡು ಅವನು ಪಟ್ಟಣದೊಳಗೆ ಪ್ರವೇಶಿಸಿದ. ರಸ್ತೆಗಳಲ್ಲಿ ಆಗಲೇ ಗದ್ದಲ ಗಡಿಬಿಡಿ ಪ್ರಾರಂಭವಾಗಿಬಿಟ್ಟಿತ್ತು. ಗಂಡಸರು

ಅಲ್ಲಲ್ಲಿ ಗುಂಪುಗೂಡಿಕೊಂಡು ಸುಮ್ಮನೆ ನಿಂತುಕೊಂಡಿದ್ದರೆ ಹೆಣ್ಣುಮಕ್ಕಳು ಆಗಾಗ ತಮ್ಮ ಮನೆಯ ಬಾಗಿಲುಗಳಿಂದ ಹೊರಗೆ ಇಣುಕಿ ನೋಡುತ್ತಿದ್ದರು. ಅವರ ಕಣ್ಣುಗಳು ಕೂಡ–ನಿದ್ರೆಯಿಂದ–ಉಬ್ಬಿಕೊಂಡಿದ್ದವು. ಹೆರಡಿಕೊಂಡ ತಲೆಗಳನ್ನವರು ಇನ್ನೂ ಬಾಚಿಕೊಂಡಿರಲಿಲ್ಲ. ಕೆಂಪು ಬಳಿದುಕೊಳ್ಳಲು ಕೂಡ ಸಮಯ ಸಿಗಲಾರದ್ದರಿಂದ ಅವರ ಮುಖಗಳು ಬೆಳ್ಳಗೆ ನಿಸ್ತೇಜವಾಗಿ ಕಾಣಿಸುತ್ತಿದ್ದವು.

ಇಷ್ಟು ಜನರೆಲ್ಲ ಕಾತರದಿಂದ, ಆದರೂ ಇಷ್ಟೊಂದು ತಾಳ್ಮೆಯಿಂದ ನಿರೀಕ್ಷಿಸುತ್ತಿರುವಂಥ ದೇನೋ ದೊಡ್ಡ ವಿಶೇಷವೊಂದು ಇಲ್ಲಿ ಘಟಿಸಲಿದೆ ಎಂದು ಮಿಯ್ ಚಿಯನ್ ಚಿಹ್‌ಗ ಅನಿಸಿತು.

ಅವನು ಮುನ್ನಡೆಯುತ್ತಿದ್ದಂತೆಯೇ, ಜೋರಾಗಿ ಓಡಿಬರುತ್ತಿದ್ದ ಹುಡುಗನೊಬ್ಬ ಅವನ ಬೆನ್ನಿಗೆ ಖಡ್ಗದ ತುದಿಯ ತೀರ ಹತ್ತಿರದಲ್ಲಿಯೇ ಡಿಕ್ಕಿ ಹೊಡೆದ. ಒಮ್ಮೆಲೇ ಮೈಮೇಲೆ ತಣ್ಣೀರು ಸುರುವಿದಂತಾಗಿ ಮಿಯ್ ಚಿಯೆನ್ ಚಿಹ್ ಕಂಪಿಸಿದ. ಉತ್ತರಕ್ಕೆ ಹೊರಳಿ ಸಿದಾ ಮುನ್ನಡೆದಾಗ ಅರಮನೆಗೆ ಸ್ವಲ್ಪ ದೂರದಲ್ಲಿ ಗದ್ದಲ ಹೆಚ್ಚಾಗಿ ಜನ ಒಬ್ಬರಿಗೊಬ್ಬರು ಹತ್ತಿಕೊಂಡು ನಿಂತು, ತಮ್ಮ ಗೋಣುಗಳನ್ನೆತ್ತರಿಸಿ ರಸ್ತೆಯ ಕಡೆಗೇ ನೋಡುತ್ತಿದ್ದರು. ಜನಜಂಗುಳಿಯ ಮಧ್ಯದಿಂದ ಚಿಕ್ಕ ಮಕ್ಕಳ ಹಾಗೂ ಹೆಂಗಸರ ಚೀರಾಟ ಕೂಗಾಟಗಳು ಅವನಿಗೆ ಕೇಳಿಸತೊಡಗಿದವು. ತನ್ನ ಅದೃಶ್ಯ ಖಡ್ಗ ಯಾರಿಗಾದರೂ ತಾಕಿ ಗಾಯಗೊಳಿಸೀತೆಂದು ಹೆದರಿ ಅವನು ಮುಂದೆ ಹೋಗದೇ ಅಲ್ಲಿಯೇ ನಿಂತ. ಆದರೆ ಗದ್ದಲ ಹೆಚ್ಚಾಗಿ ಜನ ಅವನನ್ನು ಹಿಂದಿನಿಂದ ನೂಕತೊಡಗಿದರು. ಅವರಿಗೆ ದಾರಿ ಬಿಟ್ಟು, ಅವನು ಗೋಣೆತ್ತರಿಸಿ ರಸ್ತೆಯ ಕಡೆಗೇ ನೋಡುತ್ತಿದ್ದ ಜನರ ಬೆನ್ನುಗಳು ಮಾತ್ರ ತನಗೆ ಕಾಣಿಸುವಷ್ಟು ಹಿಂದಕ್ಕೆ ಬಂದು ನಿಂತುಕೊಂಡ.

ಒಮ್ಮಿಂದೊಮ್ಮೆಗೇ ಎಲ್ಲಕ್ಕಿಂತ ಮುಂದೆ ನಿಂತ ಜನರು ಒಬ್ಬರ ಹಿಂದೊಬ್ಬರಂತೆ ಮೊಣಕಾಲೂರಿ ನಿಲ್ಲತೊಡಗಿದರು. ಸ್ವಲ್ಪ ದೂರದಲ್ಲಿಯೇ ರಸ್ತೆಯ ಎರಡೂ ಬದಿಗಳಲ್ಲಿ ಅಶ್ವಾರೋಹಿಗಳಿಬ್ಬರು ವೇಗವಾಗಿ ಬರುತ್ತಿರುವುದು ಕಾಣಿಸಿತು. ಅವರ ಹಿಂದೆಯೇ ದಂಡ, ಈಟಿ. ಖಡ್ಗ. ಬಿಲ್ಲು–ಬಾಣ, ರಾಜಧ್ವಜಗಳನ್ನು ಹಿಡಿದುಕೊಂಡ ಸೈನಿಕರ ದಂಡೊಂದು ಧೂಳೆಬ್ಬಿಸುತ್ತ ಬಂದಿತು. ಅವರ ಹಿಂದೆ ನಾಲ್ಕು ಕುದುರೆಗಳನ್ನು ಹೂಡಿದ ದೊಡ್ಡ ಗಾಡಿಯೊಂದರಲ್ಲಿ ನಗಾರಿ. ಜಾಗಟೆಗಳಲ್ಲದೇ ಅವನು ಹಿಂದೆ ಎಂದೂ ಕಂಡು ಕೇಳರಿಯದಂಥ ವಿವಿಧ ವಾದ್ಯಗಳನ್ನು ಊದುತ್ತಿರುವ, ಬಾರಿಸುತ್ತಿರುವವರ ಗುಂಪೊಂದು ಕುಳಿತುಕೊಂಡಿತ್ತು. ಅವರ ಹಿಂದೆ ಬಂದ ಗಾಡಿಗಳಲ್ಲಿ ಭವ್ಯ ಪೋಷಾಕುಗಳನ್ನು ಧರಿಸಿದ. ಮುದುಕರಿಂದ ಹಿಡಿದು ಯುವಕರವರೆಗಿನ ವಿವಿಧ ವಯಸ್ಸಿನ ಆಸ್ಥಾನಿಕರು ಕುಳಿತುಕೊಂಡಿದ್ದರು. ಬೊಜ್ಜು ದೇಹದ, ಬೆವರು ಸುರಿಯುತ್ತಿವ ಅವರೆಲ್ಲರ ಮುಖಗಳೂ ಬಿಸಿಲಲ್ಲಿ ಮಿರಮಿರನೆ ಮಿಂಚುತ್ತಿದ್ದವು. ಖಡ್ಗ. ಭರ್ಚಿ, ಈಟಿಗೊಡಲಿಗಳನ್ನು ಹಿಡಿದುಕೊಂಡ ಅಶ್ವಾರೋಹಿ ಸೈನಿಕರ ದಂಡೊಂದು ಅವರನ್ನು ಹಿಂಬಾಲಿಸಿತು. ಕೂಡಲೇ ಮೊಣಕಾಲೂರಿ ನಿಂತುಕೊಂಡ ಜನರೆಲ್ಲ ನೆಲಕ್ಕೆ ಬಾಗಿ, ಪೊಡಮಡತೊಡಗಿದರು. ಹಳದಿ ವರ್ಣದ ಛತ್ರವುಳ್ಳ ಭವ್ಯವಾದ ರಥವೊಂದು ಬರುತ್ತಿರುವುದನ್ನು ಆತ ಕಂಡ. ಅದರ ಮಧ್ಯದಲ್ಲಿ ಉಜ್ವಲವಾದ ಪೋಷಾಕು ಧರಿಸಿದ ಧಾಂಡಿಗನೊಬ್ಬ ಕುಳಿತುಕೊಂಡಿದ್ದ. ಅರೆನೆರೆತ ಗಡ್ಡದ ಅವನ ತಲೆ ತೀರ ಚಿಕ್ಕದಾಗಿತ್ತು. ಅವನು ಭುಜದಲ್ಲಿ ತನ್ನ ಬೆನ್ನ ಮೇಲೆ ಇರುವಂಥದೇ ಆದ ಒಂದು ಖಡ್ಗವನ್ನು ಧರಿಸಿದ್ದಂತೆ ಕಂಡಿತು. ಹುಡುಗ ಸಹಜವಾಗಿಯೇ ಒಂದು ನಿಮಿಷ ತತ್ತರಿಸಿದ. ಆದರೆ ಮರುಕ್ಷಣದಲ್ಲಿಯೇ ಎದೆಯಲ್ಲಿ ಬೆಂಕಿ ಹೊತ್ತಿ ಮೈಯೆಲ್ಲ ಭಗಭಗನೆ ಉರಿಯುತ್ತಿರುವಂತೆ ಅವನಿಗೆ ರೋಷಾವೇಶ ಉಕ್ಕಿತು. ಬೆನ್ನ ಮೇಲಿರುವ ಖಡ್ಗವನ್ನು ಹಿಡಿದುಕೊಳ್ಳಲು ಕೈ ಚಾಚಿ, ಸಾಷ್ಟಾಂಗ ಬಿದ್ದ ಜನರ ಕುತ್ತಿಗೆಗಳ ನಡುವೆ ದಾರಿಮಾಡಿಕೊಳ್ಳುತ್ತ ಅವನು ಮುನ್ನಡೆದ. [illegible] ಹೆಜ್ಜೆಗಳಷ್ಟು ಮಾತ್ರ ಸಾಗಿರಬೇಕು. ಅಷ್ಟರ[illegible] ಯಾರೋ ಒಬ್ಬರು ಕಾಲು ತೊಡಕಿಸಿ [illegible]

ಮುಖದ ಯುವಕನೊಬ್ಬನ ಮೇಲೆ ತಲೆ ಹಚ್ಚಿ ಬೀಳುವಂತೆ ಅವನನ್ನು ಕೆಡವಿದರು. ತನ್ನ ಖಡ್ಗದ ತುದಿ ಅವನಿಗೆ ತಾಕಿ ಗಾಯಗೊಳಿಸಿರಬಹುದೆಂದು ಹೆದರಿ, ಪರೀಕ್ಷಿಸಲು ಗಾಬರಿಯಿಂದ ಅವನು ಮೇಲೇಳುತ್ತಿರುವಂತೆಯೇ ಯಾರೋ ಒಬ್ಬರು ಅವನ ಪಕ್ಕೆಯ ಮೇಲೆ ಎರಡು ಸಲ ಬಲವಾಗಿ ಗುದ್ದಿದರು. ನಿಂತು ಪ್ರತಿಭಟಿಸುವ ಗೋಜಿಗೆ ಹೋಗದೆ, ಅವನು ಮತ್ತೆ ರಸ್ತೆಯ ಕಡೆ ನೋಡಿದ. ಹಳದಿ ಛತ್ರವುಳ್ಳ ಆ ರಥ ಆಗಲೇ ಹೊರಟುಹೋಗಿತ್ತಲ್ಲದೇ ಆದರ ಹಿಂದೆ ಇದ್ದ ಅಂಗರಕ್ಷಕದಳದ ಅಶ್ವಾರೋಹಿ ಭಟರು ಕೂಡ ಸಾಕಷ್ಟು ದೂರ ಹೋಗಿದ್ದರು.

ರಸ್ತೆಯ ಎರಡೂ ಬದಿಯಲ್ಲಿನ ಜನರು ಮತ್ತೆ ಮೇಲೆದ್ದು ನಿಂತರು. ಬಾಡಿದ ಮುಖದ ಯುವಕ ಮುಂದೆ ಹೋಗಲು ಬಿಡದಂತೆ ಮಿಯ್ ಚಿಪ್‌ನ ಅಂಗಿಯ ಕೊರಳ ಪಟ್ಟಿಯನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿದ. ತನ್ನ ಸೌರ ತಾಯಿತವನ್ನು ಅವನು ತುಳಿದು ನುಗ್ಗು ಮಾಡಿರುವುದಾಗಿಯೂ, ಅದಕ್ಕಾಗಿ ಒಂದು ವೇಳೆ ತಾನು ಎಂಭತ್ತು ವರ್ಷ ವಯಸ್ಸಾಗುವುದಕ್ಕಿಂತ ಮುಂಚೆಯೇ ಸತ್ತರೆ ತಾನು ಪರಿಹಾರ ಕೊಡುವುದಾಗಿ ಈ ಹುಡುಗ ವಾಗ್ದಾನ ಮಾಡಬೇಕೆಂದೂ ಅವನು ಕಟ್ಟಳೆ ಹಾಕಿದ. ರಸ್ತೆಯೊಳಗಿನ ಸೋಮಾರಿಗಳೆಲ್ಲ ಅವರಿಬ್ಬರ ಸುತ್ತಲೂ ಗುಂಪುಗೂಡಿ ಕುತೂಹಲದಿಂದ ನೋಡತೊಡಗಿದರು. ಸ್ವಲ್ಪ ಹೊತ್ತಿನ ನಂತರ ಪಕ್ಕದಲ್ಲಿಯೇ ನಿಂತುಕೊಂಡ ಕೆಲವರು ಬಾಡಿದ ಮುಖದ ಯುವಕನ ಪರ ವಹಿಸಿ ಹುಡುಗನನ್ನು ಗೇಲಿಮಾಡುತ್ತ ನಿಂದಿಸತೊಡಗಿದರು. ಇಂಥ ವೈರಿಗಳೆದುರು ನಗಬೇಕೋ, ಸಿಟ್ಟಾಗಬೇಕೋ, ಎಂಬುದೊಂದೂ ಮಿಯ ಚಿಯನ್ ಚಿಪ್‌ಗೆ ತಿಳಿಯದಂತಾಯಿತು. ಕಿರಿಕಿರಿ ಎನ್ನಿಸಿದರೂ ಅಲ್ಲಿಂದ ಪಾರಾಗಿಹೋಗುವುದು ಅವನಿಗೆ ಶಕ್ಯವಾಗಲಿಲ್ಲ.

ಒಂದು ಹರಿವಾಣ ರಾಗಿಯ ಹಿಟ್ಟನ್ನು ರೊಟ್ಟಿ ಮಾಡುವಷ್ಟು ಹೊತ್ತಿನವರೆಗೆ ಅದು ಹೀಗೇ ಸಾಗಿತು. ಅಷ್ಟೊತ್ತಿಗಾಗಲೇ ಮಿಯ್ ಚಿಯನ್ ಚಿಪ್ ಅಸಹನೆಯಿಂದ ರೊಚ್ಚಿಗೇಳತೊಡಗಿದ್ದ. ಆದರೂ ಗುಂಪುಗೂಡಿದ ಜನ ಇನ್ನೂ ಚದುರಿರಲಿಲ್ಲ. ಹೊಸಬರನೇಕರೂ ಸಾಕಷ್ಟು ಲೋಲುಪ್ತರಾಗಿ ನೋಡುತ್ತ ನಿಂತುಕೊಂಡಿದ್ದರು.

ನಂತರ ಕಪ್ಪು ಮನುಷ್ಯನೊಬ್ಬ ಗುಂಪಿನ ಮಧ್ಯದಿಂದ ನುಸುಳಿಕೊಂಡು ಬಂದ. ಬಿದಿರಿನ ಹಾಗೆ ತೆಳ್ಳಗಿದ್ದ ಅವನ ಕೂದಲು ಹಾಗೂ ಕಣ್ಣುಗಳು ಕೂಡ ಕಪ್ಪಗಿದ್ದವು. ಒಂದೂ ಮಾತನ್ನಾಡದೇ ಅವನು ಮಿಯ್ ಚಿಯನ್ ಚಿಪ್‌ನ ಕಡೆಗೆ ನೋಡಿ ತಿರಸ್ಕಾರದಿಂದ ನಕ್ಕ. ಬಾಡಿದ ಮುಖದ ಯುವಕನ ದವಡೆಯ ಮೇಲೆ ಹೊಡೆಯಲು ಕೈ ಚಾಚಿ, ಅವನ ಕಣ್ಣಲ್ಲಿ ಕಣ್ಣಿಟ್ಟು ದಿಟ್ಟಿಸಿ ನೋಡತೊಡಗಿದ. ಯುವಕ ಕೂಡ ಕಪ್ಪು ಮನುಷ್ಯನ ಕಣ್ಣುಗಳನ್ನೇ ಒಂದು ನಿಮಿಷದವರೆಗೆ ದಿಟ್ಟಿಸಿ ನೋಡಿದ. ನಂತರ ಮೆಲ್ಲಗೆ ಹುಡುಗನ ಕೊರಳ ಪಟ್ಟಿಯನ್ನು ಬಿಟ್ಟು ಅಲ್ಲಿಂದ ಹೊರಟುಹೋದ. ನೆರೆದ ಜನ ನಿರಾಶರಾಗಿ ಚದುರತೊಡಗಿದರು. ಕೆಲವರು ಮಾತ್ರ ಮಿಯ್ ಚಿಯನ್ ಚಿಪ್‌ನ ಬಳಿಗೆ ಬಂದು ಅವನ ವಯಸ್ಸು, ವಿಳಾಸ ಹಾಗು ಅವನಿಗೆ ಮನೆಯಲ್ಲಿ ಅಕ್ಕ ತಂಗಿಯರಿದ್ದಾರೆಯೋ ಮುಂತಾಗಿ ಕೇಳತೊಡಗಿದರು. ಆದರೆ ಮಿಯ್ ಚಿಯನ್ ಚಿಪ್ ಅವರ ಕಡೆಗೆ ಲಕ್ಷ್ಯ ಕೊಡಲೇ ಇಲ್ಲ.

ನಗರದಲ್ಲಿ ಇಷ್ಟೊಂದು ಗದ್ದಲ ಗಡಿಬಿಡಿಗಳಿರುವುದರಿಂದ ತನ್ನ ಅದೃಶ್ಯ ಖಡ್ಗ ಅಕಸ್ಮಾತ್ತಾಗಿ ಯಾರಿಗಾದರೂ ತಾಕಿ ಸುಲಭವಾಗಿ ಗಾಯಗೊಳಿಸಬಹುದೆಂದು ಅವನಿಗೆ ಅನಿಸಿ, ದಕ್ಷಿಣ ದ್ವಾರದ ಹೊರಗಡೆಯೇ ರಾಜನಿಗಾಗಿ ಕಾಯುತ್ತಲಿದ್ದು ಅವನು ಮರಳಿ ಬರುವಾಗ ತನ್ನ ತಂದೆಯ ಸೇಡನ್ನು ತೀರಿಸಿಕೊಳ್ಳುವುದೇ ಒಳ್ಳೆಯದೆಂದು ವಿಚಾರ ಮಾಡಿ, ಅವನು ಆ ಕಡೆಗೆ ನಡೆಯತೊಡಗಿದ. ಅಲ್ಲಿ ಸಾಕಷ್ಟು ವಿಶಾಲವಾದ ಬಯಲು ಇತ್ತಲ್ಲದೇ ಜನಸಂದಣಿಯೂ ಕಡಿಮೆಯಾಗಿತ್ತು. ಅವನು ಮಾಡಬೇಕಾದ ಕಾರ್ಯಕ್ಕೆ ಅದೇ ಸೂಕ್ತ ಸ್ಥಳವಾಗಿತ್ತು. ಅಷ್ಟೊತ್ತಿಗಾಗಲೇ ಎಲ್ಲ ನಾಗರಿಕರೂ ರಾಜನ ಪರ್ವತ ಪ್ರದೇಶದ ವಿಹಾರವನ್ನು ಕುರಿತಂ

ಚರ್ಚಿಸತೊಡಗಿದ್ದರು. ಅವನ ಪರಿವಾರವೈಭವ, ಮಹಾರಾಜರ ದರ್ಶನಾವಕಾಶ ಸಿಕ್ಕ ತಾವು ಅದೆಷ್ಟು ಭಾಗ್ಯಶಾಲಿಗಳು, ತಾವು ಕೆಲವರು ಹೇಗೆ ಸಂಪೂರ್ಣ ನೆಲಕ್ಕೆ ಬಾಗಿ ಮಹಾರಾಜರಿಗೆ ಹೊಡಮಟ್ಟಿದ್ರು. ತಾವು ಹೇಗೆ ಎಲ್ಲರಿಗಿಂತ ಹೆಚ್ಚು ಆದರ್ಶ ಪ್ರಜೆಗಳು, ಎಂಬುದೆಲ್ಲವನ್ನೂ ಹೇಳಿಕೊಳ್ಳುತ್ತ ಅಲ್ಲಿಂದೀಚೆ. ಇಲ್ಲಿಂದಾಚೆ ಜೇನುನೊಣಗಳ ಹಾಗೆ ಅವರು ಸಂಭ್ರಮದಿಂದ ಝೇಂಕರಿಸ ತೊಡಗಿದ್ದರು. ದಕ್ಷಿಣ ದ್ವಾರದ ಬಳಿ ಮಾತ್ರ ಗದ್ದಲ ಒಂದಿಷ್ಟು ಕಡಿಮೆಯಾಗಿ ಶಾಂತವಾಗಿತ್ತು.

ಪಟ್ಟಣದ ಹೊರವಲಯದತ್ತ ನಡೆದು ಆತ ಒಂದು ವಿಶಾಲವಾದ ಮಲ್ಬರಿ ವೃಕ್ಷದ ಬುಡದಲ್ಲಿ ಕುಳಿತುಕೊಂಡು ಎರಡು ಸುರುಳಿ ರೊಟ್ಟಿಗಳನ್ನು ತಿಂದ. ರೊಟ್ಟಿ ತಿನ್ನುತ್ತಿರುವಾಗ ಅವನಿಗೆ ತನ್ನ ತಾಯಿಯ ನೆನಪು ಬಂದು ಗಂಟಲು ಕಟ್ಟಿದಂತಾಯಿತು. ಆದರೆ ಒಂದೆರಡು ನಿಮಿಷಗಳಲ್ಲಿಯೇ ಆತ ಸಮಾಧಾನ ಮಾಡಿಕೊಂಡ. ಸುತ್ತುಮುತ್ತಲಿನ ವಾತಾವರಣವೆಲ್ಲ ಕ್ರಮೇಣ ಶಾಂತವಾಗಿ ಅವನ ಉಸುರಿನ ಸದ್ದು ಅವನಿಗೇ ಕೇಳುವಂತೆ ಮೌನ ಆವರಿಸಿತು.

ಮಬ್ಬು ಮುಸುಕಿದಂತೆಲ್ಲ ಕಳವಳ ಹೆಚ್ಚಾಗಿ ಅವನು ಚಡಪಡಿಸತೊಡಗಿದ. ದಾರಿಯುದ್ದಕ್ಕೂ ಕಣ್ಣು ಹಾಯಿಸಿ ನೋಡತೊಡಗಿದ. ಆದರೆ ರಾಜರ ಆಗಮನದ ಸುಳಿವೇ ಸಿಗಲಿಲ್ಲ. ಪಟ್ಟಣಕ್ಕೆ ಕಾಯಿಪಲ್ಲೆಗಳನ್ನು ಮಾರಲು ಬಂದ ಹಳ್ಳಿಗರು ಒಬ್ಬೊಬ್ಬರಾಗಿ ತಮ್ಮ ಖಾಲಿ ಬುಟ್ಟಿಗಳೊಡನೆ ಮನೆಯ ಹಾದಿ ಹಿಡಿದರು. ಎಲ್ಲ ರೈತರೂ ಹೊರಟುಹೋಗಿ ಎಷ್ಟೋ ಹೊತ್ತಾದ ನಂತರ ಕಪ್ಪು ಮನುಷ್ಯ ನಗರದೊಳಗಿಂದ ವೇಗವಾಗಿ ಧಾವಿಸಿ ಬಂದ.

"ಮಿಯಸ್ ಚಿಯನ್ ಚಿಹ್, ಓಡು! ಅರಸ ನಿನ್ನನ್ನೇ ಹುಡುಕುತ್ತಿದ್ದಾನೆ" ಎಂದು ಅವನು ಹೇಳಿದ. ಗೂಗೆಯ ಕೂಗಿನಂತಿತ್ತು ಅವನ ಧ್ವನಿ.


ಮಿಯಸ್ ಚಿಯನ್ ಚಿಹ್ ಅಡಿಯಿಂದ ಮುಡಿಯವರೆಗೂ ಗಡಗಡನೇ ನಡುಗಿದ. ನಂತರ ಸಮ್ಮೋಹಿನಿಗೊಳಗಾದವನ ಹಾಗೆ ಕಪ್ಪು ಮನುಷ್ಯನನ್ನು ಹಿಂಬಾಲಿಸಿದ. ಸ್ವಲ್ಪ ಹೊತ್ತಿನಲ್ಲಿಯೇ ಅವರು ತಮ್ಮ ವೇಗವನ್ನೆಲ್ಲ ಪಣಕ್ಕೆ ಹಚ್ಚಿ ಓಡತೊಡಗಿದ್ದರು. ದಣಿವು ಆರಿಸಿಕೊಳ್ಳಲು ಸ್ವಲ್ಪ ಸಮಯ ನಿಂತುಕೊಂಡಾಗ ತಾವು ಆಗಲೇ ದೇವದಾರು ವೃಕ್ಷಗಳ ಕಾಡಿನ ಅಂಚನ್ನು ತಲುಪಿಬಿಟ್ಟಿರುವುದು ಅವರಿಗೆ ತಿಳಿಯಿತು. ಹಿಂದೆ ದೂರ ಕ್ಷಿತಿಜದಲ್ಲಿ ಅದೇ ಹುಟ್ಟುತ್ತಿರುವ ಚಂದ್ರನ ಬೆಳ್ಳಿಯ ಕಿರಣಗಳ ಪ್ರಭಾವಳಿ ಮೂಡಿತ್ತು. ಆದರೆ ಮುಂದುಗಡೆ ಮಾತ್ರ ಕತ್ತಲಿನಲ್ಲಿ ಕೊಳ್ಳಿ ದೆವ್ವಗಳ ಹಾಗೆ ಪ್ರಜ್ವಲಿಸುತ್ತಿರುವ ಕಪ್ಪು ಮನುಷ್ಯನ ಕಣ್ಣುಗಳನ್ನು ಬಿಟ್ಟರೆ ಬೇರೇನೂ ಕಾಣಿಸುತ್ತಿರಲಿಲ್ಲ.

"ನನ್ನ ಪರಿಚಯ ನಿಮಗೆ ಹೇಗೆ ಸಿಕ್ಕಿತು?" ಹುಡುಗ ಭಯ ವಿಸ್ಮಯಗಳಿಂದ ಕೂಡಿ ಕೇಳಿದ.



ತಿದ್ದುಪಡಿ

ನಾಳೆ ನಡೆಯಲಿರುವ ದ್ರೌಪದೀ ವಸ್ತ್ರಾಪಹರಣವನ್ನು ಈ ಹಿಂದೆ ಪ್ರಕಟಿಸಿದಂತೆ ಗಾಂಧಿ ಮೈದಾನಿನ ಬದಲು ನೆಹರೂ ಮೈದಾನಿನಲ್ಲಿ ಜರಗಿಸಲಾಗುವುದು. ಸಾರ್ವಜನಿಕರು ದಯವಿಟ್ಟು ಬದಲಾವಣೆಯನ್ನು ಗಮನಿಸಬೇಕು, ಅಲ್ಲದೆ ಈ ಹಿಂದಿನಂತೆಯೇ ಸಹಕರಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.



ಭಾರತೀಯ
ಪರಂಪರೆಯಲ್ಲಿ ನೃತ್ಯವು
ಧಾರ್ಮಿಕ ಆರಾಧನೆಯ ಒಂದು
ವಿಧವಾಗಿದೆ. ದೇವಾಧಿದೇವತೆಗಳ
ಗೌರವಾರ್ಥವಾಗಿ ಮತ್ತು ಶ್ರುತಿರೂಪ
ವಾಗಿ ರೂಪಶ್ರೀಯ ಅಂಗ ಭಾವಗಳ ತುಡಿತ
ಮಿಡಿತಗಳ ಪ್ರದರ್ಶನವಾಗಿದೆ. ಈಶ್ವರನು
ತಾನೇ ನೃತ್ಯ ದೇವನಾಗಿದ್ದ ಮತ್ತು ಈಶ್ವರನ
ನೃತ್ಯವೆಂದರೆ ಜಗತ್ತಿನ ಚಲನೆಯ ಮೂರ್ತ
ಸ್ವರೂಪವೆಂದು ಪರಿಗಣಿಸಲಾಗುತ್ತದೆ.

ಇದೇ ರೀತಿಯಲ್ಲಿ ದಾವಣಗೆರೆ ಕಾಟನ್ ಮಿಲ್ಸ್
ತಮ್ಮ ಪರಂಪರಾಗತ ಕೌಶಲ್ಯವನ್ನು ಹಲವು ವಿಧದ
ಉತ್ಕೃಷ್ಟ ಬಟ್ಟೆಗಳ ರೂಪದಲ್ಲಿ ನಿಮಗೆ
ನೀಡುತ್ತಾರೆ. ಚೆಲುವಾಗಿ ನೇಯ್ದು
ಮತ್ತು ಕೌಶಲ್ಯಪೂರ್ಣವಾಗಿ
ಮಿಶ್ರಮಾಡಿದ ಈ ಬಟ್ಟೆಗಳು
ಪ್ರತಿಯೊಬ್ಬರ ಅಭಿರುಚಿಗೆ
ಅನುರೂಪವಾಗಿವೆ.

ಭಾರತದ ಈಶಾನ್ಯ ಪ್ರದೇಶದಲ್ಲಿ ಜನಜನಿತವಾದ ಮಣಿಪುರಿ
ನೃತ್ಯವು ಸ್ತ್ರೀಸಹಜ ಲಾವಣ್ಯ ಮತ್ತು ಓಜಸ್ವಿ ಸಾಂಪ್ರದಾಯಿಕ
ನೃತ್ಯಗಳ ಸಂಮಿಳನವಾಗಿದೆ. ಕಣ್ಣು ಕೋರೈಸುವ ಕೊಡೆಯಂತಹ
ಲಂಗ ಮತ್ತು ಪಾರದರ್ಶಕ ಶಾಲು ಈ ಸಾಂಪ್ರದಾಯಿಕ
ಮಣಿಪುರ ದೇವಸ್ಥಾನದ ನೃತ್ಯಕ್ಕೆ ರಮ್ಯ ಮನೋಹರ ಶೈಲಿ
ವೈವಿಧ್ಯತೆಯನ್ನು ನೀಡುತ್ತದೆ. ಇದು ತನ್ನ ಪ್ರೀತಿಯ
ಕೃಷ್ಣದೇವನಲ್ಲಿ ರಾಧಾಳಿಗೆ ಇರುವ ಅನುರಕ್ತಿಯ
ಮೂರ್ತಸ್ವರೂಪವಾಗಿದೆ.

ಉತ್ತಮ ಬಟ್ಟೆಗಳ ಉತ್ಕೃಷ್ಟ ಪರಂಪರೆಯಿರುವ

ದಾವಣಗೆರೆ

ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್, ದಾವಣಗೆರೆ 577 002.

ಶೋ ರೂಮ್‌ಗಳು:
ಕಾವೇರಿ ಭವನ, ಬೆಂಗಳೂರು-560 009. ದಾಜಿಬಾನ್‌ಪೇಟೆ, ಹುಬ್ಬಳ್ಳಿ-580 020 ಚಿತ್ರದುರ್ಗ ರೋಡ್, ದಾವಣಗೆರೆ-577 003.

"ಮೊದಲಿನಿಂದಲೂ ನನಗೆ ನಿನ್ನ ಪರಿಚಯವಿದೆ" ಎಂದು ಕಪ್ಪು ಮನುಷ್ಯ ನಗುತ್ತ ಹೇಳಿದ.

"ನಿನ್ನ ತಂದೆಯ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ನೀನು ಬೆನ್ನ ಮೇಲೆ ಒಂದು ನಸುಗಪ್ಪು ಬಣ್ಣದ ಖಡ್ಗವನ್ನು ಧರಿಸಿರುವೆಯೆಂಬುದನ್ನೂ ನಾನು ಬಲ್ಲೆ. ಆದರೆ, ನನಗೆ ಗೊತ್ತಿದೆ, ನೀನು ಸೋಲುತ್ತಿ. ನೀನು ಸೋಲುತ್ತಿ ಅಷ್ಟೇ ಅಲ್ಲ ಇಂದು ಯಾರೋ ಒಬ್ಬರು ಆಗಲೇ ನಿನ್ನ ವಿರುದ್ಧ ರಾಜನಿಗೆ ತಿಳಿಸಿಬಿಟ್ಟಿದ್ದಾರೆ. ನಿನ್ನ ವೈರಿ ಎಷ್ಟೋ ಹೊತ್ತಿನ ಹಿಂದೆಯೇ ಪೂರ್ವ ದ್ವಾರದ ಮುಖಾಂತರ ಅರಮನೆಗೆ ಹಿಂದಿರುಗಿ ಹೋಗಿದ್ದು ಈಗ ನಿನ್ನನ್ನು ಬಂಧಿಸಲು ಅಪ್ಪಣೆ ನೀಡಿದ್ದಾನೆ."

ಮಿಯ್ ಚಿಯನ್ ಚಿಹ್ ತನ್ನ ದೌರ್ಭಾಗ್ಯವನ್ನು ಹಳಿಯತೊಡಗಿದ. "ಅವ್ವ ಅದಕ್ಕೆಂದೇ ನಿಟ್ಟುಸಿರು ಬಿಟ್ಟಳೆಂದು ಕಾಣಿಸುತ್ತದೆ. ಇದರಲ್ಲಿ ಆಶ್ಚರ್ಯವೇ ಇಲ್ಲ."

"ಆದರೆ ನಿನ್ನ ತಾಯಿಗೆ ತಿಳಿದದ್ದು ಅರ್ಧ ಮಾತ್ರ. ನಿನ್ನ ಪರವಾಗಿ ನಾನು ಸೇಡು ತೀರಿಸಿಕೊಳ್ಳಲಿರುವೆನೆಂಬುದು ಅವಳಿಗೆ ಗೊತ್ತಿಲ್ಲ."

"ನೀವು? ಮಾನ್ಯ ಸರದಾರರೇ ನೀವು ನನ್ನ ಪರವಾಗಿ ಸೇಡು ತೀರಿಸಿಕೊಳ್ಳಬಯಸುವಿರಾ?"

"ಛೆ! ಹಾಗೆ ಸಂಬೋಧಿಸಿ ನನ್ನನ್ನು ಅಪಮಾನಗೊಳಿಸಬೇಡ"

"ಸರಿ ಹಾಗಿದ್ದರೆ ವಿಧವೆಯರ ಬಗೆಗೆ, ತಬ್ಬಲಿಗಳ ಬಗೆಗೆ ನಿಮಗೆ ಅನುಕಂಪವುಂಟೆಂದು ನೀವು ಈ ಕಾರ್ಯಕ್ಕಿಳಿಯುವಿರಾ?"

"ಕೊಳಕು ಹತ್ತಿದ ಹೆಸರುಗಳಿಂದ ಕರೆಯಬೇಡ, ಮಗು. ಸರದಾರಿಕೆ, ಅನುಕಂಪ,. ಹಾಗೇ ಎಲ್ಲವೂ ಶುಚಿಯಾಗಿಯೇ ಇದ್ದವು. ಆದರೆ ಇಂದು ಅವೆಲ್ಲ ಹರಾಮಿ ಬಡ್ಡಿ ತಿನ್ನುವ ಸಾಹುಕಾರರ ಸೊತ್ತುಗಳಾಗಿವೆ. ಇಂಥ ಬಿರುದುಗಳಿಂದ ನಾನೇನನ್ನೂ ಗಳಿಸಬೇಕಾಗಿಲ್ಲ. ಕೇವಲ ನಿನ್ನ ಪರವಾಗಿ ಸೇಡು-ತೀರಿಸಿಕೊಳ್ಳುವುದು ಮಾತ್ರ ನನ್ನ ಬಯಕೆ" ಎಂದು ಆತ ತುಂಬ ನಿಷ್ಠುರವಾದ ಸ್ವರದಲ್ಲಿ ಹೇಳಿದ.

"ಒಳ್ಳೆಯದು, ಆದರೆ ಅದನ್ನು ನೀವು ಹೇಗೆ ಸಾಧಿಸುತ್ತೀರಿ?"

"ನನಗೆ ನಿನ್ನಿಂದ ಕೇವಲ ಎರಡು ವಸ್ತುಗಳು ಮಾತ್ರ ಬೇಕು. ಯಾವ ಎರಡು ವಸ್ತುಗಳೆನ್ನುವೆಯಾ ? ಕೇಳು, ಹೇಳುತ್ತೇನೆ: ಒಂದು ನಿನ್ನ ಖಡ್ಗ, ಇನ್ನೊಂದು ನಿನ್ನ ರುಂಡ," ಉರಿಯುತ್ತಿರುವ ಅವನ ಕಣ್ಣುಗಳ ಹಿಂದಿನಿಂದ ತೂರಿ ಬಂದಂತಾಯ್ತು, ಅವನ ಧ್ವನಿ.

ಮಿಯ್ ಚಿಯನ್ ಚಿಹ್‌ನಿಗೆ ಅವನ ಕೋರಿಕೆ ವಿಚಿತ್ರವೆನ್ನಿಸಿ ಮನಸ್ಸಿನಲ್ಲಿಯೇ ಹಿಂಜರಿದನಾದರೂ ಅವನು ಹೆದರಿರಲಿಲ್ಲ. ಆದರೆ ಒಂದು ನಿಮಿಷ ಮಾತಿಲ್ಲದೇ ಮೌನವಾದ.

"ನಿನ್ನ ಪ್ರಾಣಹರಣ ಮಾಡಿ ನಿನ್ನ ಆಪರೂಪದ ವಸ್ತುವನ್ನು ಹಾರಿಸಿಕೊಂಡು ಹೋಗಲು ನಾನು ತಂತ್ರ ಹೂಡಿರುವೆನೆಂದು ಹೆದರಬೇಡ. ನಿನಗೆ ನನ್ನ ಮೇಲೆ ವಿಶ್ವಾಸವುಂಟಾದರೆ ಮಾತ್ರ ನಾನು ಹೋಗಿ ರಾಜನನ್ನು ಕೊಲ್ಲುತ್ತೇನೆ; ಇಲ್ಲವಾದರೆ ಇಲ್ಲ. ಎಲ್ಲವನ್ನೂ ನಿನ್ನ ವಿವೇಚನೆಗೇ ಬಿಟ್ಟಿದ್ದೇನೆ" ಎಂದು ಆತ ಮತ್ತೊಮ್ಮೆ ನಿಷ್ಠುರವಾಗಿ ಹೇಳಿದ.

"ಆದರೆ ನನ್ನ ಪರವಾಗಿ ನೀವೇಕೆ ಸೇಡು ತೀರಿಸಿಕೊಳ್ಳುವಿರಿ? ನಿಮಗೇನಾದರೂ ನನ್ನ ತಂದೆಯ ಪರಿಚಯವಿತ್ತೆ?"


"ನನಗೆ ನಿನ್ನ ಪರಿಚಯ ಮೊದಲಿನಿಂದಲೂ ಹೇಗೆ ಉಂಟೋ ಅದೇ ರೀತಿಯಲ್ಲಿ ನಿನ್ನ ತಂದೆಯ ಪರಿಚಯ ಕೂಡ ಮೊದಲಿನಿಂದಲೂ ನನಗಿತ್ತು. ಆದರೆ ನಾನು ಸೇಡು ತೀರಿಸಿಕೊಳ್ಳಬಯಸುತ್ತಿರುವುದು ಆ ಕಾರಣಕ್ಕಾಗಿ ಅಲ್ಲ. ಸೇಡು ತೀರಿಸಿಕೊಳ್ಳುವುದರಲ್ಲಿ ನಾನದೆಷ್ಟು ನಿಪುಣನೆಂಬುದು ನಿನಗೆ ಅರ್ಥವಾಗುವುದಿಲ್ಲ ಮಗು; ನಿನ್ನ ಸೇಡು ನನ್ನ ಸೇಡೂ ಹೌದು. ಬೇರೆಯವರಿಗೆ ಏನೇ ಸಂಭವಿಸಿದರೂ ಅದು ನನಗೂ ಸಂಬಂಧಿಸಿರುತ್ತದೆ. ನನ್ನ ಹೃದಯ ನನ್ನ ಹಾಗೂ ಬೇರೆಯವರಿಂದ ಉಂಟಾದ ಅದೆಷ್ಟು ಗಾಯಗಳಿಂದ ಘಾಸಿಗೊಂಡಿದೆಯೆಂದರೆ ನಾನಾಗಲೇ ನನ್ನ ಪ್ರಾಣವನ್ನು ತುಚ್ಛವಾಗಿ ಕಾಣತೊಡಗಿದ್ದೇನೆ."

ಕತ್ತಲಿನ ಗರ್ಭದಲ್ಲಿ ಅವನ ಮಾತು ಮುಗಿಯುತ್ತಿದ್ದಂತೆಯೇ ಮಿಯ್ ಚಿಯನ್ ಚಿಹ್ ತನ್ನ ಬೆನ್ನ ಹಿಂದೆ ಕೈಚಾಚಿ ಕಪ್ಪು ಬ[illegible]



"...ಒರಟಾದ, ಗಟ್ಟಿ ಕಣಗಳಿರುವ
ಟೂಥ್‌ಪೌಡರ್‌ಗಳು ನಿಮ್ಮ
ಒಸಡು ಮತ್ತು ಹಲ್ಲುಗಳಿಗೆ
ಹಾನಿಯನ್ನುಂಟುಮಾಡಬಹುದು..."

ಕೋಲ್ಗೇಟ್ ಟೂಥ್ ಪೌಡರ್ ಬಳಸಿ ನಿಮ್ಮ ಹಲ್ಲುಗಳನ್ನೂ ಒಸಡುಗಳನ್ನೂ ರಕ್ಷಿಸಿರಿ– ಮತ್ತು ಉಸಿರಿನ ದುರ್ವಾಸನೆಯನ್ನೂ ನಿವಾರಿಸಿರಿ!





ಕೋಲ್ಗೇಟ್ ಟೂಥ್‌ಪೌಡರ್ ಅತಿ ಸೂಕ್ಷ್ಮ ಹಾಗೂ ನಯವಾಗಿದೆ. ಅದು ನಿಮ್ಮ ಒಸಡುಗಳನ್ನು ಮೃದುವಾಗಿ ಉಜ್ಜುತ್ತಿರುವಾಗಲೇ [illegible] ಮಾಡುವ ಸೌಮ್ಯ ಸತ್ವ ನಿಮ್ಮ ಹಲ್ಲುಗಳ ಮೇಲಿನ ಕೊಳೆಯ ಪದರವನ್ನು ತೆಗೆದು ಅವುಗಳನ್ನು ಅಧಿಕ ಸ್ವಚ್ಛ ಹಾಗೂ ಬಿಳಿ ಮಾಡುತ್ತದೆ. ಕೋಲ್ಗೇಟ್‌ನ ಫೇನಿಲ ನೊರೆ ನಿಮ್ಮ ಹಲ್ಲುಗಳ ಎಡೆಗಳನ್ನು ಪ್ರವೇಶಿಸಿ, ದುರ್ಗಂಧವನ್ನೂ ದಂತಕ್ಷಯವನ್ನೂ ಉಂಟುಮಾಡುವ ಕೀಟಾಣುಗಳನ್ನು ನಿವಾರಿಸುತ್ತದೆ. ಮತ್ತು ಶ್ವಾಸದ ದುರ್ಗಂಧವನ್ನು ದೂರಗೊಳಿಸುತ್ತದೆ.

ನಿಮ್ಮ ಕುಟುಂಬದವರಿಗೆ ಕೋಲ್ಗೇಟ್ ಟೂಥ್‌ಪೌಡರ್‌ನ ಮೂಲಕ ಆಧುನಿಕ ದಂತರಕ್ಷಣೆಯನ್ನು ನೀಡಿರಿ. ಅವರಿಗೆ ಅದರ ಶೀತಲವಾದ ಹಾಗೂ ಪೆಪ್ಪರ್‌ಮಿಂಟ್‌ನಂತಹ ಪರಿಮಳ ಇಷ್ಟವಾಗುವುದು.

TP.G.30 KN

ಖಡ್ಗವನ್ನು ಹಿಡಿದುಕೊಂಡವನು, ಹಾಗೆಯೇ ತನ್ನ ಕುತ್ತಿಗೆಯ ಹಿಂಭಾಗದಿಂದ ರಭಸದಿಂದ ಅದನ್ನು ಮುಂದಕ್ಕೆ ಬೀಸಿದ. ಕತ್ತು ಕತ್ತರಿಸಿ ಅವನ ರುಂಡ ಇವನ ಕಾಲ ಬುಡದಲ್ಲಿ ಬೀಳು ತ್ತಿರುವಂತೆಯೇ ಅವನು ತನ್ನ ಖಡ್ಗವನ್ನೂ ಕಪ್ಪು ಮನುಷ್ಯನ ಕೈಗೊಪ್ಪಿಸಿದ.

"ಹಾ!" ಎನ್ನುತ್ತ ಒಂದು ಕೈಯಿಂದ ಖಡ್ಗ ವನ್ನು ತೆಗೆದುಕೊಂಡ ಅವನು ಮತ್ತೊಂದು ಕೈಯಿಂದ ಮಿಯ್ ಚಿಯನ್ ಚಿಪ್‌ನ ತಲೆ ಗೂದಲನ್ನು ಹಿಡಿದು ಅವನ ರುಂಡವನ್ನು ಮೇಲೆತ್ತಿ ಕೊಂಡ. ಇನ್ನೂ ಬೆಚ್ಚಗಿದ್ದ ಅವನ ಮೃತ ತುಟಿಗಳಿಗೆ ಎರಡು ಸಲ ಮುತ್ತಿಟ್ಟು ಜೋರಾಗಿ ಗಹಗಹಿಸಿ ನಗತೊಡಗಿದ.

ಅವನ ನಗೆ ದೇವದಾರು ಮರಗಳ ಕಾಡಿ ನುದ್ದಗಲದಲ್ಲೆಲ್ಲ ವ್ಯಾಪಿಸಿ ಮೊರೆಯಿತು. ಮರು ಕ್ಷಣದಲ್ಲಿಯೇ ಅಡವಿಯ ಗರ್ಭದಲ್ಲಿ ಮಿಂಚಿನ ಕುಡಿಗಳಂತೆ. ಹೊಳೆ ಹೊಳೆಯುವ ಕಣ್ಣುಗಳು ಕಾಣಿಸತೊಡಗಿದವು. ಒಂದು ನಿಮಿಷದಲ್ಲಿಯೇ ಅವು ಅದೆಷ್ಟು ಸಮೀಪ ಬಂದವೆಂದರೆ, ಹಸಿದ ತೋಳಗಳ ಸೊರಗುಟ್ಟುವಿಕೆಯ ಸದ್ದು ಕೇಳಿ ಬರತೊಡಗಿತು. ಒಂದು ಸಲ ಕಚ್ಚಿ ಅವು ಮಿಯ್ ಚಿಯನ್ ಚಿಪ್‌ನ ಮೈ ಮೇಲಿನ ಬಟ್ಟೆಗಳನ್ನೆಲ್ಲ ಕಿತ್ತು ಹರಿದು ಹಾಕಿದವು. ಮತ್ತೊಂದು ಸಲ ಕಚ್ಚಿ ಅವನ ಇಡಿ ದೇಹ ವನ್ನು ತಿಂದುಬಿಟ್ಟವು. ಸಂಗಡವೇ ಪಾಚಿಯ ಮೇಲೆ ಸುರಿದ ನೆತ್ತರವನ್ನು ಒಂದು ನಿಮಿಷ ದಲ್ಲಿಯೇ ನೆಕ್ಕಿ ಸ್ವಚ್ಛಗೊಳಿಸಿದವು. ಎಲುವು ಗಳನ್ನು ತುಂಡರಿಸಿ ಕಟಕಟನೆ ಕಡಿದು ನುರಿಸುವ ಸದ್ದು ಮಾತ್ರ ಕೇಳಿಬರತೊಡಗಿತು.

ಹಿಂಡಿನ ಮುಂದುಗಡೆಯಲ್ಲಿದ್ದ ದೊಡ್ಡ ತೋಳ ಕಪ್ಪು ಮನುಷ್ಯನ ಕಡೆಗೆ ನುಗ್ಗಿತು. ನಸುಗಪ್ಪು ಬಣ್ಣದ ಖಡ್ಗದ ಒಂದೇ ಒಂದು ಬೀಸಿಗೆ ಅದರ ರುಂಡ ಕತ್ತರಿಸಿ ಅವನ ಕಾಲ ಬುಡದಲ್ಲಿ ಪಾಚಿಯ ಮೇಲೆ ಬಿದ್ದಿತು. ಉಳಿದ ತೋಳಗಳು ಒಂದು ಸಲ ಕಚ್ಚಿ ಅದರ ಚರ್ಮ ವನ್ನು ಕಿತ್ತು ಹರಿದು ಹಾಕಿದವು. ಮತ್ತೊಂದು ಸಲ ಕಚ್ಚಿ ಅದರ ಇಡಿ ದೇಹವನ್ನೇ ತಿಂದು ಬಿಟ್ಟವು. ಸಂಗಡವೇ ಪಾಚಿಯ ಮೇಲೆ ಸುರಿದ ನೆತ್ತರವನ್ನು ಒಂದು ನಿಮಿಷದಲ್ಲಿಯೇ ನೆಕ್ಕಿ ಸ್ವಚ್ಛಗೊಳಿಸಿದವು. ಎಲುವುಗಳನ್ನು ಕಟಕಟನೆ ಕಡಿದು ನುರಿಸುವ ಸದ್ದು ಮಾತ್ರ ಕೇಳಿಬರ ತೊಡಗಿತು.

ನೆಲದ ಮೇಲೆ ಬಿದ್ದ ನಸುಗಪ್ಪು ಬಣ್ಣದ ಕೋಟನ್ನು ಅವನು ಮಿಯ್ ಚಿಯನ್ ಚಿಪ್‌ನ ರುಂಡವನ್ನು ಕಟ್ಟಿಕೊಳ್ಳಲು ಮೇಲೆತ್ತಿಕೊಂಡ. ಖಡ್ಗವನ್ನು ಹಾಗೂ ರುಂಡ ಕಟ್ಟಿದ ಗಂಟನ್ನು ತನ್ನ ಬೆನ್ನ ಮೇಲೆ ಇಳಿಬೀಳುವ ಹಾಗೆ ಬಿಗಿದು ಕಟ್ಟಿಕೊಂಡ.

ನಂತರ ಸರಕ್ಕನೇ ಹೊರಳಿ ಕತ್ತಲಿನ ಗರ್ಭ ವನ್ನು ಸೀಳಿಕೊಂಡು ರಾಜಧಾನಿಯತ್ತ ವೇಗ ವಾಗಿ ನಡೆಯತೊಡಗಿದ.

ತೋಳಗಳೆಲ್ಲ ಜೋಲು ನಾಲಿಗೆಗಳನ್ನು ಚಾಚಿ ಕೊಂಡು, ಏದುಸಿರು ಬಿಡುತ್ತ ಮುಂದಕ್ಕೆ ಬಾಗಿ, ಹಚ್ಚನೆಯ ಕಣ್ಣುಗಳನ್ನು ಬಿಟ್ಟುಕೊಂಡು, ಅವನು ಹೋಗುವುದನ್ನೇ ದಿಟ್ಟಿಸಿ ನೋಡುತ್ತ, ಕಟೆದ ಗೊಂಬೆಗಳ ಹಾಗೆ ನಿಶ್ಚಲವಾಗಿ ನಿಂತು ಬಿಟ್ಟವು.

ಎತ್ತರಿಸಿದ ಸ್ವರದಲ್ಲಿ ಹಾಡುತ್ತ ಅವನು ಕತ್ತಲಿನಲ್ಲಿ ರಾಜಧಾನಿಯತ್ತ ವೇಗವಾಗಿ ನಡೆಯ ತೊಡಗಿದ.

"ಖಡ್ಗವನ್ನು ಪ್ರೀತಿಸಿದವನೊಬ್ಬನೇ ಒಬ್ಬನು
ಅವನು ಸಾವನ್ನೇ ವರವೆಂದು ಸ್ವೀಕರಿಸಿಬಿಟ್ಟನು.
ಖಡ್ಗವನ್ನು ಪ್ರೀತಿಸುವವರು ಈಗ ಹಲವರು.
ಒಂಟಿಯಾಗಿ ಹೋಗುವ ಜನರೂ ಅಸಂಖ್ಯರು!
ರುಂಡಕೊಂದು ರುಂಡ! ಓಹ್! ಶತ್ರುವಿ-
ಗೊಬ್ಬ ಶತ್ರು!
ತಮ್ಮನ್ನೇ ತಾವು ಇಬ್ಬರೂ ಕೈಯಾರೆ ಕೊಂದು
ಕೊಂಡರು !

೩

ಪರ್ವತ ಪ್ರದೇಶಗಳ ವಿಹಾರದಿಂದ ರಾಜನಿಗೆ ಯಾವ ಸಂತೋಷವೂ ಲಭಿಸಲಿಲ್ಲ. ಕೊಲೆಗಾರ ನೊಬ್ಬ ತನಗಾಗಿ [illegible] ವರದಿ ಅವನನ್ನು ಮತ್ತಷ್ಟು ಖಿನ್ನನಾಗಿ ಹಿಂತಿರು

ಗುವಂತೆ ಮಾಡಿತ್ತು. ಅಂದು ರಾತ್ರಿ ಆತ ತುಂಬ ವ್ಯಗ್ರನಾಗಿದ್ದ. ತನ್ನ ಒಂಭತ್ತನೆಯ ಉಪಪತ್ನಿಯ ಕೇಶರಾಶಿ ಕೂಡ ಹಿಂದಿನ ರಾತ್ರಿಯಷ್ಟು ಚಪ್ಪಗೆ ಹೊಳೆಯುತ್ತಿಲ್ಲವೆಂದು ಜರಿಯತೊಡಗಿದ. ಸುದೈವದಿಂದ ಅವಳು ವೈಯಾರವಾಗಿ ಅವನ ರಾಜತೊಡೆಗಳ ಮೇಲೆ ಹಕ್ಕಿಯ ಹಾಗೆ ಕುಳಿತುಕೊಂಡು ಕುಲುಕುತ್ತ ಬಳುಕುತ್ತ ಕನಿಷ್ಠ ಎಪ್ಪತ್ತು ಸಲ ಹಿಗ್ಗಾ ಮುಗ್ಗಿ ನುಲಿದಾಡಿದ ನಂತರ ಅವನ ರಾಜಹುಬ್ಬುಗಳ ಬಿಗಿ ಸಡಿಲಿ, ಮುಖದಲ್ಲಿ ಸಾವಕಾಶವಾಗಿ ಪ್ರಸನ್ನತೆ ಅರಳಿತು.

ಮರುದಿವಸ ಮಧ್ಯಾಹ್ನ ನಿದ್ದೆಯಿಂದ ಎಚ್ಚೆತ್ತಾಗ ಅವನ ಮನಸ್ಸು ಮತ್ತೆ ಸರಿ ಇರಲಿಲ್ಲ. ಊಟ ಮಾಡಿ ಮುಗಿಸುವ ಹೊತ್ತಿಗೆ ಅವನು ಉಗ್ರ ರೂಪ ತಾಳಿದ್ದ.

"ನನಗೆ ಬೇಸರವಾಗಿದೆ!" ಎಂದು ಜೋರಾಗಿ ಆಕಳಿಸುತ್ತ ಅವನು ಕೂಗಿದ. ಇದರಿಂದ ರಾಣಿಯಿಂದ ಹಿಡಿದು ವಿದೂಷಕನವರೆಗೆ ಎಲ್ಲರೂ ಭಯದಿಂದ ತಲ್ಲಣಿಸಿದರು. ಬಹಳ ದಿವಸಗಳಿಂದ ತನ್ನ ಮುದಿ ಮಂತ್ರಿಗಳ ಹಿತವಚನಗಳಿಂದ ಹಾಗೂ ಗುಡಾಣಿಯಂತಿರುವ ತನ್ನ ಟೊಣಪ ಕುಳ್ಳರ ಹೆಡ್ಡ ನಕಲಿತನಗಳಿಂದ ರಾಜನಿಗೆ ಬೇಸರ ಬಂದು, ಜಿಗುಪ್ಸೆ ಮೂಡಿತ್ತು. ಇತ್ತಿತ್ತಲಾಗಿ ಹಗ್ಗದ ಮೇಲೆ ನಡೆಯುವ, ಗಣೆ ಏರುವ, ಅಂತರ್‌ಲಾಗ ಹೊಡೆಯುವ, ಖಡ್ಗ ನುಂಗುವ, ಬೆಂಕಿಯುಗುಳುವ, ಜಾದೂಗಾರಿಕೆಯೇ ಮುಂತಾದ ರೋಮಾಂಚಕ ಕ್ರೀಡೆಗಳೇ ಅವನಿಗೆ ಸಾಕಷ್ಟು ಸ್ಫೂರ್ತಿದಾಯಕವೆನಿಸಿದ್ದವು. ಆಗಾಗ ಅವನಿಗೆ ರೋಷವುಕ್ಕಿ ಬರುತ್ತಿತ್ತು. ಅಂಥ ಸಂದರ್ಭಗಳಲ್ಲಿ ತನ್ನ ಖಡ್ಗವನ್ನು ಹಿರಿದು ಕ್ಷುಲ್ಲಕ ತಪ್ಪುಗಳನ್ನು ಹುಡುಕಿ ತೆಗೆದು ಹಲವು ಹತ್ತು ಜನರನ್ನು ಕೊಂದುಬಿಡುತ್ತಿದ್ದ.

ಕೆಲಸ ತಪ್ಪಿಸಿ ಅಲೆದಾಡಲು ಅರಮನೆಯಿಂದ ನುಸುಳಿಕೊಂಡು ಹೊರಗೆ ಹೋಗಿದ್ದ ಇಬ್ಬರು ಖೊಜ್ಜಾಗಳು ಅದೇ ತಾನೇ ತಿರುಗಿ ಬಂದಿದ್ದರು. ಆಸ್ಥಾನದಲ್ಲಿ ಕವಿದಿದ್ದ ವಿಷಣ್ಣ ವಾತಾವರಣವನ್ನು ಕಂಡು ಏನೋ ದೊಡ್ಡ ಅನಾಹುತವೊಂದು ಮತ್ತೆ ಎರಗಲಿದೆಯೆಂಬ ಅರಿವಾಗಿ ಅವರಲ್ಲೊಬ್ಬ ಭಯದಿಂದ ಬಿಳಿಚಿಕೊಂಡುಬಿಟ್ಟ. ಆದರೆ ಇನ್ನೊಬ್ಬ ಮಾತ್ರ ತುಂಬ ಆತ್ಮವಿಶ್ವಾಸದಿಂದಿರುವಂತೆ ಕಂಡ. ಆತ ಸಾವಕಾಶವಾಗಿ ರಾಜನ ಬಳಿಗೆ ನಡೆದು ಪೊಡಮಟ್ಟು ಹೇಳಿದ:

"ತಮ್ಮ ಈ ಗುಲಾಮನಿಗೆ ಇದೀಗ ಸಾರ್ವಭೌಮರ ಮನ ತಣಿಸುವಂಥ ಅಪರೂಪದ ವಿದ್ಯೆಯನ್ನು ಬಲ್ಲ ಅಸಾಧಾರಣ ವ್ಯಕ್ತಿಯೊಬ್ಬ ಭೆಟ್ಟಿಯಾಗಿದ್ದ. ಸಾರ್ವಭೌಮರ ಸನ್ನಿಧಾನದಲ್ಲಿ ಅದನ್ನು ಅರಿಕೆ ಮಾಡಿಕೊಳ್ಳಲೆಂದೇ ಬಂದಿದ್ದೇನೆ."

"ಏನು?" ರಾಜ ಎಂದೂ ವ್ಯರ್ಥ ಹೆಚ್ಚು ಮಾತಾಡಿನವನಲ್ಲ.

"ಅವನೊಬ್ಬ ತೆಳ್ಳಗಿನ ಕಪ್ಪು ಬಣ್ಣದ ವ್ಯಕ್ತಿ. ನೋಡಲು ಭಿಕ್ಷುಕನಂತಿದ್ದಾನೆ. ನಸುಗಪ್ಪು ಬಣ್ಣದ ಕೋಟು ತೊಟ್ಟುಕೊಂಡ ಅವನ ಬೆನ್ನ ಮೇಲೆ ಒಂದು ನಸುಗಪ್ಪು ಬಣ್ಣದ ಕೋಟು ಉಂಟು. ಯಾವಾಗಲೂ ಅಸಂಬದ್ಧವಾದ ವಿಚಿತ್ರ ಪದ್ಯವೊಂದನ್ನು ಅರೆಅರೆಯಾಗಿ ಹಾಡುತ್ತಿದ್ದಾನೆ. ಏನು ಮಾಡಬಲ್ಲೆ ಎಂದು ಕೇಳಿದರೆ ತಾನು ಇಡಿ ಜಗತ್ತಿನಲ್ಲಿಯೇ ಸರಿಸಾಟಿ ಇರಲಾರದಂಥ, ಇದುವರೆಗೆ ಯಾರೂ ಕಂಡು ಕೇಳರಿಯದಂಥ ಒಂದು ಅದ್ಭುತವಾದ ತಂತ್ರವನ್ನು ಪ್ರದರ್ಶಿಸಬಲ್ಲೆನೆಂದು ಹೇಳುತ್ತಾನೆ. ಅದಕ್ಕೆ ಸಮನಾದ ತಂತ್ರವನ್ನು ಈ ಹಿಂದೆ ಸಹಿತ ಯಾರೂ ನೋಡಿಲ್ಲವಂತೆ. ಅದನ್ನು ನೋಡಿದಾಗ ಎಲ್ಲರ ಚಿಂತೆ ದುಗುಡಗಳೂ ಮಾಯವಾಗಿ, ಜಗತ್ತಿಗೆ ಶಾಂತಿ ಲಭಿಸುತ್ತದಂತೆ. ಆದರೆ ಜನರು ಅದನ್ನು ಮಾಡಿ ತೋರಿಸಲು ಕೇಳಿದಾಗ ಮಾತ್ರ ಆತ ನಿರಾಕರಿಸುತ್ತಾನೆ. ಮೊದಲನೆಯದಾಗಿ ಅದಕ್ಕೆ ಅವಶ್ಯವಾಗಿ ಒಬ್ಬ ಸ್ವರ್ಣನಿಧಿಪಾಲ ಬೇಕೆಂದೂ, ಎರಡನೆಯದಾಗಿ ಒಂದು ಬಂಗಾರದ ಕಡಾಯಿ ಕೂಡ ಅವಶ್ಯವೆಂದೂ ಅವನು ಹೇಳುತ್ತಾನೆ."

"ಸ್ವರ್ಣನಿಧಿಪಾಲ ? ನಾನೇ. ಬಂಗಾರದ ಕಡಾಯಿಯೆ? ನನ್ನ ಬಳಿ ಒಂದು ಇದೆ."

"ನಾನೂ ಅದನ್ನೇ ವಿಚಾರ ಮಾಡುತ್ತಲಿದ್ದೆ.."

"ಅವನನ್ನು ಒಳಗೆ ಕರೆದು ತನ್ನಿರಿ!"

ರಾಜನ ಮಾತು ಮುಗಿಯುವುದಕ್ಕಿಂತ ಮುಂಚೆಯೇ ನಾಲ್ಕು ಜನ ಭಟರು ಖೊಜ್ಜಾನ

ಜೊತೆಗೆ ಆತುರವಾಗಿ ಹೊರ ಹೊರಟರು. ರಾಣಿಯಿಂದ ಹಿಡಿದು ವಿದೂಷಕರವರೆಗೆ ಎಲ್ಲರ ಮುಖಗಳೂ ಆನಂದದಿಂದ ಅರಳಿದವು. ಈ ಜಾದೂಗಾರ ಎಲ್ಲ ದುಗುಡ ಚಿಂತೆಗಳನ್ನು ಮಾಯವಾಗಿಸಿ ಜಗತ್ತಿಗೇ ಶಾಂತಿ ತರಬಹುದೆಂದು ಅವರೆಲ್ಲ ಆಶಿಸಿದರು. ಒಂದು ವೇಳೆ ಜಾದು ಆಟ ವಿಫಲವಾದರೂ ಸಹಿತ ಅವರ ಅಸಂತೋಷದ ಕಹಿ ಫಲವನ್ನು ಅನುಭವಿಸಲು ಹೇಗೂ ಭಿಕ್ಷುಕನಂತೆ ಕಾಣುವ ಆ ತೆಳ್ಳಗಿನ ಕಪ್ಪು ಬಣ್ಣದ ವ್ಯಕ್ತಿ ಇದ್ದೇ ಇರುತ್ತಾನೆ ಎಂಬ ಧೈರ್ಯ ಅವರಿಗೆ. ಅವನನ್ನು ಒಳಗೆ ಕರೆದುಕೊಂಡು ಬರುವವರೆಗೆ ಸಧ್ಯ ತಮ್ಮ ಪ್ರಾಣಗಳು ಉಳಿದರೆ ಸಾಕು, ಎಲ್ಲವೂ ಸುಗಮವಾದೀತೆಂದು ಅವರೆಲ್ಲ ಹಾರೈಸಿದರು.

ಸ್ವಲ್ಪ ಹೊತ್ತಿನಲ್ಲಿಯೇ ಆರು ಜನರು ಸಿಂಹಾಸನದತ್ತ ಸಾಗಿ ಬರುತ್ತಿರುವುದು ಕಂಡಿತು. ಖೋಜ್ಜಾ ಉಳಿದೆಲ್ಲರಿಗಿಂತಲೂ ಮುಂದೆ ಬರುತ್ತಿದ್ದ. ಎಲ್ಲಕ್ಕಿಂತ ಹಿಂದೆ ನಾಲ್ವರು ಭಟರಿದ್ದರು. ಮಧ್ಯದಲ್ಲಿದ್ದವನೊಬ್ಬ ಕಪ್ಪು ಬಣ್ಣದ ವ್ಯಕ್ತಿ. ಅವರು ಸಮೀಪ ಬರುತ್ತಿದ್ದಂತೆ ಆ ವ್ಯಕ್ತಿ ನಸುಗಪ್ಪು ಬಣ್ಣದ ಕೋಟು ತೊಟ್ಟುಕೊಂಡಿದ್ದು ಸ್ಪಷ್ಟವಾಗಿ ಕಂಡಿತು. ಅವನ ಗಡ್ಡ, ಹುಬ್ಬು, ಹಾಗೂ ತಲೆಗೂದಲುಗಳು ಕೂಡ ಕರ್ರಗಿದ್ದವು. ಅವನು ಅದೆಷ್ಟು ತೆಳ್ಳಗಿದ್ದನೆಂದರೆ ಅವನ ಗಲ್ಲದ ಎಲುಬುಗಳು ಹೊರಗೆದ್ದು ಕಾಣಿಸುತ್ತಿದ್ದವಲ್ಲದೇ ಅವನ ಕಣ್ಣುಗಳು ಕಣ್ಣುಗುಳಿಯಲ್ಲಿ ಆಳವಾಗಿ ಹುಗಿದುಕೊಂಡಿದ್ದವು. ಮಹಾರಾಜರಿಗೆ ಗೌರವಸೂಚಕವಾಗಿ, ಮೊಣಕಾಲೂರಿ, ಪೊಡಮಡಲು ಬಾಗಿದಾಗ ಅವನ ಬೆನ್ನ ಮೇಲೆ ಒಂದು ದಪ್ಪಗಿರುವ ಮಿಶ್ರಣದ ನಸುಗಪ್ಪು ಬಣ್ಣದ ಗಂಟು ಇರುವುದು ಕಾಣಿಸಿತು. "ಇಷ್ಟೇ!" ರಾಜ ಅಸಹನೆಯಿಂದ ಗರ್ಜಿಸಿದ. ಈ ಮನುಷ್ಯನ ಸಾಧನ ಸಾಮಗ್ರಿಗಳೆಲ್ಲ ತೀರ ಸಾಧಾರಣವಾಗಿ ಕಂಡದ್ದರಿಂದ ಇವನು ಒಳ್ಳೆಯ ತಂತ್ರಗಳನ್ನೇನಾದರೂ ಪ್ರದರ್ಶಿಸಬಲ್ಲನೇ ಎಂಬ ಸಂಶಯ ಅರಸನಿಗೆ.

"ನಿಮ್ಮ ಈ ಪ್ರಜೆಯ ಹೆಸರು ಯೆಸ್–



"ತಪ್ಪು ತಿಳಕೋಬ್ಯಾಡಿ ರಾಯ್ರೇ. ಇವರನ್ನು ವಿಧಾನ ಸಭೆಯಿಂದ ಹೊತ್ತು ಹೊರತರುತ್ತಿದ್ದೇವೆ."


Nestle
NESCAFE
instant
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ.
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟಂಟ್ ಕಾಫಿ

ಚಿಹ್–ಅಫೋಚಿ, ಹುಟ್ಟಿದ್ದು ಯೆನ್–ಯೆನ್ ಹಳ್ಳಿಯಲ್ಲಿ. ಸಣ್ಣವನಿದ್ದಾಗ ನನಗೆ ಯಾವ ಉದ್ಯೋಗಕ್ಕೂ ತರಬೇತಿ ದೊರೆಯಲಿಲ್ಲ. ಆದರೆ ಬೆಳೆದು ದೊಡ್ಡವನಾದ ನಂತರ ನನಗೆ ಒಬ್ಬ ಋಷಿಯ ಪರಿಚಯವಾಯಿತು. ಅವನು ನನಗೆ ಹುಡುಗನ ರುಂಡವನ್ನೊಂದರಿಂದ ಜಾದು ಮಾಡುವ ವಿದ್ಯೆ ಕಲಿಸಿದ. ಆದರೆ ನಾನೊಬ್ಬನೇ ಅದನ್ನು ಪ್ರದರ್ಶಿಸುವ ಹಾಗಿಲ್ಲ. ಸ್ವರ್ಣ ನಿಧಿಪಾಲನೊಬ್ಬನ ಸಮ್ಮುಖದಲ್ಲಿ ಮಾತ್ರ ಅದನ್ನು ಪ್ರದರ್ಶಿಸಬೇಕು. ಒಂದು ಬಂಗಾರದ ಕಡಾಯಿಯೂ ಅವಶ್ಯವಾಗಿ ಬೇಕು. ಅದರಲ್ಲಿ ನಿರ್ಮಲವಾದ ಜಲವನ್ನು ತುಂಬಿಸಿ, ಕಲ್ಲಿದ್ದಲನ್ನು ಹೊತ್ತಿಸಿ ಕಾಯಿಸಬೇಕು, ಆಗ ಹುಡುಗನ ರುಂಡವನ್ನು ಅದರಲ್ಲಿರಿಸಿದರೆ, ನೀರು ಕುದಿಯತೊಡಗುತ್ತಲೇ ಅದು ಕುಪ್ಪಳಿಸುತ್ತಾ ಮುಳುಗಿ ಹಾಕಿ ಮೇಲೇಳುತ್ತ ಎಲ್ಲ ವಿಧದ ಭಂಗಿಯಲ್ಲಿಯೂ ನರ್ತಿಸತೊಡಗುತ್ತದೆ. ಅದು ಅದ್ಭುತವಾದ ಸ್ವರಗಳನ್ನು ಹೊರಡಿಸುತ್ತದೆ, ನಗುತ್ತದೆ, ಹಾಡುತ್ತದೆ. ಯಾರು ಅದರ ಹಾಡು ಕೇಳಿ ಅದರ ನರ್ತನವನ್ನು ವೀಕ್ಷಿಸುವರೋ ಅವರೆಲ್ಲ ತಮ್ಮ ಚಿಂತೆ ದುಗುಡಗಳನ್ನು ನೀಗಿಸುವ ದಾರಿ ಕಂಡುಕೊಳ್ಳುತ್ತಾರೆ. ಎಲ್ಲ ಜನರೂ ಅದನ್ನು ವೀಕ್ಷಿಸುವಂತಾದರೆ ಆಗ ಇಡಿ ಜಗತ್ತಿಗೇ ಶಾಂತಿ ದೊರೆಯುತ್ತದೆ."

"ಆರಂಭಿಸು!" ರಾಜ ಎತ್ತರದ ಧ್ವನಿಯಲ್ಲಿ ಆಜ್ಞಾಪಿಸಿದ.

ಸ್ವಲ್ಪ ಸಮಯದಲ್ಲಿಯೇ ಒಂದು ದೊಡ್ಡ ಎತ್ತನ್ನು ಬೇಯಿಸಬಹುದಾದಷ್ಟು ದೊಡ್ಡದಾದ ಒಂದು ಭವ್ಯವಾದ ಬಂಗಾರದ ಕಡಾಯಿಯನ್ನು ತಂದು ಸಿಂಹಾಸನದ ಎದುರಿಗೆ ಸ್ಥಾಪಿಸಲಾಯಿತು. ಅದರ ತುಂಬ ನೀರು ತುಂಬಿ ಬುಡದಲ್ಲಿ ಕಲ್ಲಿದ್ದಲನ್ನು ಹೊತ್ತಿಸಲಾಯಿತು. ಕಡಾಯಿಯ ಪಕ್ಕದಲ್ಲಿ ನಿಂತಿದ್ದ ಕಪ್ಪು ಬಣ್ಣದ ವ್ಯಕ್ತಿ ಕಲ್ಲಿದ್ದಲು ಪೂರ್ತಿ ಹೊತ್ತಿ ಕೆಂಪಗಾದ ಮೇಲೆ ತನ್ನ ಗಂಟನ್ನು ಕೆಳಗಿಳಿಸಿ ಅದನ್ನು ಬಿಚ್ಚಿದ. ನಂತರ ಹುಡುಗನ ರುಂಡವನ್ನು ಎರಡೂ ಕೈಗಳಿಂದ ಮೇಲಕ್ಕೆತ್ತರಿಸಿ ಹಿಡಿದ. ತಿದ್ದಿ ತೀಡಿದ ಅದರ ಹುಬ್ಬುಗಳು, ತೇಜಸ್ವಿಯಾದ ಕಣ್ಣುಗಳು, ಬೆಳ್ಳಗಿನ ದಂತಪಂಕ್ತಿ, ಕೆಂದುಟಿಗಳು, ಮುಖದ ತುಂಬ ಲಾಸ್ಯವಾಡುವ ಮುಗುಳ್ನಗೆ, ಶಿಳು ಹೊಗೆಯ ಉಂಗುರಗಳಂತಿರುವ ಗುಂಗುರುಗೂದಲು, ಅದನ್ನು ಎತ್ತರಿಸಿ ಹಿಡಿದು ಸುತ್ತಲೂ ತಿರುಗಿ ಎಲ್ಲರಿಗೂ ತೋರಿಸಿದ. ನಂತರ ಕಡಾಯಿಯ ಅಂಚಿನ ಮೇಲೆ ಅದನ್ನು ಎತ್ತಿ ಹಿಡಿದು, ಪಟಪಟನೆ ಏನೋ ಪಠಿಸತೊಡಗಿದ. ಅಂತಿಮವಾಗಿ ಕಡಾಯಿಯೊಳಗೆ ಬೀಳುವಂತೆ ಅದನ್ನು ಕೈ ಬಿಟ್ಟ. 'ಫ್ಲಾಕ್!' ಎಂಬ ಸಪ್ಪಳದೊಂದಿಗೆ ಅದು ನೀರಿನಲ್ಲಿ [illegible] ಕನಿಷ್ಠ ಐದು ಫೂಟುಗಳಷ್ಟು ಮೇಲಕ್ಕೆ ಉಗಿ ಹಾಯಿತು. ನಂತರ ಮತ್ತೆ ಎಲ್ಲವೂ ಸ್ತಬ್ಧವಾಯಿತು.

ಬಹಳ ಹೊತ್ತಿನವರೆಗೆ ಏನೂ ಘಟಿಸಲಿಲ್ಲ. ರಾಜ ಅಸಹನೆಯಿಂದ ಕುದಿಯತೊಡಗಿದ. ರಾಣಿ, ಉಪಪತ್ನಿಯರು, ಮಂತ್ರಿಗಳು, ಹಿರಿಯ ಜ್ಞಾ ಗಳು ಎಲ್ಲರಿಗೂ ಅಪಾಯವೊಂದರ ಅರಿವು ಆಗತೊಡಗಿತು. ಆದರೆ ಗುಡಾಣದಂಥ ಹೊಟ್ಟೆಯ ಕುಳ್ಳರು ಮಾತ್ರ ಗೊರಕೆ ಹೊಡೆಯತೊಡಗಿದ್ದರು. ಅವರು ಗೊರಕೆ ಹೊಡೆಯುವುದನ್ನು ನೋಡಿದ ಕೂಡಲೇ ರಾಜನಿಗೆ ತನ್ನನ್ನು ಒಬ್ಬ ಮೂರ್ಖನನ್ನಾಗಿಸಿರುವಂತೆ ಅನಿಸಿ, ತನ್ನ ಸಾರ್ವಭೌಮತ್ವವನ್ನೇ ಅಪಮಾನಗೊಳಿಸುವ ಭಂಡತನಕ್ಕಿಳಿದ ಈ ಉದ್ಧಟನನ್ನು [illegible] ಭವ್ಯವಾದ ಬಂಗಾರದ ಕಡಾಯಿಯಲ್ಲಿ ಒಗೆದು ಜೀವಂತ ಬೇಯಿಸಿರಿ, ಎಂದು ಆಜ್ಞಾಪಿ[illegible] ಅವನು ಭಟರ ಕಡೆಗೆ ತಿರುಗಿದ.

ಆದರೆ ತಕ್ಷಣದಲ್ಲಿಯೇ ನೀರು ಕತಕತನೆ ಕುದಿಯುವ ಸದ್ದು ಅವನಿಗೆ ಕೇಳಿಸಿತು. ಕಲ್ಲಿದ್ದಲು ಕೆಂಪಗೆ ಕಾಯ್ದು ಚಟಚಟನೆ ಸಿಡಿಯುತ್ತ ಕಪ್ಪು ಮನುಷ್ಯನ ಮೇಲೆ ದಟ್ಟಗೆಂಪು ಛಾಯೆಯನ್ನು ಹರಡಿತು. ಆ ಛಾಯೆಯಲ್ಲಿ ಅವನು ಕಾಯ್ದು ನಸುಗೆಂಪು ಬಣ್ಣಕ್ಕೆ ತಿರುಗಿದ್ದ ಕಬ್ಬಿಣದಂತೆ ಕಾಣಿಸತೊಡಗಿದ್ದ. ರಾಜ ಮತ್ತೆ ಅವನತ್ತ ತಿರುಗಿದ ಕೂಡಲೇ ಕಪ್ಪು ವ್ಯಕ್ತಿ ತನ್ನೆರಡೂ ಕೈಗಳನ್ನು ಆಕಾಶದತ್ತ

ಮೇಲಕ್ಕೆತ್ತಿ ಚಾಚಿ ಮುಗಿಲನ್ನೇ ದಿಟ್ಟಿಸಿ ನೋಡುತ್ತ ನರ್ತಿಸತೊಡಗಿದ. ನರ್ತಿಸುತ್ತಿದ್ದಂತೆಯೇ ಒಮ್ಮಿಂದೊಮ್ಮೆಗೇ ಎತ್ತರದ ಧ್ವನಿಯಲ್ಲಿ ಹಾಡತೊಡಗಿದ:

"ಓಹ್ ! ಪ್ರೀತಿಗಾಗಿ ಹಾಡಿರೆಲ್ಲರೂ
ಓಹ್। ಪ್ರೀತಿಗೆ !
ಓಹ್ ಪ್ರೀತಿ! ಓಹ್ ರಕ್ತ!
ಹೇಳ ಯಾರಿಲ್ಲ ಹಾಗೆ !
ಕತ್ತಲಲ್ಲಿ ಮಿಡುಕುತಿರಲು ಪ್ರಜೆಗಳೆಲ್ಲ
ರಾಜ ಉಕ್ಕುಕ್ಕಿ ನಗುವನು
ಹತ್ತು ಸಾವಿರ ಶಿರಗಳನು
ಕತ್ತರಿಸಿದನವನು ಶರಣು ಬಿದ್ದವು.
ಒಂದೇ ಒಂದು ಶಿರವು ಮಾತ್ರ
ಸಾಕು ನನ್ನ ಕಾರ್ಯಕೆ
ಅವನೊಬ್ಬನ ಶಿರಕಾಗಿ
ಹರಿಯಲೊಲ್ಲದೇಕೆ ರಕ್ತ ಭೂಮಿಗೆ!
ಓಹ್ ಹರಿಯಲೀ–ರಕ್ತ ಹರಿಯಲಿ!
ಹಾಡಿರೆಲ್ಲರೂ ಓಹ್! ಪ್ರೀತಿಗಾಗಿ ಹಾಡಿರಿ!"

ಅವನು ಹಾಡುತ್ತಿದ್ದ ಹಾಗೆಯೇ ಕಡಾಯಿಯೊಳಗಿನ ನೀರು ಕೋನಾಕೃತಿಯಲ್ಲಿ ಚಿಕ್ಕ ಪರ್ವತದ ಹಾಗೆ ಉಕ್ಕೇರಿ ಮೇಲೆದ್ದು ನಿಂತಿತು. ಆದರೂ ತನ್ನ ಶಿಖರಿಯ ತುದಿಯಿಂದ ಕಡಾಯಿಯ ತಳದವರೆಗೂ ಬೀಳುತ್ತೇಳುತ್ತ ಸುಳಿಸುತ್ತುತ್ತ ನೀರು ನಿರಂತರವಾಗಿ ಚಲಿಸುತ್ತಲೇ ಇತ್ತು. ಜಲಾವರ್ತಕ್ಕನುಗುಣವಾಗಿ ರುಂಡ ಚುರುಕಾಗಿ ಮೇಲೆ ಕೆಳಗೆ ಕುಪ್ಪಳಿಸಿ ತೊನೆದಾಡುತ್ತ ಪಾತಳಿಗುಂಟ ಚಿಮ್ಮಿ ಚಲಿಸುತ್ತ, ಚಲಿಸುತ್ತಿದ್ದ ಹಾಗೆಯೇ ಚುರುಕಾಗಿ ಅಂತರ್‌ಲಾಗ ಹಾಕುತ್ತ ಕಡಾಯಿಯ ಸುತ್ತ ಸುತ್ತತೊಡಗಿತು. ಆಗ ಅದರ ಮುಖದಲ್ಲಿ ಸಂತೋಷದ ನಗೆ ಅರಳಿರುವುದನ್ನು ಜನ ಗುರುತಿಸತೊಡಗಿದರು. ಕೆಲ ಸಮಯದ ನಂತರ ಅದನ್ನು ನಿಲ್ಲಿಸಿದ ರುಂಡ ನೀರಿನ ಸುಳಿಗೆ ವಿರುದ್ಧವಾಗಿ ಅತ್ತಿಂದಿತ್ತ, ಇತ್ತಿಂದತ್ತ ಸರಸರನೆ ಚಲಿಸುತ್ತ ಎಲ್ಲ ದಿಕ್ಕಿನಲ್ಲೂ ನೀರನ್ನು ಚಿಮ್ಮುತ್ತ ಕಡಾಯಿಯ ಸುತ್ತಲೂ ಈಜತೊಡಗಿತು. ದರ್ಬಾರಿನೊಳಗೆಲ್ಲ ಕುದಿನೀರಿನ ಮಳೆ ಸುರಿಯತೊಡಗಿದಂತಾಯಿತು. ಕುಳ್ಳನೊಬ್ಬ ಒಮ್ಮಿಂದೊಮ್ಮೆಗೇ ಚಿಟ್ಟನೇ ಚೀರಿ ತನ್ನ ಮುಖವನ್ನು ತಿಕ್ಕಿಕೊಳ್ಳತೊಡಗಿದ. ಕುದಿನೀರಿನ ಹನಿಗಳು ಸಿಡಿದು ಬೊಕ್ಕೆಯೆದ್ದು ಅದರ ಉರಿ ತಡೆದುಕೊಳ್ಳಲಾರದೆ ಅವನು ಕೂಗಿಕೊಳ್ಳತೊಡಗಿದ್ದ.

ಕಪ್ಪು ಮನುಷ್ಯ ಹಾಡುವುದನ್ನು ನಿಲ್ಲಿಸಿದ ಕೂಡಲೇ ರುಂಡ ನೀರಿನ ಶಿಖರಿಯ ಮಧ್ಯದಲ್ಲಿ ಗಂಭೀರ ಮುಖಭಾವ ತಾಳಿ ಸಿಂಹಾಸನಕ್ಕೆದುರಾಗಿ ನಿಂತುಕೊಂಡಿತು. ಕೆಲ ನಿಮಿಷಗಳವರೆಗೆ ಹಾಗೇ ನಿಂತುಕೊಂಡನಂತರ, ಮತ್ತೆ ಸಾವಕಾಶವಾಗಿ ಮೇಲೆ ಕೆಳಗೆ ಕುಪ್ಪಳಿಸುತ್ತ, ತೊನೆದಾಡತೊಡಗಿತು. ತೊನೆದಾಡುತ್ತ ಹಾಗೇ ತನ್ನ ವೇಗವನ್ನು ಹೆಚ್ಚಿಸಿ ಮೇಲಿನಿಂದ ಕೆಳಕ್ಕೆ ಹಾಗೂ ಕೆಳಗಿನಿಂದ ಮೇಲಕ್ಕೆ ಶಿಖರಿಯಗುಂಟ ಅಷ್ಟು ಚುರುಕಾಗಿ ಅಲ್ಲದಿದ್ದರೂ ಅತ್ಯಂತ ನಯನಮನೋಹರವಾಗಿ ಈಜತೊಡಗಿತು. ನೀರಿನ ಪಾತಳಿಗುಂಟ ಮೂರು ಸುತ್ತು ಈಜಿದ ನಂತರ ಕುಣಿದೇಳುವ ರೀತಿಯಲ್ಲಿ ನೀರಿನಲ್ಲಿ ತಟ್ಟನೆ ಮುಳುಗು ಹಾಕಿ ಮೇಲೆಳುತ್ತ ತನ್ನ ಕಣ್ಣುಗಳನ್ನು ಆಗಲವಾಗಿ ತೆರೆಯಿತು. ಅದರ ಕಾಪಿಗೆಗಪ್ಪು ಕಣ್ಣುಗುಡ್ಡೆಗಳು ಅಪೂರ್ವ ತೇಜಸ್ಸಿನಿಂದ ಮಿಂಚುತ್ತಿರುವಂತೆಯೇ ಅದು ತನ್ನ ಬಾಯಿ ತೆರೆದು ಹಾಡತೊಡಗಿತು:

"ಸಮ್ರಾಟನ ಸಾಮ್ರಾಜ್ಯವು ಹರಡಿದೆ
ಭೂಮಿಯ ಉದ್ದಗಲದೊಳು
ಹಗೆಗಳ ಸೋಲಿಸಿ ಜಯಮಾಲೆಯ ಧರಿ
ಸುವನಾತ ದಶದಿಕ್ಕಿನೊಳು
ಜಗವಳಿದರೂ ಕೊನೆ ಬಾರದು ಅವನಾ
ಶೌರ್ಯಕ್ಕೆ
ಅಂತೆಯೇ ಬಂದೆನು ಥಳಥಳಿಸುವ ನಾ
ಮಿಂಚಿನೊಲು.
'ಮರೆಯದಿರು ನನ್ನ–' ಹೇಳಿತು ಖಡ್ಗ
ಮಿಂಚಿನ ಭಾಷೆಯೊಳು.
ರಾಜ್ಯೈಶ್ವರ್ಯದ ಈ ನೋಟ, ಅದರ ಸ್ನೇಹ
ದುಃಖದ ಕೂಟ.
ಓಹ್! ಹಾಡು, ಓಹ್! ರಾಜ್ಯೈಶ್ವರ್ಯದ
ಹೊಗಳುತ ಹಾಡು,

ಬಾ ಹಿಂದಕೆ, ನಸುಗಪ್ಪಿನ ಕಾಂತಿಯ ಬೆಳಕಿ
ದೋ ಬೆಳಗುತ್ತಿದೆ ನೋಡು!"

ನೀರಿನ ಶಿಖರಿಯ ತುದಿ ಮಧ್ಯದಲ್ಲಿ ರುಂಡ ಒಮ್ಮೆಲೇ ನಿಂತುಬಿಟ್ಟಿತು. ನಂತರ ಹಲವಾರು ಸಲ ಅಂತರ್‌ಲಾಗ ಹಾಕಿದ ಮೇಲೆ ಮತ್ತೆ ಪ್ರವಾಹದ ಗುಂಟ ಮೇಲಕ್ಕೂ ಕೆಳಕ್ಕೂ ಹಗುರಾಗಿ ಸಂಚರಿಸುತ್ತ, ಸಮ್ಮೋಹಿನಿಗೊಳಪಡಿಸುವ ಹಾಗೆ ಎಡಕ್ಕೂ ಬಲಕ್ಕೂ ಮೋಹಕವಾಗಿ ದೃಷ್ಟಿ ಹಾಯಿಸುತ್ತ ಅದು ಮತ್ತೊಮ್ಮೆ ಹಾಡತೊಡಗಿತು:

"ಓಹ್! ಪ್ರೀತಿಗಾಗಿ, ನಾವು
ಕಂಡುಂಡ ಪ್ರೀತಿಗಾಗಿ!
ಕತ್ತರಿಸುವೆ ನಾನೊಂದು ಶಿರವ,
ಓಹ್! ಒಂದು ಶಿರವ!
ಒಂದೇ ಒಂದು ಶಿರವು ಸಾಕು ನನಗೆ
ಬೇಡ ಹೆಚ್ಚಿಗೆ
ಅವನು ತರಿದ ಶಿರಗಳ ಲೆಕ್ಕವೋ
ಅಂಕೆ ಮೀರಿದೆ!"

ಹಾಡು ಐದನೆಯ ಚರಣವನ್ನು ಪ್ರವೇಶಿಸುತ್ತಿದ್ದಂತೆ ರುಂಡ ನೀರಿನಲ್ಲಿ ಮುಳುಗಿಹೋಯಿತು. ಅದು ಮತ್ತೆ ಮೇಲಕ್ಕೆ ಬರಲೇ ಇಲ್ಲವಾದುದರಿಂದ ಹಾಡು ಸ್ಪಷ್ಟವಾಗಿ ಕೇಳಿಸದುತಾಯಿತು. ಹಾಡಿನ ಧ್ವನಿ ಕ್ಷೀಣವಾಗುತ್ತಿದ್ದ ಹಾಗೆಯೇ ಶಿಖರಿಯ ಹಾಗೆ ಉಕ್ಕಿ ನಿಂತಿದ್ದ ನೀರು ಉಬ್ಬರ ಇಳಿಯುವ ಹಾಗೆ ಕುಸಿಯುತ್ತ ಕ್ರಮೇಣವಾಗಿ ಕಡಾಯಿಯ ಅಂಚಿನ ಒಳಗೆ ಇಳಿದು ನಿಂತಿತು. ಈಗ ಸ್ವಲ್ಪ ದೂರದಲ್ಲಿಂದ ನಿಂತು ನೋಡುವವರಿಗೆ ಏನೂ ಕಾಣಿಸದುತಾಯಿತು.


"ಇಷ್ಟೆ?" ಸ್ವಲ್ಪ ಹೊತ್ತು ಕಾದ ನಂತರ ರಾಜ ಅಸಹನೆಯಿಂದ ಕೇಳಿದ. "ಸಾರ್ವಭೌಮ, ರುಂಡ ಈಗ ಕಡಾಯಿಯ ತಳದಲ್ಲಿ ಒಂದು ಅದ್ಭುತವಾದ ನೃತ್ಯನರ್ತನವನ್ನು ಪ್ರದರ್ಶಿಸುತ್ತಿದೆ. ಹತ್ತಿರದಲ್ಲಿ ನಿಂತಲ್ಲದೇ ಅದನ್ನು ನೋಡಲು ಶಕ್ಯವಾಗದು. ಅದನ್ನು ಮೇಲೆ ತರಿಸುವ ಶಕ್ತಿ ನನ್ನ ಬಳಿಯಲ್ಲಿಲ್ಲ. ಯಾಕಂದರೆ ಈ ನೃತ್ಯನರ್ತನವನ್ನು ಕಡಾಯಿಯ ತಳದಲ್ಲಿ ಮಾತ್ರ ಗೈಯಬೇಕು." ಕಪ್ಪು ವ್ಯಕ್ತಿ ಗೌರವಸೂಚಕವಾಗಿ ಒಂದು ಮೊಳಕಾಲೂರಿ ನಿಂತು ಹೇಳಿದ.

ಕಡಾಯಿಯ ಪಕ್ಕದಲ್ಲೇ ನಿಂತು ನೋಡುವ ಉದ್ದೇಶದಿಂದ ಮೇಲೆದ್ದ ರಾಜ ಪಾವಟಿಗೆಗಳನ್ನು ಇಳಿದು ಕೆಳಗೆ ಬಂದ. ಕಾಖಿದ ಜಳವನ್ನು ಲೆಕ್ಕಿಸದೇ ಬಾಗಿ ಕಡಾಯಿಯೊಳಗೆ ಇಣುಕಿ ನೋಡಿದ. ನೀರು ಕನ್ನಡಿಯ ಹಾಗೆ ನಿರ್ಮಲವಾಗಿತ್ತು. ರುಂಡ ತನ್ನೆರಡೂ ಕಣ್ಣುಗಳನ್ನು ಅರಸನ ಕಡೆಗೇ ಕೇಂದ್ರೀಕರಿಸಿ ಮೇಲಕ್ಕೆ ನೋಡುತ್ತ ಕಡಾಯಿಯ ತಳದಲ್ಲಿ ಒರಗಿಕೊಂಡಿತು. ಅರಸನ ಕಣ್ಣುಗಳ ನೋಟ ತನ್ನ ಮೇಲೆ ಬೀಳುತ್ತಲೇ ಅದು ಆಕರ್ಷಕವಾಗಿ ಮುಗುಳ್ನಕ್ಕಿತು. ಆ ನಗೆಯನ್ನು ಕಂಡ ಕೂಡಲೇ ಅರಸನಿಗೆ ತಾವಿಬ್ಬರೂ ಹಿಂದೆ ಭೆಟ್ಟಿಯಾಗಿರುವ ಹಾಗೆ ಅನಿಸತೊಡಗಿತು. ಆದರೆ ಈ ವ್ಯಕ್ತಿ ಯಾರಿರಬಹುದೆಂಬುದು ಮಾತ್ರ ಒಂದು ನಿಮಿಷ ಅವನಿಗೆ ಹೊಳೆಯಲಿಲ್ಲ. ಅವನು ಅಚ್ಚರಿಗೊಳಗಾಗುತ್ತಿದ್ದ ಹಾಗೆಯೇ ಕಪ್ಪು ಮನುಷ್ಯ ತನ್ನ ಬೆನ್ನ ಮೇಲಿಂದ ನಸುಗಪ್ಪು ಬಣ್ಣದ ಖಡ್ಗವನ್ನು ಎಳೆದುಕೊಂಡು ರಾಜನ ಕತ್ತಿನ ಹಿಂಬದಿಯಿಂದ ಮಿಂಚು ಮಿಂಚಿನ ಹಾಗೆ ರಭಸದಿಂದ ಮುಂದಕ್ಕೆ ಬೀಸಿದ. 'ಧಬಕ್!' ಎಂಬ ಸದ್ದಿನೊಡನೆ ರಾಜನ ರುಂಡ ಕಡಾಯಿಯೊಳಗೆ ಬಿದ್ದಿತು.

ವೈರಿಗಳು ಎದುರುಬದುರಾದಾಗ, ಅದೂ ತೀರ ಸನಿಹದಿಂದ ಕಂಡಾಗ ಒಬ್ಬರನ್ನೊಬ್ಬರು ತಕ್ಷಣ ಗೊತ್ತು ಹಿಡಿಯಬಲ್ಲರು. ರಾಜನ ರುಂಡ ನೀರಿನ ಅಂಚನ್ನು ಸ್ಪರ್ಶಿಸುತ್ತಿದ್ದ ಹಾಗೆಯೇ ಮಿಯ್ ಚಿಯನ್ ಚಿಹ್ ರುಂಡ ಅದನ್ನು ಎದುರುಗೊಳ್ಳಲು ಬಂದು ಅವನ ಕಿವಿಯನ್ನು ಕಚ್ಚಿ ಸ್ವಾಗತಿಸಿತು. ನೀರು ಒಮ್ಮಿಂದೊಮ್ಮೆಗೇ ಭಯಂಕರವಾಗಿ ಕತಕತನೆ ಕುದಿಯತೊಡಗಿತು. ಪರಸ್ಪರರನ್ನು ಮುಗಿಸಿಬಿಡಲು ಎರಡೂ ರುಂಡಗಳು ನೀರಿನಲ್ಲಿ ಕಾದಾಡತೊಡಗಿದವು. ಇಪ್ಪತ್ತು ಸಲ ದಾಳಿ ಪ್ರತಿದಾಳಿಗಳಾಗುವಷ್ಟರಲ್ಲಿ ರಾಜನ ರುಂಡಕ್ಕೆ ಐದು ಹತ್ತಿರ ಗಾಯಗಳಾಗಿದ್ದರೆ ಮಿಯ್ ಚಿಯನ್ ಚಿಹ್‌ನ ರುಂಡಕ್ಕೆ ಏಳು ಹತ್ತಿರ ಗಾಯಗಳಾಗಿದ್ದವು. ನಿಪುಣನಾದ ರಾಜ ಚಾತುರ್ಯದಿಂದ ತಪ್ಪಿಸಿಕೊಂಡು ತನ್ನ ವೈರಿಯ ಹಿಂದೆ ನುಸುಳಿಕೊಳ್ಳುತ್ತಿದ್ದ. ಒಂದು ಅಜಾಗರೂಕ ಕ್ಷಣದಲ್ಲಿ ಮಿಯ್ ಚಿಯನ್ ಚಿಹ್‌ನ ರುಂಡದ ಹಿಂಭಾಗ

ರಾಜನ ರುಂಡದ ಬಾಯಿಗೆ ಸಿಕ್ಕುಬಿದ್ದು ಹೊರ ಳಲು ಕೂಡ] ಅದಕ್ಕೆ ಶಕ್ಯವಾಗದಂತಾಯಿತು. ರಾಜನ ರುಂಡ ತನ್ನ ಹಲ್ಲುಗಳಿಂದ ಬಿಗಿಯಾಗಿ ಕಚ್ಚಿಹಿಡಿದು, ಅವನಿಗೆ ತಪ್ಪಿಸಿಕೊಳ್ಳಲು ಅನುವಾಗದ ಹಾಗೆ ಅವನ ಕುತ್ತಿಗೆಯಲ್ಲಿ ಆಳವಾಗಿ, ಇನ್ನೂ ಆಳವಾಗಿ ಹಲ್ಲುಗಳನ್ನೂರುತ್ತ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿತು. ಹುಡುಗ ನೋವಿನಿಂದ ಚೀರುತ್ತಿರುವುದು ಕಡಾಯಿಯ ಹೊರಗೂ ಕೇಳಿಸತೊಡಗಿತು. ರಾಣಿಯಿಂದ ಹಿಡಿದು ವಿದೂಷಕನ ವರೆಗೆ ಎಲ್ಲರೂ ಮೊದಲು ಭಯದಿಂದ ಬೆದರಿದ ಗೊಂಬೆಗಳಂತಾಗಿದ್ದವರು, ಈ ನೋವಿನ ಅಲಾಪದ ಧ್ವನಿಯಿಂದ ವಿದ್ಯುದಾಘಾತವಾದವರ ಹಾಗೆ ಮರಳಿ ಎಚ್ಚೆತ್ತು, ಕಾರ್ಗತ್ತಲೆಯಲ್ಲಿ ಸೂರ್ಯನನ್ನೇ ಕಬಳಿಸಿ ಬಿಟ್ಟರೇನೋ ಎಂಬಂತೆ ದುಃಖಿಸತೊಡಗಿದರು. ಭಯ ವಿಸ್ಮಯ ಆಶ್ಚರ್ಯಾಘಾತಗಳಿಂದ ಅವರ ಮೈ ಮೇಲೆ ಮುಳ್ಳುಗಳೆದ್ದುಬಿಟ್ಟಿದ್ದವು. ಆದರೆ ಏನನ್ನೋ ನಿರೀಕ್ಷಿಸುತ್ತಿರುವ ಹಾಗೆ ಅವರೆಲ್ಲ ಸುತ್ತಲೂ ತಮ್ಮ ಕಣ್ಣಾಡಿಸಿ ನೋಡಿದರು. ಕೂಡಲೇ ತಮ್ಮ ಗುಪ್ತ ಬಯಕೆಯೊಂದು ಈಡೇರಿದಂತಾಯಿತೆಂದು ಅವರೆಲ್ಲರ ಹೃದಯಗಳೂ ಒಳಗೊಳಗೇ ಆನಂದದಿಂದ ಅರಳತೊಡಗಿದವು.

ಕಪ್ಪು ಮನುಷ್ಯ ಕೂಡ ಆಶ್ಚರ್ಯಾಘಾತಗಳಿಂದ ದಂಗು ಬಡಿದಂತೆ ಕಂಡರೂ ಅವನ್ನು ಅವನು ಹೊರಗೆ ತೋರಗೊಡಲಿಲ್ಲ. ಅದೃಶ್ಯ ಖಡ್ಗವನ್ನು ಹಿಡಿದ ತನ್ನ ಕೈಯನ್ನು ಅವನು ಅಪ್ರಯತ್ನವಾಗಿಯೆಂಬಂತೆ ಒಣಗಿದ ರೆಂಬೆಯ ಹಾಗೆ ಮೇಲೆತ್ತಿದ. ಕಡಾಯಿಯಲ್ಲಿ ಇಣುಕಿ ನೋಡಲೆಂಬಂತೆ ಮುಂದಕ್ಕೆ ಬಾಗಿದ. ಮೇಲಕ್ಕೆ ಚಾಚಿದ್ದ ಅವನ ಕೈ ಒಮ್ಮಿಂದೊಮ್ಮೆಗೇ ಹಿಂದಕ್ಕೆ ಬಾಗಿತು. ಹಿಂಬದಿಯಿಂದ ಖಡ್ಗ ರಭಸದಿಂದ ಮುನ್ನುಗ್ಗಿತು. ಮುಂಡದಿಂದ ಬೇರ್ಪಟ್ಟ ಅವನ ರುಂಡ "ಫಳಕ್ಕ!" ಎಂಬ ಸದ್ದಿನೊಡನೆ ಕಡಾಯಿಯಲ್ಲಿ ಬಿದ್ದು ಸುತ್ತಲೂ ಅಚ್ಚ ಬೆಳ್ಳಗಿನ ಉಗಿ



"ಹೊಸ ವರ್ಷಕ್ಕೆ ಹಳೇ ಉಡುಗೊರೆ..."

ಯನ್ನು ಹರಡಿತು.

ಅವನ ರುಂಡ ನೀರಿನ ಮೇಲೆ ಅಪ್ಪಳಿಸಿ ಬೀಳು ತ್ತಲೇ ನೇರವಾಗಿ ರಾಜನ ರುಂಡದತ್ತ ಮುನ್ನುಗ್ಗಿ ಅವನ ಮೂಗನ್ನು ತನ್ನ ಹಲ್ಲುಗಳ ನಡುವೆ ಒತ್ತಿ ಹಿಡಿದು ಬಿಗಿಯಾಗಿ ಕಚ್ಚತೊಡಗಿತು. ರಾಜ ನೋವಿನಿಂದ ಚಟ್ಟನೇ ಚೀರಿದ. ಅವನು ಚೀರಲು ಬಾಯಿ ತೆರೆದ ಕೂಡಲೇ ಮಿಯೆ ಚಿಯನ್ ಚಿಪ್‌ನ ರುಂಡ ಅವನ ಬಾಯಿಯಿಂದ ಪಾರಾಗಿ ತನ್ನ ದವಡೆಗಳಿಂದ [illegible] ಹಾಗೆ ಬಿಗಿಯಾಗಿ ಕಚ್ಚಿ ಹಿಡಿಯಲು ಅನುಕೂಲವಾದ ಜಾಗವನ್ನರಿ ಸುತ್ತ ರಾಜನ ರುಂಡದ ಸುತ್ತಲೂ ಸುತ್ತತೊಡ ಗಿತು. ಪರಸ್ಪರ ವಿರುದ್ಧ ದಿಕ್ಕಿನಲ್ಲಿ ರಾಜನ ರುಂಡ ವನ್ನು ಬಲವಾಗಿ ಕಚ್ಚಿ ಹಿಡಿದಿದ್ದಲ್ಲದೇ ಅವು ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಅದನ್ನು ಜಗ್ಗಿ ಎಳೆದಾಡತೊಡಗಿದವು. ತೆರೆದ ಬಾಯನ್ನು ಮುಚ್ಚದ ಹಾಗೆ ಕಿರುಚಿಕೊಳ್ಳತೊಡಗಿದ ರಾಜನ ರುಂಡದ ಆಲಾಪನೆಗೆ ಕೊನೆಯೇ ಇಲ್ಲದಂತಾಯಿ ತು. ನಂತರ ಅವು ಹಸಿದ ಕೋಳಿಗಳು ಅಕ್ಕಿಯ ಕಾಳುಗಳನ್ನು ಚಿಕ್ಕಿ ಚಿಕ್ಕಿ ಕುಕ್ಕಿ ತಿನ್ನುವ ಹಾಗೆ ರಾಜನ ರುಂಡವನ್ನು ಸಿಕ್ಕ ಸಿಕ್ಕಲ್ಲಿ ಕಚ್ಚುತ್ತ ಅದನ್ನು ಸಂಪೂರ್ಣವಾಗಿ, ಗುರುತು ಹತ್ತದ ಹಾಗೆ ಕಚ್ಚಿ ಕಚ್ಚಿ ಚಚ್ಚಿ ಹಾಕಿದವು. ಮೊದಮೊದಲು ರಾಜ ನೋವನ್ನು ತಡೆದುಕೊಳ್ಳದೇ ಕಡಾಯಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ವಿಕಾರವಾಗಿ ಉರುಳಾಡು ತ್ತಿದ್ದರೂ ನಂತರ ಅಲ್ಲಿಯೇ ಒಂದು ಕಡೆ ನರಳುತ್ತ ಬಿದ್ದುಕೊಂಡ. ಅವನ ಕೊನೆಯುಸಿರಿನ ಜೊತೆಗೇ ಅವನ ನರಳಿಕೆಯೂ ಇಂಗಿ ಶಾಂತ ವಾಯಿತು.

ಮಿಯೆ ಚಿಯನ್ ಚಿಪ್ ಹಾಗೂ ಕಪ್ಪು ವ್ಯಕ್ತಿಯ ರುಂಡಗಳೆರಡೂ ಕ್ರಮೇಣ ಕಚ್ಚುವು ದನ್ನು ನಿಲ್ಲಿಸಿದವು. ರಾಜನ ರುಂಡವನ್ನು ಅಲ್ಲಿಯೇ ಬಿಟ್ಟು ಅವನು ನಿಜವಾಗಿಯೂ ಸತ್ತಿರುವನೋ ಅಥವಾ ಹಾಗೆ ನಟಿಸುತ್ತಿರುವನೋ ಎಂಬುದನ್ನು ಪರೀಕ್ಷಿಸುತ್ತ ಕಡಾಯಿಯ ಸುತ್ತಲೂ ಒಂದು ಸುತ್ತು ಈಜಿ ನೋಡಿದವು. ರಾಜನ ರುಂಡ ನಿಜವಾಗಿಯೂ ಕೊನೆಯುಸಿರೆಳೆದಿದೆಯೆಂಬುದು ಖಾತ್ರಿಯಾದ ನಂತರ ಪರಸ್ಪರರತ್ತ ನೋಡಿ ನಸು ನಕ್ಕವು. ನಂತರ ಅವು ತಮ್ಮ ಕಣ್ಣು ಮುಚ್ಚಿ ಆಕಾಶದತ್ತ ಮುಖ ಮಾಡಿ, ಮುಳುಗಿ ನೀರಿನ ತಳಕ್ಕೆ ಹೋದವು.

೪

ಉರಿ ಆರಿಹೋಯಿತು. ಕುದಿಯುತ್ತಿದ್ದ ನೀರು ಶಾಂತವಾಯಿತು. ಕವಿದು ನಿಂತ ಸ್ಮಶಾನ ಮೌನದಿಂದಾಗಿ ದರ್ಬಾರಿನಲ್ಲಿ ಕುಳಿತವರೆಲ್ಲರಿಗೂ ಅರಿವು ಮೂಡಿ ಎಚ್ಚರವಾಯಿತು. ಯಾರೋ ಒಬ್ಬ ಭಯದಿಂದ ಚೀರಿದ. ಕೂಡಲೇ ಎಲ್ಲರೂ ಹೆದರಿಕೆಯಲ್ಲಿ ಒಟ್ಟಿಗೇ ಕೂಗಿಕೊಳ್ಳತೊಡಗಿದರು. ಸ್ವಲ್ಪ ಹೊತ್ತಿನ ನಂತರ ಯಾರೋ ಇನ್ನೊಬ್ಬ ಬಂಗಾರದ ಕಡಾಯಿಯತ್ತ ನಡೆದ. ಎಲ್ಲರೂ ಅವನ ಹಿಂದೆಯೇ ನುಗ್ಗಿದರು. ಹಿಂದುಗಡೆ ಗುಂಪು ಗೂಡಿ ನಿಂತವರಿಗೆ ತಮ್ಮ ಮುಂದೆ ನಿಂತವರ ಗೋಣುಗಳ ನಡುವಿನಿಂದ ಇಣುಕಿ ನೋಡುವುದು ಮಾತ್ರ ಶಕ್ಯವಾಯಿತು.

ಬಿಸಿಯ ಜಳ ಇನ್ನೂ ಅವರ ಮುಖಗಳನ್ನು ಸುಡುತ್ತಲಿತ್ತು. ಆದರೆ ಕಡಾಯಿಯೊಳಗಿನ ನೀರು ಮಾತ್ರ ಮೇಲೆ ತೇಲುತ್ತಿರುವ [illegible] ಲೇಪದ ದೊಂದಿಗೆ ಕನ್ನಡಿಯೊಂದರ ಹಾಗೆ ತಿಳಿಯಾಗಿತ್ತು. ಅದರಲ್ಲಿ ಅವರೆಲ್ಲರ ಮುಖಗಳೂ ಪ್ರತಿಫಲಿಸಿದವು. ರಾಣಿ. ಉಪಪತ್ನಿಯರು. ವೃದ್ಧ ಮಂತ್ರಿಗಳು. ಕುಳ್ಳರು, ಖೋಜಾಗಳು.........

"ಓ ದೇವರೆ! ನಮ್ಮ ಶ್ರೀಮನ್‌ಮಹಾರಾಜರ ರುಂಡ ಇನ್ನೂ ಅಲ್ಲಿಯೇ ಇದೆ!" ಎಂದು ಅರ ಸಿಯ ಉಪಪತ್ನಿ ಜೋರಾಗಿ ಬಿಕ್ಕಿ ಬಿಕ್ಕಿ ಅಳತೊಡ ಗಿದಳು.

ರಾಣಿಯಿಂದ ಹಿಡಿದು ವಿದೂಷಕನ ವರೆಗೆ ಎಲ್ಲರನ್ನೂ ಭಯಭ್ರಾಂತಿ ಆವರಿಸಿಕೊಂಡಿತು. ಗಾಬರಿಯಲ್ಲಿ ಎಲ್ಲರೂ ಚದುರಿ ಚೆಲ್ಲಾಪಿಲ್ಲಿಯಾಗಿ ದರ್ಬಾರಿನ ಸುತ್ತಲೂ ವೃತ್ತಾಕಾರವಾಗಿ ಓಡಾಡ ತೊಡಗಿದರು. ಅತ್ಯಂತ ಬುದ್ಧಿಶಾಲಿಯಾದ ಮಂತ್ರಿ ಅಸ್ವಾಭಾವಿಕ ತಾಳ್ಮೆಯಿಂದ [illegible] ಚಾಚಿ ಬಂಗಾರದ ಕಡಾಯಿಯ ಅಂಚನ್ನು ಮು ಟ್ಟಿದ. ಮೈಯಲ್ಲ ತತ್ತರಿಸಿ ಅವನು ತನ್ನ ಕೈ ಯನ್ನು ಸರಕ್ಕನೇ ಹಿಂದಕ್ಕೆಳೆದುಕೊಂಡು, ಬಾಯಿ ಯ ಎದುರು ಎರಡು ಬೆರಳುಗಳನ್ನು ಹಿಡಿದು

"ನನ್ನ ಅಮ್ಮನಿಗೆ ಸಂಪೂರ್ಣ ಆರೋಗ್ಯದಾಯಕ ಪೇಯಕ್ಕಿಂತ ಕಡಿಮೆ ಸಲ್ಲದು"

ಕೇವಲ

ಕೋಂಪ್ಲಾನ್

ಪ್ರತಿ ದೇಹಕ್ಕೆ ಅತ್ಯವಶ್ಯಕವಾಗಿರುವ 23 ಪೋಷಕಾಂಶಗಳನ್ನು ಒಳಗೊಂಡಿರುವ ಸಂಪೂರ್ಣ ಆರೋಗ್ಯದಾಯಕ ಪೇಯ.

ಸ್ವಾಸ್ಥ್ಯ ಮತ್ತು ಶಕ್ತಿಗಾಗಿ. ಪ್ರತಿಯೊಬ್ಬರ ದೇಹಕ್ಕೆ ಪ್ರತಿ ದಿನ ಶಕ್ತಿಗಾಗಿ ದೇಹಕ್ಕೆ ಪ್ರತಿ ದಿನ ಅತ್ಯವಶ್ಯಕವಾಗಿರುವ. ಪ್ರೋಟೀನ್‌ಗಳು. ವಿಟಮಿನ್‌ಗಳು. ಖನಿಜದ್ರವ್ಯಗಳು. ಕಾರ್ಬೋಹೈಡ್ರೇಟ್‌ಗಳು ಮತ್ತು ಇತರ ಪೋಷಕಾಂಶಗಳು. ಕೇವಲ ಕೋಂಪ್ಲಾನ್‌ನಲ್ಲಿ ವೈಜ್ಞಾನಿಕವಾಗಿ ನಿಯೋಜಿತ ಪ್ರಮಾಣದಲ್ಲಿವೆ. ಆರೋಗ್ಯ ಚೆನ್ನಾಗಿರದೆ ಊಟ ಒಗ್ಗದ ಕುಟುಂಬದ ಹಿರಿಯರಿಗೆ ಉತ್ತಮ. ಹೆಚ್ಚಾಗಿ ಊಟಕ್ಕೂ ಬಿಡುವಿಲ್ಲದ ಅವಸರದ ಪತಿಗಳಿಗೆ ಆದರ್ಶವಾಗಿದೆ. ಊಟ ಮಾಡಲು ನಿರಾಕರಿಸುವ ಹಟವಾದಿ ಮಕ್ಕಳಿಗೆ ಹೇಳಿಸಿದ್ದು. ಆಯಾಸದಿಂದ ಊಟವೇ ಬೇಡವೆನಿಸುವ ನಿಮಗೆ ಮತ್ತೂ ಉತ್ತಮ.

ನೆನಪಿಡಿ. ಡಾಕ್ಟರರು ಸಂಪೂರ್ಣ ಪೋಷಣಾಹಾರವಾಗಿ ಹೆಚ್ಚಾಗಿ [illegible] ಶಿಫಾರಸು ಮಾಡುತ್ತಾರೆ.

ಕೋಂಪ್ಲಾನ್ ಪ್ಲೇನ್ ಮತ್ತು ಸ್ವಾದಿಷ್ಟವಾದ ಚಾಕ್‌ಲೇಟ್, ಏಲಕ್ಕಿ-ಕೇಸರಿ ಮಾತ್ರವಲ್ಲದೆ ಮಕ್ಕಳು ಮೆಚ್ಚುವ ಹೊಸ ಸ್ಟ್ರಾಬೆರಿ ಸ್ವಾದಗಳಲ್ಲಿಯೂ ದೊರೆಯುತ್ತದೆ!



ಹಾಲನ್ನು ಬೆರಸಬೇಕಾಗಿಲ್ಲ



ಸಂಪೂರ್ಣ ಪಾನೀಯ

ಕೋಂಪ್ಲಾನ್

ಕೊಂಡು ಉಫ್ ಉಫ್ ಎಂದು ಒಂದೇ ಸಮನೆ ಊದಿಕೊಳ್ಳತೊಡಗಿದ.

ಚೆದುರಿಹೋದವರೆಲ್ಲ ಮತ್ತೆ ಗುಂಪುಗೂಡಿ ದರ್ಬಾರಿನ ಬಾಗಿಲ ಹೊರಗೆ ನೆರೆದು ರಾಜನ ರುಂಡವನ್ನು ಹೇಗೆ ಹೊರದೆಗೆಯಬೇಕೆಂಬುದನ್ನು ಕುರಿತು ಚರ್ಚಿಸತೊಡಗಿದರು. ಮೂರು ಹರಿವಾಣ ರಾಗಿಹಿಟ್ಟನ್ನು ರೊಟ್ಟಿ ಮಾಡುವಷ್ಟು ಹೊತ್ತಿನ ವರೆಗೆ ಅವರು ವಿಚಾರ ವಿನಿಮಯ ನಡೆಸಿ ಕೊನೆಗೊಂದು ನಿರ್ಧಾರಕ್ಕೆ ಬಂದರು. 'ದೊಡ್ಡ ಅಡಿಗೆಯ ಮನೆಯಿಂದ ತಂತಿಯ ಗೋರು ಸೌಟುಗಳನ್ನು ತಂದು ಅವುಗಳ ಸಹಾಯದಿಂದ ತಮ್ಮ ಸಾಮರ್ಥ್ಯವನೆಲ್ಲ ಒರೆಗೆ ಹಚ್ಚಿ ರಾಜನ ರುಂಡವನ್ನು ಹೊರದೆಗೆಯಲು ಭಟರಿಗೆ ಆಜ್ಞಾಪಿಸಬೇಕು.

ಸ್ವಲ್ಪ ಹೊತ್ತಿನಲ್ಲಿಯೇ ಸಲಕರಣೆಗಳು ಸಿದ್ಧವಾಗಿದ್ದವು: ತಂತಿಯ ಗೋರು ಸೌಟುಗಳು, ಜಾಲರಿ ಸೌಟುಗಳು, ಬಂಗಾರದ ತಟ್ಟೆಗಳು, ವಸ್ತ್ರಗಳು, ಎಲ್ಲವನ್ನು ಬಂಗಾರದ ಕಡಾಯಿಯ ಪಕ್ಕದಲ್ಲಿ ಇರಿಸಲಾಯಿತು. ನಂತರ ಭಟರು ತೋಳೇರಿಸಿ, ಕೆಲವರು ತಂತಿಯ ಗೋರು ಸೌಟುಗಳೊಡನೆಯೂ ಮತ್ತೆ ಕೆಲವರು ಜಾಲರಿ ಸೌಟುಗಳೊಡನೆಯೂ ಸಿದ್ಧರಾಗಿ ಅತ್ಯಂತ ಗೌರವಪೂರ್ವಕವಾಗಿ ರಾಜನ ರುಂಡವನ್ನು ಹೊರದೆಗೆಯುವ ಕಾರ್ಯವನ್ನು ಪ್ರಾರಂಭಿಸಿದರು. ನೀರಿನಲ್ಲಿ ಸೌಟುಗಳು ಒಂದಕ್ಕೊಂದು ತಾಕಲಾಡುವ ಹಾಗೂ, ಕಡಾಯಿಯ ಒಳಮೈಯ ಮೇಲೆ ಸರಿದಾಡುವಾಗ ಉಂಟಾಗುವ 'ಕರಬರ' ಸದ್ದುಗಳು ಕೇಳಬರತೊಡಗಿದವು. ಅವುಗಳ ಚಲನವಲನದ ಜೊತೆಗೆ ಶಾಂತವಾಗಿದ್ದ ನೀರು ಕದಡಿ ಮತ್ತೆ ಸುತ್ತತೊಡಗಿತು. ಸ್ವಲ್ಪ ಹೊತ್ತಿನ ನಂತರ ಭಟನೊಬ್ಬನ ಮುಖ ಒಮ್ಮಿಂದೊಮ್ಮೆಗೇ ಗಂಭೀರವಾಯಿತು. ಅತ್ಯಂತ ಎಚ್ಚರಿಕೆಯಿಂದ, ತನ್ನ ಎರಡೂ ಕೈಗಳಿಂದ, ಆತ ಗೋರು ಸೌಟನ್ನು ಗಟ್ಟಿಯಾಗಿ ಹಿಡಿದು ಮೇಲೆತ್ತಿದ. ಮುತ್ತು ಉದುರಿದ ಹಾಗೆ ಪಳಪಳನೆ ನೀರ ಹನಿಗಳು ಸುರಿಯುತ್ತಿದ್ದ ಆ ಗೋರು ಸೌಟಿನ ಮೇಲೆ ಒಂದು ತಲೆಬುರುಡೆ ಕಂಡಿತು. ಎಲ್ಲರೂ ಹೆದರಿಕೆಯಿಂದ ಕೂಗಿಕೊಂಡರು. ಅವನು ಅದನ್ನು ಬಂಗಾರದ ತಟ್ಟೆಯೊಂದರಲ್ಲಿ ತೆಗೆದಿರಿಸಿದ.

"ಓ ನನ್ನ ಪ್ರೀತಿಯ ದೊರೆಯೇ! ಓ ನಮ್ಮ ಪ್ರಭುವೇ!" ಎನ್ನುತ್ತ ರಾಣಿ, ಉಪಪತ್ನಿಯರು, ಮಂತ್ರಿಗಳು, ಹೊಜ್ಜಾಗಳು ಎಲ್ಲರೂ ಬಿಕ್ಕಿ ಬಿಕ್ಕಿ ಅಳತೊಡಗಿದರು. ಆದರೆ ಸ್ವಲ್ಪ ಸಮಯದಲ್ಲಿಯೇ ಅವರು ತಮ್ಮ ಅಳುವನ್ನು ನಿಲ್ಲಿಸಿದರು. ಯಾಕೆಂದರೆ ಥೇಟು ಮೊದಲಿನದನ್ನೇ ಹೋಲುವ ಮತ್ತೊಂದು ತಲೆಬುರುಡೆಯನ್ನು ಭಟ ಹೊರತೆಗೆದಿದ್ದ.

ಗಾಬರಿಯಾದವರ ಹಾಗೆ ಅವರೆಲ್ಲರೂ ಕಂಬನಿ ತುಂಬಿದ ಕಣ್ಣುಗಳಿಂದ ಸುತ್ತಲೂ ನೋಡಿದರು. ಬೆವರು ಸುರಿಸುತ್ತ ಭಟರು ಇನ್ನೂ ಕಡಾಯಿಯಲ್ಲಿ ಹುಡುಕುತ್ತಲೇ ಇದ್ದರು. ಸಿಕ್ಕು ಸಿಕ್ಕಾಗಿ ತೊಡರು ಹಾಕಿಕೊಂಡು ಕಪ್ಪು ಹಾಗೂ ಬಿಳಿ ಕೂದಲಿನ ಒಂದು ಗುಪ್ಪೆಯನ್ನೂ ಬಿಳಿ ಹಾಗೂ ಕಪ್ಪು ಗಡ್ಡಗಳಂತೆ ತೋರುವ ಹಲವು ಚಮಟಿಗಳಷ್ಟು ಚಿಕ್ಕ ಚಿಕ್ಕ ಕೂದಲುಗಳನ್ನೂ ಅವರು ಹೊರತೆಗೆದರು. ನಂತರ ಮತ್ತೊಂದು ತಲೆಬುರುಡೆ, ನಂತರ ಮೂರು ಹೇರ್ ಪಿನ್‌ಗಳು.

ಕಡಾಯಿಯಲ್ಲಿ ತಿಳಿಯಾದ ಎಸರನ್ನು ಬಿಟ್ಟು ಬೇರೇನೂ ಉಳಿಯದಂತಾದ ನಂತರವೇ ಅವರು ತಮ್ಮ ಕಾರ್ಯವನ್ನು ನಿಲ್ಲಿಸಿದರು. ಆಮೇಲೆ ತಾವು ನೀರಿನೊಳಗಿನಿಂದ ಮೇಲೆತ್ತಿದ ಎಲ್ಲ ವಸ್ತುಗಳನ್ನು ಮೂರು ಬಂಗಾರದ ತಟ್ಟೆಗಳಲ್ಲಿ ಪ್ರತ್ಯೇಕಿಸಿ ಇರಿಸಿದರು. ಒಂದರಲ್ಲಿ ತಲೆಬುರುಡೆಗಳು, ಇನ್ನೊಂದರಲ್ಲಿ ಕೂದಲು, ಮತ್ತೊಂದರಲ್ಲಿ ಹೇರ್‌ಪಿನ್‌ಗಳು.

"ನಮ್ಮ ಮಹಾರಾಜರಿಗೆ ಇದ್ದದ್ದು ಒಂದೇ ಒಂದು ತಲೆ. ಇದರಲ್ಲಿ ಪ್ರಭುಗಳ ತಲೆ ಯಾವುದು?" ಎಂದು ಒಂಭತ್ತನೆಯ ಉಪಪತ್ನಿ ರೋಷಾವೇಶದಿಂದ ಕೂಗಿ ಕೇಳಿದಳು.

"ಅದೂ ಸರಿಯೇ......" ದಂಗು ಬಡಿದಂತಾದ ಮಂತ್ರಿಗಳು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು.

"ಮಾಂಸ ಮತ್ತು ಚರ್ಮ ಬೆಂದುಹೋಗಿರದಿದ್ದರೆ ಅದನ್ನು ಹೇಳುವುದು ಸುಲಭವಾಗಬಹುದಿತ್ತು." ಎಂದು ಗೌರವದ್ಯೋತಕವಾಗಿ ಮೊಣ

ಕಾಲೂರಿ ನಿಂತುಕೊಳ್ಳುತ್ತ ಕುಳ್ಳನೊಬ್ಬ ಹೇಳಿದ.

ಈಗ ಅತ್ಯಂತ ಶಾಂತಚಿತ್ತರಾಗಿ ಎಲ್ಲ ತಲೆಬುರುಡೆಗಳನ್ನು ಅವರು ಪರೀಕ್ಷಿಸಲೇಬೇಕಾಯಿತು. ಆದರೆ ಗಾತ್ರ ಮತ್ತು ಬಣ್ಣದಲ್ಲಿ ಅವು ಸಮಾನವಾಗಿದ್ದರಿಂದ ಕೊನೆಗೆ ಅವುಗಳಲ್ಲಿ ಹುಡುಗನ ತಲೆ ಯಾವುದೆಂಬುದನ್ನು ಹೇಳುವುದು ಕೂಡ ಶಕ್ಯವಾಗದಂತಾಯಿತು.

“ಮಹಾರಾಜರ ಹಣೆಯ ಬಲಪಕ್ಕದಲ್ಲಿ, ಅವರು ಇನ್ನೂ ರಾಜಕುಮಾರರಾಗಿದ್ದಾಗ ಬಿದ್ದ ಗಾಯವಾಗಿದ್ದ ಒಂದು ಕಲೆ ಇತ್ತು. ಅದರ ಗುರುತು ತಲೆಬುರುಡೆಯ ಮೇಲೂ ಮೂಡಿರಬಹುದು” ಎಂದು ರಾಣಿ ಹೇಳಿದಳು. ಅವಳು ಹೇಳಿದ ಹಾಗೆಯೇ ಕುಳ್ಳರು ತಲೆಬುರುಡೆಯೊಂದರ ಮೇಲೆ ಅಂಥ ಒಂದು ಕಚ್ಚನ್ನು ಕಂಡುಹಿಡಿದು ತೋರಿಸಿದರು. ಸಮಸ್ಯೆ ಪರಿಹಾರವಾಯಿತೆಂದು ಎಲ್ಲರೂ ಸಮಾಧಾನ ಉಸಿರುಬಿಡತೊಡಗಿದರು. ಆದರೆ ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಇನ್ನೊಬ್ಬ ಕುಳ್ಳ ಮೊದಲಿನದಕ್ಕಿಂತಲೂ ನಸುವೇ ಹಳದಿಯನ್ನೆಬಹುದಾದ ಇನ್ನೊಂದು ತಲೆಬುರುಡೆಯ ಹಣೆಯ ಬಲ ಪಕ್ಕದಲ್ಲಿಯೂ ಅಂಥದೇ ಕಚ್ಚನ್ನು ಕಂಡುಹಿಡಿದು ತೋರಿಸಿದ.

“ನನಗೆ ಹೊಳೆಯಿತು! ನಮ್ಮ ಮಹಾರಾಜರ ಮೂಗು ತುಂಬ ಉದ್ದವಾಗಿತ್ತು!” ಎಂದು ಮೂರನೆಯ ಉಪಪತ್ನಿ ಸಂತಸದಿಂದ ಕೂಗಿದಳು.

ಖೋಜಾಗಳು ಲಗುಬಗೆಯಿಂದ ಮೂಗುಗಳನ್ನು ಪರೀಕ್ಷಿಸತೊಡಗಿದರು. ಅಂಥ ಹೇಳಿಕೊಳ್ಳುವ ಅಂತರವೇನೂ ಕಂಡುಬರದಿದ್ದರೂ ಒಂದರ ಮೂಗು ಸ್ವಲ್ಪ ದೊಡ್ಡದಾಗಿರುವುದನ್ನು ಖೋಜಾಗಳು ಗುರುತಿಸಿದರು. ಆದರೆ ಇಲ್ಲಿ ಎದುರಾದ ದೊಡ್ಡ ಆತಂಕವೆಂದರೆ, ಆ ತಲೆಬುರುಡೆಯ ಹಣೆಯ ಬಲಪಕ್ಕದಲ್ಲಿ ಯಾವ ಕಚ್ಚೂ ಇರಲಿಲ್ಲ.

“ಅದೂ ಅಲ್ಲದೆ ಮಹಾರಾಜರ ತಲೆಬುರುಡೆಯ ಹಿಂಭಾಗ ಇಷ್ಟೊಂದು ಚೂಪಾಗಿರುವುದು ಹೇಗೆ ಶಕ್ಯ?” ಎಂದು ಮಂತ್ರಿಗಳು ಖೋಜಾಗಳನ್ನು ಕೇಳಿದರು.

ರಾಣಿ ಮತ್ತು ಉಪಪತ್ನಿಯರು ಕೂಡ ಮರುವಿಚಾರ ಮಾಡತೊಡಗಿದರು. ಕೆಲವರು ಅದು ಚೂಪಾಗಿತ್ತೆಂದು ಹೇಳಿದರೆ ಮತ್ತೆ ಕೆಲವರು ಅದು ಚಪ್ಪಟೆಯಾಗಿತ್ತೆಂದು ಹೇಳಿದರು. ಪ್ರತಿದಿನ ಮಹಾಪ್ರಭುಗಳ ರಾಜಕೇಶವನ್ನು ಬಾಚಿ ಅಲಂಕರಿಸುತ್ತಿದ್ದ ಖೋಜಾನನ್ನು ಕರೆದು ಪ್ರಶ್ನಿಸಲು ಅವನಿಗೆ ಕೂಡ ಏನನ್ನು ಹೇಳುವುದೂ ಶಕ್ಯವಾಗಲಿಲ್ಲ.

ಅಂದು ಸಾಯಂಕಾಲ ಅವರು ಮಹಾರಾಜರ ತಲೆ ಯಾವುದೆಂಬುದನ್ನು ನಿರ್ಧರಿಸಲು ರಾಜಕುಮಾರರ ಮತ್ತು ಮಂತ್ರಿಗಳ ಆಲೋಚನಾಸಭೆಯನ್ನು ಕರೆದರು. ಆದರೆ ಆ ಸಭೆ ಕೂಡ ಅಂದು ಹಗಲು ಹೊತ್ತು ನಡೆದುದಕ್ಕಿಂತ ಹೆಚ್ಚು ಪ್ರಯೋಜನಕಾರಿಯಾಗಲಿಲ್ಲ. ಅಲ್ಲದೆ, ತಲೆಗೂದಲು ಹಾಗೂ ಗಡ್ಡಗಳು ಕೂಡ ಸಮಸ್ಯೆಯನ್ನು ತಂದೊಡ್ಡಿದವು. ಬಿಳಿಗೂದಲೇನೋ ಮಹಾರಾಜರದೇ, ಆದರೆ ಅವರ ಕೂದಲು ಅರೆನೆರೆತದ್ದರಿಂದ ಕಪ್ಪು ಕೂದಲಿನ ಬಗ್ಗೆ ನಿರ್ಧರಿಸುವುದು ಕಠಿಣವಾಯಿತು. ಅರ್ಧ ರಾತ್ರಿಯವರೆಗೂ ಅವರು ಚರ್ಚಿಸಿದರು. ಒಂಭತ್ತನೆಯ ಉಪಪತ್ನಿ ತಾನು ಮಹಾರಾಜರ ಗಡ್ಡದಲ್ಲಿ ಕೆಲವು ಹಳದಿ ಕೂದಲುಗಳನ್ನು ಖಂಡಿತವಾಗಿಯೂ ಕಂಡಿದ್ದಾಗಿ ವಾದಿಸಿ, ಅವರ ಚರ್ಚೆಯ ಸರಣಿಯನ್ನು ಪ್ರತಿಭಟಿಸಿದಾಗ ಮಾತ್ರ ಅವರು ಕೆಲವು ಕೆಂಪು ಕೂದಲುಗಳನ್ನು ತೆಗೆದು ಪ್ರತ್ಯೇಕವಾಗಿ ಇರಿಸಿದ್ದರು. ಯಾಕೆಂದರೆ ಹಳದಿ ಕೂದಲುಗಳು ಇದ್ದುದು ಒಂದು ಪಕ್ಷ ನಿಜವಾಗಿದ್ದಲ್ಲಿ ಕೆಂಪು ಕೂದಲುಗಳಿರಲಿಲ್ಲವೆಂಬುದಕ್ಕೆ ಭರವಸೆ ಏನು? ಆದ್ದರಿಂದ ಕೊನೆಗೆ ಎಲ್ಲ ಕೂದಲುಗಳನ್ನು ಒಂದೇ ಗುಪ್ಪೆಯಲ್ಲಿರಿಸಿ ಸಮಸ್ಯೆಗೆ ಯಾವ ಇತ್ಯರ್ಥವನ್ನೂ ಕಂಡುಹಿಡಿಯದೇ ಅವರು ವಿಷಯವನ್ನು ಅಲ್ಲಿಗೇ ಕೈ ಬಿಟ್ಟರು.

ನಸುಕು ಹರಿಯುವ ಸಮಯದಲ್ಲಿ ಕೂಡ ಅವರಿಗೆ ಯಾವುದೂ ನಿರ್ಧಾರಕ್ಕೆ ಬರುವುದು ಶಕ್ಯವಾಗಿರಲಿಲ್ಲ. ಕೊನೆಗೆ ಬೆಳಗಿನ ಕೋಳಿ ಕೂಗುವವರೆಗೆ ಆಕಳಿಸುತ್ತಲೇ ಚರ್ಚೆಯನ್ನು ಮುಂದುವರಿಸಿ ಅವರು ಒಂದು ಸರ್ವಸಮ್ಮತವಾದ, ಹೆಚ್ಚು ಕ್ಷೇಮಕರವಾದ ನಿರ್ಧಾರಕ್ಕೆ ಬಂದು ಮುಟ್ಟಿದರು. ಅದೇನೆಂದರೆ: ಸಮಾಧಿಗೊಳಿಸಲೋಸುಗ ಬಂಗಾರದ ಪೆಟ್ಟಿಗೆಯಲ್ಲಿ ಮಹಾ

ಸುವಾಸಿತ ಹಾಗೂ ಸ್ವಾದಿಷ್ಟ ಮುಖಶುದ್ಧಿಗಾಗಿ



ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.

ಚಮನದಲ್ಲಿ ಏನೆಲ್ಲ ಇದೆ?



ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ, ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ದುಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರಿಗೆ ಎಲ್ಲರಿಗೂ ಅಚ್ಚುಮೆಚ್ಚು.

ಸ್ಟಾರ್ ಕಂಪನಿ, ಬೆಳಗಾಂವ್

M.K. Publicity

ರಾಜರ ಮುಂಡದ ಜೊತೆಗೆ ಮೂರೂ ತಲೆಗಳನ್ನು ಇರಿಸಬೇಕು.

*

ಒಂದು ವಾರದ ನಂತರ ಅಂತಿಮಯಾತ್ರೆ ನಡೆಯಿತು. ಅಂದು ಇಡಿ ನಗರವೇ ಗಿಜಗುಟ್ಟ ತೊಡಗಿತ್ತು. ನಗರದ ಪ್ರಜೆಗಳು, ಹಾಗೂ ದೂರ ದೂರದಿಂದ ಬಂದ ಜನರು ಮಹಾರಾಜರ ಅಂತಿಮ ಯಾತ್ರೆಯನ್ನು ವೀಕ್ಷಿಸಲು ಗುಂಪು ಗುಂಪಾಗಿ ಬಂದರು. ಬೆಳಗು ಹರಿಯುತ್ತಿದ್ದಂತೆಯೇ ರಸ್ತೆಯ ಇಕ್ಕೆಲಗಳಲ್ಲೂ ಗಂಡಸರು ಹೆಂಗಸರು ಕಿಕ್ಕಿರಿದು ನೆರೆದಿದ್ದರು. ಜನಜಂಗುಳಿ ನಡು ಮಧ್ಯದಲ್ಲಿ ತರ್ಪಣದ ನೈವೇದ್ಯ ಸಾಮಗ್ರಿಗಳನ್ನು ಹೊತ್ತ ಮೇಜುಗಳಿದ್ದವು. ಮುಂಜಾವಿನ ಮಧ್ಯದಲ್ಲಿ ನಿಧಾನ ಗತಿಯಲ್ಲಿ ಬಂದ ಅಶ್ವಾರೋಹಿ ಸೈನಿಕರು ದಾರಿಯನ್ನು ಇಂಬುಗೊಳಿಸುತ್ತ ಸಾಗಿದರು. ಸ್ವಲ್ಪ ಹೊತ್ತಿನ ನಂತರ ಧ್ವಜ, ದಂಡ, ಈಟಿ, ಭರ್ಜಿ, ಬಿಲ್ಲು-ಬಾಣ ಹಾಗೂ ಅಂಥ ಇನ್ನೂ ಅನೇಕ ಆಯುಧಧಾರಿಗಳ ಮೆರವಣಿಗೆ ಮುನ್ನಡೆಯಿತು. ಅವರ ಹಿಂದೆ ನಾಲ್ಕು ಗಾಡಿಗಳ ತುಂಬ ಬಾಜಾಬಜಂತ್ರಿಯವರು. ನಂತರ ರಸ್ತೆಯ ಏರಿಳಿತಗಳಿಗನುಗುಣವಾಗಿ ಏರಿಳಿದೇರಿ-ಳಿಯುತ್ತ ಒಂದು ಹಳದಿ ಛತ್ರ ಸಾಗಿ ಬಂದಿತು. ಕ್ರಮೇಣವಾಗಿ ಅದು ಹತ್ತಿರ ಬಂದಂತೆ ಶವವಾಹಕ ಮತ್ತು ಬಂಗಾರದ ಶವಪೆಟ್ಟಿಗೆಗಳು ಸ್ಪಷ್ಟವಾಗಿ ಕಾಣಿಸತೊಡಗಿದವು. ಆ ಶವಪೆಟ್ಟಿಗೆಯಲ್ಲಿ ಒಂದು ಮುಂಡ ಹಾಗೂ ಮೂರು ತಲೆಬುರುಡೆಗಳಿದ್ದವು.

ಜನರು ಗೌರವಪೂರ್ವಕವಾಗಿ ಮೊಣಕಾಲೂರಿ ಬಾಗಿ ನಮಿಸುತ್ತಿದ್ದಂತೆಯೇ ಜನಜಂಗುಳಿಯ ಮಧ್ಯದಲ್ಲಿ ತರ್ಪಣದ ನೈವೇದ್ಯ ಸಾಮಗ್ರಿಗಳನ್ನು ಹೊತ್ತ ಮೇಜುಗಳು ಸಾಲು ಸಾಲಾಗಿ ಮೇಲೆದ್ದು ನಿಂತವು. ರಾಜನಿಷ್ಠರಾದ ಕೆಲವು ಪ್ರಜೆಗಳು ತುಂಬ ಉದ್ವಿಗ್ನರಾಗಿದ್ದರು. ಮಹಾರಾಜರ ಆತ್ಮದ ಜೊತೆಗೇ ಆ ಇಬ್ಬರು ರಾಜಹಂತಕರ ಆತ್ಮಗಳೂ ತರ್ಪಣದ ಫಲವನ್ನು ಅನುಭವಿಸುತ್ತಿರಬಹುದೆಂದು ಅನ್ನಿಸಿ ಅವರು ತಮ್ಮ ಕಂಬನಿಗಳನ್ನು ನುಂಗಿಕೊಂಡರು. ಆದರೆ ಹಾಗೆ ಆಗುವುದನ್ನು ತಡೆಯುವುದರಲ್ಲಿ ಮಾತ್ರ ಅವರು ಅಸಹಾಯಕರಾಗಿದ್ದರು.

ಶವವಾಹಕದ ಹಿಂದೆಯೇ ರಾಣಿ ಮತ್ತು ಉಪಪತ್ನಿಯರನ್ನು ಹೊತ್ತ ಗಾಡಿಗಳು ಬಂದವು. ಜನರು ಅವರತ್ತ ನೋಡಿದರು. ಅವರೂ ರೋದಿಸುತ್ತಲೇ ಜನರತ್ತ ನೋಡಿದರು. ಅವರ ವಾಹನಗಳ ಹಿಂದೆಯೇ ಮಂತ್ರಿಗಳು, ಖೋಜ್ಜಾಗಳು, ಕುಳ್ಳರು. ಎಲ್ಲರ ಮುಖದಲ್ಲಿಯೂ ದುಃಖದ ಛಾಯೆ ಕವಿದಿತ್ತು. ಆದರೆ ಜನರು ಅವರ ಕಡೆಗೆ ಗಮನ ನೀಡಲೇ ಇಲ್ಲ. ಅವರ ಮೆರವಣಿಗೆ ಆಗಲೇ ತನ್ನ ರಾಜಕಳೆಯನ್ನು ಕಳೆದುಕೊಂಡು ನಿಸ್ತೇಜವಾಗಿ ತೋರತೊಡಗಿತ್ತು. ✡

ನಾವು ಜಿರಲೆಗಳನ್ನು ಕತ್ತರಿಸೋದು, ಅವುಗಳ ಕಾಲು ತಲೆ ಬೇರೆ ಬೇರೆ ಮಾಡೋದು, ಕಪ್ಪೆಗಳ ಹೊಟ್ಟೆ ಕೊಯ್ದು ಪರೀಕ್ಷಿಸೋದು, ಮಂಗಗಳ ಮೇಲೆ ಪ್ರಯೋಗ ಮಾಡೋದು, ಇವೆಲ್ಲ ನನಗೆ ನರಕದಲ್ಲಿ ಕೊಡೋ ಅಂಥ ಚಿತ್ರಹಿಂಸೆಯ ಪ್ರತಿರೂಪಗಳು ಅಷ್ಟೇ.

— ಹ್ಯೂಮನಿಸ್ಟ್

Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201; New Delhi. P. R. Chopra Phone: 224130

KASTURI PRICE : 2/- Regd. No. KRN
Registered with the Registrar of Newspapers for India under No. 3533/5

